IGNOU THE PEOPLE'S UNIVERSITY

Indira Gandhi National Open University
School of Humanities

# BKDLA-135
# Modern Indian Language - Kannada
# ಆಧುನಿಕ ಭಾರತೀಯ ಭಾಷೆ - ಕನ್ನಡ



## EXPERT COMMITTEE

**Prof. T.S. Satyanath**
Former Professor
Department of MIL and LS
University of Delhi, Delhi 110007

**Prof. Basavaraj Kalgudi**
Former Professor
Institute of Kannada Studies
Bangalore University, Bangalore 560056

**Prof. Vikram Visaji**
Department of Kannada
Central University of Karnataka
Kalburgi 585311

**Prof. Malati Mathur**
Director, School of Humanities
IGNOU, New Delhi-110068

## COURSE COORDINATOR

**Prof. Malati Mathur**
Director, School of Humanities
IGNOU, New Delhi-110068

## COURSE EDITORS

**Prof. T. S. Satyanath**
Former Professor
Department of MIL and LS
University of Delhi
Delhi 110007

**Prof. Basavaraj Kalgudi**
Former Professor
Institute of Kannada Studies
Bangalore University
Bangalore 560056

**Prof. VikramVisaji**
Department of Kannada
Central University of Karnataka
Kalburgi 585311

## BLOCK PREPARATION

**Block & Unit** **Unit Writers**

**Block 1**

Unit 1 Prof. T.S. Satyanath, Former Professor, Department of MIL and LS, University of Delhi, Delhi 110007
Unit 2 Dr. H. Shashikala, Institute of Kannada Studies,Bangalore University, Bangalore 560056
Unit 3 Prof. T.S. Satyanath, Former Professor, Department of MIL and LS, University of Delhi, Delhi 110007
Unit 4 Dr. S.K. Aruni, SRC, Indian Council for Historical Research, Bangalore 560001
Unit 5 Prof. Basavaraj Kalgudi, Former Professor, Institute of Kannada Studies, Bangalore University, Bangalore 560056

**Block 2**

Unit 6 Prof. M.N. Venkatesha, Dravidian University, Kuppam 517425
Unit 7 Prof. K. Ravindranath, Kannada University, Hampi 583276
Unit 8 Prof. Basavaraj Kalgudi, Former Professor, Institute of Kannada Studies, Bangalore University, Bangalore 560056
Unit 9 Prof. VikramVisaji, Department of Kannada, Central University of Karnataka, Kalburgi 585311

**Block 3**

Unit 10 Dr.R. Tharamani, Govt. First Grade College, K.R. Puram, Bangalore 560036
Unit 11 Prof. Kamalakar Bhat, Dept. of English, Ahmednagar College, Ahmednagar 414001
Unit 12 Prof. C. Nagabhushan, Institute of Kannada Studies, Bangalore University, Bangalore 560056
Unit 13 Dr. Ramesh Aroli, Kamla Nehru College, Delhi 110049

Cover design: Mr. Tamal Basu, IGNOU panel
Printed and published on behalf of the Indira Gandhi National Open University, New Delhi by Registrar, MPDD.

# ಕನ್ನಡ ಪಠ್ಯಕ್ರಮ


**ಪಠ್ಯಕ್ರಮಕ್ಕೆ ಪ್ರಸ್ತಾವನೆ** **5**

**ಭಾಗ 1 ಹಿನ್ನೆಲೆ**

ಪ್ರೊ. ವಿಕ್ರಮ ವಿಸಾಜಿ (ಸಂಪಾದಕ)

**ಹಿನ್ನೆಲೆ: ಪ್ರಸ್ತಾವನೆ** **11**

**ಘಟಕ 1 ಕನ್ನಡ ಭಾಷೆ ಮತ್ತು ವ್ಯಾಕರಣ** **13**

ಪ್ರೊ. ಟಿ.ಎಸ್. ಸತ್ಯನಾಥ್

**ಘಟಕ 2 ಕನ್ನಡ ಭಾಷೆಯ ಚರಿತ್ರೆ ಮತ್ತು ಸ್ವರೂಪ** **44**

ಡಾ. ಎಚ್. ಶಶಿಕಲಾ

**ಘಟಕ 3 ಸಾಹಿತ್ಯ ಸಂಸ್ಕೃತಿಯ ಚರಿತ್ರೆ** **74**

ಪ್ರೊ. ಟಿ.ಎಸ್. ಸತ್ಯನಾಥ್

**ಘಟಕ 4 ಕರ್ನಾಟಕದ ಸಾಂಸ್ಕೃತಿಕ ಹಿನ್ನೆಲೆ** **99**

ಡಾ. ಎಸ್.ಕೆ. ಅರುಣಿ

**ಘಟಕ 5 ಪರಿಸರ** **139**

ಪ್ರೊ. ಬಸವರಾಜ ಕಲ್ಗುಡಿ

**ಭಾಗ 2 ಸಾಹಿತ್ಯದ ವಿವಿಧ ಪ್ರಕಾರಗಳು**

ಪ್ರೊ. ಟಿ.ಎಸ್. ಸತ್ಯನಾಥ್ (ಸಂಪಾದಕ)

**ಸಾಹಿತ್ಯದ ವಿವಿಧ ಪ್ರಕಾರಗಳು: ಪ್ರಸ್ತಾವನೆ** **173**

**ಘಟಕ 6 ಜಾನಪದ: ಕಥೆ, ಗೀತೆ, ಕಥನ ಕಾವ್ಯ, ಐತಿಹ್ಯ, ಪುರಾಣ, ಲಾವಣಿ, ಗಾದೆ, ಒಗಟು, ನಾಣ್ನುಡಿ** **175**

ಪ್ರೊ. ಎಮ್.ಎನ್. ವೆಂಕಟೇಶ

**ಘಟಕ 7 ಮಧ್ಯಕಾಲೀನ ಕನ್ನಡ ಸಾಹಿತ್ಯ** **202**

ಪ್ರೊ. ಕೆ. ರವೀಂದ್ರನಾಥ

**ಘಟಕ 8 ಆಧುನಿಕ ಕಥಾ ಸಾಹಿತ್ಯ** **247**

ಪ್ರೊ. ಬಸವರಾಜ ಕಲ್ಗುಡಿ

| | | |
|---|---|---|
| ಘಟಕ 9 | ಆಧುನಿಕ ಕಾವ್ಯ<br>ಪ್ರೊ. ವಿಕ್ರಮ ವಿಸಾಜಿ | 272 |

| | | |
|---|---|---|
| ಭಾಗ 3 | ನಿಯೋಗಾತ್ಮಕ ಕನ್ನಡ ಪ್ರಕಾರಗಳು<br>ಪ್ರೊ. ಬಸವರಾಜ ಕಲ್ಗುಡಿ (ಸಂಪಾದಕ) | |
| | ನಿಯೋಗಾತ್ಮಕ ಕನ್ನಡ ಪ್ರಕಾರಗಳು: ಪ್ರಸ್ತಾವನೆ | 303 |
| ಘಟಕ 10 | ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ, ಆತ್ಮಕಥನ, ಪ್ರಬಂಧ ಸಾಹಿತ್ಯ<br>ಡಾ. ಆರ್. ತಾರಾಮಣಿ | 305 |
| ಘಟಕ 11 | ಅನುವಾದ: ಲೇಖನ ಮತ್ತು ಉದಾಹರಣೆಗಳು<br>ಪ್ರೊ. ಕಮಲಾಕರ ಭಟ್ | 337 |
| ಘಟಕ 12 | ಅಂತರ್ಜಾಲ ಹಾಗೂ ಸಾಮಾಜಿಕ ಜಾಲ ವ್ಯವಸ್ಥೆ<br>ಪ್ರೊ. ಸಿ. ನಾಗಭೂಷಣ | 376 |
| ಘಟಕ 13 | ಸಂವಹನ ಕನ್ನಡ<br>ಡಾ. ರಮೇಶ ಅರೋಲಿ | 402 |

ignou
THE PEOPLE'S
UNIVERSITY

# ಪಠ್ಯಕ್ರಮಕ್ಕೆ ಪ್ರಸ್ತಾವನೆ

ಈ ಪಠ್ಯಕ್ರಮವು ಕನ್ನಡ ಭಾಷೆಗೆ ಸಂಬಂಧಿಸಿದಂತೆ ಹೊಸ ಪ್ರಯತ್ನವಾಗಿದೆ. ಗಣಕ ಯಂತ್ರ, ಮೊಬೈಲ್ ಹಾಗೂ ಅಂತರ್ಜಾಲಗಳ ಇಂದಿನ ಯುಗದಲ್ಲಿ ಸಮಾಜದ ಬಹುಪಾಲು ಸಮುದಾಯಕ್ಕೆ ಜ್ಞಾನ ಹಾಗೂ ಮಾಹಿತಿ ಸುಲಭವಾಗಿ ಕನ್ನಡದಲ್ಲೇ ಉಪಲಬ್ಧವಾಗುವ ಸಾಧ್ಯತೆಗಳಿವೆ. ಈ ಕಾರಣದಿಂದಾಗಿ ಶೈಕ್ಷಣಿಕ ವಿದ್ಯಾಭ್ಯಾಸ ಪದ್ಧತಿಗಳಲ್ಲಿ ಗಮನಾರ್ಹ ಬದಲಾವಣೆಗಳೂ ಉಂಟಾಗಿವೆ. ಈ ಬದಲಾವಣೆ ವಾಸ್ತವವಾಗಿ ಪಠ್ಯಕ್ರಮ ಹಾಗೂ ಅದಕ್ಕಾಗಿ ಉಪಯೋಗಿಸುವ ಬೋಧನಾಕ್ರಮ ಎರಡರಲ್ಲೂ ಬರಬೇಕಾದ ಅಗತ್ಯವಿದೆ. ಕಳೆದ ಒಂದು ವರ್ಷಕ್ಕೂ ಮೀರಿದ ಅವಧಿಯಲ್ಲಿ ಕೋವಿಡ್–೧೯ ತಂದೊಡ್ಡಿದ ಸಾಮಾಜಿಕ ದೂರ ಹಾಗೂ ತರಗತಿ ರಹಿತ ಕಲಿಕೆಗಳು ವಿದ್ಯುನ್ಮಾದ ಮಾಧ್ಯಮವನ್ನು ಹೆಚ್ಚು ಹೆಚ್ಚು ಬಳಕೆಗೆ ತರಲು ಒತ್ತಡವನ್ನು ತಂದಿದೆ. ಹೀಗಾಗಿ ಮುಖಾಮುಖಿಯಾಗಿ ನಡೆಯುತ್ತಿದ್ದ ಭಾಷಾ ಬೋಧನೆಯ ಕಲಿಕೆಗಳು ವ್ಯಾಪಕವಾಗಿ ಇಂತಹ ಹೊಸ ಸವಾಲುಗಳಿಗೆ ಉತ್ತರ ಹುಡುಕುವ ಅಗತ್ಯ ತಲೆದೋರಿದೆ. ಕನ್ನಡ ಕಲಿಕೆಗೆ ಸಂಬಂಧಿಸಿದಂತೆ ಮೇಲೆ ಚರ್ಚಿಸಿದ ಆಯಾಮಗಳನ್ನು ಗಮನದಲ್ಲಿಟ್ಟುಕೊಂಡು ಇಲ್ಲಿನ ಪಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ.

ಇಲ್ಲಿ ಕೊಡಲಾಗಿರುವ ಪಠ್ಯಕ್ರಮವು ಆರು ಕ್ರೆಡಿಟ್ಟುಗಳಿಗೆಂದು ತಯಾರಿಸಲಾಗಿದ್ದು ಮೂರು ಭಾಗಗಳನ್ನು ಒಳಗೊಂಡಿದೆ. ಮೊದಲನೆಯ ಭಾಗದಲ್ಲಿ ಐದು ಘಟಕಗಳಿದ್ದು ಅವು ಕನ್ನಡ ಹಾಗೂ ಕರ್ನಾಟಕಕ್ಕೆ ಸಂಬಂಧಿಸಿದಂತೆ ಸೂಕ್ತ ಹಿನ್ನೆಲೆ ಮಾಹಿತಿಯನ್ನು ಒದಗಿಸುತ್ತವೆ. ಅವು ಕ್ರಮವಾಗಿ ಕನ್ನಡ ಭಾಷೆ ಮತ್ತು ವ್ಯಾಕರಣ, ಕನ್ನಡ ಭಾಷೆಯ ಚರಿತ್ರೆ ಮತ್ತು ಸ್ವರೂಪ, ಕನ್ನಡ ಸಾಹಿತ್ಯ ಸಂಸ್ಕೃತಿಯ ಚರಿತ್ರೆ, ಕರ್ನಾಟಕದ ಸಾಂಸ್ಕೃತಿಕ ಚರಿತ್ರೆ ಹಾಗೂ ಕರ್ನಾಟಕದ ಪರಿಸರ ಪ್ರಜ್ಞೆಗಳನ್ನು ಕುರಿತು ಬರೆದ ಲೇಖನಗಳಾಗಿವೆ. ಎರಡನೆಯ ಭಾಗವು ಸೃಜನಶೀಲ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕುರಿತಾಗಿದ್ದು ಅದರಲ್ಲಿ ನಾಲ್ಕು ಘಟಕಗಳಿವೆ. ಅವು ಕನ್ನಡದ ಜಾನಪದ, ನಡುಗನ್ನಡ ಸಾಹಿತ್ಯ, ಆಧುನಿಕ ಕಥಾ ಸಾಹಿತ್ಯ ಹಾಗೂ ಆಧುನಿಕ ಕಾವ್ಯಗಳನ್ನು ಪರಿಚಯ ಮಾಡಿಕೊಡುತ್ತವೆ. ಮೂರನೆಯ ಭಾಗದಲ್ಲಿ ಸೃಜನೇತರ ಹಾಗೂ ನಿಯೋಗಾತ್ಮಕ ಕನ್ನಡವನ್ನು ಕುರಿತಂತೆ ನಾಲ್ಕು ಘಟಕಗಳಿವೆ. ಇದರಲ್ಲಿ ಸೃಜನೇತರ ಸಾಹಿತ್ಯ ಎಂದು ಪರಿಗಣಿಸಲಾಗುವ ಜೀವನ ಚರಿತ್ರೆ, ಪ್ರವಾಸ ಕಥನ, ಆತ್ಮಕಥೆ ಹಾಗೂ ಪ್ರಬಂಧಗಳು, ಅನುವಾದ, ಅಂತರ್ಜಾಲ ಹಾಗೂ ಸಾಮಾಜಿಕ ಜಾಲ ವ್ಯವಸ್ಥೆ ಮತ್ತು ಸಂವಹನ ಕನ್ನಡಗಳನ್ನು ಕುರಿತ ಘಟಕಗಳಿವೆ.

ignou THE PEOPLE'S UNIVERSITY

ಮೊದಲನೆಯ ಭಾಗದ ಘಟಕಗಳು ಕನ್ನಡ ಮತ್ತು ಕರ್ನಾಟಕದ ಬಗ್ಗೆ ಪರಿಚಯಾತ್ಮಕ ಹಾಗೂ ವಿವರಣಾತ್ಮಕ ಮಾಹಿತಿಯನ್ನು ಕೊಡುತ್ತವೆ. ಅದೇ ಸಮಯದಲ್ಲಿ ಅವು ಕನ್ನಡ ಮತ್ತು ಕರ್ನಾಟಕವನ್ನು ವಿಶ್ವಾತ್ಮಕತೆಯತ್ತ ಕೊಂಡೊಯ್ಯುವ ಪ್ರಯತ್ನವನ್ನೂ ಮಾಡುತ್ತವೆ. ಎರಡನೆಯ ಭಾಗದ ಘಟಕಗಳು ಕನ್ನಡ ಭಾಷೆಯಲ್ಲಿರುವ ವೈವಿಧ್ಯಮಯ ಸಾಹಿತ್ಯವನ್ನು ಪ್ರಾತಿನಿಧಿಕವಾಗಿ ನಿಮ್ಮ ಮುಂದಿಡುತ್ತದೆ. ಕೊನೆಯ ಭಾಗದ ಘಟಕಗಳು ಕನ್ನಡ ಭಾಷೆಯ ಉಪಯೋಗದ ವ್ಯಾಪ್ತಿ ಹಿಗ್ಗುತ್ತಿರುವ ಸಂದರ್ಭವನ್ನು ಸೂಚಿಸುತ್ತಲೇ ಅಂತಹ ವಿಸ್ತೃತ ಭಾಷೆಯ ಬಳಕೆಗೆ ನಿಮ್ಮನ್ನು ತಯಾರು ಮಾಡುತ್ತದೆ. ಹೀಗಾಗಿ ಇಲ್ಲಿರುವ ಪಠ್ಯಕ್ರಮ ಆಧುನಿಕ ಕನ್ನಡದ ಬಳಕೆಯ ವಿವಿಧ ಆಯಾಮಗಳನ್ನು ಅಂತರ್ಗತಗೊಳಿಸಲು ಪ್ರಯತ್ನಿಸಿದೆ.

ಇಲ್ಲಿನ ಮೂರು ಭಾಗಗಳನ್ನು ಕ್ರಮವಾಗಿ ಹಿನ್ನೆಲೆ, ಸಾಹಿತ್ಯದ ವಿವಿಧ ಪ್ರಕಾರಗಳು ಮತ್ತು ನಿಯೋಗಾತ್ಮಕ ಕನ್ನಡ ಪ್ರಕಾರಗಳು ಎಂದು ವಿಂಗಡಿಸಲಾಗಿದೆಯಾದರೂ ಅವು ಕೋಣೀಕೃತ ಭಾಗಗಳೇನೂ ಅಲ್ಲ. ಅವುಗಳಲ್ಲಿ ಪರಸ್ಪರ ಒಳಸಂಬಂಧಗಳನ್ನು ಸ್ಪಷ್ಟವಾಗಿ ಕಾಣಬಹುದು. ಭಾಷೆಗೆ ಸಂಬಂಧಿಸಿದ ಕಲಿಕೆಗಳು ಪಠ್ಯಕ್ರಮದ ಉದ್ದಗಲಕ್ಕೂ ಹಬ್ಬಿವೆ. ಸಾಹಿತ್ಯ ಚರಿತ್ರೆಯಂತೂ ಕವಿ ಹಾಗೂ ಕೃತಿ ಪರಿಚಯದಲ್ಲಿ ಪ್ರತಿಯೊಂದು ಭಾಗದಲ್ಲೂ ಬಂದಿದೆ. ಆತ್ಮಕಥೆಯಲ್ಲಿ ಬಂದಿರುವ ಮದುವೆಯ ವಿವರಗಳು ಜಾನಪದಕ್ಕೆ ಸಹಪಠ್ಯವಾಗಬಹುದು. ಭಾಗ ಒಂದರಲ್ಲಿರುವ ಸಾಹಿತ್ಯ ಸಂಸ್ಕೃತಿಯ ಚರಿತ್ರೆ ಮತ್ತು ಭಾಗ ಎರಡರಲ್ಲಿರುವ ಮಧ್ಯಕಾಲೀನ ಕನ್ನಡ ಸಾಹಿತ್ಯದ ಘಟಕಗಳು ಸಹಪಠ್ಯಗಳು. ಈ ರೀತಿ ಘಟಕಗಳ ಅಂತರಸಂಬಂಧಗಳನ್ನು ಇಡೀ ಪಠ್ಯಕ್ರಮದಲ್ಲಿ ನೀವು ನೋಡಬಹುದು ಹಾಗೂ ಅವುಗಳ ಉಪಯೋಗವನ್ನು ಪಡೆದುಕೊಳ್ಳಬಹುದು.

ಕನ್ನಡವಾಗಲಿ ಅಥವಾ ಕರ್ನಾಟಕವಾಗಲಿ ಅಥವಾ ಅದರ ಸಾಂಸ್ಕೃತಿಕ ರೂಪಗಳಾಗಲಿ ಚಾರಿತ್ರಿಕವಾಗಿ ಹಾಗೂ ಭೌಗೋಳಿಕವಾಗಿ ಏಕರೂಪದ್ದಲ್ಲ; ಬದಲಿಗೆ ವಿಸ್ತೃತತೆ ಹಾಗೂ ಬಹುಳತೆಗಳಿಂದ ಕೂಡಿದ್ದು. ಈ ಅಂಶವನ್ನು ಘಟಕಗಳಲ್ಲಿ ಸೇರ್ಪಡೆಯಾಗುವ ವಿಷಯಗಳ ಆಯ್ಕೆಯನ್ನು ಜಾಗರೂಕತೆಯಿಂದ ಮಾಡಲಾಗಿದೆ. ಇಂತಹ ಪಠ್ಯಕ್ರಮಗಳಿಗೆ ಸ್ಥಳಾವಕಾಶದ ಮಿತಿ ಇದೆಯಾದರೂ ಕಾಲ, ದೇಶ ಹಾಗೂ ಸಾಮಾಜಿಕ ಆಯಾಮಗಳಲ್ಲಿ ಕರ್ನಾಟಕದ ವೈವಿಧ್ಯತೆಯನ್ನು ಸಮರ್ಪಕವಾಗಿ ತರಲು ಇಲ್ಲಿ ಪ್ರಯತ್ನಿಸಲಾಗಿದೆ. ನಿಮ್ಮ ಘಟಕಗಳು ವಿಫುಲವಾದ ಮಾಹಿತಿಯನ್ನು ದಟ್ಟವಾಗಿ ಒಳಗೊಂಡಿರುವುದರಿಂದ ಅವುಗಳನ್ನು ನೀವು ನಿಧಾನವಾಗಿ ಹಾಗೂ ಮತ್ತೆ ಮತ್ತೆ ಓದಿ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ಆಗ ಇಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ನಿಮ್ಮ ತಿಳುವಳಿಕೆ ಆಳವಾಗುತ್ತದೆ.

ಸಾಹಿತ್ಯದ ಅಧ್ಯಯನ ನೈತಿಕ ಮೌಲ್ಯಗಳನ್ನು ಕಲಿಸುತ್ತದೆ ಎಂಬ ಮಾತು ಭಾರತದಲ್ಲಿ ಬ್ರಿಟಿಷರು ಇಂಗ್ಲಿಷ್ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತಂದ ದಿನಗಳಿಂದ ಇದೆಯಾದರೂ ಇತ್ತೀಚಿನ ದಿನಗಳಲ್ಲಿ ಸಾಹಿತ್ಯ ಮತ್ತು ಕಲೆಗಳನ್ನು ಅಂತರ್ಗತಗೊಳಿಸಿದ ಲಿಬರಲ್ ವಿದ್ಯಾಭ್ಯಾಸ ಪದ್ಧತಿಯ ಅಗತ್ಯತೆಯನ್ನು ಕುರಿತಾದ ಮಾತು ಕೇಳಿಬರುತ್ತಿದೆ. ಕಳೆದ ಮೂರು–ನಾಲ್ಕು ದಶಕಗಳ ವಿದ್ಯಾಭ್ಯಾಸ ಪದ್ಧತಿಯ ನಾಗಾಲೋಟ ಕಳೆದುಕೊಂಡಿರುವ ಮಾನವೀಯ ನೆಲೆಗಳನ್ನು ಈ ಲಿಬರಲ್ ಪಠ್ಯಕ್ರಮ ಮರಳಿ ತರಬಹುದೆಂಬ ಆಶಯ ಈ ಮಾತುಗಳ ಹಿಂದಿದೆ. ಈ ಪಠ್ಯಕ್ರಮ ಆ ದಿಸೆಯಲ್ಲಿ ಸಾಗಲು ಪ್ರಯತ್ನ ಮಾಡಿದೆ. ಇಲ್ಲಿನ ಘಟಕಗಳು ಸಾಂಸ್ಕೃತಿಕ ಅಂಶಗಳನ್ನು ಪರಿಚಯ ಮಾಡಿಕೊಡುವಲ್ಲಿ ವಿಫುಲವಾಗಿ

ದೃಶ್ಯ ಮಾಧ್ಯಮವನ್ನು ಉಪಯೋಗಿಸಿಕೊಂಡಿವೆ. ಅಗತ್ಯವಿರುವಲ್ಲಿ ಚಿತ್ರಗಳು, ಪಟ್ಟಿಕೆಗಳು, ನಕ್ಷೆಗಳನ್ನು ಕೊಡುವ ಮೂಲಕ ವಿಚಾರವನ್ನು ಮಂಡಿಸುವ ರೀತಿಯನ್ನು ಖಚಿತ ಹಾಗೂ ಹರಿತಗೊಳಿಸಲು ಪ್ರಯತ್ನಿಸಲಾಗಿದೆ. ಭಾವಚಿತ್ರಗಳು ವ್ಯಕ್ತಿಗಳ ನೆನಪನ್ನು ಶಾಶ್ವತಗೊಳಿಸಿ ಅವರನ್ನು ನಮ್ಮ ಭಾವಲೋಕದ ಭಾಗವಾಗಿಸಲು ಪ್ರಯತ್ನಿಸಿದರೆ, ಸಾಂಸ್ಕೃತಿಕ ಸ್ಮಾರಕಗಳ ಚಿತ್ರಗಳು ಸ್ಮಾರಕಗಳ ಸೌಂದರ್ಯವನ್ನು ನಿಮ್ಮ ಕಣ್ಣ ಮುಂದೆ ತರುತ್ತವೆ. ನಿಮ್ಮ ಸಮೀಪದಲ್ಲಿರುವ ಯಾವುದಾದರೂ ಸ್ಮಾರಕವನ್ನೋ ಅಥವಾ ಚಿತ್ರವನ್ನೋ ನೀವು ಹೋಗಿ ನೋಡಲು ಅವು ನಿಮ್ಮನ್ನು ಪ್ರೇರೇಪಿಸಬಹುದು. ಯಾವುದಾದರೂ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಲು ನಿಮ್ಮನ್ನು ಪ್ರಚೋದಿಸಬಹುದು. ಈ ದಿನಗಳಲ್ಲಿ ಸಾಹಿತ್ಯ, ಸಂಗೀತ ಹಾಗೂ ಕಲೆಯ ದಾಖಲಾತಿಗಳು ಅಂತರ್ಜಾಲದಲ್ಲಿ ಸುಲಭವಾಗಿ ಉಪಲಬ್ಧವಿದ್ದು ಅದರ ಉಪಯೋಗವನ್ನು ವಿದ್ಯಾರ್ಥಿಗಳು ಪಠ್ಯಕ್ರಮಕ್ಕೆ ಪೂರಕವಾಗಿ ಪಡೆದುಕೊಳ್ಳಬಹುದು. ಕೆಲವು ಚಿತ್ರಗಳು ಹಾಗೂ ಅವುಗಳ ವಿವರಣೆಗಳು, ಅಂಶಗಳು ಹರಿಯುವ ದಿಕ್ಕು, ಪರಸ್ಪರ ಪ್ರಭಾವ ಮುಂತಾದ ತಿಳುವಳಿಕೆಗಳನ್ನು ಕೊಟ್ಟು ವಿಷಯದ ಗ್ರಹಿಕೆಯನ್ನು ಗಾಢವಾಗಿಸುತ್ತವೆ.

ಪಠ್ಯಕ್ರಮದ ಪ್ರತಿಯೊಂದು ಘಟಕವೂ ಮೊದಲಿಗೆ ಸೂಕ್ತ ಹಿನ್ನೆಲೆಯನ್ನು ಕೊಡುತ್ತದೆ. ಅದು ಘಟಕ ಹಾಗೂ ಅದರಲ್ಲಿ ಬಂದಿರುವ ವಿಚಾರಗಳನ್ನು ಸೂಕ್ತವಾದ ತಾತ್ವಿಕ ಚೌಕಟ್ಟಿನಲ್ಲಿ ಅರ್ಥಮಾಡಿಕೊಳ್ಳಲು ಅಗತ್ಯವಿರುವ ಮಾಹಿತಿಯನ್ನು ನೀಡುತ್ತದೆ. ಅಲ್ಲದೆ ಘಟಕಗಳು ಅಭ್ಯಾಸಗಳನ್ನು ಪ್ರಶ್ನೆಗಳ ರೂಪದಲ್ಲಿ ಒಳಗೊಂಡಿವೆ. ಕೆಲವು ಘಟಕಗಳು ನಿಮ್ಮನ್ನು ಪಠ್ಯದ ಆಚೆ ಸ್ವತಂತ್ರವಾಗಿ ಯೋಚಿಸಲು ಹಾಗೂ ಬರೆಯಲು ಪ್ರಚೋದಿಸುತ್ತವೆ. ಕೆಲವು ಪ್ರಶ್ನೆಗಳು ನಿಮ್ಮನ್ನು ಚಿತ್ರ, ಪಟ್ಟಿಕೆ ಹಾಗೂ ನಕ್ಷೆಗಳನ್ನು ನೋಡಿ ಅವುಗಳನ್ನು ವಿವರಿಸಲು ಕೇಳುತ್ತವೆ. ಆದರೆ ಎಲ್ಲ ಘಟಕಗಳ ಹಿಂದೆ ಅಂತಹ ಕುತೂಹಲವನ್ನು ಮೂಡಿಸುವ ಹಾಗೂ ಚಿಂತನೆಯನ್ನು ಪ್ರೇರೇಪಿಸುವ ಆಶಯ ಹುದುಗಿದೆ ಎಂಬುದನ್ನು ನೀವು ನೆನಪಿನಲ್ಲಿಡಬೇಕು. ಅಂತರ್ಜಾಲ ಹಾಗೂ ಮೊಬೈಲ್ ಉಪಲಬ್ಧವಿರುವ ಇಂದಿನ ಜಗತ್ತಿನಲ್ಲಿ ಪಠ್ಯಕ್ರಮದ ಬಗ್ಗೆ ಹೆಚ್ಚಿನ ಮಾಹಿತಿ ಕ್ಷಣದಲ್ಲಿ ನಿಮ್ಮ ಕಣ್ಣ ಮುಂದೆ ನಿಮ್ಮ ಗಣಕಯಂತ್ರ ಅಥವಾ ಮೊಬೈಲಿನ ಪರದೆಯ ಮೇಲೆ ಉಪಲಬ್ಧವಾಗುತ್ತದೆ. ಆದ್ದರಿಂದ ಯಾವುದೇ ಘಟಕದ ಬಗ್ಗೆ ಹೆಚ್ಚಿನ ಮಾಹಿತಿ ಸುಲಭವಾಗಿ ಉಪಲಬ್ಧವಿದ್ದು ಅದನ್ನು ಹುಡುಕಿ ನೋಡಬಹುದಾಗಿದೆ. ವಿಸ್ತೃತ ಹಾಗೂ ಹೊಸ ಹೊಸ ಮಾಹಿತಿಗಾಗಿ ವಿದ್ಯಾರ್ಥಿಗಳು ಈ ಬಗೆಯ ಮಾಹಿತಿ ಕಣಜಗಳತ್ತ ನೋಡಬೇಕಾದ ಅಗತ್ಯವಿದೆ. ಈ ಘಟಕಗಳು ನಿಮಗೆ ಉಪಯುಕ್ತವಾಗುತ್ತವೆ ಹಾಗೂ ನಿಮ್ಮ ಜ್ಞಾನದ ವಿಸ್ತಾರವನ್ನು ಹೆಚ್ಚಿಸುತ್ತವೆ ಎಂಬ ಆಶಯ ನಮಗಿದೆ.

## ಕೃತಜ್ಞತೆಗಳು

ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ ಸ್ಕೂಲ್ ಅಫ್ ಹ್ಯುಮನಿಟೀಸ್ ಈ ಪಠ್ಯಕ್ರಮವನ್ನು ರೂಪಿಸಲು ನಮ್ಮನ್ನು ನಿಯುಕ್ತಗೊಳಿಸಿದ್ದಕ್ಕಾಗಿ ವಿಶ್ವವಿದ್ಯಾಲಯದ ಕುಲಪತಿಗಳಿಗೂ ಹಾಗೂ ಅದರ ಆಡಳಿತ ವರ್ಗಕ್ಕೂ ನಾವು ಆಭಾರಿಯಾಗಿದ್ದೇವೆ. ಅದೇ ರೀತಿ ಸ್ಕೂಲ್ ಅಫ್ ಹ್ಯುಮನಿಟೀಸ್‌ನ ನಿರ್ದೇಶಕರಾದ ಪ್ರೊ. ಮಾಲತಿ

ಮಾಥುರ್ ಅವರು ಈ ಯೋಜನೆಯನ್ನು ನಿರ್ವಹಿಸುವಲ್ಲಿ ನಮಗೆ ಸಹಕರಿಸಿದ್ದಾರೆ. ಅವರಿಗೂ ನಮ್ಮ ಕೃತಜ್ಞತೆಗಳು. ಎಲ್ಲಕ್ಕಿಂತ ಮುಖ್ಯವಾಗಿ ಈ ಪಠ್ಯಕ್ರಮವನ್ನು ಉಪಲಬ್ಧ ವಿದ್ದ ಅಲ್ಪ ಸಮಯದಲ್ಲೇ ಸಮರ್ಪಕವಾಗಿ ರೂಪಿಸಿಕೊಟ್ಟ ಎಲ್ಲ ವಿದ್ವಾಂಸರಿಗೂ ನಮ್ಮ ಕೃತಜ್ಞತೆಗಳು.

ಪಠ್ಯಕ್ರಮದಲ್ಲಿ ಉಪಯೋಗಿಸಿಕೊಳ್ಳಲಾಗಿರುವ ಪಠ್ಯಭಾಗಗಳನ್ನು ಹೆಸರಾಂತ ಕನ್ನಡ ಲೇಖಕರು ಮತ್ತು ಲೇಖಕಿಯರ ರಚನೆಗಳಿಂದ ತೆಗೆದುಕೊಳ್ಳಲಾಗಿದೆ. ಅವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು. ಚಿತ್ರಗಳು ಮತ್ತು ನಕ್ಷೆಗಳ ಮೂಲಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಹುಡುಕಿ ಸ್ಮರಿಸಿ ಕೃತಜ್ಞತೆಗಳನ್ನು ಸಲ್ಲಿಸಲಾಗಿದೆ. ಆದರೆ ಕೆಲವು ಬಾರಿ ಅಂತಹ ಮೂಲದ ಬಗ್ಗೆ ಮಾಹಿತಿ ಸೂಕ್ತವಾಗಿ ಸಿಗದೆಹೋದ ಪ್ರಯುಕ್ತ ಋಣಭಾರವನ್ನು ನೀಡದೆ ಹೋಗಿದ್ದಲ್ಲಿ ಅದಕ್ಕಾಗಿ ಸಂಪಾದಕ ಮಂಡಲಿ ಹಾಗೂ ಪ್ರಕಾಶಕರು ಖೇದವನ್ನು ಈ ಮೂಲಕ ವ್ಯಕ್ತಪಡಿಸುತ್ತಿದ್ದಾರೆ. ಒಂದು ವೇಳೆ ಅಂಥ ಲೋಪವಾಗಿದ್ದಲ್ಲಿ ಅದು ಉದ್ದೇಶಪೂರಿತ ಅಲ್ಲ ಎಂದೂ, ಕನ್ನಡದ ವಿದ್ಯಾರ್ಥಿಗಳ ಒಳಿತಿಗಾಗಿ ಮಾಡುತ್ತಿರುವ ಕಾರ್ಯದಲ್ಲಿ ಆಗಿರುವುದರಿಂದ ಉಪೇಕ್ಷಿಸಲು ಕೋರಲಾಗಿದೆ. ಪುಟವಿನ್ಯಾಸವನ್ನು ಸಿದ್ಧಪಡಿಸಿದ ಹಾಗೂ ಕೆಲವು ಚಿತ್ರಗಳನ್ನು ನೀಡಿರುವ ಹೊಸಪೇಟೆಯ ಯಾಜಿ ಪ್ರಕಾಶನದವರಿಗೆ ಕೃತಜ್ಞತೆಗಳು.

**ಟಿ.ಎಸ್. ಸತ್ಯನಾಥ್**
**ಬಸವರಾಜ ಕಲ್ಗುಡಿ**
**ವಿಕ್ರಮ ವಿಸಾಜಿ**
(ಸಂಪಾದಕರು)

ignou THE PEOPLE'S UNIVERSITY

## ಭಾಗ ೧

## ಹಿನ್ನೆಲೆ

ignou
THE PEOPLE'S
UNIVERSITY

ignou
THE PEOPLE'S
UNIVERSITY

# ಭಾಗ ೧

## ಹಿನ್ನೆಲೆ: ಪ್ರಸ್ತಾವನೆ

ಭಾರತೀಯ ಭಾಷೆಗಳಲ್ಲಿ ಕನ್ನಡವೂ ಒಂದು. ಕನ್ನಡ ಭಾಷೆಯನ್ನು ಕುರಿತು ಇಲ್ಲಿ ಪಠ್ಯಕ್ರಮವನ್ನು ರೂಪಿಸಲಾಗಿದೆ. ಪಠ್ಯಕ್ರಮದ ಈ ಮೊದಲನೆಯ ಭಾಗದಲ್ಲಿ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಯ ವಿವಿಧ ಮಗ್ಗಲುಗಳು ಮತ್ತು ಕರ್ನಾಟಕದ ಕಲಾಜಗತ್ತಿನ ಹಲವು ಮುಖಗಳನ್ನು ಪರಿಚಯಿಸಲಾಗುತ್ತದೆ. ಈ ಪರಿಚಯವು ಕನ್ನಡ ಭಾಷೆ, ಸಾಹಿತ್ಯ ಚರಿತ್ರೆ, ಕರ್ನಾಟಕದ ಕಲೆಗಳು ಮತ್ತು ಪರಿಸರ ಪ್ರಜ್ಞೆಗಳ ಬಗ್ಗೆ ಓದುಗರಲ್ಲಿ ಖಚಿತ ತಿಳುವಳಿಕೆ ಮತ್ತು ಚಾರಿತ್ರಿಕ ಬೆಳವಣಿಗೆಯನ್ನು ಮನದಟ್ಟು ಮಾಡಿಕೊಡುವುದು. ಮೊದಲ ಭಾಗದಲ್ಲಿ ಒಟ್ಟು ಐದು ಘಟಕಗಳಿವೆ. ಮೊದಲ ಘಟಕವು ಕನ್ನಡ ಭಾಷೆಯ ರಚನೆ ಮತ್ತು ಬಳಕೆ ಕುರಿತಾಗಿದೆ. ಇಲ್ಲಿ ವ್ಯಾಕರಣ ವ್ಯವಸ್ಥೆಯ ಬಗ್ಗೆ ನಿಮ್ಮನ್ನು ಯೋಚಿಸುವಂತೆ ಮಾಡುವುದಲ್ಲದೆ ಭಾರತೀಯ ಮತ್ತು ಕನ್ನಡ ವ್ಯಾಕರಣ ಪರಂಪರೆಗಳು ಹಾಗೂ ಕನ್ನಡ ವ್ಯಾಕರಣದ ಪ್ರಾಥಮಿಕ ಪರಿಚಯ ಮಾಡಿಕೊಡಲಾಗುತ್ತದೆ. ಕನ್ನಡ ಭಾಷೆಯ ಧ್ವನಿರಚನೆ, ಪದರಚನೆ, ವಾಕ್ಯರಚನೆ ಮತ್ತು ಅರ್ಥದ ಸ್ವರೂಪವನ್ನು ತಿಳಿಸಲು ಯತ್ನಿಸಲಾಗಿದೆ ಕನ್ನಡ ಭಾಷೆಯ ರಚನಾ ವಿನ್ಯಾಸವನ್ನು ತಿಳಿದುಕೊಳ್ಳಲು ಇದರಿಂದ ನೆರವಾಗುತ್ತದೆ. ಇದರ ಮೂಲಕ ಕನ್ನಡ ಭಾಷೆಯ ಹಲವು ಬಳಕೆಯ ವಿಧಾನಗಳನ್ನು ತಿಳಿಯಬಹುದು. ಎರಡನೇ ಘಟಕದಲ್ಲಿ ಭಾಷೆಯ ಸ್ವರೂಪ ಮತ್ತು ಚರಿತ್ರೆಯ ಸಂಗತಿಗಳಿವೆ. ಅಂದರೆ ಕನ್ನಡ ಭಾಷೆಯ ಪ್ರಾಚೀನತೆ, ಕನ್ನಡ ಭಾಷೆಯ ಲಕ್ಷಣಗಳು, ಕನ್ನಡ ಭಾಷೆಯ ಅವಸ್ಥಾ ಭೇದಗಳು ಮತ್ತು ಕನ್ನಡ ಭಾಷೆಯ ಅಧ್ಯಯನ ವಿಧಾನಗಳನ್ನು ತೋರಿಸಿ ಕೊಡಲಾಗಿದೆ. ಇದರಿಂದಾಗಿ ಕನ್ನಡ ಭಾಷಾ ಬೆಳವಣಿಗೆಯ ಹಂತಗಳನ್ನು ತಿಳಿಯಬಹುದು. ಜೊತೆಗೆ ಕನ್ನಡ ಭಾಷೆಯ ವೈವಿಧ್ಯಮಯ ಸ್ವರೂಪ ಕೂಡ ವಿದ್ಯಾರ್ಥಿಗಳ ಗಮನಕ್ಕೆ ಬರುವುದುಂಟು. ಕನ್ನಡ ಭಾಷೆಯು ಹಳಗನ್ನಡ, ನಡುಗನ್ನಡವನ್ನು ದಾಟಿಕೊಂಡು ಈಗ ಹೊಸಗನ್ನಡಕ್ಕೆ ಬಂದು ನಿಂತ ಚರಿತ್ರೆ ಇಲ್ಲಿ ತೆರೆದುಕೊಂಡಿದೆ. ಇಂಥ ಕಾಲಘಟ್ಟಗಳಲ್ಲಿ ಕನ್ನಡ ಭಾಷೆಯೊಳಗೆ ನಡೆದ ಬದಲಾವಣೆಗಳು, ಪಲ್ಲಟಗಳು, ಸ್ವೀಕರಣ ಮತ್ತು ನಿರಾಕರಣಗಳ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗುತ್ತದೆ. ಕನ್ನಡ ಭಾಷೆ ಸಾಮಾಜಿಕತೆ ಪ್ರಾದೇಶಿಕತೆಗಳಿಗೆ ಅನುಗುಣವಾಗಿ ಮತ್ತು ಪ್ರದೇಶಕ್ಕನುಗುಣವಾಗಿ ತನ್ನ ಲಕ್ಷಣಗಳನ್ನು ಹೇಗೆಲ್ಲ ರೂಪಿಸಿಕೊಂಡಿದೆ ಎಂಬುದರ ಕುರಿತು ಸೋದಾಹರಣವಾಗಿ ತಿಳಿಸಿಕೊಡಲು ಯತ್ನಿಸಲಾಗಿದೆ. ಮೂರನೆಯ ಘಟಕವು ಸಾಹಿತ್ಯ ಸಂಸ್ಕೃತಿಯ ಚರಿತ್ರೆಗೆ ಸಂಬಂಧಿಸಿದೆ.

ಪರ್ಯಾಯವಾದ ಒಳನೋಟಗಳಿಂದ ಕೂಡಿರುವ ಈ ಘಟಕವು ಸಾಹಿತ್ಯ ಸಂಸ್ಕೃತಿಯ ವಿಸ್ತಾರವಾದ ರೂಪವನ್ನು ಕಾಣಿಸುತ್ತದೆ. ಕನ್ನಡ ಸಾಹಿತ್ಯ ಸಂಸ್ಕೃತಿ ನಿರ್ಮಾಣಗೊಂಡ ಬಗೆ, ಇದರ ಪ್ರಾಚೀನತೆ, ವಸಾಹತೋತ್ತರ ಕಾಲದ ಬೆಳವಣಿಗೆಗಳು, ಇದರ ಬಹುಮುಖೀ ಗುಣಗಳನ್ನು ಇಲ್ಲಿ ವಿವರಿಸಲಾಗಿದೆ. ಜೊತೆಗೆ ಕೃಷಿ ಸಂಸ್ಕೃತಿ, ಕುಶಲಕರ್ಮಿಗಳ ಸಂಸ್ಕೃತಿ ಹಾಗೂ ಅಲೆಮಾರಿ ಸಾಂಸ್ಕೃತಿಕ ಅಂಶಗಳು ಸಾಹಿತ್ಯಕ್ಕೆ ಸೇರಿಕೊಂಡ ಬಗೆಯನ್ನು ಹೊಸ ಕ್ರಮಗಳಲ್ಲಿ ವಿಶ್ಲೇಷಿಸಲಾಗಿದೆ. ಇದೆಲ್ಲವೂ ಕೂಡ ವಿದ್ಯಾರ್ಥಿಗಳ ಹೊಸ ಆಲೋಚನೆಗೆ ಕಾರಣವಾಗಬಲ್ಲದು. ಸಾಹಿತ್ಯ ಸಂಸ್ಕೃತಿಯನ್ನು ಕಟ್ಟಿಕೊಳ್ಳುವ ಕ್ರಮಗಳು ಕೂಡ ತಿಳಿದುಬರುತ್ತವೆ. ಕರ್ನಾಟಕದ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ವಿವಿಧ ತಿಳುವಳಿಕೆಗಳ ಮೂಲಕ ನೋಡುವ ಘಟಕವನ್ನು ಮುಂದಿನ ಘಟಕದಲ್ಲಿ ರೂಪಿಸಲಾಗಿದೆ. ಇದು ನಾಲ್ಕನೆಯ ಘಟಕ. ವಾಸ್ತುಶಿಲ್ಪ, ಚಿತ್ರಕಲೆ, ಶಿಲ್ಪಕಲೆ ಮತ್ತು ಸಂಗೀತದ ಕಲಾ ಪ್ರಕಾರಗಳ ಪರಿಚಯ ಮತ್ತು ಮಹತ್ವ ಈ ಘಟಕದಲ್ಲಿ ಕಾಣಿಸಲಾಗಿದೆ. ಕರ್ನಾಟಕ ಸಂಸ್ಕೃತಿಯ ಈ ಮುಖ್ಯ ನೆಲೆಗಳು ಕನ್ನಡ ಮತ್ತು ಕರ್ನಾಟಕದ ಮೌಲ್ಯಗಳಿಗೂ ಸಾಕ್ಷಿಯಾಗಿವೆ. ಜೊತೆಗೆ ಕರ್ನಾಟಕ ಚರಿತ್ರೆ ಕುರಿತು ಹಲವು ಮುಖ್ಯ ಸೂಚನೆಗಳನ್ನು ನೀಡುತ್ತವೆ. ಕೊನೆಯ ಘಟಕ ಕರ್ನಾಕದ ಪರಿಸರ ಪ್ರಜ್ಞೆಯನ್ನು ಕುರಿತು ಚರ್ಚಿಸುತ್ತದೆ. ಪರಿಸರ ಮತ್ತು ಮನುಷ್ಯನ ಕುರಿತ ನಮ್ಮ ಹಿರಿಯರ ಭಾವನೆಗಳು, ಕರ್ನಾಟಕದ ಪರಿಸರ ಚಳುವಳಿಗಳು, ಮಾನವ ನಿರ್ಮಿತ ಪರಿಸರ ಸಮಸ್ಯೆಗಳು, ಒಂದು ಕಥೆ, ಸಹಜ ಕೃಷಿ, ಹಾಗೂ ಭವಿಷ್ಯವನ್ನು ಕುರಿತಾದ ಸಾಧ್ಯತೆಗಳ ಬಗ್ಗೆ ಪರಿಚಯ ಮಾಡಿ ಕೊಡಲಾಗಿದೆ. ಹೊಸ ಹೊಸ ಚರ್ಚೆಗಳಿಗೆ ವಿದ್ಯಾರ್ಥಿಗಳು ತೆರೆದುಕೊಳ್ಳಬೇಕೆಂಬ ಆಶಯ ಒಟ್ಟಾಗಿ ಈ ಪಠ್ಯಕ್ರಮದ ಹಿಂದಿದೆ.

ಇಡೀ ಪಠ್ಯಕ್ರಮ ನಿಮ್ಮೆದುರು ಹಲವು ದಾರಿಗಳನ್ನು ತೆರೆದಿಟ್ಟಿದೆ. ಮೇಲಿನ ಐದೂ ಘಟಕಗಳ ಓದು ವಿದ್ಯಾರ್ಥಿಗಳಿಗೆ ಕನ್ನಡ ಮತ್ತು ಕರ್ನಾಟಕದ ಬಗ್ಗೆ ಒಂದು ಅಪರೂಪದ ಚಿತ್ರ ಕಟ್ಟಿಕೊಡಬಲ್ಲದು. ಕನ್ನಡ ಭಾಷೆ, ಸಾಹಿತ್ಯ ಚರಿತ್ರೆ, ಸಂಸ್ಕೃತಿ ಚರಿತ್ರೆ, ವಿವಿಧ ಕಲಾಪ್ರಕಾರಗಳು ಮತ್ತು ಪರಿಸರದ ಬಗ್ಗೆ ಅಧ್ಯಯನಾಸಕ್ತಿ ಬೆಳೆಸಬಲ್ಲದು. ವಿದ್ಯಾರ್ಥಿಗಳ ಬೌದ್ಧಿಕ ಅಭಿರುಚಿಯನ್ನು ಇಂಥ ಪಠ್ಯಕ್ರಮ ಸರಿಯಾದ ರೀತಿಯಲ್ಲಿ ಪೋಷಿಸಬಲ್ಲದು. ಇವುಗಳನ್ನು ಗಮನವಿಟ್ಟು ಓದುವ, ಇಲ್ಲಿನ ಸೂಚನೆಗಳನ್ನು ವಿವೇಕದಿಂದ ಗ್ರಹಿಸುವ ತಾಳ್ಮೆ ಮತ್ತು ಪರಿಶ್ರಮವನ್ನು ವಿದ್ಯಾರ್ಥಿಗಳು ಹೊಂದಿರುವರೆಂದು ಆಶಿಸಿರುವೆವು.

**ವಿಕ್ರಮ ವಿಸಾಜಿ**

(ಸಂಪಾದಕ)

## ಘಟಕ ೧

# ಕನ್ನಡ ಭಾಷೆ ಮತ್ತು ವ್ಯಾಕರಣ

### ಹಿನ್ನೆಲೆ

ಭಾಷೆ ಕೇವಲ ಮಾನವ ಜನಾಂಗಕ್ಕೆ ಸೀಮಿತವಾದ ಬೆಳವಣಿಗೆ ಎಂದು ಹೇಳಲಾಗುತ್ತದೆಯಾದರೂ ಎಲ್ಲ ಜೀವಿಗಳೂ ಸಂವಹನ ಮಾಡಲು ಒಂದಲ್ಲ ಒಂದು ಬಗೆಯ ಸಂಕೇತ ವ್ಯವಸ್ಥೆಯನ್ನು ಬಳಸುತ್ತವೆ. ನಾವು ದಿನನಿತ್ಯ ಕೇಳುವ ಹಕ್ಕಿಗಳ ಕಲರವ, ಪ್ರಾಣಿಗಳು ಮಾಡುವ ಶಬ್ದಗಳು ಒಂದರ್ಥದಲ್ಲಿ ಅವುಗಳ ಭಾಷೆಯೇ ಆಗುತ್ತದೆ. ಈ ಅರ್ಥದಲ್ಲಿ ಭಾಷೆ ನಿರ್ದಿಷ್ಟ ಗುಂಪುಗಳು ತಮ್ಮೊಳಗೆ ಸಂವಹನಕ್ಕಾಗಿ ರೂಪಿಸಿಕೊಂಡ ಒಂದು ಸಾಂಕೇತಿಕ ವ್ಯವಸ್ಥೆ.

ವ್ಯಾಕರಣ ಭಾಷೆಯ ಬಳಕೆಯನ್ನು ವ್ಯವಸ್ಥೆಯನ್ನು ವಿವರಿಸುವ ಜ್ಞಾನ. ವ್ಯಾಕರಣ ಸಾಮಾನ್ಯವಾಗಿ ಒಂದು ಭಾಷೆಗೆ ಸಂಬಂಧಿಸಿದ ರಚನೆಯ ನಿಯಮಗಳನ್ನು ವಿವರಿಸುವ ವ್ಯವಸ್ಥೆ ಎಂದು ಹೇಳಲಾಗುತ್ತದೆ. ಆದರೆ ಎರಡು ಭಾಷೆಯ ವ್ಯಾಕರಣಗಳಲ್ಲಿ ಹಲವಾರು ಸಾಮ್ಯಗಳಿರಬಹುದು. ಇಂತಹ ಸಂದರ್ಭದಲ್ಲಿ ಅವುಗಳ ತೌಲನಿಕ ವ್ಯಾಕರಣದ ರಚನೆ ಸಾಧ್ಯ. ಒಂದು ಭಾಷಾ ಕುಟುಂಬಕ್ಕೆ ಸೇರಿದ ಭಾಷೆಗಳಲ್ಲಿ ಇಂತಹ ತೌಲನಿಕ ವ್ಯಾಕರಣಗಳನ್ನು ಭಾಷಾವಿಜ್ಞಾನಿಗಳು ರಚಿಸಲು ಪ್ರಯತ್ನಿಸಿದ್ದಾರೆ. ಇಂತಹ ಪ್ರಯತ್ನಗಳ ಹಿನ್ನೆಲೆಯಲ್ಲಿ ಈ ಭಾಷೆಗಳಲ್ಲಿ ಜನಾಂಗಿಕ ಸಂಬಂಧವಿದೆ ಎಂದು ಭಾವಿಸಲಾಗುತ್ತದೆ. ಅಂದರೆ ಈ ಭಾಷೆಗಳು ಒಂದೇ ಭಾಷಿಕ ಕುಟುಂಬಕ್ಕೆ ಸೇರಿದ ಭಾಷೆಗಳು ಎಂದು ಅರ್ಥ. ೧೮೫೬ರಲ್ಲಿ ರಾಬರ್ಟ್ ಕಾಲ್ಡ್‌ವೆಲ್ ರಚಿಸಿರುವ ತೌಲನಿಕ ದ್ರಾವಿಡ ಭಾಷೆಗಳ ವ್ಯಾಕರಣ ಇಂತಹ ವ್ಯಾಕರಣ. ಇದಕ್ಕೂ ಮೀರಿದ ಭಾಷಾರಚನೆಯ ಮಾದರಿಯನ್ನು (ಟೈಪಾಲಜಿ) ಆಧಾರವಾಗಿಟ್ಟುಕೊಂಡು, ಉದಾಹರಣೆಗೆ, ಭಾಷೆಯಲ್ಲಿ ಕ್ರಿಯಾಪದ ವಾಕ್ಯದ ಆರಂಭದಲ್ಲಿ ಬರುತ್ತದೆಯೋ ಅಥವಾ ಮಧ್ಯದಲ್ಲಿ ಬರುತ್ತದೆಯೋ ಅಥವಾ ಅಂತ್ಯದಲ್ಲಿ ಬರುತ್ತದೆಯೋ ಎಂಬ ಆಧಾರದ ಮೇಲೆ, ಯಾವುದೇ ಜನಾಂಗಿಕ ಸಂಬಂಧ ಇಲ್ಲದ ಭಾಷೆಗಳ ತೌಲನಿಕ ವ್ಯಾಕರಣವನ್ನು ರಚಿಸಬಹುದು. ಇವೆರಡಕ್ಕಿಂತ ಭಿನ್ನವಾಗಿ ಜಗತ್ತಿನ ಎಲ್ಲ ಭಾಷೆಗಳ ವ್ಯಾಕರಣ ಒಂದೇ ಮಾದರಿಯನ್ನು ಅನುಸರಿಸುತ್ತದೆ ಎಂದು ಹೇಳುವ ರೂಪಾಂತರ ಉತ್ಪಾದಕ (ಟ್ರಾನ್ಸ್‌ಫರ್ಮೇಷನಲ್ ಜನರೇಟಿವ್) ವ್ಯಾಕರಣದ ಪರಿಕಲ್ಪನೆಯೂ ಇವೆ. ಇವಲ್ಲದೆ ವಿವಿಧ ಉಪಯೋಗಾತ್ಮಕ ಆಧಾರಗಳನ್ನು ಗಮನದಲ್ಲಿಟ್ಟುಕೊಂಡು ಮಾಡಿದ ವಿವರಣಾತ್ಮಕ (ಡಿಸ್ಕ್ರಿಪ್ಟಿವ್), ಬೋಧನಾತ್ಮಕ (ಪೆಡಗಾಗಿಕಲ್), ನಿರ್ದೇಶಾತ್ಮಕ

(ಪ್ರಿಸ್ಕ್ರಿಪ್ಟಿವ್), ಪರಾಮರ್ಶನ (ರೆಫ್ರೆನ್ಸ್), ಸೈದ್ಧಾಂತಿಕ (ಥಿಯೊರಿಟಿಕಲ್), ಸಾಂಪ್ರದಾಯಿಕ (ಟ್ರೆಡಿಷನಲ್) ಮುಂತಾದ ವ್ಯಾಕರಣಗಳಿವೆ.

ಆದರೆ ಭಾಷೆ ಹಾಗೂ ವ್ಯಾಕರಣಗಳು ಮಾನವ ಸಮಾಜಗಳ ನಿರ್ಮಾಣಗಳು. ಹೀಗಾಗಿ ಅವು ಚಾರಿತ್ರಿಕ, ಭೌಗೋಳಿಕ ಹಾಗೂ ಸಾಮಾಜಿಕ ಆಯಾಮಗಳನ್ನು ಒಳಗೊಂಡಿರುತ್ತವೆ. ಹೀಗಾಗಿ ವ್ಯಾಕರಣಗಳ ರಚನೆಯನ್ನು ಅವುಗಳ ರಚನೆಯಾದ ಕಾಲ, ದೇಶ ಹಾಗೂ ಸಮಾಜಗಳ ಸಂದರ್ಭದಲ್ಲಿ ಇಟ್ಟು ನೋಡಬೇಕಾದ ಅವಶ್ಯಕತೆ ಇದೆ. ಪ್ರಸ್ತುತ ಘಟಕ ನಾಲ್ಕು ಆಯಾಮಗಳಲ್ಲಿ ನಿಮಗೆ ವ್ಯಾಕರಣದ ಬಗ್ಗೆ ಪರಿಚಯ ಮಾಡಿಕೊಡಲು ಪ್ರಯತ್ನಿಸುತ್ತದೆ. ಮೊದಲಿಗೆ ವ್ಯಾಕರಣವನ್ನು ಒಂದು ವ್ಯವಸ್ಥೆಯನ್ನಾಗಿ ನೋಡಿ ಅದನ್ನು ವಿವರಿಸಲಾಗಿದೆ. ಯಾವುದೇ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವ ಪರಿಕರಗಳನ್ನು ಅದು ಕಟ್ಟಿಕೊಡುತ್ತದೆ. ಎರಡನೆಯದಾಗಿ ಭಾರತೀಯ ವ್ಯಾಕರಣ ಹಾಗೂ ಕನ್ನಡ ವ್ಯಾಕರಣ ಪರಂಪರೆಗಳನ್ನು ಪರಿಚಯ ಮಾಡಿಕೊಡಲಾಗಿದೆ. ಮೂರನೆಯದಾಗಿ ಆಧುನಿಕ ಭಾಷಾವಿಜ್ಞಾನದ ಪರಿಕಲ್ಪನೆಗಳನ್ನು ಪರಿಚಯ ಮಾಡಿಕೊಟ್ಟು ಅದಕ್ಕೆ ಸಮೀಪವಾದ ವ್ಯಾಕರಣ ಪರಂಪರೆಯ ಪರಿಕಲ್ಪನೆಗಳನ್ನು ಕುರಿತು ವಿವರಿಸಲಾಗಿದೆ. ಕೊನೆಯದಾಗಿ ಕನ್ನಡ ವ್ಯಾಕರಣದ ಸ್ಥೂಲ ರೂಪುರೇಷೆಯನ್ನು ನಿಮ್ಮ ಮುಂದೆ ಇಡಲಾಗಿದೆ.

**ವಿಷಯಾನುಕ್ರಮಣಿಕೆ**


೧.೦. ಉದ್ದೇಶ

೧.೧. ಪೀಠಿಕೆ

೧.೨. ವಸಾಹತುಷಾಹಿ ವಿಸ್ತರಣೆ ಮತ್ತು ವ್ಯಾಕರಣ

೧.೩. ವ್ಯಾಕರಣದ ತಾತ್ವಿಕ ಸಮಸ್ಯೆಗಳು

೧.೪. ಭಾರತೀಯ ವ್ಯಾಕರಣ ಪರಂಪರೆ

- ೧.೪.೧. ವೈದಿಕ ವ್ಯಾಕರಣ ಪರಂಪರೆ
- ೧.೪.೨. ಬೌದ್ಧ ಮತ್ತು ಜೈನ ವ್ಯಾಕರಣ ಪರಂಪರೆ
- ೧.೪.೩. ವೈಯಾಕರಣಿಗಳ ಬೌದ್ಧಿಕ ಪ್ರಖರತೆ
- ೧.೪.೪. ದ್ವೈಭಾಷಿಕ ವ್ಯಾಕರಣಗಳು
- ೧.೪.೫. ಬಹುಭಾಷಿಕತೆ
- ೧.೪.೬. ವ್ಯಾಕರಣ ತೆರೆದ ಮನಸ್ಸು
- ೧.೪.೭. ಮಣಿಪ್ರವಾಳಂ

೧.೫. ಕನ್ನಡ ವ್ಯಾಕರಣ ಪರಂಪರೆ

೧.೬. ಭಾಷಾವಿಜ್ಞಾನ

- ೧.೬.೧ ಉಗಮ
- ೧.೬.೨. ಶಬ್ದ ಮತ್ತು ಅರ್ಥ
- ೧.೬.೩. ಧ್ವನಿ ವಿಜ್ಞಾನ ಮತ್ತು ಧ್ವನಿಮಾ ವಿಜ್ಞಾನ
- ೧.೬.೪. ಧ್ವನಿಮಾ ರಚನೆ
- ೧.೬.೫. ಆಕೃತಿಮಾ ರಚನೆ
- ೧.೬.೬. ಆಕೃತಿಮಾ ವಿಜ್ಞಾನ

೧.೬.೭. ಆಕೃತಿಮಾದ ಸ್ವರೂಪ ಮತ್ತು ಲಕ್ಷಣಗಳು

೧.೬.೮. ವಾಕ್ಯರಚನಾ ವಿಜ್ಞಾನ

೧.೬.೯. ಅರ್ಥರಚನಾ ವಿಜ್ಞಾನ

೧.೭. ಕನ್ನಡ ವ್ಯಾಕರಣದ ಪದವರ್ಗಗಳ ಸ್ಥೂಲ ಪರಿಚಯ

೧.೮. ಸಾರಾಂಶ

ಅಭ್ಯಾಸ

## ೧.೦. ಉದ್ದೇಶ

ಈ ಘಟಕ ವ್ಯಾಕರಣದ ಬಗ್ಗೆ ನಿಮಗೆ ಮಾಹಿತಿಯನ್ನು ನೀಡುತ್ತದೆ. ಅದರ ಅಧ್ಯಯನದಿಂದ ನೀವು ಕೆಳಗೆ ನೀಡಿರುವ ವಿಷಯಗಳ ಬಗ್ಗೆ ತಿಳಿದುಕೊಳ್ಳುತ್ತೀರಿ.

೧. ವ್ಯಾಕರಣದ ಆರಂಭದ ಬಗ್ಗೆ ಪರಿಚಯ.

೨. ವಸಾಹತುಶಾಹಿ ವಿಸ್ತರಣೆ, ಬೈಬಲ್ಲಿನ ಅನುವಾದ ಹಾಗೂ ವ್ಯಾಕರಣ ರಚನೆಗಳಲ್ಲಿ ಇರುವ ಸಂಬಂಧ.

೩. ವ್ಯಾಕರಣ ರಚನೆ ಒಂದು ವ್ಯವಸ್ಥೆಯಾಗಿ ಉಂಟುಮಾಡುವ ತಾತ್ವಿಕ ಸಮಸ್ಯೆಗಳು.

೪. ಭಾರತೀಯ ವ್ಯಾಕರಣ ಪರಂಪರೆಯ ಪರಿಚಯ.

೫. ಸಂಸ್ಕೃತ, ಪ್ರಾಕೃತ ಮತ್ತು ದೇಶೀಯ ಭಾಷೆಗಳ ವ್ಯಾಕರಣಗಳ ಪರಸ್ಪರ ಸಂಬಂಧಗಳು.

೬. ಕನ್ನಡ ವ್ಯಾಕರಣ ಪರಂಪರೆಯ ಪರಿಚಯ.

೭. ಭಾಷಾವಿಜ್ಞಾನದ ಸಂಕ್ಷಿಪ್ತ ಪರಿಚಯ.

೮. ಭಾಷಾವಿಜ್ಞಾನ ಮತ್ತು ವ್ಯಾಕರಣಗಳ ಅಂತರಸಂಬಂಧಗಳು.

೯. ಕನ್ನಡ ವ್ಯಾಕರಣದ ಪದವರ್ಗಗಳ ಸ್ಥೂಲ ಪರಿಚಯ.

## ೧.೧. ಪೀಠಿಕೆ

ಭಾಷಾವಿಜ್ಞಾನಿಗಳು ಭಾಷಾಪೂರ್ವ ಯುಗದಲ್ಲಿ ಆದಿಮಾನವನು ಕೇವಲ ಸಂಜ್ಞೆ ಹಾಗೂ ಚಿತ್ರ ಸಂಕೇತಗಳನ್ನು ಬಳಸಿಕೊಂಡು ಪರಸ್ಪರ ಸಂವಹನ ನಡೆಸುತ್ತಿದ್ದಿರಬಹುದು ಎಂದು ಹೇಳುತ್ತಾರೆ. ನಂತರದಲ್ಲಿ ತನ್ನ ಧ್ವನಿಶಕ್ತಿಯನ್ನು ಬೆಳೆಸಿ ವಿಸ್ತರಿಸಿಕೊಳ್ಳುವುದರ ಮೂಲಕ ಅಭಿಪ್ರಾಯಗಳನ್ನು ತಿಳಿಸುವ ಸಲುವಾಗಿ ಆವಿಷ್ಕಾರ ಮಾಡಿದ ವಿಶಿಷ್ಟ ಧ್ವನಿ ಸಂಕೇತಗಳೇ ಭಾಷೆಯಾಗಿ ರೂಪು ತಾಳಿರಬಹುದು. ಈ ರೀತಿ ಇಚ್ಛಾಪೂರ್ವಕವಾಗಿ ಹಾಗೂ ಯಾದೃಚ್ಛಿಕವಾಗಿ ಸೃಷ್ಟಿಸಿಕೊಂಡ ಈ ಧ್ವನಿ ಸಂಕೇತಗಳು ಪರಸ್ಪರ ರೂಢಿಯಿಂದ ಹಾಗೂ ನಿಯತವಾದ ಬಳಕೆಯ ಮೂಲಕ ಬೆಳೆದು, ಮೊದಲಿಗೆ ಆಡುಭಾಷೆಯಾಗಿಯೂ ತದನಂತರದಲ್ಲಿ ಲಿಪಿರೂಪವನ್ನು ಪಡೆದಾಗ ಅದು ಲಿಖಿತಭಾಷೆಯಾಗಿಯೂ ಪರಿಣಮಿಸಿತು. ಅದೇ ರೀತಿ ಸಾಹಿತ್ಯ ಎಂಬುದು ಮೊದಲಿಗೆ ಮೌಖಿಕ ರೂಪದಲ್ಲಿ ಜಾನಪದವಾಗಿ ನಂತರದಲ್ಲಿ ಲಿಪಿಬದ್ಧವಾಗಿ ಲಿಖಿತ ಸಾಹಿತ್ಯವಾಗಿ ಬೆಳೆಯಿತು. ಈ ರೀತಿ ಬೆಳೆದ ಸಾಹಿತ್ಯ

ರಾಶಿಯನ್ನು ಅನುಸರಿಸಿ ಬರೆಯುವ ಮಾರ್ಗದರ್ಶನಕ್ಕೆ ಹಾಗೂ ಸಾಹಿತ್ಯದ ಕ್ರೋಢೀಕರಣ ಮತ್ತು ವಿಶ್ಲೇಷಣೆಗಳಿಗೆ ಮಾರ್ಗದರ್ಶಕ ಸೂತ್ರಗಳನ್ನು ತಯಾರು ಮಾಡುವ ಅಗತ್ಯ ಬಂದೊದಗಿತು. ವ್ಯಾಕರಣ ಇಂತಹ ಮಾರ್ಗದರ್ಶಕ ಸೂತ್ರಗಳಲ್ಲಿ ಒಂದು.

ಪಾಶ್ಚಿಮಾತ್ಯ ವ್ಯಾಕರಣ ಪರಂಪರೆಯ 'ಗ್ರಾಮರ್' ಎಂಬ ಪದ ಗ್ರೀಕ್‌ನ 'ಗ್ರಮಾಟಿಕಾ' ಪದದಿಂದ ಬಂದಿದೆ. ಆದರೆ ಆರಂಭದಲ್ಲಿ ಅದರ ಬಳಕೆಯಾಗಿರುವುದು 'ಬರವಣಿಗೆಯ ಕಲೆ' ಎಂಬ ಅರ್ಥಕ್ಕೆ ಸಂಬಂಧಿಸಿದಂತೆ. ಗ್ರೀಕ್ ಸಂಸ್ಕೃತಿಯಲ್ಲಿ ವ್ಯಾಕರಣ ತತ್ವಶಾಸ್ತ್ರದ ಒಂದು ಭಾಗವಾಗಿತ್ತು. ಕ್ರಮೇಣ ಮಧ್ಯಯುಗದ ವೇಳೆಗೆ ಅದರಲ್ಲೂ ಲ್ಯಾಟಿನ್ ವ್ಯಾಕರಣ ಪ್ರಾಮುಖ್ಯತೆಗೆ ಬರುವ ವೇಳೆಗೆ ಅದು ಭಾಷೆಯ ಸರಿಯಾದ ಬಳಕೆಯನ್ನು ಪ್ರತಿಪಾದಿಸುವ ಹಾಗೂ ಶಿಷ್ಟ ರೂಪದ ಪಠ್ಯಗಳನ್ನು ನಿರ್ದೇಶಿಸುವ ನಿಯಮಗಳು ಎಂಬ ಅರ್ಥವನ್ನು ಪಡೆಯಿತು. ಭಾರತೀಯ ವ್ಯಾಕರಣ ಪರಂಪರೆಯಲ್ಲೂ ಸಂಸ್ಕೃತದಲ್ಲಿ ವ್ಯಾಕರಣ ಅಂದರೆ ಬೇರ್ಪಡಿಸುವುದು, ವಿವರಿಸುವುದು ಮುಂತಾದ ಅರ್ಥಗಳಿವೆ. ಆದರೆ ಮೊದಲ ವ್ಯುತ್ಪತ್ತಿ ಶಾಸ್ತ್ರವಾದ 'ನಿರುಕ್ತ'ದ ರಚನೆಯ ವೇಳೆಗಾಗಲೇ ಸರಿಯಾದ ಭಾಷಾಬಳಕೆ ಎಂಬ ಅರ್ಥದಲ್ಲಿ ಬಳಕೆಯಾಗಿರುವಂತೆ ತಿಳಿದುಬರುತ್ತದೆ.

ಕನ್ನಡ ಭಾಷೆಯ ವ್ಯಾಕರಣದ ಬಗ್ಗೆ ತಿಳಿಯುವುದೆಂದರೆ ಕೇವಲ ಕನ್ನಡ ವ್ಯಾಕರಣದ ನಿಯಮಗಳನ್ನು ತಿಳಿಯುವುದಷ್ಟೇ ಅಲ್ಲ. ನಿಮಗೆ ಕನ್ನಡ ಭಾಷೆಯ ಉಪಯೋಗ ತಿಳಿದೇ ಇದೆ. ಆದ್ದರಿಂದ ವ್ಯಾಕರಣದ ನಿಯಮಗಳಿಗಿಂತ ವ್ಯಾಕರಣದ ಬಗ್ಗೆ ತಿಳಿದುಕೊಳ್ಳುವ ಅಗತ್ಯವಿದೆ. ಮಧ್ಯಕಾಲೀನ ಭಾರತದಲ್ಲಿ ವ್ಯಾಕರಣದ ಕಲಿಕೆ ಎಲ್ಲ ಕಲಿಕೆಗಳಿಗೆ ಅವಶ್ಯವಾಗಿತ್ತು. ಘಟಕದ ಮುಂದಿನ ಭಾಗಗಳು ವ್ಯಾಕರಣವನ್ನು ಒಂದು ಜ್ಞಾನವ್ಯವಸ್ಥೆಯನ್ನಾಗಿ ನೋಡಿ ಅದರ ಚಾರಿತ್ರಿಕ ಬೆಳವಣಿಗೆ ಮತ್ತು ಸಾಧನೆಗಳನ್ನು ಪರಿಚಯ ಮಾಡಿಕೊಡುತ್ತವೆ.

## ೧.೨. ವಸಾಹತುಶಾಹಿ ವಿಸ್ತರಣೆ ಮತ್ತು ವ್ಯಾಕರಣ

ವಸಾಹತುಶಾಹಿ ವಿಸ್ತರಣೆಯು ಜ್ಞಾನ, ಧರ್ಮ, ಭಾಷೆ, ರೋಗ-ರುಜಿನಗಳು ಮುಂತಾದವುಗಳನ್ನು ಇಡೀ ಜಗತ್ತಿಗೆ ಹಬ್ಬುವಂತೆ ಮಾಡಿತು. ವ್ಯಾಕರಣ ಅಂತಹ ಪರಿಕಲ್ಪನೆಗಳಲ್ಲಿ ಒಂದು. ವಸಾಹತುಷಾಹಿ ವಿಸ್ತರಣೆಗೆ ಮೊದಲು ಜಗತ್ತಿನ ಅನೇಕ ಸಮುದಾಯಗಳಿಗೆ ಲಿಪಿ ಹಾಗೂ ವ್ಯಾಕರಣದ ಪರಿಚಯವೇ ಇರಲಿಲ್ಲ ಮತ್ತು ಅವುಗಳ ಅಗತ್ಯವೂ ಇರಲಿಲ್ಲ. ಲಿಪಿರಹಿತ ಸಮುದಾಯಗಳಲ್ಲಿ ಲಿಪಿಯ ಪ್ರವೇಶ ಹಾಗೂ ಅದರ ಜೊತೆಯಲ್ಲೇ ಬಂದ ಮುದ್ರಣ ಆ ಭಾಷೆಗಳ ಮಾನಕೀಕರಣ ಪ್ರಕ್ರಿಯೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ತಂದದ್ದಲ್ಲದೆ ಆ ಸಮುದಾಯಗಳ ಭಾಷೆಯ ಉಳಿವಿಗೇ ಮಾರಕವಾದವು. ಅರ್ಜೆಂಟೈನಾದ ತತ್ವಜ್ಞಾನಿ ವಾಲ್ಟರ್ ಮಿಂಗ್ನೋಲೊ ಕ್ರಿ.ಶ. ೧೪೯೨ರಿಂದ ೧೮೦೦ರ ಅವಧಿಯಲ್ಲಿ ಸ್ಪೈನ್, ಪೋರ್ಚುಗೀಸ್, ಬ್ರಿಟಿಷ್, ಫ್ರೆಂಚ್ ಮತ್ತು ಡಚ್ ವಸಾಹತುಶಾಹಿಗಳು ಪ್ರವೇಶಿಸಿದಾಗ ಅಲ್ಲಿ ಜೀವಂತವಾಗಿದ್ದ ಸುಮಾರು ಎರಡು ಸಾವಿರ ಅಮೆರಿ-ಇಂಡಿಯನ್ ಭಾಷೆಗಳು ಮುಂದಿನ ಶತಮಾನಗಳಲ್ಲಿ ನಿರ್ನಾಮವಾದುದನ್ನೂ ಅವುಗಳ ಸ್ಥಾನವನ್ನು ಯೂರೋಪಿನ ಭಾಷೆಗಳು ಆಕ್ರಮಿಸಿದ್ದನ್ನೂ ಪ್ರಸ್ತಾಪಿಸುತ್ತಾನೆ. ಮೂಲಭೂತವಾಗಿ ನೈಸರ್ಗಿಕ ಸಂಪತ್ತಿನ ಸುಲಭ ಗಳಿಕೆ ಹಾಗೂ ಕ್ರೈಸ್ತ ಧರ್ಮಕ್ಕೆ

ಸ್ಥಳೀಯರನ್ನು ಮತಾಂತರಗೊಳಿಸುವ ಉದ್ದೇಶದಿಂದ ಕೂಡಿದ್ದ ಈ ವಸಾಹತುಶಾಹಿ ವಿಸ್ತರಣೆಗಳು ಆಧುನಿಕ ಯುಗದ ಎರಡು ಅತ್ಯಂತ ಮುಖ್ಯವಾದ ಶೈಕ್ಷಣಿಕ ಅಧ್ಯಯನದ ಶಿಸ್ತುಗಳನ್ನು ಜಗತ್ತಿನಲ್ಲಿ ಪ್ರಸರಣ ಮಾಡಿದವು. ಅವುಗಳಲ್ಲಿ ಮೊದಲನೆಯದು ಅನುವಾದ ಹಾಗೂ ಎರಡನೆಯದು ಅದಕ್ಕೆ ಅನುಕೂಲ ಮಾಡಿಕೊಡುವ ವ್ಯಾಕರಣಗಳ ರಚನೆ. ಮತಾಂತರದ ಉದ್ದೇಶದಿಂದ ಕೈಗೊಂಡ ಬೈಬಲ್ಲಿನ ಅನುವಾದಗಳು ಹಾಗೂ ಅದನ್ನು ಸುಲಭ ಮಾಡಲು ಅಗತ್ಯವಿದ್ದ ಸ್ಥಳೀಯ ಭಾಷೆಗಳ ವ್ಯಾಕರಣ ಹಾಗೂ ನಿಘಂಟುಗಳಿಗೆ ಸಂಬಂಧಿಸಿದ ಈ ಎರಡು ಶಿಸ್ತುಗಳು ಮುಂದಿನ ಮೂರು ನಾಲ್ಕು ಶತಮಾನಗಳಲ್ಲಿ ಇಡೀ ಜಗತ್ತಿನಲ್ಲಿ ಗಮನಾರ್ಹವಾದ ಧನಾತ್ಮಕ ಹಾಗೂ ಋಣಾತ್ಮಕ ಪರಿಣಾಮಗಳನ್ನು ಉಂಟುಮಾಡಿದವು. ಅಮೇರಿಕಾ ಖಂಡಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಕ್ರಿಸ್ಟೋಫರ್ ಕೊಲಂಬಸ್ ಅಮೆರಿಕಾ ಖಂಡವನ್ನು ಪ್ರವೇಶಿಸಿದಾಗ ಅಲ್ಲಿದ್ದ ಸುಮಾರು ಎರಡು ಸಾವಿರ ಸ್ಥಳೀಯ ಭಾಷೆಗಳು ೨೦ನೆಯ ಶತಮಾನದಲ್ಲಿ ನಡೆದ ಜನಗಣತಿಯ ವೇಳೆಗೆ ಅಳಿವಿನಂಚಿಗೆ ಬಂದಿದ್ದವು ಅಥವಾ ನಿರ್ನಾಮಗೊಂಡಿದ್ದವು. ಸುಮಾರು ೬೬% ಭಾಷೆಗಳು ಈ ರೀತಿ ನಿರ್ನಾಮವಾಗಿರಬೇಕು ಎಂಬ ಅಂದಾಜು ಮಾಡಲಾಗಿದೆ. ಆದರೆ ಈ ಮತಾಂತರಗೊಳಿಸುವ ಯೋಜನೆ ಅನೇಕ ಸ್ಥಳೀಯ ಭಾಷೆಗಳ ವ್ಯಾಕರಣ ಹಾಗೂ ನಿಘಂಟುಗಳ ರಚನೆಯ ಯೋಜನೆಯನ್ನೂ ಜೊತೆಜೊತೆಯಾಗಿ ಹುಟ್ಟುಹಾಕಿತು. ಈ ಚಟುವಟಿಕೆ ವಸಾಹತುಶಾಹಿ ವಿಸ್ತರಣೆಯ ಭೂಭಾಗಗಳಲ್ಲಿ ಅಂದರೆ ಆಫ್ರಿಕಾ, ಅಮೇರಿಕಾ, ಏಷ್ಯಾ, ಆಸ್ಟ್ರೇಲಿಯಾ ಖಂಡಗಳಲ್ಲಿ ವ್ಯಾಪಕವಾಗಿ ನಡೆದಿರುವುದನ್ನು ನಾವು ಕಾಣುತ್ತೇವೆ. ಅತ್ಯಂತ ಅಧಿಕ ಸಂಖ್ಯೆಯ ಭಾಷೆಗಳಿಂದ ಕೂಡಿದ್ದ ಈ ಭೂಭಾಗಗಳಿಂದಲೇ ಅತ್ಯಂತ ಅಧಿಕ ಸಂಖ್ಯೆಯಲ್ಲಿ ಭಾಷೆಗಳು ಲುಪ್ತವಾಗಿವೆ ಎಂಬ ಅಂಶವನ್ನು ನಾವು ಗಮನಿಸಬೇಕಾಗಿದೆ. ಆದರೆ ಏಷ್ಯಾ ಖಂಡದಲ್ಲಿ, ಅದರಲ್ಲೂ ಭಾರತದಲ್ಲಿ, ಈ ಬಗೆಯ ವ್ಯಾಕರಣ, ನಿಘಂಟು ಹಾಗೂ ಅನುವಾದ ಚಟುವಟಿಕೆಗಳಿಗೆ ಬಂದಿರುವ ಪ್ರಕ್ರಿಯೆಗಳು ಭಿನ್ನವಾಗಿದ್ದು ಅದನ್ನು ಮುಂದೆ ವಿಷದವಾಗಿ ಚರ್ಚಿಸಲಾಗಿದೆ. ಇದನ್ನು ನಾವು ಮೊದಲ ಹಂತದ ವ್ಯಾಕರಣಗಳ ಬೆಳೆ ಎಂದು ಕರೆಯಬಹುದು.

ಎರಡನೆಯ ಹಂತದ ವ್ಯಾಕರಣದ ಬೆಳೆ ವಸಾಹತುಶಾಹಿ ವಿಸ್ತರಣೆಯಷ್ಟೇ ವಿನಾಶಕಾರಿ ಪ್ರವೃತ್ತಿಯದಾಗಿದ್ದು ೨೦ನೆಯ ಶತಮಾನನದಲ್ಲಿ ನಡೆದ ಮೊದಲನೆಯ ಹಾಗೂ ಎರಡನೆಯ ಮಹಾಯುದ್ಧಗಳ ಸಂದರ್ಭದಲ್ಲಿ ನಡೆದಿದೆ. ಈ ಯುದ್ಧದ ಸಂದರ್ಭದಲ್ಲಿ ವ್ಯಾಕರಣ ಸೈನ್ಯಕ್ಕೆ ಅದರ ಮಾರಕ ಅಸ್ತ್ರಗಳ ಜೊತೆಯಲ್ಲಿ ಸೇರಿಕೊಂಡಿದ್ದ ಭಿನ್ನ ರೂಪದ ಅಸ್ತ್ರವಾಗಿತ್ತು. ಈ ಕಾರಣಕ್ಕಾಗಿ ರಾಷ್ಟ್ರಗಳು ಭಾಷಾವಿಜ್ಞಾನಿಗಳನ್ನು ಯುದ್ಧದ ತುರ್ತುಸೇವೆಗೆ ಕರೆದು ವ್ಯಾಕರಣಗಳ ರಚನೆಯಲ್ಲಿ ತೊಡಗುವಂತೆ ನಿಯುಕ್ತಗೊಳಿಸಿದವು. ಈ ವ್ಯಾಕರಣಗಳ ಮೂಲಕ ಸೈನಿಕರನ್ನು ತ್ವರಿತ ಗತಿಯ ಭಾಷಾ ತರಬೇತಿಗೆ ಒಳಪಡಿಸಿ ಅವರನ್ನು ಯುದ್ಧರಂಗದ ಪ್ರಾದೇಶಿಕ ಭಾಷೆಗಳಲ್ಲಿ ವ್ಯವಹರಿಸಲು ಸಹಾಯಕವಾಗುವಂತೆ ತಯಾರು ಮಾಡಲಾಗುತ್ತಿತ್ತು. ತೀರಾ ತುರ್ತು ಹಾಗೂ ತ್ವರಿತವಾಗಿ ಕೈಗೊಂಡ ಈ ಯುದ್ಧದ ಸೇವೆಯ ವ್ಯಾಕರಣಗಳು ಅಸಮರ್ಪಕವಾದ ವ್ಯಾಕರಣಗಳಾಗಿದ್ದು ಮೂಲೆಗುಂಪಾದವು. ಉದಾಹರಣೆಗೆ, ಹಿಂದಿ ಭಾಷೆಯ ಬಗ್ಗೆ ರಚಿತವಾದ ಅಂತಹ ಒಂದು ವ್ಯಾಕರಣದಲ್ಲಿ ತಾಲವ್ಯ ವ್ಯಂಜನಗಳ (ತ, ಥ, ದ, ಧ, ನ) ಪ್ರಸ್ತಾಪವೇ ಇರಲಿಲ್ಲ! ವ್ಯಾಕರಣದ ರಚನೆ ಸಾಮಾನ್ಯವಾಗಿ ಭಾಷಾಕಲಿಕೆ ಹಾಗೂ ಸಾಹಿತ್ಯ ರಚನೆಗಾಗಿ ಎಂದು ಭಾವಿಸುವ ನಮಗೆ

ಅದರ ರಚನೆ ಯಾವ ಯಾವ ಬಗೆಯ ಆತಂಕಕಾರಿ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಸಾಧ್ಯ ಎಂಬುದನ್ನು ಅಮೆರಿಕಾ ಹಾಗೂ ಮಹಾಯುದ್ಧದ ಘಟನೆಗಳು ಸ್ಪಷ್ಟಪಡಿಸುತ್ತವೆ.

ಭಾರತ ಬ್ರಿಟಿಷರ ಆಡಳಿತಕ್ಕೆ ಒಳಗಾದಂತೆಲ್ಲ ಅದರ ಆಡಳಿತ ವ್ಯವಸ್ಥೆಯ ಅಂಗವಾಗಿ ಬಂದ ಅನೇಕ ಅಧಿಕಾರಿಗಳು ಭಾರತೀಯ ಭಾಷೆಗಳ ಬಗ್ಗೆ ಆಸಕ್ತಿ ವಹಿಸಿ ಅಧ್ಯಯನ ಮಾಡತೊಡಗಿದರು. 'ಓರಿಯೆಂಟಲಿಸಂ' ಎಂದು ಪ್ರಸಿದ್ಧವಾದ ಈ ಅಧ್ಯಯನಗಳು ವ್ಯಾಕರಣ ಹಾಗೂ ನಿಘಂಟು ರಚನೆಯ ಕೆಲಸವನ್ನು ವ್ಯಾಪಕವಾಗಿ ಮಾಡಿವೆ. ಆದರೆ ಭಾರತದಲ್ಲಿ ಇದೊಂದು ಕುತೂಹಲಕಾರಿಯಾದ ಬೆಳವಣಿಗೆಯಾಗಿ ಪರಿಣಮಿಸಿತು. ಥಾಮಸ್ ಟ್ರೌಟ್‌ಮನ್ ಈ ಅವಧಿಯ ವ್ಯಾಕರಣ ಚಟುವಟಿಕೆಗಳ ಬಗ್ಗೆ 'ವ್ಯಾಕರಣದ ಕಾರ್ಖಾನೆಯಲ್ಲಿ ಆದ ಸ್ಫೋಟ' ಎಂದು ಕರೆದಿದ್ದಾನೆ. ಕ್ರಿ.ಶ. ೧೮-೧೯ನೆಯ ಶತಮಾನಗಳ ಎರಡು ಪ್ರಮುಖ ಭಾಷಾವೈಜ್ಞಾನಿಕ ಬೆಳವಣಿಗೆಗಳು ಭಾರತದಲ್ಲಿ ಭಾಷೆಯನ್ನು ಕುರಿತು ನಡೆದ ಸಂಶೋಧನೆಗಳ ಫಲವಾಗಿ ಆದ ಬೆಳವಣಿಗೆಗಳು. ಮೊದಲನೆಯದು ೧೭೮೬ರಲ್ಲಿ ವಿಲಿಯಂ ಜೋನ್ಸ್ ಕಲ್ಕತ್ತಾದಲ್ಲಿ ನಡೆಸಿದ ಅಧ್ಯಯನದ ಫಲವಾಗಿ ಹೊರಬಂದ ಇಂಡೋ-ಯೂರೋಪಿಯನ್ ಭಾಷಾ ಕುಟುಂಬದ ಪರಿಕಲ್ಪನೆ. ಇದು ಸಂಸ್ಕೃತ ಭಾಷೆಯ ಸಂಬಂಧ ಪಾರಸಿ ಹಾಗೂ ಯೂರೋಪಿನ ಭಾಷೆಗಳೊಂದಿಗೆ ಇರುವುದನ್ನು ತೋರಿಸುವ ಮೂಲಕ ಭಾರತೀಯ ಭಾಷೆಗಳ ಅಧ್ಯಯನ ಕ್ಷೇತ್ರವನ್ನು ಯೂರೋಪಿನ ವರೆಗೆ ವಿಸ್ತರಿಸಿತು. ಎರಡನೆಯದಾಗಿ ಫ್ರಾನ್ಸಿಸ್ ಎಲ್ಲಿಸ್ ವೈಟ್ ಹಾಗೂ ಅವನ ಸಹೋದ್ಯೋಗಿಗಳು ೧೮೧೬ರಲ್ಲಿ ಪ್ರತಿಪಾದಿಸಿದ ದ್ರಾವಿಡ ಭಾಷಾ ಕುಟುಂಬದ ಪರಿಕಲ್ಪನೆ. ಇದರ ಪರಿಣಾಮವಾಗಿ ದ್ರಾವಿಡ ಭಾಷೆಗಳು ಸಂಸ್ಕೃತಕ್ಕಿಂತ ಭಿನ್ನವಾದ ಭಾಷಾಕುಟುಂಬಕ್ಕೆ ಸೇರಿದ ಭಾಷೆಗಳು ಎಂಬ ಅಂಶ ಮತ್ತು ಅದರ ಪರಿಣಾಮವಾಗಿ ದ್ರಾವಿಡ ಅಸ್ಮಿತೆ ರೂಪುಗೊಂಡಿತು. ದ್ರಾವಿಡ ಭಾಷೆಗಳಿಗೆ ಸಂಬಂಧಿಸಿದಂತೆ ಶಾಸ್ತ್ರೀಯ ಕೃತಿಗಳ ಸಂಪಾದನೆ, ಅನುವಾದ ಹಾಗೂ ಪ್ರಕಟಣೆಯ ಕಾರ್ಯ ತ್ವರಿತವಾಗಿ ನಡೆಯಿತು. ವ್ಯಾಕರಣ ಹಾಗೂ ನಿಘಂಟುಗಳ ರಚನೆ ಕೂಡ ತೀವ್ರಗೊಂಡಿದ್ದನ್ನು ನಾವು ನೋಡಬಹುದು. ಓರಿಯೆಂಟಲಿಸ್ಟರು ದೇಶೀಯ ವ್ಯಾಕರಣಗಳತ್ತ ನೋಡಬೇಕಾದ ಒತ್ತಡ ಬಂದದ್ದು ಇಂತಹ ಅಧ್ಯಯನಗಳ ಫಲವಾಗಿ. ಅಲ್ಲದೆ ದೇಶೀಯ ಪಂಡಿತರೂ ಪಾಶ್ಚಾತ್ಯ ವ್ಯಾಕರಣ ರಚನಾ ವಿಧಾನಗಳ ಫಲವನ್ನು ಪಡೆದುಕೊಂಡಿದ್ದನ್ನೂ ನಾವು ನೋಡುತ್ತೇವೆ. ಮೊದಲಿಗೆ ಗೋವಾದಲ್ಲಿ ೧೫೭೨ರಲ್ಲಿ ಪೋರ್ಚುಗೀಸ್ ಮಿಷನರಿಗಳಿಂದ ಆರಂಭವಾದ ವ್ಯಾಕರಣ, ನಿಘಂಟು ಹಾಗೂ ಕ್ರೈಸ್ತ ಧಾರ್ಮಿಕ ಸಾಹಿತ್ಯ ರಚನೆ ನಂತರದಲ್ಲಿ ಡಚ್, ಫ್ರೆಂಚ್ ಹಾಗೂ ಇಂಗ್ಲಿಷ್ ಮಿಷನರಿಗಳಿಂದ ಮುಂದುವರೆಯಿತು. ಈ ಕಾಲದ ನೂರಾರು ಗ್ರಂಥಗಳು, ವ್ಯಾಕರಣ ಹಾಗೂ ನಿಘಂಟುಗಳು ಸೇರಿದಂತೆ, ಯೂರೋಪಿನ ವಿವಿಧ ರಾಷ್ಟ್ರಗಳ ಪತ್ರಾಗಾರಗಳಲ್ಲಿ ಇನ್ನೂ ಮುದ್ರಣವಾಗದೆ ಉಳಿದಿವೆ. ಆದರೆ ಈ ಆರಂಭಿಕ ವ್ಯಾಕರಣಗಳು ಲ್ಯಾಟಿನ್ ವ್ಯಾಕರಣದ ಮಾದರಿಯನ್ನು ಉಪಯೋಗಿಸಿ ಬರೆದಂಥವು. ಈ ಪ್ರಕ್ರಿಯೆಯಲ್ಲಿ ಭಾಷೆಯ ಮಾದರಿಯಲ್ಲಿ ಲ್ಯಾಟಿನ್ ಭಾಷೆಗಿಂತ ಭಿನ್ನವಾಗಿದ್ದ ದ್ರಾವಿಡ ಭಾಷೆಗಳನ್ನು ವಿವರಿಸುವಾಗ ಅಗತ್ಯವಾದ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಯಿತು. ಈ ಮಾದರಿಯ ಬಹುತೇಕ ವ್ಯಾಕರಣಗಳು ಒಂದು ಬಗೆಯ ಏಕರೂಪೀಕರಣಕ್ಕೆ ಒಳಗಾಗಿವೆ. ಆದರೆ ೧೭ನೆಯ ಶತಮಾನದ ನಂತರದಲ್ಲಿ ಮಿಷನರಿಗಳು ಸಂಸ್ಕೃತ ಹಾಗೂ ದ್ರಾವಿಡ ಭಾಷೆಗಳ ವ್ಯಾಕರಣಗಳ ಪರಿಚಯವನ್ನು ಪಡೆದುಕೊಂಡರು.

ಹಲವಾರು ಲ್ಯಾಟಿನ್ ವ್ಯಾಕರಣದ ಮಾದರಿಯಲ್ಲಿ ರಚನೆಯಾದ ಕನ್ನಡ ವ್ಯಾಕರಣಗಳಿದ್ದರೂ ಮೊದಲ ಗಮನಾರ್ಹ ವ್ಯಾಕರಣ ೧೮೬೪ರಲ್ಲಿ ಬಂದ ಥಾಮಸ್ ಹಡ್ಸನ್ ರಚಿಸಿರುವ 'ಎನ್ ಎಲಿಮೆಂಟರಿ ಗ್ರಾಮರ್ ಅಫ಼್ ಕನ್ನಡ ಆರ್ ಕ್ಯಾನರೀಸ್ ಲಾಂಗ್‌ವೇಜ್'. ಮುಂದೆ ಕಿಟ್ಟೆಲ್ ಅವರು ೧೮೬೫ರಲ್ಲಿ 'ಸಂಕ್ಷೇಪ ವ್ಯಾಕರಣ' ಎಂಬ ಹೆಸರಿನ ಕನ್ನಡದ ವ್ಯಾಕರಣವನ್ನೂ ೧೮೬೬ರಲ್ಲಿ ಅದರ ಪರಿಷ್ಕೃತ ಆವೃತ್ತಿಯನ್ನು 'ಹಳೆಗನ್ನಡ ವ್ಯಾಕರಣ ಸೂತ್ರಗಳು' ಎಂದೂ ಪ್ರಕಟಿಸಿದರು. ಆದರೆ ಕಿಟ್ಟೆಲ್ ೧೯೦೩ರಲ್ಲಿ ತಂದ 'ಎ ಗ್ರಾಮರ್ ಅಫ಼್ ಕನ್ನಡ ಲಾಂಗ್‌ವೇಜ್' ಕೇಶೀರಾಜನ 'ಶಬ್ದಮಣಿದರ್ಪಣ'ವನ್ನು ವ್ಯಾಪಕವಾಗಿ ಉಪಯೋಗಿಸಿಕೊಂಡಿದೆ. ಈ ರೀತಿ ಭಾರತದ ವ್ಯಾಕರಣ ಕಾರ್ಖಾನೆಯಲ್ಲಾದ ಸ್ಫೋಟ ಪಾಶ್ಚಾತ್ಯ ಹಾಗೂ ಭಾರತೀಯ ವ್ಯಾಕರಣ ಪರಂಪರೆಗಳು ಪರಸ್ಪರ ನೋಡಿ ಅರಿತುಕೊಳ್ಳುವ ಮಾರ್ಗವನ್ನು ಆರಂಭಿಸಿತು.

## ೧.೩. ವ್ಯಾಕರಣದ ತಾತ್ವಿಕ ಸಮಸ್ಯೆಗಳು

ವ್ಯಾಕರಣದ ರಚನೆಯ ಚರಿತ್ರೆಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿದ ಅಮೆರಿಕ ಹಾಗೂ ಮಹಾಯುದ್ಧಕ್ಕೆ ಸಂಬಂಧಿಸಿದ ಚಾರಿತ್ರಿಕ ಸಂಗತಿಗಳು ನಮ್ಮನ್ನು ಬೆಚ್ಚುವಂತೆ ಮಾಡಿದರೆ ಆಶ್ಚರ್ಯವೇನಿಲ್ಲ. ಒಂದು ಅರ್ಥದಲ್ಲಿ ವ್ಯಾಕರಣವೇ ಒಂದು ಬಗೆಯ ಯಜಮಾನಿಕೆಯ ವ್ಯವಸ್ಥೆ. ಅದು ಒಂದು ಭಾಷೆಯ ಒಳಗಿನ ಪರ್ಯಾಯ ಉಪಯೋಗಗಳನ್ನು ಹತ್ತಿಕ್ಕಿ ಒಂದು ನಿರ್ದಿಷ್ಟ ಉಪಯೋಗವನ್ನು ಮಾತ್ರ ನಿರ್ದೇಶನಾತ್ಮಕವಾಗಿ ಒಪ್ಪುತ್ತದೆ. ಈ ಬಗೆಯ ನಿರ್ದೇಶನ ಭಾಷೆಯ ಬಳಕೆಯ ಬಹುಳತೆಯನ್ನು ತರತಮಗೊಳಿಸಬಹುದು ಅಥವಾ ಪರ್ಯಾಯ ರೀತಿಯ ಬಳಕೆಗಳನ್ನು ನಿರಾಕರಿಸುವುದರ ಮೂಲಕ ಅದೃಶ್ಯಗೊಳಿಸಬಹುದು. ಲಿಪಿಬದ್ಧ ಭಾಷೆಗಳಲ್ಲಿ ಲಿಪಿಗೆ ಸಮೀಪವಾದ ಭಾಷಾರೂಪವನ್ನೇ ವ್ಯಾಕರಣ ರಚನೆಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ವ್ಯಾಕರಣ ರಚನೆ ಸಾಮಾನ್ಯವಾಗಿ ರಾಜಾಶ್ರಯ, ಮತ ಮುಂತಾದ ಅಧಿಕಾರ ಕೇಂದ್ರಗಳ ಆಶ್ರಯದಲ್ಲೇ ನಡೆದು ಬಂದಿದ್ದು, ಪಂಡಿತ ವರ್ಗದ ಛಾಪು ಹಾಗೂ ಮಾನಕ ಭಾಷೆಯ ರೂಪ ಅದರ ಮೇಲೆ ನಿಚ್ಚಳವಾಗಿರುತ್ತದೆ. ಲಿಪಿ ಇಲ್ಲದ ಬುಡಕಟ್ಟು ಭಾಷೆಗಳಿಗೆ ಲಿಪಿ ಹಾಗೂ ವ್ಯಾಕರಣ ಬರುವುದೇ ಅವುಗಳ ವೈವಿಧ್ಯತೆಗಳನ್ನು ನಿಯಂತ್ರಿಸುವ ಹಾಗೂ ಕಡಿಮೆ ಮಾಡುವ ಸಾಧನವಾಗುತ್ತದೆ. ಭಾರತದ ಬಹುತೇಕ ಬುಡಕಟ್ಟು ಭಾಷೆಗಳು ಲಿಪ್ಯಂತರಕ್ಕೆ ಒಳಗಾಗಿದ್ದೇ ಮತಾಂತರದ ಸಲುವಾಗಿ ಆಗಿದ್ದು ಅವುಗಳ ಮೊದಲ ಲಿಖಿತ ಹಾಗೂ ಮುದ್ರಿತ ಪಠ್ಯಗಳು ಬೈಬಲ್ ಹಾಗೂ ವ್ಯಾಕರಣಗಳಾಗಿವೆ ಎಂಬುದನ್ನು ನಾವು ಗಮನಿಸಬೇಕು.

ಫ್ರೆಂಚ್ ತತ್ವಶಾಸ್ತ್ರಜ್ಞ ಫೂಕೋ ಯಜಮಾನಿಕೆ ಮತ್ತು ಅಧಿಕಾರಶಾಹಿಯ ನಡುವೆ ಇರುವ ಅಂತರಸಂಬಂಧದ ಬಗ್ಗೆ ಹೇಳುತ್ತಾ ಅಧಿಕಾರಶಾಹಿಯ ಸಂಸ್ಥೆಗಳು, ಅದರಲ್ಲೂ ಶಾಲೆ, ಆಸ್ಪತ್ರೆ ಮತ್ತು ಸೆರೆಮನೆಗಳು, ವ್ಯಾಪಕವಾಗಿ ಯಜಮಾನಿಕೆಯ ಚಿಂತನಾಕ್ರಮವನ್ನು ಸಾಂಸ್ಥಿಕ ರೂಪದಲ್ಲಿ ಸಮಾಜದ ಮೇಲೆ ಹೇರುತ್ತಿರುತ್ತವೆ ಎಂದು ವಾದಿಸುತ್ತಾನೆ. ವ್ಯಕ್ತಿಗತ ಹಾಗೂ ಸಾಮಾಜಿಕ ಅಸ್ಮಿತೆಗಳನ್ನು ಸುವ್ಯವಸ್ಥಿತವಾಗಿ ಅಳಿಸುತ್ತಾ ಒಂದು ಕಲ್ಪಿತ ಸಮುದಾಯವನ್ನು ಅವು ಸೃಷ್ಟಿ ಮಾಡುತ್ತಿರುತ್ತವೆ. ಉಡುಪು, ಭಾಷೆ ವ್ಯವಹಾರ ಮುಂತಾದವುಗಳಲ್ಲಿ ಏಕರೂಪತೆಯನ್ನು ತರುವುದರ ಮೂಲಕ ಭಿನ್ನತೆ ಹಾಗೂ

ವೈವಿಧ್ಯತೆಗಳನ್ನು ನಿರಾಕರಿಸಲಾಗುತ್ತದೆ. ಆ ಮೂಲಕ ಅಧಿಕಾರಶಾಹಿಯ ಆಶಯಗಳಿಗೆ ಅನುಗುಣವಾಗಿ ನಡೆದುಕೊಳ್ಳುವಂತೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರೇರೇಪಿಸಲಾಗುತ್ತದೆ. ವ್ಯಾಕರಣ ವ್ಯವಸ್ಥೆ ಕೂಡ ಅಂತಹ ಒಂದು ರಚನೆ. ಭಾಷೆಯ ಮಾನಕೀಕರಣದಲ್ಲಿ (ಸ್ಟ್ಯಾಂಡರ್ಡೈಜೇಷನ್) ಅಧಿಕಾರಶಾಹಿ ಪ್ರಮುಖ ಪಾತ್ರ ವಹಿಸುತ್ತದೆ. ಮಾನಕ ಇಂಗ್ಲಿಷ್ ಉಚ್ಚಾರಣೆಯನ್ನು ಆರ್.ಪಿ. (ರಿಸೀವ್ಡ್ ಪ್ರೊನನ್ಸಿಯೇಷನ್) ಎಂದು ಕರೆಯುತ್ತಾರೆ. ಇದು ೧೯ನೆಯ ಶತಮಾನದಲ್ಲಿ ಮಾನಕವಾಗಿ ಒಪ್ಪಿಗೆಯಾಗಿದ್ದ ಇಂಗ್ಲಿಷ್ ಮಾತನಾಡುವ ರೀತಿಯಾಗಿದ್ದು ಅದನ್ನು ಶಾಲೆಗಳಲ್ಲಿ ಕಡ್ಡಾಯ ಮಾಡಲಾಗಿತ್ತು. ಆದರೆ ಅದರ ಆರಂಭ ಕ್ರಿ.ಶ. ೧೬ನೆಯ ಶತಮಾನದಲ್ಲಿ ಬ್ರಿಟಿಷ್ ರಾಣಿಯ ಆಸ್ಥಾನದಲ್ಲಿ ಉಪಯೋಗವಾಗುತ್ತಿದ್ದ ಭಾಷೆಯ ರೀತಿಯಿಂದ ಬಳಕೆಗೆ ಬಂದಿತ್ತು. ೨೦ನೆಯ ಶತಮಾನದಲ್ಲಿ ಹಲವಾರು ರಾಷ್ಟ್ರಗಳ ಸರ್ಕಾರಗಳು ಭಾಷಾಯೋಜನೆಗಳನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಂಡಿದ್ದನ್ನು ನಾವು ನೋಡುತ್ತೇವೆ. ಬಹುಳತೆ ಮತ್ತು ವೈವಿಧ್ಯತೆಗಳನ್ನು ನಿರಾಕರಿಸುವ ವ್ಯಾಕರಣದ ಈ ಏಕರೂಪೀಕರಣ ಶಕ್ತಿ ಆತಂಕಕಾರಿಯಾದುದು.

ವ್ಯಾಕರಣಗಳು ಸಾಮಾನ್ಯವಾಗಿ ಒಂದು ಭಾಷೆಯನ್ನು ಕೇಂದ್ರೀಕರಿಸಿ ಮಾಡಿದ ರಚನೆಗಳು. ಯೂರೋಪು ಬಹುತೇಕ ಒಂದು ಭಾಷೆಯನ್ನು ರಾಷ್ಟ್ರಭಾಷೆಯಾಗಿ ಹೊಂದಿರುವ ರಾಷ್ಟ್ರಗಳ ಸಮೂಹ. ಕ್ರಿ.ಶ. ೧೬ನೆಯ ಶತಮಾನದ ವಸಾಹತುಶಾಹಿ ವಿಸ್ತರಣೆಯ ಅವಧಿಯಲ್ಲಿ ಪ್ರಪಂಚದ ವಿವಿಧ ಭಾಗಗಳಲ್ಲಿ ನಡೆದಿರುವ ವ್ಯಾಕರಣಗಳು ಲ್ಯಾಟಿನ್ ವ್ಯಾಕರಣದ ಮಾದರಿಯನ್ನು ಅನುಸರಿಸಿದವು. ಆದರೆ ಏಷ್ಯಾ ಖಂಡ ವ್ಯಾಪಕವಾಗಿ ಬಹುಭಾಷಿಕ ಸಂದರ್ಭವಾಗಿದ್ದರೂ ಈ ಅವಧಿಯಲ್ಲಿ ಅಲ್ಲಿ ಬಂದ ವ್ಯಾಕರಣಗಳು ಏಕಭಾಷಾ ವ್ಯಾಕರಣಗಳಾಗಿವೆ ಎಂಬ ಅಂಶ ನಮಗೆ ಆತಂಕವನ್ನು ತರಬೇಕು. ಹಾಗಿದ್ದರೆ ಇದಕ್ಕೆ ಪರ್ಯಾಯವಾಗಿ ಏಷ್ಯದ ಅಥವಾ ಭಾರತೀಯ ವ್ಯಾಕರಣಗಳು ಬಹುಭಾಷಿಕ ಚೌಕಟ್ಟನ್ನು ಹೊಂದಿದ್ದವೇ ಎಂಬ ಪ್ರಶ್ನೆ ಏಳುತ್ತದೆ. ಈ ಪ್ರಶ್ನೆಗೆ ಸ್ಪಷ್ಟ ಉತ್ತರ ಸಾಧ್ಯವಿಲ್ಲ. ಇದರ ಬಗ್ಗೆ ಮುಂದೆ ಚರ್ಚಿಸಲಾಗಿದೆ. ಆದರೆ ಬಹುಭಾಷಿಕ ಸಂದರ್ಭಗಳಲ್ಲಿ ಕೂಡ ವ್ಯಾಕರಣಗಳನ್ನು ಏಕಭಾಷಿಕ ಚೌಕಟ್ಟಿನಲ್ಲಿಯೇ ರಚಿಸಲಾಗಿದೆ ಎಂಬುದು ಸಮಸ್ಯಾತ್ಮಕವಾಗಿದೆ.

## ೧.೪. ಭಾರತೀಯ ವ್ಯಾಕರಣದ ಪರಂಪರೆ

### ೧.೪.೧. ವೈದಿಕ ವ್ಯಾಕರಣ ಪರಂಪರೆ

ಜಗತ್ತಿನ ಮೊದಲ ವ್ಯಾಕರಣ ಭಾರತದಲ್ಲಿ ರಚನೆಯಾಯಿತು ಎಂದರೆ ಅದು ರಾಷ್ಟ್ರವಾದಿ ಸಂಕಥನದ ಕ್ಲೀಷೆಯಲ್ಲ. ಜೊತೆಗೆ ಸಾಮಾನ್ಯವಾಗಿ ಲಿಖಿತ ಪರಂಪರೆಗಳ ಅಂಗವಾಗಿ ತಲೆದೋರುವ ವ್ಯಾಕರಣ ಭಾರತದಲ್ಲಿ ಮೌಖಿಕ ಪರಂಪರೆಯಲ್ಲಿದ್ದ ವೇದಗಳ ಸಂಗೋಪನೆಯ ಅಂಗವಾಗಿ ಹುಟ್ಟಿತು ಎಂಬುದು ತುಂಬಾ ಕುತೂಹಲಕಾರಿಯಾದ ಅಂಶ. ವೇದಗಳು ಮಂತ್ರಶಕ್ತಿಯಿಂದ ಕೂಡಿದ ಪಠ್ಯಗಳಾದ್ದರಿಂದ ಅವುಗಳ ಉಚ್ಚಾರಣೆ ಹಾಗೂ ಪಾಠರೂಪಗಳನ್ನು ಲೋಪಗಳಿಲ್ಲದಂತೆ ಕಾಯ್ದಿಡುವ ಸಲುವಾಗಿ ವ್ಯಾಕರಣದಂತಹ ಶಾಸ್ತ್ರಗಳು ಹುಟ್ಟಿಕೊಂಡವು. ಇವುಗಳನ್ನು 'ಪ್ರಾತಿಶಾಖ್ಯ' ಎಂದು ಕರೆಯುತ್ತಾರೆ. ಇವು ವೈದಿಕ ಪದಗಳ ಉಚ್ಚಾರಣೆಗಳನ್ನು ನಿಖರವಾಗಿ ಕಾಯ್ದಿಡಲು ರೂಪಿಸಿಕೊಂಡ ಶಾಸ್ತ್ರ. ಇವುಗಳನ್ನು ಶಿಕ್ಷಾ ಎಂದೂ ಕರೆಯುತ್ತಾರೆ. ಯಾಸ್ಕನ 'ನಿರುಕ್ತ' ಅತ್ಯಂತ

ಪ್ರಾಚೀನ ವೇದಾಂಗ. ಅದು ಪದಗಳ ನಿರ್ವಚನಗಳನ್ನು ಕುರಿತು ಮಾಡಿದ ಚರ್ಚೆಯಾಗಿದ್ದು ಸುಮಾರು ಕ್ರಿ.ಪೂ. ೭೦೦ರಿಂದ ೫೦೦ರ ಕಾಲದಲ್ಲಿ ಯಾಸ್ಕನಿಂದ ರಚಿತವಾಗಿದೆ. ಈ ರೀತಿಯ ವೈದಿಕ ಸಂಗೋಪನಾ ಶಾಸ್ತ್ರಗಳನ್ನು ವೇದಾಂಗಗಳು ಎಂದು ಕರೆಯಲಾಗಿದೆ. ಒಟ್ಟು ಇಂತಹ ೬ ವೇದಾಂಗಗಳಿದ್ದು ಅವುಗಳನ್ನು ಕಲ್ಪ, ಶಿಕ್ಷಾ, ಛಂದಸ್ಸು, ನಿರುಕ್ತ, ವ್ಯಾಕರಣ ಹಾಗೂ ಜೋತಿಷ ಎಂದು ಗುರುತಿಸಲಾಗಿದೆ. ಅವು ಕಾಲಾನುಕ್ರಮದಲ್ಲಿ ಆರು ವಿವಿಧ ಶಾಸ್ತ್ರಗಳಾಗಿ ಬೆಳೆದವು. ಕಲ್ಪ ವೈದಿಕ ಆಚರಣೆಯ ಅಂಗವಾಗಿದ್ದು ಮುಂದೆ ಸ್ವತಂತ್ರವಾಗಿ ಧರ್ಮಶಾಸ್ತ್ರವಾಗಿ ಬೆಳೆಯಿತು. ಶಿಕ್ಷಾ ವೈದಿಕ ಮಂತ್ರಗಳ ಉಚ್ಚಾರಣೆಯನ್ನು ಉದ್ದೇಶಿಸಿದ್ದು ಮುಂದೆ ಧ್ವನಿಶಾಸ್ತ್ರವಾಗಿ ಬೆಳೆಯಿತು, ಛಂದಸ್ಸು ಮಂತ್ರಗಳ ರಚನೆಯ ಭಾಗವಾಗಿದ್ದು ಮುಂದೆ ಛಂದೋಶಾಸ್ತ್ರವಾಗಿ ಬೆಳೆಯಿತು. ನಿರುಕ್ತ ಮುಂದೆ ನಿಘಂಟುಶಾಸ್ತ್ರವಾಗಿ ಬೆಳೆಯಿತು. ವ್ಯಾಕರಣ ಭಾಷೆಯ ರಚನೆಯನ್ನು ಕುರಿತ ವಿಶ್ಲೇಷಣೆಯಾಗಿದ್ದು ವ್ಯಾಕರಣಶಾಸ್ತ್ರವಾಗಿ ಬೆಳೆಯಿತು. ಜೋತಿಷ ಮೂಲತಃ ವೈದಿಕ ಆಚರಣೆಗಳ ಮುಹೂರ್ತವನ್ನು ನಿರ್ಧರಿಸುವ ಶಾಸ್ತ್ರವಾಗಿದ್ದರೂ ಮುಂದೆ ಖಗೋಳಶಾಸ್ತ್ರ ಹಾಗೂ ಗಣಿತಶಾಸ್ತ್ರವಾಗಿ ಬೆಳೆಯಿತು. ಈ ದಿಕ್ಕಿನಲ್ಲಿ ಅತ್ಯಂತ ವೈಜ್ಞಾನಿಕವಾದ ಭಾಷಿಕ ವಿಶ್ಲೇಷಣೆ ಕ್ರಿ.ಪೂ. ೫ನೆಯ ಶತಮಾನದಲ್ಲಿ ಪಾಣಿನಿ ರಚಿಸಿದ ವ್ಯಾಕರಣ 'ಅಷ್ಟಾಧ್ಯಾಯಿ' ಎಂದು ಸಾರ್ವತ್ರಿಕವಾಗಿ ಒಪ್ಪಿಗೆಯಾಗಿದೆ.

ಆದರೆ ಈ ಶಾಸ್ತ್ರಗಳ ಬೆಳವಣಿಗೆ ಆದದ್ದು ಶಾಸ್ತ್ರೀಯ ಸಂಸ್ಕೃತದ ಬೆಳವಣಿಗೆಯ ಅಂಗವಾಗಿ ಹಾಗೂ ಬೌದ್ಧ ಮತ್ತು ಜೈನ ಧರ್ಮಗಳ ಸಹಯೋಗದಲ್ಲಿ ಎಂಬುದು ಮುಖ್ಯ. ಕುತೂಹಲಕಾರಿಯೆಂದರೆ ಈ ೬ ವೇದಾಂಗಗಳಲ್ಲಿ ೪ ಅಂಗಗಳು ಮುಂದೆ ಅಲಂಕಾರಶಾಸ್ತ್ರದ ಬೆಳವಣಿಗೆಗೆ ಕಾರಣವಾದವು ಎಂಬ ಅಂಶ. ಆದರೆ ಈ ಬೆಳವಣಿಗೆ ಮೂಲಭೂತವಾಗಿ ಹೊಸದಾಗಿ ಬಂದ ಬೌದ್ಧ ಹಾಗೂ ಜೈನ ಧರ್ಮಗಳ ಕಾವ್ಯರಚನೆಯ ಅವಶ್ಯಕತೆಗಳಿಗೆ ಅನುಗುಣವಾಗಿ ಆಯಿತು ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಈ ಧರ್ಮಗಳಿಗೆ ವೈದಿಕ ಧರ್ಮದ ಕಲ್ಪ ಹಾಗೂ ಜೋತಿಷ ಎಂಬ ಅಂಗಗಳ ಅಗತ್ಯ ಇರಲಿಲ್ಲ. ಈ ಕಾರಣಗಳಿಂದಾಗಿ ಅವೆರಡನ್ನು ಬಿಟ್ಟು ಉಳಿದ ನಾಲ್ಕು ಅಂಗಗಳನ್ನು ತಮ್ಮ ಉದ್ದೇಶಗಳಿಗೆ ಬಳಸಿಕೊಂಡು ಬೌದ್ಧ ಹಾಗೂ ಜೈನ ಪಂಡಿತರು ಶಾಸ್ತ್ರೀಯ

| | **ವೇದಾಂಗಗಳು** | **ಉದ್ದೇಶ** | **ಬೆಳವಣಿಗೆಯಾದ ಶಾಸ್ತ್ರ** |
|---|---|---|---|
| ೧. | ಕಲ್ಪ | ಧಾರ್ಮಿಕ ಆಚರಣೆ (ರಿಚುವಲ್) | ಧರ್ಮಶಾಸ್ತ್ರ |
| ೨. | ಶಿಕ್ಷಾ, ಪ್ರಾತಿಶಾಖ್ಯ | ಧ್ವನಿ ಶಾಸ್ತ್ರ (ಫೊನೆಟಿಕ್ಸ್) | ಅಲಂಕಾರಶಾಸ್ತ್ರ |
| ೩. | ಛಂದಸ್ | ಛಂದಸ್ಸು (ಮಿಟ್ರಿಕ್ಸ್) | |
| ೪. | ನಿರುಕ್ತ | ನಿಘಂಟು, ಶಬ್ದಕೋಶ (ಲೆಕ್ಸಿಕಾನ್) | |
| ೫. | ವ್ಯಾಕರಣ | ವ್ಯಾಕರಣ (ಗ್ರಾಮರ್) | |
| ೬. | ಜೋತಿಷ | ಜೋತಿಷ್ಯ (ಅಸ್ಟ್ರಾಲಜಿ) | ಖಗೋಳಶಾಸ್ತ್ರ ಮತ್ತು ಗಣಿತಶಾಸ್ತ್ರ |

ಪಟ್ಟಿಕೆ ೧: ವೇದಾಂಗಗಳು, ಅವುಗಳ ಉದ್ದೇಶ ಹಾಗೂ ವೈದಿಕೋತ್ತರ ಅವಧಿಯಲ್ಲಿ ಅವು ಸ್ವತಂತ್ರವಾದ ಶಾಸ್ತ್ರಗಳಾಗಿ ಬೆಳೆದ ಬಗೆಯನ್ನು ವಿವರಿಸುವ ಪಟ್ಟಿಕೆ

ಸಂಸ್ಕೃತವನ್ನು ತಮ್ಮ ಧಾರ್ಮಿಕ, ಶಾಸ್ತ್ರ ಹಾಗೂ ಸಾಹಿತ್ಯಿಕ ಭಾಷೆಯನ್ನಾಗಿ ಬೆಳೆಸಿದರು. ತಮ್ಮ ಬದಲಾದ ಅಗತ್ಯಗಳಿಗೆ ಅನುಗುಣವಾಗಿ ನಿಘಂಟು, ಛಂದಸ್ಸು, ವ್ಯಾಕರಣಶಾಸ್ತ್ರಗಳನ್ನು ರಚಿಸಿದರು. ಪಟ್ಟಿಕೆ ೧ರಲ್ಲಿ ಈ ಬೆಳವಣಿಗೆಗಳನ್ನು ದೃಶ್ಯ ರೂಪದಲ್ಲಿ ಕಾಣಬಹುದು.

## ೧.೪.೨. ಬೌದ್ಧ ಮತ್ತು ಜೈನ ವ್ಯಾಕರಣ ಪರಂಪರೆ

ಪಾಣಿನಿಯ ವ್ಯಾಕರಣ ಸಂಸ್ಕೃತವನ್ನು ವಿವರಿಸಲು ರಚಿಸಿದ ವ್ಯಾಕರಣವಾದರೆ ಆಮೇಲೆ ಬಂದ ಬೌದ್ಧ ಹಾಗೂ ಜೈನ ವೈಯಾಕರಣಿಗಳು ಅದನ್ನು ತಮ್ಮ ಅಗತ್ಯತೆಗಳಿಗೆ ಅನುಗುಣವಾಗಿ ಮಾರ್ಪಡಿಸಿ ಬೌದ್ಧ ಮತ್ತು ಜೈನ ವ್ಯಾಕರಣಗಳನ್ನು ರಚಿಸಿದರು. ಪಾಣಿನಿಯ ವ್ಯಾಕರಣ ಸಂಸ್ಕೃತವನ್ನು ವೈದಿಕ ಸಂಸ್ಕೃತ ಹಾಗೂ ಸಮಕಾಲೀನ ಸಂಸ್ಕೃತ ಎಂಬ ಎರಡು ವಿಧಗಳಂತೆ ಪರಿಭಾವಿಸುತ್ತವೆ. ಆದರೆ ಬೌದ್ಧ ಹಾಗೂ ಜೈನ ವ್ಯಾಕರಣಗಳು ಉದ್ದೇಶಿಸಿದ್ದು ಶಾಸ್ತ್ರೀಯ ಸಂಸ್ಕೃತ, ಪಾಲಿ, ಪ್ರಾಕೃತ ಹಾಗೂ ಅಪಭ್ರಂಶಗಳಲ್ಲಿನ ಸಾಹಿತ್ಯ ರಚನೆಗಳನ್ನು. ಅವುಗಳು ವೈದಿಕ ಸಾಹಿತ್ಯದಂತೆ ಕೇವಲ ಧಾರ್ಮಿಕ ವಾಗಿರಲಿಲ್ಲ; ಬದಲಿಗೆ ಧಾರ್ಮಿಕ ಹಾಗೂ ಲೌಕಿಕ ಎರಡೂ ಆಗಿದ್ದ ಸಾಹಿತ್ಯವಾಗಿದ್ದವು. ಅಲ್ಲದೆ ವೈದಿಕ ಸಾಹಿತ್ಯದಂತೆ ಕೇವಲ ಸಂಸ್ಕೃತವಲ್ಲದೆ ಬಹುಭಾಷಿಕ ಸಮುದಾಯಗಳ ವ್ಯಾಪ್ತಿ ಈ ಧರ್ಮಗಳಿಗಿದ್ದವು. ಈ ಯುಗದ ಲಕ್ಷಣಗಳಾದ ಸಂಸ್ಕೃತ ವಿಶ್ವಾತ್ಮಕತೆಯಾಗಲಿ (ಕಾಸ್ಮೋಪಾಲಿಟನ್) ಅಥವಾ ಬಹುಭಾಷಿಕ ಸಂದರ್ಭದ ವ್ಯಾಕರಣಗಳಾಗಲಿ ಈ ಬದಲಾದ ಸಂದರ್ಭಗಳ ಹಿನ್ನೆಲೆಯಲ್ಲಿ ಆದ ಬೆಳವಣಿಗೆಗಳು.

ಉದಾಹರಣೆಗೆ ಇಡೀ ಭಾರತದಲ್ಲಿ ಹಾಗೂ ಆಗ್ನೇಯ ಏಷ್ಯಾದಲ್ಲಿ ವ್ಯಾಪಕವಾಗಿ ಬಳಕೆಯಾದ ಶರ್ವವರ್ಮನ ಕಾತಂತ್ರ ವ್ಯಾಕರಣ ಒಂದು ಜೈನ ವ್ಯಾಕರಣ. ಇವನು ಶಾತವಾಹನರ ಆಸ್ಥಾನದಲ್ಲಿದ್ದು ಈ ವ್ಯಾಕರಣವನ್ನು ರಚಿಸಿದನೆಂದು ಒಂದು ದಂತಕಥೆ ಇದೆ. ಇದು ಮುಂದೆ ಒಂದು ಪರಂಪರೆಯಾಗಿ ತಮಿಳು, ಟಿಬೆಟ್, ಕನ್ನಡ, ತೆಲುಗು, ಮಲಯಾಳಂ, ಸಿಂಹಳ, ಬರ್ಮಿ ಹಾಗೂ ಆಗ್ನೇಯ ಏಷ್ಯಾದ ಭಾಷೆಗಳ ವ್ಯಾಕರಣಗಳನ್ನು ರೂಪಿಸಿದೆ. ತಮಿಳು ಹಾಗೂ ಕನ್ನಡ ವ್ಯಾಕರಣ ಹಾಗೂ ಕಾವ್ಯಮೀಮಾಂಸೆಯ ಪರಂಪರೆಯಂತೂ ಜೈನ ಪರಂಪರೆಯ ಚಿಂತನೆಗಳ ಮುಂದುವರಿಕೆಯೇ ಆಗಿದೆ. ಈ ಭಾಷೆಗಳ ವೈಯಾಕರಣಿಗಳು ಕಾವ್ಯದ ಭಾಷಾ ಪ್ರಯೋಗಗಳನ್ನು ವಿಶ್ಲೇಷಿಸಿ ಯಾವ ಪ್ರಯೋಗ ಸಮಂಜಸ ಯಾವ ಪ್ರಯೋಗ ಸಮಂಜಸವಲ್ಲ ಎಂಬುದನ್ನು ಕೂಲಂಕುಶವಾಗಿ ವಿವೇಚಿಸಿ ತಮ್ಮ ವ್ಯಾಕರಣ ನಿಯಮಗಳನ್ನು ರಚಿಸಿದ್ದಾರೆ. ಭಾಷೆಯು ಕಾಲಾನುಕ್ರಮೇಣ ಬದಲಾಗುತ್ತಿದ್ದರಿಂದ ಬದಲಾದ ಭಾಷಾ ಸ್ವರೂಪಕ್ಕೆ ಅನುಗುಣವಾಗಿ ವ್ಯಾಕರಣಗಳು ಹಾಗೂ ಟೀಕೆಗಳು ಬಂದಿವೆ. ಹೀಗಾಗಿ ವ್ಯಾಕರಣ ಒಂದು ಜೀವಂತ ಪರಂಪರೆಯಾಗಿ ಆಧುನಿಕ ಕಾಲದ ವರೆಗೆ ಮುಂದುವರೆದುಕೊಂಡು ಬಂದಿದೆ.

ಬೌದ್ಧ ಮತ್ತು ಜೈನ ವ್ಯಾಕರಣಗಳು ಪಾಣಿನಿಯನ್ನು ಅನುಸರಿಸಿದರೂ ಅವನಿಂದ ತಮಗೆ ಅಗತ್ಯವಾದುದನ್ನು ಮಾತ್ರ ತೆಗೆದುಕೊಳ್ಳುತ್ತವೆ. ಪಾಣಿನಿಯ ವ್ಯಾಕರಣದ ೩,೯೫೯ ಸೂತ್ರಗಳನ್ನು ಕ್ರಿ.ಪೂ. ೩ನೆಯ ಶತಮಾನದಲ್ಲಿದ್ದ ಕಾತ್ಯಾಯನ ತನ್ನ 'ವಾರ್ತಿಕ'ದಲ್ಲಿ ೧,೫೦೦ ಸೂತ್ರಗಳಿಗೆ ಇಳಿಸುತ್ತಾನೆ. ಸುಮಾರು ಕ್ರಿ.ಪೂ. ೧೫೦ರಲ್ಲಿದ್ದ ಪತಂಜಲಿ ತನ್ನ 'ಮಹಾಭಾಷ್ಯ'ದಲ್ಲಿ ಅದರ ಸಂಖ್ಯೆಯನ್ನು ಇನ್ನೂ ಕಡಿಮೆ ಮಾಡುತ್ತಾನಲ್ಲದೆ ಪಾಣಿನಿಯ

ಸೂತ್ರಗಳಿಗಷ್ಟೇ ಅಲ್ಲದೆ ಕಾತ್ಯಾಯನನ ಸೂತ್ರಗಳನ್ನೂ ವಿವರಿಸುತ್ತಾನೆ. ಕುತೂಹಲಕಾರಿಯಾದ ಅಂಶವೆಂದರೆ ವೈದಿಕ ಹಾಗೂ ಅವೈದಿಕ ಪರಂಪರೆಗಳ ಪರಸ್ಪರ ವಿರೋಧದ ನಡುವೆಯೂ ವ್ಯಾಕರಣ ಪರಂಪರೆ ಸಂಸ್ಕೃತವನ್ನು ಕೇಂದ್ರವಾಗಿಟ್ಟುಕೊಂಡು ಧರ್ಮಗಳ ನಡುವಣ ಆರೋಗ್ಯಕರ ಸಂವಾದದಂತೆ ಮುಂದುವರೆಯುತ್ತದೆ.

ಪಾಣಿನಿಯ ವ್ಯಾಕರಣವೇ ಅದಕ್ಕೂ ಮೊದಲು ಇದ್ದ ವ್ಯಾಕರಣ ಪರಂಪರೆಗಳ ಬಗ್ಗೆ ಪ್ರಸ್ತಾಪಿಸುತ್ತದೆ. ಆದರೆ ಪಾಣಿನಿಯ ಪರಂಪರೆಯಿಂದ ದೂರವಾಗುವ ವ್ಯಾಕರಣಗಳು ಬಹುತೇಕ ಬೌದ್ಧ ಮತ್ತು ಜೈನರಿಂದ ರಚಿತವಾದವು. ಅವರ ಗಮನ ಪ್ರಮುಖವಾಗಿ ತಮ್ಮ ಧಾರ್ಮಿಕ ರಚನೆಗಳ ಭಾಷೆಯಾದ ಪಾಲಿ ಮತ್ತು ಅರ್ಧಮಾಗಧಿಗಳ ಮೇಲಿತ್ತು. ಅಷ್ಟೇ ಅಲ್ಲದೆ ಅವುಗಳ ಗಮನ ವಿಸ್ತೃತವಾಗಿ ಹರಡುತ್ತಿದ್ದ ಧರ್ಮದ ಬಹುಭಾಷಿಕ ಸಂದರ್ಭದ ಬಗ್ಗೆಯೂ ಇರುವುದು ಅಗತ್ಯವಾಗಿತ್ತು. ಕ್ರಿ.ಶ. ೨೦೦ರಲ್ಲಿ ರಚಿತವಾಗಿರುವ ತಮಿಳಿನ ಮೊದಲ ವ್ಯಾಕರಣ 'ತೊಲ್ಕಾಪ್ಪಿಯಂ' ತನ್ನನ್ನು ಇಂದ್ರ (ಐಂದಿರಂ) ಪರಂಪರೆಯ ವ್ಯಾಕರಣ ಎಂದು ಹೇಳಿಕೊಳ್ಳುತ್ತದೆ. ಆದರೆ 'ತೊಲ್ಕಾಪಿಯಂ' ಕಾತಂತ್ರ ವ್ಯಾಕರಣ ಪರಂಪರೆಗೆ ಸೇರುತ್ತದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ತಮಿಳಿನಲ್ಲಿ ಕ್ರಿ.ಶ. ೧೧ನೆಯ ಶತಮಾನದಲ್ಲಿ ಬುದ್ಧಮಿತ್ರನಿಂದ ರಚನೆಯಾದ 'ವೀರಚೋಳಿಯಂ' ಎಂಬ ಒಂದು ಬೌದ್ಧ ಪರಂಪರೆಯ ವ್ಯಾಕರಣವೂ ಇದ್ದು ಅದು ಒಂದತ್ತ ಸಂಸ್ಕೃತ ಮತ್ತು ತಮಿಳು ವ್ಯಾಕರಣವನ್ನು ಇನ್ನೊಂದತ್ತ ಅವುಗಳ ಕಾವ್ಯಮೀಮಾಂಸೆಗಳನ್ನೂ ಒಟ್ಟಾಗಿ ಸಂಯೋಜಿಸುವ ಪ್ರಯತ್ನ ಮಾಡುತ್ತದೆ. ಬೌದ್ಧ ವ್ಯಾಕರಣ ಪರಂಪರೆಯಲ್ಲಿ ಕ್ರಿ.ಶ. ೭ನೆಯ ಶತಮಾನದಲ್ಲಿ ನಳಂದದಲ್ಲಿದ್ದ ಚಂದ್ರಗೋಮಿನ್ ರಚಿಸಿರುವ 'ಚಂದ್ರವ್ಯಾಕರಣ' ಒಂದು ಪ್ರಭಾವಶಾಲಿ ಪರಂಪರೆಯನ್ನು ಸೃಷ್ಟಿಸಿತು. ದಕ್ಷಿಣ ಭಾರತ ಹಾಗೂ ಶ್ರೀಲಂಕಾದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದ್ದ ಈ ಪರಂಪರೆ ಕಾಲಾನುಕ್ರಮೇಣ ಅದೃಶ್ಯವಾಯಿತು.

ಬೌದ್ಧ ಮತ್ತು ಜೈನ ವ್ಯಾಕರಣ ಪರಂಪರೆಗಳು ಭಾರತದ ಅನೇಕ ಭಾಗಗಳಲ್ಲಿ ಪ್ರಚಲಿತವಿದ್ದುದರಿಂದ ಹಾಗೂ ಅವು ಪ್ರಬುದ್ಧವಾಗಿ ಬೆಳೆದಿದ್ದ ದೇಶೀಯ ಭಾಷೆಗಳ ಸಾಹಿತ್ಯ ಸಂದರ್ಭದಲ್ಲಿ ರಚನೆಯಾದ್ದರಿಂದ ಅವುಗಳಲ್ಲಿ ಕೆಲವು ಗಮನಾರ್ಹ ಬೆಳವಣಿಗೆಗಳು ಕಂಡುಬರುತ್ತವೆ. ಅವುಗಳನ್ನು ವಿವರವಾಗಿ ಚರ್ಚಿಸುವ ಅಗತ್ಯವಿದೆ.

## ೧.೪.೩. ವೈಯಾಕರಣಿಗಳ ಬೌದ್ಧಿಕ ಪ್ರಖರತೆ

ಮೊದಲನೆಯದಾಗಿ ಬೌದ್ಧ ಮತ್ತು ಜೈನ ವ್ಯಾಕರಣಗಳು ಸಂಸ್ಕೃತ ಮತ್ತು ಪ್ರಾಕೃತಕ್ಕೆಂದು ರೂಪುಗೊಂಡ ವ್ಯಾಕರಣದ ಚೌಕಟ್ಟನ್ನು ದೇಶೀಯ, ಅದರಲ್ಲೂ ವಿಶೇಷವಾಗಿ ದ್ರಾವಿಡ, ಟಿಬೆಟ್, ಬರ್ಮಿ ಮತ್ತು ಆಗ್ನೇಯ ಏಷಿಯಾದ ಭಾಷೆಗಳಿಗೆ ವಿಸ್ತರಿಸುತ್ತವೆ. ಹೀಗಾಗಿ ಪದನಿರ್ಮಾಣ ಪ್ರಕ್ರಿಯೆಯಲ್ಲಿ ಪ್ರತ್ಯಯ ಪ್ರಧಾನ (ಇನ್‌ಫ್ಲೆಕ್ಟಿಂಗ್) ಭಾಷೆಗಳಾದ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳನ್ನು ಕುರಿತು ಮಾಡಿದ ಪದರಚನೆಯ ಚಿಂತನೆಗಳನ್ನು ಅಂಟು ಪ್ರಧಾನ (ಅಗ್ಲೂಟಿನೇಟಿಂಗ್) ಭಾಷೆಗಳಾದ ದ್ರಾವಿಡ ಭಾಷೆಗಳ ವ್ಯಾಕರಣಕ್ಕೂ ಹಾಗೂ ಬೇರ್ಪಡಿಸುವಿಕೆ ಪ್ರಧಾನವಾದ (ಐಸೋಲೇಟಿಂಗ್) ಭಾಷೆಯಾದ ಟಿಬೆಟನ್ ಮುಂತಾದ ಭಾಷೆಗಳಿಗೂ ಅನ್ವಯಿಸಲಾಗಿದೆ. ಇಂದು ಭಾಷಾವಿಜ್ಞಾನಕ್ಕೆ ಇದು ಅಸಂಗತವಾಗಿ ಕಂಡರೂ ಮಧ್ಯಕಾಲೀನ ದೇಶೀಯ ಭಾಷೆಗಳ ವೈಯಾಕರಣಿಗಳು ಇದನ್ನು ತಮ್ಮ ಬೌದ್ಧಿಕ ಪ್ರಖರತೆಯ ಮೂಲಕ ಸುಸಂಗತವನ್ನಾಗಿ ಮಾಡಿದ್ದಾರೆ.

### ೧.೪.೪. ದ್ವೈಭಾಷಿಕ ವ್ಯಾಕರಣಗಳು

ಎರಡನೆಯ ಅಂಶ ದೇಶೀಯ ಭಾಷೆಗಳ ವ್ಯಾಕರಣಗಳು ತಮ್ಮ ಮುಂದಿದ್ದ ಬಹುಭಾಷಿಕ ಸಂದರ್ಭವನ್ನು ನಿಭಾಯಿಸಿರುವ ರೀತಿ. ಆಧುನಿಕ ಕಾಲದಲ್ಲಿ ಮಿಷನರಿಗಳಿಂದ ಅವುಗಳ ಉದ್ದೇಶಿತ ಬಳಕೆದಾರರಿಗೆ ತಿಳಿದಿದ್ದ ಇಂಗ್ಲಿಷಿನಲ್ಲಿ ರಚನೆಯಾದಂತೆ ಕೆಲವು ದೇಶಿಯ ಭಾಷೆಗಳ ವ್ಯಾಕರಣಗಳನ್ನು ಸಂಸ್ಕೃತದಲ್ಲೇ ರಚಿಸಲಾಗಿದೆ. ಇದು ಬಹುಷಃ ಸಂಸ್ಕೃತ ಬಲ್ಲ ಹಾಗೂ ಕನ್ನಡದಲ್ಲಿ ಕಾವ್ಯರಚನೆ ಮಾಡಲು ಪ್ರಯತ್ನಿಸುತ್ತಿದ್ದ ಕವಿಗಳಿಗೆಂದು ರಚಿಸಿದ ವ್ಯಾಕರಣಗಳಿರಬಹುದು. ಭಟ್ಟಾಕಳಂಕನು ಬರೆದ ಕನ್ನಡ ವ್ಯಾಕರಣ 'ಶಬ್ದಾನುಶಾಶನ' ಸಂಪೂರ್ಣವಾಗಿ ಸಂಸ್ಕೃತದಲ್ಲಿ ಇದೆಯಾದರೆ ಎರಡನೆಯ ನಾಗವರ್ಮನ 'ಕರ್ನಾಟಕ ಭಾಷಾಭೂಷಣ' ದ್ವೈಭಾಷಿಕ ಕೃತಿಯಾಗಿದೆ. ಅದರ ಸೂತ್ರ ಮತ್ತು ವೃತ್ತಿಗಳು ಸಂಸ್ಕೃತದಲ್ಲಿದ್ದು ಉದಾಹರಣೆಗಳು ಕನ್ನಡ ಪದ್ಯಗಳಾಗಿವೆ.

### ೧.೪.೫. ಬಹುಭಾಷಿಕತೆ

ಮೂರನೆಯದಾಗಿ ಕೆಲವು ಸಂದರ್ಭಗಳಲ್ಲಿ ಜೈನ ವ್ಯಾಕರಣಗಳು ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ವ್ಯಾಕರಣಗಳನ್ನು ಒಟ್ಟಿಗೆ ರೂಪಿಸಿರುವ ರೀತಿ. ಸುಮಾರು ಕ್ರಿ.ಶ. ೧೧ನೆಯ ಶತಮಾನದ ಹೇಮಚಂದ್ರನ 'ಸಿದ್ಧಹೇಮ ಶಬ್ದಾನುಶಾಶನ'ವು ಸಂಸ್ಕೃತ ವ್ಯಾಕರಣವಾದರೂ ಪ್ರಾಕೃತ ವ್ಯಾಕರಣಕ್ಕೆ ಒಂದು ಅಧ್ಯಾಯವನ್ನು ಮೀಸಲಾಗಿಟ್ಟಿದೆ. ಸಂಸ್ಕೃತ ಕೇವಲ ಬರಹದ ಭಾಷೆಯಾಗಿದ್ದು ಅದರಲ್ಲಿ ಉಪಭಾಷಿಕ ವೈವಿಧ್ಯತೆಗಳಿರಲಿಲ್ಲ. ಆದರೆ ಪ್ರಾಕೃತ ಹಾಗಲ್ಲ. ಅದರಲ್ಲಿ ಹಲವಾರು ಭೇದಗಳಿವೆ. ಬೌದ್ಧರು ಬಳಸಿದ ಪ್ರಾಕೃತ ಪಾಲಿಯಾದರೆ ಜೈನರು ಬಳಸಿದ ಪ್ರಾಕೃತ ಅರ್ಧಮಾಗಧಿ. ಪ್ರಾಕೃತ ಕಾವ್ಯಗಳು ಹಾಗೂ ಸಂಸ್ಕೃತ ನಾಟಕಗಳ ಕೆಳ ಸ್ತರದ ಪಾತ್ರಗಳು ಬಳಸುವುದು ಮಹಾರಾಷ್ಟ್ರಿ ಪ್ರಾಕೃತವನ್ನು. ಇವಲ್ಲದೆ ಸಂಸ್ಕೃತ ನಾಟಕಗಳಲ್ಲಿ ಶೌರಸೇನಿ ಮತ್ತು ಅವಂತಿ ಪ್ರಾಕೃತಗಳ ಬಳಕೆಯೂ ಇದೆ. ಹೀಗಾಗಿ ವೈಯಾಕರಣಿಗಳು ಮೊದಲಿಗೆ ಅರ್ಧಮಾಗಧಿಯ ವ್ಯಾಕರಣದ ನಿಯಮಗಳನ್ನೂ ಅದಾದ ನಂತರದಲ್ಲಿ ಆಯಾ ಪ್ರಾಕೃತಗಳಿಗೆ ಅನ್ವಯಿಸುವ ಉಳಿದ ನಿಯಮಗಳನ್ನೂ ಕೊಡುವ ವಾಡಿಕೆ ಇದೆ. ಇದು ಒಂದು ಬಗೆಯ ಉಪಭಾಷಾ 'ಕಂಟಿನ್ಯುಯೆಮ್' ಅಥವಾ ದ್ವೈಭಾಷಿಕ ವ್ಯಾಕರಣದ ಪರಿಕಲ್ಪನೆಯಂತೆ ಕಾಣುತ್ತದೆ. ಇದರ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಯುವ ಅಗತ್ಯವಿದೆ. ಸುಮಾರು ಕ್ರಿ.ಪೂ. ೩ನೆಯ ಶತಮಾನದಲ್ಲಿದ್ದ ವರರುಚಿಯ 'ಪ್ರಾಕೃತ ಪ್ರಕಾಶ' ನಾಲ್ಕು ಪ್ರಾಕೃತ ಉಪಭಾಷೆಗಳನ್ನು, ಮಹಾರಾಷ್ಟ್ರಿ, ಶೌರಸೇನಿ, ಮಗಧಿ ಮತ್ತು ಪೈಶಾಚಿ ಎಂದು ಗುರುತಿಸುತ್ತದೆ. ಮೊದಲಿಗೆ ಮಹಾರಾಷ್ಟ್ರಿ ಪ್ರಾಕೃತವನ್ನು ೪೨೪ ಸೂತ್ರಗಳಲ್ಲಿ ವಿವರಿಸಿದ ನಂತರ 'ಉಳಿದದ್ದು ಸಂಸ್ಕೃತದಂತೆ' ('ಶೇಷಾತ್ ಸಂಸ್ಕೃತಾತ್') ಎಂದು ಹೇಳುತ್ತದೆ. ಅದೇ ರೀತಿ ಶೌರಸೇನಿ ಪ್ರಾಕೃತವನ್ನು ೩೪ ಸೂತ್ರಗಳಲ್ಲಿ ವಿವರಿಸಿದ ನಂತರ 'ಉಳಿದದ್ದು ಮಹಾರಾಷ್ಟ್ರಿಯಂತೆ' ('ಶೇಷಾತ್ ಮಹಾರಾಷ್ಟ್ರಿವತ್') ಎಂದು ಹೇಳುತ್ತದೆ. ನಂತರದಲ್ಲಿ ಇಂತಹುದೇ ವಿವರಣೆ ಮಗಧಿ ಹಾಗೂ ಪೈಶಾಚಿ ಭಾಷೆಗಳಿಗೆ ಮುಂದುವರೆಯುತ್ತದೆ. ಈ ರೀತಿ ವಿವರಿಸುವ ಕ್ರಮ ಬಹುಶಃ ವೈಯಾಕರಣಿಗಳು ಸಂಸ್ಕೃತ ಹಾಗೂ ಪ್ರಾಕೃತದ ಉಪಭಾಷೆಗಳನ್ನು ಒಂದೇ ಭಾಷೆಯ ಉಪಭಾಷೆಗಳು ಎಂದೋ ಅಥವಾ ಒಂದು ಭಾಷಾ ಕಂಟಿನ್ಯುಯೆಮ್

ಎಂದೋ ಪರಿಭಾವಿಸಿರುವ ಸಾಧ್ಯತೆಯನ್ನು ನಮ್ಮ ಮುಂದಿಡುತ್ತದೆ. ಕನ್ನಡ ವೈಯಾಕರಣಿಗಳೂ ಇದೇ ರೀತಿ ಸಂಸ್ಕೃತ, ಪ್ರಾಕೃತ ಹಾಗೂ ಕನ್ನಡಗಳನ್ನು ನೋಡಿರುವ ಸಾಧ್ಯತೆಗಳಿವೆ.

## ೧.೪.೬. ವ್ಯಾಕರಣ ಪರಂಪರೆಯ ತೆರೆದ ಮನಸ್ಸು

ದೇಶೀಯ ಭಾಷೆಯ ವ್ಯಾಕರಣಗಳು ಬೌದ್ಧ ಪರಂಪರೆಯದಾಗಿರಲಿ ಅಥವಾ ಜೈನ ಪರಂಪರೆಯದಾಗಿರಲಿ ಅವುಗಳು ತೆರದ ಮನಸ್ಸಿನ ಗ್ರಂಥಗಳಂತೆ ವರ್ತಿಸುತ್ತವೆ. ಅವು ಯಾವುದೇ ಸಂಕುಚಿತ ಧಾರ್ಮಿಕ ಭಾವನೆ ಇಲ್ಲದಂತೆ ಉಪಯೋಗವಾಗಿವೆಯಲ್ಲದೆ ಅವುಗಳಲ್ಲಿ ನೀಡಿರುವ ಉದಾಹರಣೆಗಳು ಅನ್ಯ ಧಾರ್ಮಿಕ ಕಾವ್ಯಗಳಿಂದಲೂ ಬಂದಿರುತ್ತವೆ. ತಮಿಳಿನ ಬೌದ್ಧ ವ್ಯಾಕರಣ 'ವೀರಚೋಳಿಯಂ'ನಲ್ಲಿ ಜೈನ 'ತಿರುಕ್ಕುರಳ್'ನ ಪದ್ಯಗಳು ಉದಾಹರಣೆಗಳಾಗಿ ಕಂಡುಬಂದರೆ, ಕನ್ನಡ ವ್ಯಾಕರಣ 'ಶಬ್ದಮಣಿದರ್ಪಣ'ದಲ್ಲಿ ಜೈನ, ಬ್ರಾಹ್ಮಣ ಹಾಗೂ ವೀರಶೈವ ಕವಿಗಳ ಪದ್ಯಗಳನ್ನು ಉದಾಹರಣೆಗಳಾಗಿ ಬಳಸಿರುವುದನ್ನು ನಾವು ನೋಡಬಹುದು. 'ಶಬ್ದಮಣಿದರ್ಪಣ'ದ ಒಂದು ಹಸ್ತಪ್ರತಿ 'ಶ್ರೀ ವೀತರಾಗಾಯನಮಃ' ಎಂದು ಆರಂಭವಾದರೆ ಇನ್ನೊಂದು ಹಸ್ತಪ್ರತಿ 'ಶ್ರೀ ಗುರುಬಸವ ಲಿಂಗಾಯನಮಃ' ಎಂದು ಆರಂಭವಾಗುತ್ತದೆ. ಇದು ಜೈನ ಕಾತಂತ್ರ ಪರಂಪರೆಯ ವ್ಯಾಕರಣವಾದ 'ಶಬ್ದಮಣಿ ದರ್ಪಣ'ವು ಜೈನ ಮತ್ತು ವೀರಶೈವ ಅನುಯಾಯಿಗಳಿಂದ ಸಮಾನವಾಗಿ ಬಳಕೆಯಲ್ಲಿದ್ದುದನ್ನು ತೋರಿಸುತ್ತದೆ. ವ್ಯಾಕರಣದ ಹಸ್ತಪ್ರತಿ ಪರಂಪರೆ ಕೊಡುವ ಇಂತಹ ಒಳನೋಟಗಳು ಮಧ್ಯಕಾಲೀನ ಅವಧಿಯಲ್ಲಿ ವ್ಯಾಕರಣದ ಅಭ್ಯಾಸ ಮಾಡುವವರಿಗೆ ಅನ್ಯ ಧರ್ಮಗಳ ಬಗ್ಗೆ ಲಭ್ಯವಾಗುತ್ತಿದ್ದ ತೌಲನಿಕ ಚೌಕಟ್ಟನ್ನಷ್ಟೇ ಅಲ್ಲದೆ ಧಾರ್ಮಿಕ ಸಹನಶೀಲತೆಯನ್ನು ಕೂಡ ಕಟ್ಟಿಕೊಡುವ ಸಾಧನಗಳಾಗಿದ್ದವು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಶುಷ್ಕ ಹಾಗೂ ನೀರಸವಾದ ವ್ಯಾಕರಣ ಸೂತ್ರಗಳ ಅಧ್ಯಯನದ ನಡುವೆ ಇರುವ ಅತ್ಯಂತ ಕಾವ್ಯಮಯವಾದ ಉದಾಹರಣೆಯ ಪದ್ಯಗಳು ಮಧ್ಯಕಾಲೀನ ಕಾವ್ಯದ ಸೊಗಸಿಗೆ ಪ್ರವೇಶದ್ವಾರಗಳಾಗಿದ್ದವು. 'ಶಬ್ದಮಣಿದರ್ಪಣ'ದಲ್ಲಿ ದ್ವಿತೀಯಾ ವಿಭಕ್ತಿಯ ಪ್ರತ್ಯಯ (ಅ) ದೀರ್ಘವಾಗಿರುತ್ತದೆಂಬುದಕ್ಕೆ (ಆ) ಕೇಶೀರಾಜ ಕೊಡುವ ಉದಾಹರಣೆ 'ಈಂದ ಪುಲಿಯಾವೊಲಿರ್ದಳ್' (ಮರಿಹಾಕಿರುವ ಹುಲಿಯಂತೆ ಇದ್ದಳು) ಎಂಬ ಉದಾಹರಣೆ. ಈ ಸಾಲಿನ ಸೊಬಗು ಈ ಪದ್ಯಕ್ಕೆ ಕನ್ನಡದ ಅನೇಕ ಶಾಸ್ತ್ರಗ್ರಂಥಗಳಲ್ಲಿ ಸ್ಥಾನ ದೊರಕಿಸಿ ಕೊಟ್ಟಿದೆ. ಅಲ್ಲದೆ ಇಂದು ಉಪಲಬ್ಧವಿರದ ಅನೇಕ ಕಾವ್ಯಗಳ ಪದ್ಯಗಳು ವ್ಯಾಕರಣಗಳಲ್ಲಿ ಸಿಕ್ಕುವ ಇಂತಹ ಉದಾಹರಣೆಗಳಲ್ಲಿ ಮಾತ್ರ ದೊರಕುತ್ತಿದ್ದು ಅವುಗಳ ಕಾವ್ಯಾತ್ಮಕ ಸೊಬಗು ಈ ಉದಾಹರಣೆಗಳ ಮೂಲಕ ಸ್ವಲ್ಪವಾದರೂ ಪರಿಚಯವಾದಂತೆ ಆಗುತ್ತದೆ. ಹೀಗಾಗಿ ವ್ಯಾಕರಣಗಳು ಅನೇಕ ಸಾಂಸ್ಕೃತಿಕ ಅಂಶಗಳ ಗಣಿಗಳು ಎನ್ನಬಹುದು.

## ೧.೪.೭. ಮಣಿಪ್ರವಾಳಂ

ಸಂಸ್ಕೃತ ಕಾವ್ಯ ಪರಂಪರೆಯ ಅನೇಕ ರೂಢಿಗಳನ್ನು ದೇಶೀಯ ಭಾಷೆಗಳು ಮುಂದುವರೆಸಿದವು. ನಿಖರವಾಗಿ ಹೇಳಬೇಕೆಂದರೆ ದ್ರಾವಿಡ ಭಾಷೆಗಳ ವ್ಯಾಕರಣ ಪರಂಪರೆಗಳಲ್ಲಿ ಸಂಸ್ಕೃತ, ಪ್ರಾಕೃತ ಮತ್ತು ದೇಶೀಯ ಭಾಷೆಗಳ ಮಿಶ್ರಣವನ್ನು ಕುರಿತಂತೆ ಸಾಕಷ್ಟು ಚರ್ಚೆ ನಡೆದಿದೆ. ಭಾಷೆಯಲ್ಲಿನ ತತ್ಸಮ, ತದ್ಭವ ಹಾಗೂ ದೇಶ್ಯ ಪದಗಳ

ಚರ್ಚೆ ಕೇವಲ ದ್ರಾವಿಡ ಭಾಷೆಯ ವ್ಯಾಕರಣಗಳಲ್ಲಿ ಮಾತ್ರ ಸಾಧ್ಯ. ಈ ವ್ಯಾಕರಣಗಳು ವಿಷದವಾಗಿ ಸಂಸ್ಕೃತ ಮತ್ತು ದ್ರಾವಿಡ ಮೂಲದ ಪದಗಳನ್ನು ಮಿಶ್ರಣ ಮಾಡುವ ಬಗ್ಗೆ ಚರ್ಚಿಸುತ್ತವೆ. ತಮಿಳಿನ 'ವೀರಚೋಳಿಯಂ' ಹಾಗೂ ಮಲೆಯಾಳಂನ 'ಲೀಲಾತಿಲಕಂ' ಈ ಬಗೆಯ ಮಿಶ್ರಣವನ್ನು (ಹೈಬ್ರಿಡಿಟಿ) 'ಮಣಿಪ್ರವಾಳಂ' ಎಂಬ ಪರಿಕಲ್ಪನೆಯ ಮೂಲಕ ವಿವರಿಸಿವೆ. ಇದರಲ್ಲಿ ಮಣಿಯು ದೇಶೀಯ ಭಾಷೆಗೂ ಪ್ರವಾಳವು (ಹವಳ) ಸಂಸ್ಕೃತಕ್ಕೂ ಅನ್ವಯಿಸುತ್ತದೆ. ಈ ದೇಶೀಯ ಭಾಷೆ ಮತ್ತು ಸಂಸ್ಕೃತಗಳ ಮಿಶ್ರಣದ ಬಗ್ಗೆ ನಡೆದಿರುವ ಚರ್ಚೆಯ ಮೊದಲ ಪ್ರಸ್ತಾಪ ಕ್ರಿ.ಶ. ೯ನೆಯ ಶತಮಾನದಲ್ಲಿ ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿದ್ದ ಜಿನಸೇನಾಚಾರ್ಯ ರಚಿಸಿರುವ 'ಷಟ್ಖಂಡಾಗಮ'ದ ಟೀಕೆ 'ಧವಳ'ದಲ್ಲಿ ಕಂಡುಬರುತ್ತದೆ. ಅಭಿನವಗುಪ್ತನು ತನ್ನ 'ಅಭಿನವಭಾರತಿ'ಯಲ್ಲಿ ಸಂಸ್ಕೃತ ಮತ್ತು ಸ್ಥಳೀಯ ಭಾಷೆಗಳ ಮಿಶ್ರಣದ ಬಗ್ಗೆ ಪ್ರಸ್ತಾಪಿಸಿ ಅದನ್ನು 'ದಕ್ಷಿಣಾಪಥ ಮಣಿಪ್ರವಾಳ' ಎಂದು ಕರೆದಿದ್ದಾನೆ. ಆದ್ದರಿಂದ ಸಂಸ್ಕೃತ ಹಾಗೂ ದೇಶೀಯ ಭಾಷೆಗಳಲ್ಲಿ ಕಾವ್ಯರಚನೆಯಾಗುತ್ತಿದ್ದ ದಕ್ಷಿಣ ಭಾರತದ ರಾಜಾಸ್ಥಾನಗಳಲ್ಲಿ ಮೊದಲಿಗೆ ಮಣಿಪ್ರವಾಳಂನ ಪರಿಕಲ್ಪನೆ ಮೂಡಿಬಂದಿದ್ದು ಅದು ವ್ಯಾಕರಣದ ಪದಮಿಶ್ರಣ ಸಮಸ್ಯೆಯಿಂದ ಉಂಟಾದುದು ಎನ್ನಬಹುದು.

ಕನ್ನಡ ಸಾಹಿತ್ಯದ ಉದ್ದಕ್ಕೂ ಸಂಸ್ಕೃತ ಮತ್ತು ಕನ್ನಡಗಳ ಮಿಶ್ರಣದ ಚರ್ಚೆ ನಡೆದು ಬಂದಿದೆ. ಹಲ್ಮಿಡಿ ಶಾಸನದಲ್ಲೇ ಅರಿಸಮಾಸವಾದ 'ಪೆತ್ತಜಯನ್' ಎಂಬಲ್ಲಿ ಕನ್ನಡ ಪದ 'ಪೆತ್ತ' ಹಾಗೂ ಸಂಸ್ಕೃತ ಪದ 'ಜಯನ್' ಮಿಶ್ರಣವಾಗಿ ಬಳಕೆಯಾಗಿದೆ. ಆದರೆ 'ಕವಿರಾಜಮಾರ್ಗ' ಸಂಸ್ಕೃತ ಮತ್ತು ಕನ್ನಡಗಳನ್ನು ಬೆರೆಸಿ ಸಮಾಸ ಮಾಡುವುದನ್ನು 'ವಿರಸ' ಎಂದು ಹೇಳಿ ಅದನ್ನು 'ಬಿಸಿಹಾಲಿಗೆ ಮೊಸರನ್ನು ಬೆರೆಸಿದಂತೆ' ಎಂದು ಹೇಳುತ್ತದೆ. ಕ್ರಿ.ಶ. ೧೨೩೫ರಲ್ಲಿದ್ದ ಆಂಡಯ್ಯನೂ ಅಂತಹ ಮಿಶ್ರಣವನ್ನು ವಿರೋಧಿಸಿ 'ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ' ಅಂದರೆ 'ತುಪ್ಪ ಮತ್ತು ತೈಲಗಳನ್ನು ಬೆರೆಸುವುದು ಸರಿಯೇ' ಎಂದು ಹೇಳಿ ತಾನು ಸಂಸ್ಕೃತದ ಸಹಾಯವನ್ನು ಪಡೆಯದೆ ಕೇವಲ ತದ್ಭವ ಪದಗಳನ್ನೂ ದೇಸೀ ನುಡಿಗಳನ್ನು ಬಳಸಿಕೊಂಡು ಈ ಕೃತಿಯನ್ನು ರಚಿಸಿದ್ದೇನೆ ಎನ್ನುತ್ತಾನೆ. ಕೇಶೀರಾಜ ತನ್ನ 'ಶಬ್ದಮಣಿದರ್ಪಣ'ದಲ್ಲಿ ಸಂಸ್ಕೃತ ಮತ್ತು ಕನ್ನಡ ಪದಗಳ ಮಿಶ್ರಣವನ್ನು 'ಅರಿಸಮಾಸ' ಎಂದು ಕರೆದು ಅಂತಹ ಪ್ರಯೋಗಗಳನ್ನು ನಿಷೇಧಿಸುತ್ತಾನೆ. ಆದರೆ ಪಂಪ ಇಂತಹ ಮಿಶ್ರಣದ ಪರವಾಗಿದ್ದಾನೆ. ಅವನು ಮಾರ್ಗ ಮತ್ತು ದೇಸಿಗಳ ಮಿಶ್ರಣವನ್ನು ಪ್ರಸ್ತಾಪಿಸಿ ತನ್ನ ಕಾವ್ಯ ಈ ಮಿಶ್ರಣದ ಹಾದಿಯದು ಎನ್ನುತ್ತಾನೆ. ಮಣಿಪ್ರವಾಳಂ, ಅರಿಸಮಾಸ ಹಾಗೂ ಮಿಶ್ರಪದರಚನೆಯನ್ನು ಕುರಿತ ಈ ಚರ್ಚೆ ಆಧುನಿಕ ಯುಗದಲ್ಲೂ ಮುಂದುವರೆದಿದ್ದು ಅದು ರಷ್ಯನ್ ವಿಮರ್ಶಕ ಮಿಖೈಲ್ ಬಖ್ತಿನ್ ಹೇಳುವ 'ಹೆಟ್ರೋಗ್ಲಾಸಿಯ' ಎಂಬ ಪರಿಕಲ್ಪನೆಗೆ ಸಮೀಪವಾದುದಾಗಿದೆ.

## ೧.೫. ಕನ್ನಡ ವ್ಯಾಕರಣ ಪರಂಪರೆ

ಕನ್ನಡ ವ್ಯಾಕರಣ ಪರಂಪರೆ ಕ್ರಿ.ಶ. ೮೫೦ರಲ್ಲಿ ರಚನೆಯಾದ ಶ್ರೀವಿಜಯನ 'ಕವಿರಾಜಮಾರ್ಗ'ದಿಂದ ಆರಂಭವಾಗುತ್ತದೆ. ಇದು ಸ್ಪಷ್ಟವಾಗಿ ರಾಜಾಶ್ರಯದಲ್ಲಿ ರಚಿತವಾದ ಗ್ರಂಥ ಎಂಬುದು 'ನೃಪತುಂಗದೇವಾನುಮತಮಪ್ಪ' ಎಂಬ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಇದರಲ್ಲಿ ಇರುವ ಪದ್ಯಗಳಲ್ಲಿ ಸುಮಾರು ಅರ್ಧದಷ್ಟನ್ನು ದಂಡಿಯ 'ಕಾವ್ಯಾದರ್ಶ'ದಿಂದಲೂ ಕೆಲವು ಅಂಶಗಳನ್ನು ಭಾಮಹನ 'ಕಾವ್ಯಾಲಂಕಾರ'ದಿಂದಲೂ ತೆಗೆದುಕೊಂಡಿದ್ದು ಹಾಗೂ ಉಳಿದವು ಕನ್ನಡದ ಕಾವ್ಯದ ವೈಶಿಷ್ಟ್ಯತೆಯಾಗಿರುವುದರಿಂದ ಸ್ವತಃ ಶ್ರೀವಿಜಯನೇ ರಚಿಸಿದ್ದಾನೆ. ಇದು ಮೂಲತಃ ಕಾವ್ಯಮೀಮಾಂಸೆಯ ಗ್ರಂಥವಾದರೂ ಇದರಲ್ಲಿ ಕೆಲವು ವ್ಯಾಕರಣಾಂಶಗಳನ್ನೂ ವಿವಕ್ಷೆ ಮಾಡಲಾಗಿದೆ. ಹಲವಾರು ಕಾವ್ಯಮೀಮಾಂಸೆ ಹಾಗೂ ವ್ಯಾಕರಣದ ಗ್ರಂಥಗಳು ಕನ್ನಡದಲ್ಲಿ ರಚನೆಯಾಗಿದ್ದರೂ ಇಲ್ಲಿ ಕೆಲವು ಮುಖ್ಯವಾದ ವ್ಯಾಕರಣ ಗ್ರಂಥಗಳನ್ನು ಮಾತ್ರ ಪರಿಚಯ ಮಾಡಿಕೊಡಲಾಗಿದೆ. ಎರಡನೆಯ ನಾಗವರ್ಮನು (ಕ್ರಿ.ಶ. ೧೦೪೨) ಮೇಲಿನ ಪರಂಪರೆಯನ್ನು ಮುಂದುವರೆಸಿ 'ಕಾವ್ಯಾವಲೋಕನ', ಎಂಬ ಅಲಂಕಾರಶಾಸ್ತ್ರವನ್ನೂ 'ಅಭಿದಾನವಸ್ತುಕೋಶ' ಎಂಬ ನಿಘಂಟನ್ನೂ ಹಾಗೂ 'ಕರ್ನಾಟಕ ಭಾಷಾಭೂಷಣ' ಎಂಬ ವ್ಯಾಕರಣವನ್ನೂ ರಚಿಸಿದ್ದಾನೆ. 'ಛಂದೋವಿಚಿತಿ' ಎಂಬ ಛಂದಸ್ಸಿನ ಗ್ರಂಥವನ್ನೂ ರಚಿಸಿದ್ದು ಅದು ಉಪಲಬ್ಧವಾಗಿಲ್ಲ. 'ಕಾವ್ಯಾವಲೋಕನ'ದಲ್ಲಿ ತನ್ನನ್ನು ಅಭಿನವ ಶರ್ವವರ್ಮ ಎಂದು ಕರೆದುಕೊಳ್ಳುವ ಮೂಲಕ ಕಾತಂತ್ರ ಪರಂಪರೆಗೆ ತಾನು ಋಣಿಯಾಗಿದ್ದೇನೆ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾನೆ. 'ಕಾವ್ಯಾವಲೋಕನ'ದಲ್ಲಿ ವ್ಯಾಕರಣವನ್ನು ಸಂಗ್ರಹವಾಗಿ ಹೇಳಿದ್ದರೂ ಮೂಲತಃ ಇದು ಅಲಂಕಾರಶಾಸ್ತ್ರದ ಗ್ರಂಥ. ಇದರಲ್ಲಿ ೫ ಅಧಿಕರಣಗಳಿದ್ದು ಮೊದಲನೆಯದಾದ 'ಶಬ್ದಸ್ಮೃತಿ' ವ್ಯಾಕರಣವನ್ನು ಕುರಿತಾಗಿದೆ. ಅದರಲ್ಲಿ ಸಂಜ್ಞಾಪ್ರಕರಣ, ಸಂಧಿಪ್ರಕರಣ, ನಾಮಪ್ರಕರಣ, ಸಮಾಸಪ್ರಕರಣ, ತದ್ಧಿತಪ್ರಕರಣ ಮತ್ತು ಆಖ್ಯಾತಪ್ರಕರಣ ಹೀಗೆ ಆರು ಪ್ರಕರಣಗಳಲ್ಲಿ ವ್ಯಾಕರಣದ ವಿವಿಧ ಅಂಶಗಳನ್ನು ಚರ್ಚಿಸಲಾಗಿದೆ. ಅವನ 'ಕರ್ನಾಟಕ ಭಾಷಾಭೂಷಣ' ಸಂಪೂರ್ಣವಾಗಿ ವ್ಯಾಕರಣ ಗ್ರಂಥ. ಒಂದರ್ಥದಲ್ಲಿ ಇದೊಂದು ದ್ವೈಭಾಷಿಕ ಗ್ರಂಥ. ಇದರಲ್ಲಿನ ಸೂತ್ರ ಹಾಗೂ ವೃತ್ತಿಗಳು ಸಂಸ್ಕೃತದಲ್ಲಿದ್ದು ಉದಾಹರಣೆಗಳು ಕನ್ನಡಕಾವ್ಯಗಳಿಂದ ತೆಗೆದುಕೊಂಡಿರುವ ಪದ್ಯಗಳಾಗಿವೆ. ಒಟ್ಟು ೨೮೦ ಸೂತ್ರಗಳಿದ್ದು ಅವು ೧೦ ಪರಿಚ್ಛೇದಗಳಲ್ಲಿ ಹಂಚಿಕೆಯಾಗಿವೆ. ಕೇಶಿರಾಜನ (ಕ್ರಿ.ಶ. ೧೨೬೦) 'ಶಬ್ದಮಣಿದರ್ಪಣಂ' ಕೂಡ ಕಾತಂತ್ರ ವ್ಯಾಕರಣ ಪರಂಪರೆಯಲ್ಲಿ ರಚನೆಯಾದ ವ್ಯಾಕರಣ. ಕೇಶಿರಾಜನು ೨ನೇ ನಾಗವರ್ಮನ ಕೃತಿಗಳಾದ 'ಕಾವ್ಯಾವಲೋಕನ'ದ 'ಶಬ್ದಸ್ಮೃತಿ'ಯ ಸೂತ್ರ, ವೃತ್ತಿ ಹಾಗೂ ಪ್ರಯೋಗಗಳನ್ನು ಆಧರಿಸಿದ್ದಾನೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೂ ಇದರಲ್ಲಿ ಕನ್ನಡಕ್ಕೆ ವಿಶಿಷ್ಟವಾದ ಸಂಗತಿಗಳನ್ನು ಕುರಿತು ಹೇಳಲಾಗಿದೆ. ಈ ಗ್ರಂಥದಲ್ಲಿ ಎಂಟು ಅಧ್ಯಾಯಗಳಿದ್ದು ಅವನ್ನು ಕ್ರಮವಾಗಿ 'ಸಂಧಿಪ್ರಕರಣ' 'ನಾಮಪ್ರಕರಣ', 'ಸಮಾಸಪ್ರಕರಣ' 'ತದ್ಧಿತಪ್ರಕರಣ' 'ಆಖ್ಯಾತಪ್ರಕರಣ' 'ಧಾತುಪ್ರಕರಣ' 'ಅಪಭ್ರಂಶಪ್ರಕರಣ' ಹಾಗೂ 'ಅವ್ಯಯಪ್ರಕರಣ' ಎಂದು ಕರೆಯಲಾಗಿದೆ. ಇವು ಕ್ರಮವಾಗಿ ಕನ್ನಡದ ಧ್ವನಿವ್ಯವಸ್ಥೆ, ಸಂಧಿಗಳು, ಸಮಾಸಗಳನ್ನು ರೂಪಿಸುವ ಬಗೆ, ನಾಮಪದಗಳು, ಕ್ರಿಯಾಪದಗಳು, ಪ್ರತ್ಯಯೀಕರಣ ಮುಂತಾದ ಭಾಷಾರಚನೆಗೆ ಸಂಬಂಧಿಸಿದ ಅಂಶಗಳನ್ನು ವಿವರಿಸುತ್ತದೆ. ಈ ಅಧ್ಯಾಯಗಳಿಗೆ 'ಪ್ರಕರಣ'

ignou THE PEOPLE'S UNIVERSITY

ಎಂದೂ, ನಿಯಮವನ್ನು ಹೇಳುವ ಕಂದಪದ್ಯಗಳಿಗೆ 'ಸೂತ್ರ' ಎಂದೂ, ಗದ್ಯರೂಪದ ವಿವರಣೆಗೆ 'ವೃತ್ತಿ' ಎಂದೂ, ನೀಡಿರುವ ಉದಾಹರಣೆಗಳಿಗೆ 'ಪ್ರಯೋಗ' ಎಂದೂ ಕರೆಯಲಾಗಿದೆ. ಇವಲ್ಲದೆ ಪೀಠಿಕಾ ಪ್ರಕರಣ ಎಂಬ ಪ್ರಸ್ತಾವನೆಯೂ ಮತ್ತು ಕೊನೆಯಲ್ಲಿ 'ಪ್ರಯೋಗಸಾರ' ಎಂಬ ಹೆಸರಿನ ಕಿರಿದಾದ ಶಬ್ದಕೋಶವೂ ಇವೆ. ಕೃತಿಯಲ್ಲಿ ಒಟ್ಟು ೩೪೩ ಸೂತ್ರಗಳಿದ್ದು ಅವುಗಳನ್ನು ಕಂದಪದ್ಯಗಳಲ್ಲಿ ರಚಿಸಲಾಗಿದೆ. ಪ್ರತಿ ಸೂತ್ರಕ್ಕೂ ಸ್ವತಃ ಕೇಶಿರಾಜನೇ, ವಿವರಣಾತ್ಮಕವಾದ ವ್ಯಾಖ್ಯಾನವನ್ನು (ವೃತ್ತಿ) ಗದ್ಯದಲ್ಲಿ ಬರೆದಿದ್ದಾನೆ. ನಂತರದ ಶತಮಾನಗಳಲ್ಲಿ ಇದಕ್ಕೆ ನಿಟ್ಟೂರು ನಂಜಯ್ಯ ಮತ್ತು ಲಿಂಗಣಾರಾಧ್ಯರು ಬರೆದ ಟೀಕೆಗಳಿವೆ. ಆಧುನಿಕ ಭಾಷಾವಿಜ್ಞಾನಿ ಎಚ್.ಎಸ್. ಬಿಳಿಗಿರಿಯವರು ೧೯೬೯ರಲ್ಲಿ ಶಬ್ದಮಣಿದರ್ಪಣದ ಮೊದಲ ಎರಡು ಪ್ರಕರಣಗಳಿಗೆ 'ಆಲೋಕ' ಎಂಬ ಭಾಷಾವೈಜ್ಞಾನಿಕ ದೃಷ್ಟಿಕೋಣದ ವಿವರಣೆಯನ್ನು ಬರೆದಿದ್ದಾರೆ. ಕ್ರಿ.ಶ. ೧೬೦೪ರಲ್ಲಿ ಭಟ್ಟಾಕಳಂಕನು 'ಕರ್ನಾಟಕ ಶಬ್ದಾನುಶಾಸನ' ಎಂಬ ವ್ಯಾಕರಣವನ್ನು ಸಂಸ್ಕೃತದಲ್ಲಿ ೫೯೨ ಸೂತ್ರಗಳು, ವೃತ್ತಿ ಮತ್ತು ವ್ಯಾಖ್ಯಾನಗಳ ಸಮೇತ ರಚಿಸಿದ್ದಾನೆ. ಹಳಗನ್ನಡ ಕಾವ್ಯವನ್ನು ಗಮನದಲ್ಲಿಟ್ಟು ರಚನೆಯಾದ ಈ ವ್ಯಾಕರಣಗಳು ಜೈನ ರಚನೆಗಳು ಹಾಗೂ ಕಾತಂತ್ರ ವ್ಯಾಕರಣದ ಪರಂಪರೆಯಲ್ಲಿ ಬಂದವುಗಳಾಗಿವೆ.

## ೧.೬. ಭಾಷಾವಿಜ್ಞಾನ

### ೧.೬.೧. ಉಗಮ

೧೯ನೆಯ ಶತಮಾನದಲ್ಲಿ ವ್ಯಾಕರಣದ ಕಾರ್ಖಾನೆಯಲ್ಲಿ ಆದ ಸ್ಫೋಟದ ಬಗ್ಗೆ ಈಗಾಗಲೇ ಪ್ರಸ್ತಾಪಿಸಲಾಗಿದೆ. ಈ ಅವಧಿಯಲ್ಲಿ ಪಾಶ್ಚಾತ್ಯರಿಂದ ಹೇರಳವಾಗಿ ಕನ್ನಡ ವ್ಯಾಕರಣಗಳು ರಚಿತವಾಗಿರುವುದನ್ನು ನಾವು ಕಾಣುತ್ತೇವೆ. ಈ ದಿಕ್ಕಿನಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ಆದ ಮೊದಲ ಪ್ರಯತ್ನ ಎಂದರೆ ವಿಲಿಯಂ ಕೇರಿ ಎಂಬವನು ೧೮೧೭ರಲ್ಲಿ ಬಂಗಾಳದ ಸೆರಂಪುರದಿಂದ ಪ್ರಕಟಿಸಿದ 'ಎ ಗ್ರ್ಯಾಮರ್ ಅಫ಼್ ದಿ ಕರ್ನಾಟಕ ಲಾಂಗ್‌ವೇಜ್' ಎಂಬ ಇಂಗ್ಲಿಷ್ ಭಾಷೆಯ ವ್ಯಾಕರಣ. ನಂತರದಲ್ಲಿ ಜಾನ್ ಮೆಕೆರಲ್ ೧೮೨೦ರಲ್ಲಿ ಮದರಾಸಿನಿಂದ 'ಎ ಗ್ರ್ಯಾಮರ್ ಅಫ಼್ ದಿ ಕರ್ನಾಟಕ ಲಾಂಗ್‌ವೇಜ್' ಎಂಬ ಇಂಗ್ಲಿಷ್ ವ್ಯಾಕರಣವನ್ನು ರಚಿಸಿದನು. ಕನ್ನಡದಲ್ಲಿ ಬರೆದ ಮೊದಲ ವ್ಯಾಕರಣ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯನು ೧೮೩೮ರಲ್ಲಿ ಬರೆದ 'ಹೊಸಗನ್ನಡ ನುಡಿಗನ್ನಡಿಯೆಂಬ ಹೊಸಗನ್ನಡ ವ್ಯಾಕರಣವು' ಎಂಬ ಕೃತಿ. ಇದರಲ್ಲಿ ಹತ್ತು ಪ್ರಕರಣಗಳಿದ್ದು ಅವು ಕ್ರಮವಾಗಿ ಸಂಜ್ಞಾಪ್ರಕರಣ, ಸಂಧಿಪ್ರಕರಣ, ಶಬ್ದಪ್ರಕರಣ, ಆಖ್ಯಾತಪ್ರಕರಣ, ಕೃತ್‌ಪ್ರಕರಣ, ತದ್ಧಿತಪ್ರಕರಣ, ತತ್ಸಮಪ್ರಕರಣ, ತದ್ಭವಪ್ರಕರಣ, ಸಮಾಸಪ್ರಕರಣ ಮತ್ತು ಪ್ರಯೋಗಪ್ರಕರಣ ಎಂದಿವೆ. ಇಲ್ಲಿ ಪಾರಂಪರಿಕ ವ್ಯಾಕರಣಗಳಂತೆ ಸೂತ್ರಗಳ ಬಳಕೆಯಿಲ್ಲ; ಬದಲಿಗೆ ಗದ್ಯದಲ್ಲಿದ್ದು ಪ್ರಶ್ನೋತ್ತರ ರೂಪದಲ್ಲಿದೆ. ವಿಷಯ ವಿನ್ಯಾಸದಲ್ಲಿ ಸುವ್ಯವಸ್ಥಿತವಾದ ಜೋಡಣೆ, ಸರಳ ನಿರೂಪಣೆ, ವ್ಯಾಪಕವಾದ ವಿವರಣೆ, ಪ್ರಶ್ನೋತ್ತರ ರೂಪಗಳು ಹಾಗೂ ಗ್ರಾಂಥಿಕ ರೂಪ ಮತ್ತು ಆಡುನುಡಿಗಳಿಗೆ ಸಮಾನ ಪ್ರಾಶಸ್ತ್ಯ ಕೊಟ್ಟಿರುವುದು ಇದರ ಆಧುನಿಕ ದೃಷ್ಟಿಕೋಣದ ಕುರುಹಾಗಿದೆ. ಕೃಷ್ಣಮಾಚಾರ್ಯನು

ಮದರಾಸಿನಲ್ಲಿ ಫ್ರಾನ್ಸಿಸ್ ಎಲ್ಲಿಸ್ ವೈಟ್ ಜೊತೆಯಲ್ಲಿ ಇದ್ದಿರಬಹುದೆಂದೂ ಈ ವ್ಯಾಕರಣದ ಹೊಸ ನೋಟಗಳು ಅದರ ಪರಿಣಾಮವಾಗಿರಬಹುದೆಂದೂ ಊಹೆಗಳಿವೆ.

ವ್ಯಾಕರಣ ಸ್ಫೋಟದಿಂದ ಆದ ಪರಿಣಾಮವೆಂದರೆ ಭಾರತೀಯ ವ್ಯಾಕರಣ ಪರಂಪರೆಯ ಒಳನೋಟಗಳನ್ನು ಮಿಶನರಿ ವ್ಯಾಕರಣ ರಚನೆಕಾರರು ಪಾಶ್ಚಾತ್ಯ ವ್ಯಾಕರಣ ಪರಂಪರೆಯ ಒಳನೋಟಗಳನ್ನು ಭಾರತೀಯರು ಪಡೆದುಕೊಳ್ಳುವ ಅವಕಾಶ ಸಿಕ್ಕಿದ್ದು. ಪಶ್ಚಿಮದ ಸಂಪರ್ಕ ಕನ್ನಡ ಸಾಹಿತ್ಯವನ್ನು ಹೊಸದಾಗಿ ನೋಡುವ ದೃಷ್ಟಿಕೋಣಗಳನ್ನು ಕೊಟ್ಟಂತೆ ಭಾಷೆಯನ್ನು ನೋಡುವ ದೃಷ್ಟಿಕೋಣಗಳನ್ನೂ ಕೊಟ್ಟಿದೆ. ಮಿಷನರಿಗಳು ಹಾಗೂ ಬ್ರಿಟಿಷ್ ಆಡಳಿತಾಧಿಕಾರಿಗಳು ಭಾರತದ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ತೆಗೆದುಕೊಂಡ ಆಸಕ್ತಿಯಿಂದಾಗಿ ಹೊಸದಾಗಿ ಅವುಗಳನ್ನು ಅರ್ಥಮಾಡಿಕೊಳ್ಳುವ ಪರಂಪರೆಯೊಂದು ಬೆಳೆಯಿತು. ಮದರಾಸಿನಲ್ಲಿ ಫ್ರಾನ್ಸಿಸ್ ಎಲ್ಲಿಸ್ ವೈಟ್ ಮತ್ತು ಸಂಗಡಿಗರು ದ್ರಾವಿಡ ಭಾಷಾ ಕುಟುಂಬವನ್ನು ಒಂದು ಸ್ವತಂತ್ರ ಭಾಷಾ ಕುಟುಂಬ ಎಂದು ತೋರಿಸಲು ಸಫಲರಾದರು. ಇದರ ಅತ್ಯಂತ ಮುಖ್ಯವಾದ ಬೆಳವಣಿಗೆ ಎಂದರೆ ರಾಬರ್ಟ್ ಕಾಲ್ಡವೆಲ್ ೧೮೫೬ರಲ್ಲಿ ರಚಿಸಿದ 'ಎ ಕಂಪ್ಯಾರಿಟಿವ್ ಗ್ರಾಮರ್ ಅಫ್ ದಿ ದ್ರವಿಡಿಯನ್ ಆರ್ ಸೌತ್–ಇಂಡಿಯನ್ ಫ್ಯಾಮಿಲಿ ಅಫ್ ಲಾಂಗ್‌ವೇಜಸ್' ಎಂಬ ವ್ಯಾಕರಣ ಗ್ರಂಥ. ಪಾರಂಪರಿಕ ವ್ಯಾಕರಣ ನಂಬಿಕೊಂಡು ಬಂದಿದ್ದ ದ್ರಾವಿಡ ಭಾಷೆಗಳು ಸಂಸ್ಕೃತಜನ್ಯ ಎಂಬ ತಿಳುವಳಿಕೆಯನ್ನು ಹೋಗಲಾಡಿಸಿ ದ್ರಾವಿಡ ಭಾಷಾ ಪರಿವಾರದ ಪರಿಕಲ್ಪನೆಯನ್ನು ಮೊಟ್ಟಮೊದಲಿಗೆ ಹುಟ್ಟುಹಾಕಿದ ಕೀರ್ತಿ ಇದಕ್ಕೆ ಸಲ್ಲುತ್ತದೆ. ಆದರೆ ಕನ್ನಡದ ಮೊದಲ ಆಧುನಿಕ ವ್ಯಾಕರಣ ೧೮೧೭ರಲ್ಲಿ ಬಂಗಾಳದ ಸೇರಂಪೂರ್ ಎಂಬಲ್ಲಿ ವಿಲಿಯಂ ಕ್ಯಾರಿಯಿಂದ ಇಂಗ್ಲಿಷಿನಲ್ಲಿ ರಚನೆಯಾಗಿದೆ. ಎರಡನೆಯ ಕನ್ನಡ ವ್ಯಾಕರಣ ಜಾನ್ ಮೆಕ್ಕರಲ್ ೧೮೨೦ರಲ್ಲಿ ಇಂಗ್ಲಿಷಿನಲ್ಲಿ ರಚಿಸಿದ ಹಾಗೂ ಮದ್ರಾಸಿನಲ್ಲಿ ಅಚ್ಚಾದ ಗ್ರಂಥವಾಗಿದೆ. ಇದೇ ರೀತಿ ಅನಂತರದಲ್ಲಿ ಥಾಮಸ್ ಹಡ್ಸನ್ (ಎನ್ ಎಲಿಮೆಂಟರಿ ಗ್ರಾಮರ್ ಅಫ್ ದಿ ಕನ್ನಡ ಆರ್ ಕ್ಯಾನರೀಸ್ ಲಾಂಗ್‌ವೇಜ್, ೧೮೬೪), ಜ಼ೀಗ್ಲರ್ (ಎ ಪ್ರಾಕ್ಟಿಕಲ್ ಕೀ ಟು ದಿ ಕನ್ನಡ ಲಾಂಗ್‌ವೇಜ್) ಮುಂತಾದವರು ಕನ್ನಡ ವ್ಯಾಕರಣಗಳನ್ನು ರಚಿಸಿದರು. ಆದರೆ ಇವೆಲ್ಲ ರಚನೆಗೊಂಡಿದ್ದು ಇಂಗ್ಲಿಷಿನಲ್ಲಿ ಹಾಗೂ ಕನ್ನಡ ಕಲಿಯ ಬಯಸುವ ಇಂಗ್ಲಿಷ್ ಜನರಿಗೆ ಅದನ್ನು ಕಲಿಸುವ ಸಲುವಾಗಿ ಮಾತ್ರ. ಇದೇ ಕಾಲದಲ್ಲಿ ಬಂದ ಮೂರನೆಯದಾದ ಕನ್ನಡದಲ್ಲಿ ಬರೆಯಲಾದ ಹಾಗೂ ಹೊಸಗನ್ನಡವನ್ನು ದೃಷ್ಟಿಯಲ್ಲಿಟ್ಟು ಬರೆದ ಮೊದಲನೆಯ ವ್ಯಾಕರಣ ಗ್ರಂಥ ೧೯೩೮ರಲ್ಲಿ ಬಂದ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯನ 'ಹೊಸಗನ್ನಡ ನುಡಿಗನ್ನಡಿ'. ಪಾರಂಪರಿಕ ವ್ಯಾಕರಣಗಳ ಜಾಡನ್ನು ಅನುಕರಿಸಿದರೂ ಹೊಸಗನ್ನಡವನ್ನು ಉದ್ದೇಶಿಸಿದ ವ್ಯಾಕರಣ ಇದು. ಮುಂದೆ ಕಿಟ್ಟೆಲ್ ಅವರು ೧೯೦೩ರಲ್ಲಿ 'ಎ ಗ್ರಾಮರ್ ಅಫ್ ಕನ್ನಡ ಲಾಂಗ್‌ವೇಜ್ ಇನ್ ಇಂಗ್ಲಿಷ್' ಕನ್ನಡ ಭಾಷೆಯ ಆಧುನಿಕ ವ್ಯಾಕರಣ ಪರಂಪರೆಯಲ್ಲಿ ಒಂದು ಮೈಲಿಗಲ್ಲು. ಇದಾದ ನಂತರ ೨೦ನೆಯ ಶತಮಾನದ ಮೊದಲ ಭಾಗದಲ್ಲಿ ಆರಂಭಗೊಂಡ ಮೈಸೂರು ವಿಶ್ವವಿದ್ಯಾನಿಲಯ ಫ಼ಿಲಾಲಜಿ ಹಾಗೂ ಭಾಷಾವಿಜ್ಞಾನದ ಅಧ್ಯಯನಕ್ಕೆ ಒಳ್ಳೆಯ ಅಡಿಪಾಯವನ್ನು ಹಾಕಿತು.

೨೦ನೆಯ ಶತಮಾನದಲ್ಲಿ ಆಧುನಿಕ ಭಾಷಾವಿಜ್ಞಾನದ ಅಧ್ಯಯನ ಪ್ರಾರಂಭವಾದ ಮೇಲೆ ಎ.ಎನ್. ನರಸಿಂಹಯ್ಯ, ಜಿ.ಎಸ್. ಗಾಯಿ, ವಿಲಿಯಂ ಬ್ರೈಟ್, ಎ.ಕೆ. ರಾಮಾನುಜನ್, ಹಾ.ಮಾ. ನಾಯಕ, ಹೆರಾಲ್ಡ್ ಶಿಫ಼್ಮನ್, ಎಸ್.ಎನ್. ಶ್ರೀಧರ್,

ರಾಮಚಂದ್ರರಾವ್, ಕುಶಾಲಪ್ಪಗೌಡ, ಜೆ.ಎಸ್. ಕುಳ್ಳಿ ಮುಂತಾದ ವಿದ್ವಾಂಸರು ಕನ್ನಡ ಭಾಷಾವಿಜ್ಞಾನದ ಬಗ್ಗೆ ಮೌಲಿಕವಾದ ಅಧ್ಯಯನಗಳನ್ನು ಮಾಡಿದ್ದಾರೆ. ಭಾಷಾವಿಜ್ಞಾನಿಗಳು ಲಿಖಿತ ಇಲ್ಲವೇ ಮೌಖಿಕ ಭಾಷೆಗಳನ್ನು ವಿಶ್ಲೇಷಿಸುವಲ್ಲಿ ಕನ್ನಡ ಭಾಷೆಯಲ್ಲಿ ಕಂಡುಬರುವ ಧ್ವನಿಮಾ (ಫೋನೀಮ್), ಆಕೃತಿಮಾ (ಮಾರ್ಫೀಮ್), ಶಬ್ದಗಳ ಸಂಯೋಜನೆ (ವರ್ಡ್‌ಫಾರ್ಮೇಷನ್), ವಾಕ್ಯರಚನೆ (ಸಿಂಟ್ಯಾಕ್ಸ್) ಹಾಗೂ ಅರ್ಥದ ಸ್ವರೂಪ (ಸಿಮ್ಯಾಂಟಿಕ್ಸ್) ಮೊದಲಾದವುಗಳ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ. ಅದನ್ನು ಮುಂದುವರೆಸಿ ಎಲ್ಲ ಹಂತಗಳಲ್ಲಿಯೂ ಕನ್ನಡ ಭಾಷೆಯ ವ್ಯಾಕರಣವನ್ನು ಮರಳಿ ಕಟ್ಟುವ ಅವಶ್ಯಕತೆಯಿದೆ. ಸಂಸ್ಕೃತ ಹಾಗೂ ದ್ರಾವಿಡಭಾಷೆಗಳ ಪರಂಪರೆಯ ಹಿನ್ನೆಲೆಯಲ್ಲಿ, ಕನ್ನಡದ ಬೆಳವಣಿಗೆಯ ಬೇರೆ ಬೇರೆ ಮಜಲುಗಳನ್ನು ಕಂಡುಕೊಳ್ಳಬೇಕಾಗಿದೆ.

## ೧.೬.೨. ಶಬ್ದ ಮತ್ತು ಅರ್ಥ

ಭಾಷೆಯ ವಿವಿಧ ಘಟಕಾಂಶಗಳನ್ನು ವಿವರಿಸುವಲ್ಲಿ ಶಬ್ದ ಮತ್ತು ಅರ್ಥಗಳೆಂಬ ಎರಡು ಸ್ತರಗಳನ್ನು ಪರಿಗಣಿಸಲಾಗಿದೆ. ಇದರಲ್ಲಿ ಶಬ್ದವನ್ನು ಭಾಷೆಯ ವಾಹಕ ಸಾಧನವಾಗಿಯೂ ಅರ್ಥವನ್ನು ಶಬ್ದದ ಮೂಲಕ ಪ್ರತೀತವಾಗುವುದೆಂದೂ ಪರಿಗಣಿಸಲಾಗಿದೆ. ಆದ್ದರಿಂದ ಅರ್ಥರಹಿತವಾದ ಪದವಾಗಲೀ ಅಥವಾ ಪದವಿಲ್ಲದ ಅರ್ಥವಾಗಲೀ ಭಾಷೆಯಲ್ಲಿ ಸಾಧ್ಯವಿಲ್ಲ ಎಂದು ಮೊದಲಿಗೆ ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ಶಬ್ದಸ್ತರವೆಂಬುದನ್ನು ಅರ್ಥ ಸ್ತರದೊಡನೆ ಬೆಸೆದುಕೊಂಡಾಗ ಮಾತ್ರ ಭಾಷೆಯು ರೂಪು ತಳೆಯುತ್ತದೆ ಎಂದಾಯಿತು. ಆದರೆ ಯೂರೋಪಿಯನ್ ಪರಂಪರೆಯಲ್ಲಿ ಶಬ್ದ ಮತ್ತು ಅರ್ಥಗಳು ಭಾಷಾವಿಜ್ಞಾನದಲ್ಲಿ ವಿವಕ್ಷೆಯಾಗುವ ರೀತಿ ಭಾರತೀಯ ರೀತಿಗಿಂತ ಭಿನ್ನವಾಗಿದೆ. ಸಸ್ಯೂರಿಯನ್ ಭಾಷಾ ವಿಜ್ಞಾನದಲ್ಲಿ ಹಾಗೂ ಉತ್ಪಾದಕ (ಜನರೇಟಿವ್) ವ್ಯಾಕರಣದಲ್ಲಿ ರಾಚನಿಕತೆಗೆ ಕೇಂದ್ರ ಸ್ಥಾನ; ಹೀಗಾಗಿ ಅರ್ಥ ರಚನೆ ವ್ಯಾಕರಣದ ಹೊರಗಿನ ಘಟಕ. ಚೋಂಸ್ಕಿಯ ಉತ್ಪಾದಕ ವ್ಯಾಕರಣದಲ್ಲಿ ಅದರ ಮೂರು ರಚನಾತ್ಮಕ ಘಟ್ಟಗಳಾದ ಧ್ವನಿಮಾ ರಚನಾ ವಿಜ್ಞಾನ, ಆಕೃತಿಮಾ ರಚನಾ ವಿಜ್ಞಾನ ಹಾಗೂ ವಾಕ್ಯ ರಚನಾ ವಿಜ್ಞಾನಗಳು ಅನುಕ್ರಮವಾಗಿ ಒಂದರಿಂದ ಇನ್ನೊಂದಕ್ಕೆ ಬೆಳವಣಿಗೆಯನ್ನು ಪಡೆಯುತ್ತವೆ. ಈ ಮೂರು ಘಟಕಗಳು ಒಂದು ಗುಂಪಾದರೆ ಅರ್ಥರಚನೆ ಈ ಗುಂಪಿನಿಂದ ಹೊರಗೆ ನಡೆಯುವ ವ್ಯವಹಾರ ಎಂಬಂತೆ ಪರಿಗಣಿಸಲಾಗುತ್ತದೆ. ಇಲ್ಲಿ ಅರ್ಥ ವಾಸ್ತವವಾಗಿ ನಿಘಂಟು ಅಥವಾ ಶಬ್ದಕೋಶದ ಹಾಗೂ ಸಂದರ್ಭದ ಮೂಲಕ ಉತ್ಪಾದನೆಯಾಗುತ್ತದೆ ಎಂದು ಭಾವಿಸಲಾಗುತ್ತದೆ. ಈ ಬಗೆಯ ಬೇರ್ಪಡಿಸುವಿಕೆಯನ್ನು ಪಾಶ್ಚಾತ್ಯ ಸಾಹಿತ್ಯಕ್ಕೆ ಸಂಬಂಧಿಸಿದ ಚರ್ಚೆಗಳಲ್ಲಿ, ಅದರಲ್ಲೂ ರೂಪ (ಫಾರ್ಮ್) ಮತ್ತು ಅರ್ಥ (ಕಂಟೆಂಟ್) ಕುರಿತಾದ ಚರ್ಚೆಯಲ್ಲಿ ಕಾಣಬಹುದು. ಮೂಲತಃ ರಾಚನಿಕವಾದ ಹಾಗೂ ರೂಪನಿಷ್ಠವಾದಗಳಲ್ಲಿ ಜನಿಸಿದ ಈ ರೂಪಕೇಂದ್ರಿತ ಯೋಚನಾಕ್ರಮ ಆಧುನಿಕ ಭಾಷಾವಿಜ್ಞಾನದ ಪ್ರಧಾನ ಅಂಗ. ಆದರೆ ಭಾರತೀಯ ಪರಂಪರೆಯಲ್ಲಿ ಶಬ್ದ ಮತ್ತು ಅರ್ಥಗಳು ಪರಸ್ಪರ ಬೇರ್ಪಡಿಸಲಾಗದ ಅಂಶಗಳು ಎಂದು ಭಾವಿಸಲಾಗುತ್ತದೆ. ಅವು 'ಆಂಡ್ರೋಜಿನ್' ಮಾದರಿಯಲ್ಲಿ ಪರಸ್ಪರ ಬೆರೆತುಕೊಂಡಿರುತ್ತವೆ. ಕಾಳಿದಾಸನು ಪಾರ್ವತಿ–ಪರಮೇಶ್ವರರ ಅರ್ಧನಾರೀಶ್ವರ ಮಾದರಿಯ ಸಂಯೋಜನೆಯನ್ನು ಶಬ್ದ ಮತ್ತು ಅರ್ಥಗಳ ನಡುವೆ ಕಂಡಿದ್ದಾನೆ. ಆದ್ದರಿಂದ

ಭಾಷಾವಿಜ್ಞಾನದಲ್ಲಿ ನಾವು ವಾಕ್ಯರಚನಾ ವಿಜ್ಞಾನ ಹಾಗೂ ಅರ್ಥರಚನಾ ವಿಜ್ಞಾನಗಳ ನಡುವಣ ಅಂತರ್ಮುಖದ (ಇಂಟರ್‌ಫ್ಲೇಸ್) ಚರ್ಚೆಯನ್ನು ಕಂಡರೆ ಭಾರತೀಯ ವ್ಯಾಕರಣ ಪರಂಪರೆಯಲ್ಲಿ ಅಂತಹ ಚರ್ಚೆ ಕಂಡುಬರುವುದಿಲ್ಲ. ಬದಲಿಗೆ ಸುಮಾರು ಕ್ರಿ.ಶ. ೫ನೆಯ ಶತಮಾನದಲ್ಲಿದ್ದ ಭರ್ತೃಹರಿಯ 'ವಾಕ್ಯಪದೀಯ'ದಲ್ಲಿ ಶಬ್ದಸ್ಫೋಟ, ಪದಸ್ಫೋಟ ಹಾಗೂ ವಾಕ್ಯಸ್ಫೋಟಗಳ ಮೂಲಕ ಅರ್ಥ ಸ್ಫುರಿಸುತ್ತದೆ ಎಂದು ವಿವರಿಸಲಾಗುತ್ತದೆ.

ಮೊದಲನೆಯದಾದ ಧ್ವನಿ ಸ್ತರದಲ್ಲಿ ಎರಡು ಭಾಗಗಳಿದ್ದು ಭಾಷೆಯ ಧ್ವನಿಗಳ ಸ್ವರೂಪ, ಧ್ವನಿಗಳು ಉಂಟಾಗುವ ವಿಧಾನ, ಅದಕ್ಕೆ ಪೂರಕವಾದ ಅಂಗ ರಚನೆ, ಉಂಟಾದ ಧ್ವನಿಗಳ ಪ್ರಸರಣ, ಕೇಳಿಸಿಕೊಳ್ಳುವ ಪ್ರಕ್ರಿಯೆ ಇವೆಲ್ಲವನ್ನು ಅಭ್ಯಾಸ ಮಾಡುವುದೇ ಧ್ವನಿ ರಚನಾ ವಿಜ್ಞಾನ. ಉಚ್ಚಾರಣಾಂಗಗಳು, ಉಚ್ಚಾರಣಾ ವಿಧಾನ, ಧ್ವನಿಯ ಅಲೆಗಳ ಪ್ರಸಾರ, ಕಿವಿಯ ರಚನೆ, ಧ್ವನಿಗ್ರಹಣ ವಿಧಾನ ಇತ್ಯಾದಿ ವಿಷಯಗಳೆಲ್ಲವೂ ಈ ಧ್ವನಿ ರಚನಾ ವಿಜ್ಞಾನದ (ಫೊನೆಟಿಕ್ಸ್) ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳು. ಅದೇ ರೀತಿ ಪ್ರತಿ ಭಾಷೆಯಲ್ಲಿ ಉಪಯುಕ್ತವಾಗಿ ಬಳಕೆಯಾಗುವ ಧ್ವನಿಗಳು ಮತ್ತು ಅವುಗಳ ನಡುವೆ ಏರ್ಪಡುವ ವಿಶಿಷ್ಟ ಸಂಬಂಧವನ್ನು ಪರಿಶೀಲಿಸುವ ಕೆಲಸವನ್ನು ಧ್ವನಿರಚನಾ ವಿಜ್ಞಾನ (ಫೋನಾಲಜಿ) ಮಾಡುತ್ತದೆ. ಪದಗಳ ರಚನೆ ಮತ್ತು ಜೋಡಣೆಯ ಸಾಧ್ಯತೆಗಳನ್ನು ವಿವರಿಸುವ ಕೆಲಸವನ್ನು ಆಕೃತಿಮಾ ವಿಜ್ಞಾನ (ಮಾರ್ಫಾಲಜಿ) ಮಾಡುತ್ತದೆ.




ಚಿತ್ರ ೧: ಭಾಷಾವಿಜ್ಞಾನದ ವಿವಿಧ ಉಪಶಿಸ್ತುಗಳು ಹಾಗೂ ಅವುಗಳ ಪರಸ್ಪರ ಸಂಬಂಧಗಳ ವಿವರಣೆ




ಪಟ್ಟಿಕೆ ೨: ಅಂತರರಾಷ್ಟ್ರೀಯ ಧ್ವನಿಲಿಪಿಯ ವಿವರಗಳು (ಚಿತ್ರ ಕೃಪೆ: ವಿಕಿಪೀಡಿಯಾ)

ಇದರ ಮುಂದಿನ ಹಂತವಾದ ವಾಕ್ಯಗಳಲ್ಲಿನ ಅರ್ಥಪೂರ್ಣ ಘಟಕಗಳ ರಚನೆಯ ಸಾಧ್ಯತೆ ಹಾಗೂ ಅಸಾಧ್ಯತೆಗಳನ್ನು ವಾಕ್ಯರಚನಾ ವಿಜ್ಞಾನವು ಅಧ್ಯಯನ ಮಾಡುತ್ತದೆ.

ಎರಡನೆಯ ಸ್ತರವಾದ ಅರ್ಥರಚನೆಯ ಅಭ್ಯಾಸ ಅರ್ಥರಚನಾ ವಿಜ್ಞಾನದ ಉದ್ದೇಶ. ಇದು ಸಾಂದರ್ಭಿಕ ಅರ್ಥ ಸ್ತರದೊಡನೆ ಕೂಡ ಅರ್ಥಾಂತರ ಸಂಬಂಧವನ್ನು ಪಡೆದಿರುತ್ತದೆ. ಇದನ್ನು 'ಪ್ರಾಗ್ಮ್ಯಾಟಿಕ್ಸ್' ಎಂದು ಕರೆಯಲಾಗುತ್ತದೆ. ವಾಸ್ತವವಾಗಿ ಭಾಷಾ ರಚನೆಯಲ್ಲಿ ಈ ಮೇಲಿನ ಎಲ್ಲ ಘಟಕಾಂಶಗಳೂ ತಂತಮ್ಮ ಪಾತ್ರಗಳನ್ನು ವಹಿಸುತ್ತವೆ. ಚಿತ್ರ ೧ರಲ್ಲಿ ಈ ವರೆಗೆ ಚರ್ಚಿಸಿದ ವಿವಿಧ ಭಾಷಾವೈಜ್ಞಾನಿಕ ಉಪಶಿಸ್ತುಗಳ ಸಂಬಂಧಗಳನ್ನು ಕೊಡಲಾಗಿದೆ. ಧ್ವನಿ ವಿಜ್ಞಾನ ಮತ್ತು ವ್ಯಾಕರಣ ಹಾಗೂ ಅರ್ಥರಚನೆಗಳ ನಡುವಣ

ignou THE PEOPLE'S UNIVERSITY

ರೇಖೆ ಯೂರೋಪಿಯನ್ ಭಾಷಾವಿಜ್ಞಾನ ಪರಂಪರೆಯಲ್ಲಿ ರೂಪ ಮತ್ತು ಅರ್ಥಗಳ ನಡುವೆ ಇರುವ ಬೇರ್ಪಡಿಸುವಿಕೆಯನ್ನು ಸೂಚಿಸುತ್ತದೆ.

### ೧.೬.೩. ಧ್ವನಿ ವಿಜ್ಞಾನ ಮತ್ತು ಧ್ವನಿಮಾ ವಿಜ್ಞಾನ (ಫೋನೆಟಿಕ್ಸ್ ಮತ್ತು ಫೋನಾಲಜಿ)

ಮೊದಲಿಗೆ ಧ್ವನಿಯ ರಚನೆಯ ಬಗ್ಗೆ ತಿಳಿಯಲು ಧ್ವನಿ ವಿಜ್ಞಾನ ಮತ್ತು ಧ್ವನಿಮಾ ವಿಜ್ಞಾನವನ್ನು ಕುರಿತು ತಿಳಿಯುವ ಅವಶ್ಯಕತೆ ಇದೆ.

ಭಾಷಾವಿಜ್ಞಾನದಲ್ಲಿ ಮೊದಲ ಸ್ಥಾನ ಮಾತು ಅಥವಾ ಆಡುಭಾಷೆಗೆ; ಬರವಣಿಗೆಗೆ ಎರಡನೆಯ ಸ್ಥಾನ. ಹೀಗಾಗಿ ಉಚ್ಚಾರಣೆಯ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ಭಾಷಾ ವಿಜ್ಞಾನಿಗಳು ಅರ್ಥಮಾಡಿಕೊಂಡು ಗುರುತಿಸುವ ಅಗತ್ಯವಿರುವುದರಿಂದ ಅದಕ್ಕಾಗಿ ವಿಶೇಷವಾದ ಧ್ವನಿಲಿಪಿಯೊಂದನ್ನು (ಫೋನೆಟಿಕ್ ಸ್ಕ್ರಿಪ್ಟ್) ಅನುಸರಿಸುತ್ತಾರೆ. ಇದನ್ನು ಅಂತರರಾಷ್ಟ್ರೀಯ ಧ್ವನಿಲಿಪಿ (ಇಂಟರ್–ನ್ಯಾಷನಲ್ ಫೋನೆಟಿಕ್ ಆಲ್ಫಬೆಟ್, ಐ.ಪಿ.ಎ.) ಎಂದು ಕರೆಯಲಾಗುತ್ತದೆ. ಜಗತ್ತಿನ ಯಾವುದೇ ಭಾಷೆಯನ್ನು ಈ ಲಿಪಿಯಲ್ಲಿ ಸಮರ್ಥವಾಗಿ ಬರೆಯಬಹುದು. ಪಟ್ಟಿಕೆ ೨ರಲ್ಲಿ ಈ ಧ್ವನಿಲಿಪಿಯ ೨೦೨೦ರ ಆವೃತ್ತಿಯನ್ನು ಕೊಡಲಾಗಿದೆ. ಈ ಪಟ್ಟಿಕೆಯನ್ನು ಅರ್ಥಮಾಡಿಕೊಳ್ಳಲು ಧ್ವನಿ ವಿಜ್ಞಾನದ ಪ್ರಾಥಮಿಕ ತರಬೇತಿಯ ಅಗತ್ಯವಿದೆ. ಕೇವಲ ಮಾಹಿತಿಗೆಂದು ಈ ಪಟ್ಟಿಕೆಯನ್ನು ಇಲ್ಲಿ ಕೊಡಲಾಗಿದೆ. ಇಂತಹ ಧ್ವನಿಗಳನ್ನು ವಿಂಗಡಿಸುವಲ್ಲಿ ಕೆಲವು ಧ್ವನಿಗಳನ್ನು ಧ್ವನಿಮಾ (ಫೋನೀಮ್) ಎಂದೂ ಕೆಲವನ್ನು ಉಪಧ್ವನಿಮಾ (ಅಲೊಫೋನ್) ಎಂದೂ ಗುರುತಿಸಲಾಗುತ್ತದೆ. ಈ ತೆರನಾದ ಧ್ವನಿಗಳು ಭಾಷೆಯ ರಚನೆಯಲ್ಲಿ ಸ್ವತಂತ್ರವಾಗಿ ಸಕ್ರಿಯವಾದ ಪಾತ್ರವನ್ನು ವಹಿಸಿದಾಗ ಅವುಗಳಿಗೆ ಒಂದು ನಿರ್ದಿಷ್ಟವಾದ ಬೆಲೆ ಬರುತ್ತದೆ. ಹಾಗೆ ಸ್ವತಂತ್ರವಾದ ಸ್ಥಾನವನ್ನು ಗಳಿಸುವ ಧ್ವನಿ ಸಮುದಾಯಕ್ಕೆ ಧ್ವನಿಮಾ ಎಂದು ಹೆಸರು. ಭಾರತೀಯ ವ್ಯಾಕರಣ ಪರಂಪರೆಯಲ್ಲಿ ವರ್ಣ ಎಂಬ ಪರಿಕಲ್ಪನೆ ಧ್ವನಿಮಾ ಎಂಬ ಪರಿಕಲ್ಪನೆಗೆ ಸಮೀಪವಾದುದು. ಧ್ವನಿಯನ್ನು ಪ್ರಯತ್ನಪೂರ್ವಕವಾದ ಉಚ್ಚಾರಣೆಯ ಕನಿಷ್ಟತಮ ಘಟಕ ಎಂದು ಹೇಳಬಹುದಾದರೆ ಧ್ವನಿಮಾವನ್ನು ಒಂದು ಭಾಷೆಯ ಕನಿಷ್ಟತಮ ಘಟಕ ಎಂದು ಹೇಳಬಹುದು. ಪ್ರತಿಯೊಂದು ಭಾಷೆಯಲ್ಲಿಯೂ ಅದನ್ನು ಮಾತನಾಡುವ ರೀತಿಗೆ ಅನುಗುಣವಾಗಿ ಧ್ವನಿಮಾಗಳು ಕಂಡುಬರುತ್ತವೆ. ಈ ಧ್ವನಿಮಾಗಳ ಸಂಖ್ಯೆ ಹಾಗೂ ಸ್ವರೂಪಗಳು ಏಕರೀತಿಯಾಗಿರುವುದಿಲ್ಲ. ಯಾವುದೇ ಒಂದು ಭಾಷೆಯ ಧ್ವನಿಮಾಗಳ ನಿರ್ಣಯ, ಸ್ವರೂಪ ಹಾಗೂ ಕಾರ್ಯವಿಧಾನಗಳನ್ನು ಕುರಿತ ಅಧ್ಯಯನ ಶಾಖೆಯನ್ನು ಧ್ವನಿಮಾ ವಿಜ್ಞಾನ (ಫೋನಿಮಿಕ್ಸ್) ಎಂದು ಕರೆಯಲಾಗುತ್ತದೆ.

### ೧.೬.೪. ಧ್ವನಿಮಾ ರಚನೆ

ಭಾಷೆಯಲ್ಲಿ 'ಧ್ವನಿ'ಯನ್ನು ಮಾಪನ ಮಾಡುವ ಘಟಕವನ್ನು 'ಧ್ವನಿಮಾ' ಎಂದು ಹೇಳಲಾಗುತ್ತದೆ. ಧ್ವನಿ ಎಂದರೆ ಮಾನವನ ಧ್ವನ್ಯಾಂಗಗಳಿಂದ ಉತ್ಪನ್ನವಾಗಿ ಬಾಯಿಯ ವಿವಿಧ ಸ್ಥಾನಗಳಲ್ಲಿ ತಡೆಯುಂಟಾಗಿ ಹೊರಬರುವಾಗ ಉಂಟಾಗುವ ಶಬ್ದ ಎಂದು ಸ್ಥೂಲವಾಗಿ ಹೇಳಬಹುದು. ಪರ್ಯಾಯವಾಗಿ ಎರಡು ಪದಗಳ ನಡುವೆ ಅರ್ಥ ವೈದೃಶ್ಯವನ್ನು ತೋರುವ ಭಾಷೆಯ ಕನಿಷ್ಟತಮ ಘಟಕವನ್ನು ಧ್ವನಿಮಾ ಎಂದು

ಕರೆಯಬಹುದು. ಇದು ಭಾಷೆಯ ಅರ್ಥರಹಿತವಾದ ಚಿಕ್ಕ ಘಟಕವಾಗಿದ್ದು ಅನ್ಯ ಧ್ವನಿಮಾಗಳ ಜೊತೆ ಬೆರೆತು ಅರ್ಥವನ್ನು ಉತ್ಪಾದಿಸಬಲ್ಲ ಸಾಮರ್ಥ್ಯವನ್ನು ಪಡೆದಿರುತ್ತದೆ.

**ಇಂದಿನ ಶಿಷ್ಟ ಕನ್ನಡದಲ್ಲಿ ಬಳಕೆಯಲ್ಲಿರುವ ಧ್ವನಿಮಾಗಳು**

೧. ವ್ಯಂಜನಗಳು

ಅ) ಸ್ಪರ್ಶ ಅಲ್ಪಪ್ರಾಣಗಳು: ಕ್, ಗ್, ಚ್, ಜ್, ಟ್, ಡ್, ತ್, ದ್, ಪ್, ಬ್ (ಒಟ್ಟು ೧೦)

ಆ) ಅವರ್ಗೀಯ: ಯ್, ರ್, ಲ್, ವ್, ಸ್, ಹ್, ಳ್ (ಒಟ್ಟು ೭)

ಇ) ಅನುನಾಸಿಕಗಳು: ಣ್, ನ್, ಮ್ (ಒಟ್ಟು ೩)

೨. ಸ್ವರಗಳು

ಅ) ಹ್ರಸ್ವ: ಅ, ಇ, ಉ, ಎ, ಒ (ಒಟ್ಟು ೫)

ಆ) ದೀರ್ಘ: ಆ, ಈ, ಊ, ಏ, ಓ (ಒಟ್ಟು ೫)

೩. ಅನ್ಯಭಾಷೆಯಿಂದ ಸ್ವೀಕೃತವಾದವು

ಅ) ವ್ಯಂಜನಗಳು (ಸಂಸ್ಕೃತದಿಂದ): ಖ್, ಘ್, ಛ್, ಝ್, ಠ್, ಢ್, ಥ್, ಧ್, ಫ್, ಭ್, ಶ್, ಷ್ (ಒಟ್ಟು ೧೨)

(ಇಂಗ್ಲಿಷಿನಿಂದ): ಫ಼್, ಜ಼್ (ಒಟ್ಟು ೨)

ಆ) ಸ್ವರಗಳು

(ಸಂಸ್ಕೃತದಿಂದ): ಋ, ೠ, ಊ (ಒಟ್ಟು ೨)

ಇ) ಐ, ಔ (ಸಂಧ್ಯಕ್ಷರ, ಸಂಸ್ಕೃತದಿಂದ; ಒಟ್ಟು ೨)

ಈ) ಅಂ, ಅಃ (ಅನುಸ್ವಾರ ಮತ್ತು ವಿಸರ್ಗ; ಒಟ್ಟು ೨)

ಎ) ಕ್ಷ, ಜ್ಞ (ಸಂಯುಕ್ತಾಕ್ಷರಗಳು, ಸಂಸ್ಕೃತದಿಂದ; ಒಟ್ಟು ೨)

**ಕನ್ನಡದ್ದೇ ಆದ ವಿಶಿಷ್ಟ ಧ್ವನಿಮಾಗಳು**

ಅಚ್ಚಗನ್ನಡದ ನೆಲೆಯಲ್ಲಿ ತೀರಾ ಆವಶ್ಯಕವೆನ್ನಿಸುವ, ಅಂದರೆ ಅನ್ಯಭಾಷೆಯಿಂದ ಸ್ವೀಕೃತ ಪದಗಳ ಮೂಲಕ ಬಂದಿರುವ ಹಾಗೂ ಕನ್ನಡದ ಪ್ರಾದೇಶಿಕ ಉಪಭಾಷೆಗಳ ವಿಶಿಷ್ಟ ಧ್ವನಿಮಾಗಳನ್ನು ಹೊರತುಪಡಿಸಿ, ಧ್ವನಿಮಾಗಳನ್ನು ಕೆಳಗೆ ಕೊಡಲಾಗಿದೆ.

೧. ವ್ಯಂಜನಗಳು

ಅ) ಕ್, ಗ್, ಚ್, ಜ್, ಟ್, ಡ್, ತ್, ದ್, ಪ್, ಬ್ (ಒಟ್ಟು ೧೦)

ಆ) ಯ್, ರ್, ಲ್, ವ್, ಸ್, ಹ್, ಳ್ (ಒಟ್ಟು ೭)

ಇ) ಣ್, ನ್, ಮ್ (ಒಟ್ಟು ೩)

೨. ಸ್ವರಗಳು

ಅ) ಹ್ರಸ್ವ: ಅ, ಇ, ಉ, ಎ, ಒ (ಒಟ್ಟು ೫)

ಆ) ದೀರ್ಘ: ಆ, ಈ, ಊ, ಏ, ಓ (ಒಟ್ಟು ೫)

ಅಲ್ಲದೆ ಕನ್ನಡದಲ್ಲಿ ಪಾರಸಿ ಮತ್ತು ಇಂಗ್ಲಿಷಿನಿಂದ ಬಂದಿರುವ ಪದಗಳಲ್ಲಿರುವ ಫ಼್, ಉದಾ., ಕಾಫ಼ಿ; ಜ಼್, ಉದಾ., ಜ಼ರಾಕ್ಸ್ ಮುಂತಾದ ಸ್ವೀಕೃತ ಪದಗಳ ಉಚ್ಚಾರಣೆಗೆ ಸೂಕ್ತ ಧ್ವನಿಮಾಗಳನ್ನು ಕಲ್ಪಿಸುವ ಅವಶ್ಯಕತೆ ಇದೆ.

### ೧.೬.೫. ಆಕೃತಿಮಾ ರಚನೆ

ಈ ಮೇಲೆ ವಿವರಿಸಿದ ಧ್ವನಿಮಾಗಳು ಸ್ವತಂತ್ರ ರೂಪದಲ್ಲಿ ಅಂದರೆ ಅ, ಇ, ಕ್, ಗ, ಚ್, ಲ್, ಮ್ ಮುಂತಾದ ರೂಪಗಳಲ್ಲಿ ಸ್ವತಂತ್ರವಾಗಿ ಇದ್ದಾಗ ಅವುಗಳಿಗೆ ಅರ್ಥಕೊಡುವ ಶಕ್ತಿ ಇರುವುದಿಲ್ಲ. ಆದರೆ ಈ ಧ್ವನಿಮಾಗಳು ಒಂದು ವ್ಯವಸ್ಥಿತ ರೂಪದಲ್ಲಿ ಒಟ್ಟುಗೂಡಿದಾಗ ಅವಕ್ಕೆ ಅರ್ಥಕೊಡುವ ಶಕ್ತಿ ಬರುತ್ತದೆ. ಉದಾಹರಣೆಗೆ, ಮೇಲೆ ಕೊಟ್ಟಿರುವ ಧ್ವನಿಮಾಗಳಲ್ಲಿ ಕೆಲವನ್ನು ಆಯ್ದುಕೊಂಡು ವ್ಯವಸ್ಥಿತವಾಗಿ ಸೇರಿಸಿದಾಗ ಅಂದರೆ 'ಕ್ + ಅ + ಮ್ + ಅ + ಲ್ + ಅ' ಎಂಬ ಕ್ರಮದಲ್ಲಿ ಜೋಡಿಸಿದರೆ ಅದು 'ಕಮಲ' ಎಂಬ ರೂಪವನ್ನು ನೀಡಿ ಅರ್ಥಬದ್ಧ ಪದವಾಗುತ್ತದೆ. ಈ ರೀತಿ ವಿವಿಧ ಧ್ವನಿಮಾಗಳು ಕ್ರಮಬದ್ಧವಾಗಿ ಕೂಡಿ ಅರ್ಥವನ್ನು ವ್ಯಕ್ತಪಡಿಸುವ ಕನಿಷ್ಠತಮ ಘಟಕಕ್ಕೆ ಭಾಷಾ ವಿಜ್ಞಾನಿಗಳು ಆಕೃತಿಮಾ (ಮಾರ್ಫೀಮ್) ಎಂದು ಕರೆದಿದ್ದಾರೆ. ಈ ರೀತಿ ಪದಗಳ ರಚನೆಯನ್ನು ಅಧ್ಯಯನ ಮಾಡುವ ವ್ಯಾಕರಣದ ಶಾಖೆಗೆ ಆಕೃತಿಮಾ ವಿಜ್ಞಾನ ಎಂದು ಕರೆಯಲಾಗುತ್ತದೆ.

### ೧.೬.೬. ಆಕೃತಿಮಾ ವಿಜ್ಞಾನ

ಯಾವುದೇ ಭಾಷೆಯ ಧ್ವನ್ಯಾತ್ಮಕ ಮತ್ತು ವಾಕ್ಯಾತ್ಮಕ ರಚನೆಗಳ ಸ್ಥರ ಆಕೃತಿಮಾ ವಿಜ್ಞಾನ. ಅಲ್ಲದೇ ವಾಕ್ಯರಚನಾ ವಿಜ್ಞಾನಕ್ಕೆ ನೇರವಾಗಿ ಸಂಬಂಧಿಸಿದೆ ಹಾಗೂ ನಿಕಟವಾದುದಾಗಿದೆ. ಪದಗಳ ರಚನೆಯ ಕ್ರಮ ಆಕೃತಿಮಾ ವಿಜ್ಞಾನ ಎನಿಸಿದರೆ ವಾಕ್ಯಗಳ ರಚನೆಯ ಕ್ರಮ ವಾಕ್ಯರಚನಾ ವಿಜ್ಞಾನ (ಸಿಂಟ್ಯಾಕ್ಸ್) ಎನಿಸಿಕೊಂಡಿದೆ. ಆಕೃತಿಮಾ ವಿಜ್ಞಾನವು ಪದಗಳಲ್ಲಿ ಆಕೃತಿಮಾಗಳು ಅಡಕಗೊಳ್ಳುವ ಬಗೆ ಮತ್ತು ಪದಗಳ ಆಂತರಿಕ ಸಾಧ್ಯತೆ ಹಾಗೂ ಮಿತಿಗಳ ರೂಪವನ್ನು ವಿವೇಚಿಸಿದರೆ ವಾಕ್ಯರಚನಾ ವಿಜ್ಞಾನವು ಈ ಪದಗಳು ವಾಕ್ಯಗಳಲ್ಲಿ ಅಡಕಗೊಳ್ಳುವ ಬಗೆ ಹಾಗೂ ಅವುಗಳ ನಡುವಣ ಪರಸ್ಪರ ಸಂಬಂಧವನ್ನು ಮತ್ತು ಅವುಗಳ ಸಾಧ್ಯತೆ ಹಾಗೂ ಸಾಧ್ಯವಿಲ್ಲದಿರುವಿಕೆಗಳನ್ನು ವಿವರಿಸುತ್ತದೆ. ಉದಾಹರಣೆಗೆ, ಬಹುವಚನ ಪ್ರತ್ಯಯಗಳು ರೂಪುಗೊಳ್ಳುವ ಬಗೆಯನ್ನು ಆಕೃತಿಮಾ ವಿಜ್ಞಾನ ಚರ್ಚಿಸಿದರೆ ಉಪಸರ್ಗೀಯ ಪದ ಪುಂಜಗಳಿಗೆ ಸಂಬಂಧಿಸಿದ ಜಿಜ್ಞಾಸೆ ವಾಕ್ಯರಚನಾ ವಿಜ್ಞಾನಕ್ಕೆ ಸೇರುತ್ತದೆ. ಹೀಗಾಗಿ ಆಕೃತಿಮಾಗಳು ಜೊತೆಯಾಗಿ ಪದಗಳಾಗುವ ಮತ್ತು ವಿಶ್ಲೇಷಿಸುವ ವಿಭಾಗವನ್ನು ಆಕೃತಿಮಾ ವಿಜ್ಞಾನ ಎಂದೂ, ಪದಗಳು ಜತೆಗೂಡಿ ಪದ ಪುಂಜಗಳಲ್ಲಿ ಮತ್ತು ವಾಕ್ಯಗಳಲ್ಲಿ ಜೋಡಣೆಯಾಗುವ ರೀತಿಯನ್ನು ವಿಶ್ಲೇಷಿಸುವ ವಿಭಾಗವನ್ನು ವಾಕ್ಯರಚನಾ ವಿಜ್ಞಾನ ಎಂತಲೂ ಭಾಷಾವಿಜ್ಞಾನದಲ್ಲಿ ಪರಿಗಣಿಸಲಾಗಿದೆ. ಕೆಲವು ವಿದ್ವಾಂಸರು ವ್ಯಾಕರಣ ಮತ್ತು ವಾಕ್ಯರಚನಾ ವಿಜ್ಞಾನಗಳೆರಡನ್ನೂ ಆಕೃತಿಮಾ ವಿಜ್ಞಾನದ ಭಾಗಗಳಾಗಿ ಪರಿಗಣಿಸುತ್ತಾರೆ. ಆದ್ದರಿಂದ ಯಾವುದೇ ಭಾಷೆಯ ಆಕೃತಿ ವಿಜ್ಞಾನವನ್ನು ಕುರಿತು ಮಾತನಾಡುವಾಗ ಆ ಭಾಷೆಯ ಧ್ವನಿಮಾ ವಿಜ್ಞಾನದ (ಫೋನಾಲಜಿ) ಪರಿಚಯ ವಿದೆಯೆಂದು ಭಾವಿಸಲಾಗುತ್ತದೆ.

### ೧.೬.೭. ಆಕೃತಿಮಾದ ಸ್ವರೂಪ ಮತ್ತು ಲಕ್ಷಣಗಳು

ಈಗ ಕೆಲವು ಆಕೃತಿಮಾಗಳನ್ನು ಬಿಡಿಸಲು ಪ್ರಯತ್ನಿಸೋಣ.

'ಬಸವ' ಎಂಬ ಶಬ್ದದಲ್ಲಿ ೬ ಧ್ವನಿಮಾಗಳಿವೆ. ಬ್ + ಅ + ಸ್ + ಅ + ವ್ + ಅ; ಇಲ್ಲಿ ೬ ಧ್ವನಿಮಾಗಳು ಸೇರಿ 'ಬಸವ' ಎಂಬ ಆಕೃತಿಮಾ ರೂಪುಗೊಂಡಿದೆ. ಇದು ಒಂದು ಪಾರಂಪರಿಕ ವ್ಯಾಕರಣದಲ್ಲಿ ಒಂದು 'ಪದ' ಎಂದಾಗುತ್ತದೆ.

ಅದೇ ರೀತಿ 'ಕನ್ನಡಮ್ಮ' ಎಂಬ ಶಬ್ದದಲ್ಲಿ ಕ್ + ಆ + ನ್ + ನ್ + ಅ + ಡ್ + ಅ + ಮ್ + ಮ್ + ಅ; ಇಲ್ಲಿ ೧೦ ಧ್ವನಿಮಾಗಳು ಸೇರಿ 'ಕನ್ನಡಮ್ಮ' ಎಂಬ ಆಕೃತಿಮಾ ಆಗಿದೆ.

ಹಾಗೇ 'ಭಾರತಮಾತೆ'ಯಲ್ಲಿ ಭ್ + ಆ + ರ್ + ಅ + ತ್ + ಅ + ಮ್ + ಆ + ತ್ + ಎ; ಇಲ್ಲಿ ಕೂಡ ೧೦ ಧ್ವನಿಮಾಗಳು ಸೇರಿ 'ಭಾರತಮಾತೆ' ಎಂಬ ಆಕೃತಿಮಾ ಆಗಿದೆ.

ಯಾವುದೇ ಆಕೃತಿಮಾ ರಚನೆಯಾಗಬೇಕಾದರೂ ಅದಕ್ಕೆ ಧ್ವನಿಮಾಗಳು ಬೇಕೇಬೇಕು. ಅಲ್ಲದೆ ಧ್ವನಿಮಾಗಳು ಸೇರಿ ಆಕೃತಿಮಾಗಳಾದಾಗ ಮಾತ್ರ ಭಾಷೆಯ ರಚನೆಯಲ್ಲಿ ಧ್ವನಿಮಾಗಳಿಗೆ ಮೌಲ್ಯ ಬರುತ್ತದೆ. ಈ ರೀತಿಯಲ್ಲಿ ಒಟ್ಟಾರೆ ಭಾಷಾ ಉಚ್ಚಾರಣೆಯಲ್ಲಿ ಧ್ವನಿ ಸಂಕೇತಗಳ ಮೊತ್ತ ಮತ್ತು ಅವುಗಳಿಗಿರುವ ಅರ್ಥಗಳು ಅನ್ಯೋನ್ಯ ಸಂಬಂಧವನ್ನು ಪಡೆದಿರುತ್ತವೆ. ಹೀಗಾಗಿ ಧ್ವನಿ ವ್ಯವಸ್ಥೆ ಮತ್ತು ಅರ್ಥ ವ್ಯವಸ್ಥೆಗಳು ವಾಸ್ತವವಾಗಿ ಒಂದುಗೂಡಿಯೇ ಇರಬೇಕಾಗುತ್ತದೆ. ಭಾರತೀಯ ವ್ಯಾಕರಣ ಪರಂಪರೆಯಲ್ಲಿ ಶಬ್ದ ಮತ್ತು ಅರ್ಥಗಳು ಹೇಗೆ ಒಂದರೊಡನೊಂದು ಬೆಸೆದುಕೊಂಡಿವೆ ಎಂದು ಈಗಾಗಲೇ ಪ್ರಸ್ತಾಪಿಸಲಾಗಿದೆ.

ಭಾಷಾವಿಜ್ಞಾನದಲ್ಲಿ ಅರ್ಥಗ್ರಾಹ್ಯವಾದ ಕನಿಷ್ಠತಮ ಘಟಕಕ್ಕೆ ಆಕೃತಿಮಾ ಎಂದು ಕರೆಯುವುದಲ್ಲದೆ ಭಾಷೆಯಲ್ಲಿ ಬಳಕೆಯಾಗುವ ಪ್ರತ್ಯಯಗಳನ್ನೂ ಆಕೃತಿಮಾಗಳೆಂದೇ ಕರೆಯಲಾಗಿದೆ. ಆದರೆ ಪ್ರತ್ಯಯಗಳಿಗೆ ಸ್ವತಂತ್ರವಾದ ಅಸ್ತಿತ್ವವಿಲ್ಲದಿರುವುದರಿಂದ ಅವುಗಳನ್ನು 'ಬದ್ಧ ಆಕೃತಿಮಾಗಳು' ಎಂದೂ (ಬೌಂಡ್ ಮಾರ್ಫೀಮ್ಸ್) ಮತ್ತು ಸ್ವತಂತ್ರವಾಗಿ ಬಳಕೆಯಾಗುವ ಆಕೃತಿಮಾಗಳಿಗೆ 'ಮುಕ್ತ ಆಕೃತಿಮಾಗಳು' (ಫ್ರೀ ಮಾರ್ಫೀಮ್ಸ್) ಎಂದೂ ಕರೆಯಲಾಗಿದೆ. ಬದ್ಧ ಆಕೃತಿಮಾಗಳಿಗೆ ಸ್ವತಂತ್ರ ಅಸ್ತಿತ್ವವಿರದ ಕಾರಣ ಅವು ಮುಕ್ತ ಆಕೃತಿಮಾಗಳೊಂದಿಗೆ ಸೇರಿ ಪದಗಳಾಗಿ ಒಪ್ಪಿಗೆ ಪಡೆಯುವ ರೂಪವನ್ನು ತಳೆಯುತ್ತವೆ. ಉದಾಹರಣೆಗೆ, 'ರಾಮ' ಎಂಬ ಮುಕ್ತ ಆಕೃತಿಮಾ ಜೊತೆಗೆ 'ಗೆ' ಎಂಬ ಬದ್ಧ ಆಕೃತಿಮಾ ಸೇರಿದಾಗ 'ರಾಮನಿಗೆ' ಎಂಬ ಹೊಸ ಅರ್ಥ ಬರುವ ಸಾಧಿತರೂಪ ಬರುತ್ತದೆ. ಈ ರೀತಿ ಧ್ವನಿಮಾ ಹಾಗೂ ಆಕೃತಿಮಾಗಳ ಅರ್ಥಪೂರ್ಣ ಜೋಡಣೆಯಿಂದ ಹೊಸ ಆಕೃತಿಮಾ ಹಾಗೂ ವಾಕ್ಯರಚನಾ ವಿನ್ಯಾಸಗಳು ರೂಪುಗೊಳ್ಳುತ್ತವೆ.

## ೧.೬.೮. ವಾಕ್ಯರಚನಾ ವಿಜ್ಞಾನ (ಸಿಂಟ್ಯಾಕ್ಸ್)

ಪದಗಳು ಮತ್ತು ಆಕೃತಿಮಾಗಳು ಜೊತೆಗೂಡಿ ಪದಪುಂಜ ಮತ್ತು ವಾಕ್ಯಗಳಾಗಿ ಮಾರ್ಪಡುತ್ತವೆ ಎಂಬುದನ್ನು ವಿಶ್ಲೇಷಣೆ ಮಾಡುವ ಘಟಕವನ್ನು ವಾಕ್ಯರಚನಾ ವಿಜ್ಞಾನ ಎಂದು ಕರೆಯುತ್ತಾರೆ. ಅರ್ಥ ಸಂಬಂಧವನ್ನು ತೋರ್ಪಡಿಸಲು ವಾಕ್ಯಗಳಲ್ಲಿ ಪದಗಳು ವಿನ್ಯಾಸಗೊಂಡಿರುವ ಬಗೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವುದು ಇದರ ಉದ್ದೇಶ. ವಾಕ್ಯರಚನಾ ವಿಜ್ಞಾನವು ಭಾಷೆಯ ಪದಗಳ ವಿನ್ಯಾಸ ಕ್ರಮ, ವ್ಯಾಕರಣ ಘಟಕಗಳ ಸೂಕ್ತ ಸಂಬಂಧ, ವ್ಯಾಕರಣಾಂಶಗಳ ಅನುಕ್ರಮ, ಭಾಷೆಯ ಒಳಗಿನ ವೈವಿಧ್ಯತೆ ಹಾಗೂ ಅಂತರಭಾಷಿಕ ವೈವಿಧ್ಯತೆ ಮತ್ತು ರೂಪ ಹಾಗೂ ಅರ್ಥಗಳನ್ನು ಅನುಲಕ್ಷಿಸುತ್ತದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಇದನ್ನು ವಾಕ್ಯಗಳ ವ್ಯಾಕರಣ ಎಂದೇ

ಕರೆಯಬಹುದು. ವಾಕ್ಯಗಳು ಮತ್ತು ಅವುಗಳ ಒಳರಚನೆಯನ್ನು ವಿವರಿಸಿ ತೋರಿಸುವುದು ಇದರ ಕೆಲಸ. ವಾಕ್ಯರಚನಾ ವಿಜ್ಞಾನವನ್ನು ಅಧ್ಯಯನ ಮಾಡಲು ವಿವಿಧ ತಾತ್ವಿಕ ನೆಲೆಗಟ್ಟುಗಳಿವೆ. ಅವುಗಳಲ್ಲಿ ಒಂದು ಭಾಷಿಕ ಜ್ಞಾನವು ಮಾನವನ ಮೆದುಳಿಗೆ ಸಂಬಂಧಿಸಿರುವ ಚಟುವಟಿಕೆಯಾದ್ದರಿಂದ ಅದನ್ನು ಜೀವ ವಿಜ್ಞಾನದ ಭಾಗವಾಗಿ ಅಧ್ಯಯನ ಮಾಡಬೇಕು ಎಂದು ಹೇಳುವ ಪಂಥವಾದರೆ, ಇನ್ನೊಂದು ಪಂಥ ಭಾಷೆಯ ಅಧ್ಯಯನ ಅಗೋಚರವಾದ ರೂಪನಿಷ್ಠ ವ್ಯವಸ್ಥೆಯ ಅಧ್ಯಯನವಾದುದರಿಂದ ಅದನ್ನು ರಾಚನಿಕವಾದದ ಭಾಗವಾಗಿ ನೋಡಬೇಕು ಎನ್ನುತ್ತದೆ. ಇದಲ್ಲದೆ ವರ್ಗೀಕರಣ ಮತ್ತು ಟೈಪಾಲಜಿಯ ಮೂಲಕ ಸಾಧಿಸಬಲ್ಲ ವಿಶ್ವಾತ್ಮಕ ವ್ಯಾಕರಣವಾಗಿ ಭಾಷೆಯನ್ನು ನೋಡಬೇಕು ಎಂದು ಹೇಳುವ ಪಂಥವೂ ಇದೆ.

### ೧.೬.೯. ಅರ್ಥರಚನಾ ವಿಜ್ಞಾನ (ಸಿಮ್ಯಾಂಟಿಕ್ಸ್)

ಭಾಷಾವಿಜ್ಞಾನದಲ್ಲಿ ಅರ್ಥರಚನಾ ವಿಜ್ಞಾನವು ಹೆಸರೇ ಸೂಚಿಸುವಂತೆ ಅರ್ಥಕ್ಕೆ ಸಂಬಂಧಿಸಿದುದಾಗಿದೆ. ಅದು ಪದ, ಪದಪುಂಜ, ವಾಕ್ಯ ಮತ್ತು ಸಂಕಥನದ ಹಂತಗಳಲ್ಲಿ ಅರ್ಥ ಉತ್ಪತ್ತಿಯಾಗುವ ಬಗೆಯನ್ನು ವಿವರಿಸುತ್ತದೆ. ಇದರಲ್ಲಿ ಎರಡು ಹಂತಗಳಿವೆ. ಮೊದಲನೆಯ ಹಂತವು ಪದಗಳು ಜೊತೆಯಾಗಿ ಹಾಗೂ ಪರಸ್ಪರ ಪ್ರತಿಕ್ರಿಯೆಯನ್ನು ನೀಡಿ ವಾಕ್ಯದ ಅರ್ಥವನ್ನು ಉತ್ಪಾದಿಸುತ್ತವೆ ಎಂಬ ವಿವರಣೆಯನ್ನು ನೀಡಿದರೆ ಎರಡನೆಯದು ಪದಗಳ ಅರ್ಥದ ಸ್ವರೂಪಕ್ಕೆ ಸಂಬಂಧಿಸಿದ ವಿವರಣೆಯನ್ನು ನೀಡುತ್ತದೆ. ಮೊದಲನೆಯದು ವ್ಯಾಕರಣದ ಹಂತವಾದರೆ ಎರಡನೆಯದು ಶಬ್ದಕೋಶದ ಹಂತ ಎಂದು ಸ್ಥೂಲವಾಗಿ ಹೇಳಬಹುದು. ಇದಲ್ಲದೆ ಅರ್ಥೈಸುವ ಪ್ರಕ್ರಿಯೆಯಲ್ಲಿ ಸಂದರ್ಭ ಹಾಗೂ ಅದರ ಪರಿಣಾಮ, ಅಸ್ಪಷ್ಟ ಸಂದರ್ಭಗಳು, ಸಂದಿಗ್ಧತೆಗಳು, ಗೋಜಲು ಮತ್ತು ಪೂರ್ವಭಾವಿ ತಿಳುವಳಿಕೆಗಳನ್ನು ಕುರಿತಾದ ಚರ್ಚೆಯನ್ನೂ ವಾಕ್ಯರಚನಾ ವಿಜ್ಞಾನ ಮಾಡುತ್ತದೆ.

## ೧.೭. ಕನ್ನಡ ಪದವರ್ಗಗಳ ಸ್ಥೂಲ ಪರಿಚಯ

ಈ ಭಾಗದಲ್ಲಿ ಕನ್ನಡದ ಕೆಲವು ಪದವರ್ಗಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡಲಾಗಿದೆ. ಭಾಷೆಯ ವ್ಯಾಕರಣಾಂಶಗಳಾದ ಲಿಂಗ, ವಚನ, ಕಾಲ ಮುಂತಾದ ಪರಿಕಲ್ಪನೆಗಳನ್ನು ಸೂಚಿಸಲು ಹಲವಾರು ಪದವರ್ಗಗಳು ಭಾರತೀಯ ವ್ಯಾಕರಣ ಪರಂಪರೆಯಲ್ಲಿ ರೂಢಿಯಲ್ಲಿವೆ. ವ್ಯಾಕರಣಾಂಶಗಳನ್ನು ಸೂಚಿಸುವ ಈ ಪದವರ್ಗಗಳು ಜಗತ್ತಿನ ವ್ಯಾಕರಣ ಪರಿಕಲ್ಪನೆಗಳಲ್ಲೇ ಅತ್ಯಂತ ಪುರಾತನ ಪರಿಕಲ್ಪನೆಗಳು. ಲಿಂಗ, ವಚನ, ವಿಭಕ್ತಿ, ಪುರುಷ, ಕಾಲ ಮತ್ತು ಕ್ರಿಯಾರ್ಥ ಮುಂತಾದವು ಕನ್ನಡ ವ್ಯಾಕರಣದ ಪದವರ್ಗಗಳಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದ್ದು ಅವುಗಳನ್ನು ಇಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ. ಕನ್ನಡದ ವರ್ಣಮಾಲೆಯ ಬಗ್ಗೆ ಈಗಾಗಲೇ ವಿಷದವಾಗಿ ಚರ್ಚಿಸಲಾಗಿದೆ.

### ೧.೭.೧. ಲಿಂಗ

ಭಾಷೆಯಲ್ಲಿ ಪದಗಳ ಅರ್ಥವನ್ನು ಆಧಾರವಾಗಿಟ್ಟುಕೊಂಡು ಅವುಗಳ ಲಿಂಗವ್ಯವಸ್ಥೆಯನ್ನು ಗುರುತಿಸುವುದು ರೂಢಿ. ಪುರುಷ ವರ್ಗವನ್ನು ಸೂಚಿಸುವುದು ಪುಲ್ಲಿಂಗ (ತಂದೆ / ಅಪ್ಪ, ಮಗ, ಹುಡುಗ); ಸ್ತ್ರೀವರ್ಗವನ್ನು ಸೂಚಿಸುವುದು ಸ್ತ್ರೀಲಿಂಗ (ತಾಯಿ / ಅಮ್ಮ, ಮಗಳು, ಹುಡುಗಿ). ನಿರ್ಜೀವ ವರ್ಗವನ್ನು ಸೂಚಿಸುವುದು ನಪುಂಸಕ ಲಿಂಗ (ಪುಸ್ತಕ, ಮನೆ, ಹೂವು). ಈ ರೀತಿಯ ಲಿಂಗಸೂಚಕ ಪದಗಳಿಗೂ ಲಿಂಗ ವ್ಯವಸ್ಥೆಗೂ ಯಾವಾಗಲೂ ನಿಯತವಾದ ಸಂಬಂಧ ಇರಲೇಬೇಕೆಂದೇನೂ ಇಲ್ಲ. ಸಾಮಾನ್ಯವಾಗಿ ಒಂದು ನಿರ್ದಿಷ್ಟ ಭಾಷಾಕುಟುಂಬ ಒಂದು ಬಗೆಯ ಲಿಂಗ ವ್ಯವಸ್ಥೆಯನ್ನು ಹೊಂದಿರುತ್ತದೆ. ದ್ರಾವಿಡ ಭಾಷಾಕುಟುಂಬ ಮಹತ್ (ಮಾನುಷ) ಮತ್ತು ಅಮಹತ್ (ಮಾನುಷೇತರ) ಎಂಬ ಎರಡು ವರ್ಗಗಳನ್ನು ಹೊಂದಿದ್ದು, ಮಹತ್ ವರ್ಗದಲ್ಲಿ ಪುಲ್ಲಿಂಗ ಮತ್ತು ಸ್ತ್ರೀಲಿಂಗಗಳು ಅಡಕವಾಗಿರುತ್ತವೆ ಹಾಗೂ ಅಮಹತ್ ವರ್ಗದಲ್ಲಿ ನಪುಂಸಕಲಿಂಗ ಅಡಕವಾಗಿರುತ್ತದೆ ಎಂದು ಭಾಷಾವಿಜ್ಞಾನಿಗಳು ತೋರಿಸಿದ್ದಾರೆ. ಇದಲ್ಲದೆ ಪದದ ಸ್ವರೂಪದ ಆಧಾರದ ಮೇಲೆ ಲಿಂಗ ವಿವಕ್ಷೆ ಮಾಡುವ ಭಾಷಾಕುಟುಂಬಗಳಿವೆ. ಇಂಡೋ–ಯೂರೋಪಿಯನ್ ಭಾಷಾಕುಟುಂಬಕ್ಕೆ ಸೇರಿದ ಸಂಸ್ಕೃತದಲ್ಲಿ ಪದರಚನೆಯ ರೀತಿ ಲಿಂಗವಿವಕ್ಷೆಯ ಆಧಾರವಾಗುತ್ತದೆ. ಉದಾಹರಣೆಗೆ, 'ಹೆಂಡತಿ' ಎಂಬ ಅರ್ಥವಿರುವ ಮೂರು ಭಿನ್ನ ಸಂಸ್ಕೃತ ಪದಗಳಾದ 'ಧಾರಾ', 'ಪತ್ನಿ' ಹಾಗೂ 'ಕಳತ್ರ' ಎಂಬ ಪದಗಳು ಕ್ರಮವಾಗಿ ಪುಲ್ಲಿಂಗ, ಸ್ತ್ರೀಲಿಂಗ ಹಾಗೂ ನಪುಂಸಕಲಿಂಗಗಳೆಂದು ಪರಿಗಣಿತವಾಗುತ್ತವೆ. ಕನ್ನಡದಲ್ಲಿಯೂ ಒಂಬತ್ತು ಬಗೆಯ ಲಿಂಗವ್ಯವಸ್ಥೆ ಇದೆ ಎಂದು ಕೇಶಿರಾಜ ಹೇಳುತ್ತಾನೆ.

### ೧.೭.೨. ವಚನ

ವ್ಯಕ್ತಿಗಳ ಹಾಗೂ ವಸ್ತುಗಳ ಸಂಖ್ಯೆಯನ್ನು ಸೂಚಿಸುವುದು ವಚನ ವ್ಯವಸ್ಥೆ. ಭಾಷೆಯಲ್ಲಿ ನಾಮಪದಗಳು, ವಿಶೇಷಣಗಳು ಮತ್ತು ಸರ್ವನಾಮಗಳು ಈ ವ್ಯವಸ್ಥೆಯನ್ನು ಪ್ರತಿನಿಧಿಸುತ್ತವೆ. ವಚನ ವ್ಯವಸ್ಥೆ ಎಲ್ಲ ಭಾಷೆಗಳಲ್ಲಿಯೂ ಒಂದೇ ರೀತಿಯಾಗಿರುವುದಿಲ್ಲ. ಕನ್ನಡದಲ್ಲಿ ಒಬ್ಬ ವ್ಯಕ್ತಿಯನ್ನು, ಒಂದು ವಸ್ತುವನ್ನು ಸೂಚಿಸಲು (ಉದಾ., ರಾಮ, ಮರ) ಏಕವಚನವನ್ನೂ ಇಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಹಾಗೂ ಎರಡಕ್ಕಿಂತ ಹೆಚ್ಚು ವಸ್ತುಗಳನ್ನು (ಉದಾ., ಜನರು, ಮರಗಳು) ಸೂಚಿಸಲು ಬಹುವಚನವನ್ನು ಬಳಸಲಾಗುತ್ತದೆ. ಇದೇ ರೀತಿಯಲ್ಲಿ ವಿಶೇಷಣಗಳು ಹಾಗೂ ಸರ್ವನಾಮಗಳು ವಚನಸೂಚಕ ಪ್ರತ್ಯಯಗಳನ್ನು ಉಪಯೋಗಿಸುವ ಮೂಲಕ ವಚನ ವಿವಕ್ಷೆಯನ್ನು ಮಾಡುತ್ತವೆ. ಸಂಸ್ಕೃತ, ಗ್ರೀಕ್, ಲ್ಯಾಟಿನ್ ಮುಂತಾದ ಭಾಷೆಗಳಲ್ಲಿ ಏಕವಚನ ಮತ್ತು ಬಹುವಚನಗಳ ಜೊತೆಗೆ ಇಬ್ಬರು ವ್ಯಕ್ತಿಗಳು ಅಥವಾ ಎರಡು ವಸ್ತುಗಳನ್ನು ಸೂಚಿಸಲು ದ್ವಿವಚನ ಎಂಬ ವರ್ಗವೂ ಇದೆ. ಕನ್ನಡದಲ್ಲಿ –ಗಳು ಎಂಬ ನಪುಂಸಕಲಿಂಗ ಬಹುವಚನ ಪ್ರತ್ಯಯವಾಗಿ ಕೆಲವು ಬಾರಿ ಪುಲ್ಲಿಂಗ ಅಥವಾ ಸ್ತ್ರೀಲಿಂಗದೊಡನೆ (ಉದಾ., ಗುರುಗಳು, ಮಂತ್ರಿಗಳು) ಬರುತ್ತದೆ. ಹಾಗೆಯೇ ಏಕವಚನಕ್ಕೆ ಬದಲಾಗಿ ಬಹುವಚನದ ಬಳಕೆ ಗೌರವ ಸೂಚಕವಾಗಿ (ಉದಾ., ಪ್ರಭುಗಳು, ಸ್ವಾಮಿಗಳು) ಬರುವುದುಂಟು. ಇದನ್ನು ಗೌರವಾರ್ಥಕ ಬಹುವಚನ ಎಂದು ಕರೆಯಲಾಗುತ್ತದೆ.

## ೧.೭.೩. ವಿಭಕ್ತಿ

ವಾಕ್ಯಗಳಲ್ಲಿ ನಾಮಪದ / ಸರ್ವನಾಮ, ಕ್ರಿಯಾಪದ ಮತ್ತು ಅವ್ಯಯ ಎಂಬ ಮೂರು ವರ್ಗಗಳಿರುವುದು ಕಂಡುಬರುತ್ತದೆ. ಇವುಗಳ ಸಂಬಂಧವನ್ನು ನಿರ್ದೇಶಿಸುವ ರೂಪಗಳನ್ನು ವಿಭಕ್ತಿ ಪ್ರತ್ಯಯಗಳೆಂದು ಗುರುತಿಸಲಾಗಿದೆ. ಇವುಗಳಲ್ಲಿ ನಾಮಪದದ ಮೂಲರೂಪವಾದ ನಾಮಕ್ಕೆ ವಿಭಕ್ತಿ ಪ್ರತ್ಯಯವೂ, ಕ್ರಿಯಾಪದದ ಮೂಲರೂಪವಾದ ಧಾತುವಿಗೆ ಕ್ರಿಯಾ ವಿಭಕ್ತಿ ಪ್ರತ್ಯಯವೂ ಸೇರುತ್ತದೆ. ಅವ್ಯಯಗಳಿಗೆ ಪ್ರತ್ಯಯಗಳು ಇರುವುದಿಲ್ಲ. ಪ್ರತಿಯೊಂದು ವಿಭಕ್ತಿಗೂ ಒಂದು ನಿರ್ದಿಷ್ಟ ಕಾರಕಾರ್ಥವಿದ್ದು ಈ ಕಾರಕಾರ್ಥಗಳಿಗೆ ಅನುಗುಣವಾಗಿ ವಿಭಕ್ತಿ ಪ್ರತ್ಯಯಗಳು ರೂಪುಗೊಂಡಿವೆ. ಕನ್ನಡದಲ್ಲಿ ಏಳು ಬಗೆಯ ವಿಭಕ್ತಿ ಪ್ರತ್ಯಯಗಳಿವೆ ಎಂದು ಗುರುತಿಸಲಾಗುತ್ತದೆ. ಸಂಸ್ಕೃತದಲ್ಲಿ ಅವು ಎಂಟು ಬಗೆ. ಕನ್ನಡದಲ್ಲಿ ನಾಮಪ್ರಕೃತಿಯು ಸ್ವತಂತ್ರವಾಗಿ ಬಳಕೆಯಾಗುವುದರಿಂದ ಪ್ರಥಮಾವಿಭಕ್ತಿ ಪ್ರತ್ಯಯ ಇಲ್ಲ ಎಂದು ಹೇಳಲಾಗಿದೆ. ಹಾಗೆಯೇ ತೃತೀಯಾ ವಿಭಕ್ತಿಯ ಪ್ರತ್ಯಯವೇ ಪಂಚಮೀ ವಿಭಕ್ತಿಯ ಅಪಾದಾನಕಾರಕ ಸಂಬಂಧವನ್ನು ಸೂಚಿಸುವುದರಿಂದ ಪಂಚಮೀ ವಿಭಕ್ತಿ ಪ್ರತ್ಯಯ ಇಲ್ಲ ಎಂಬ ಅಭಿಪ್ರಾಯವೂ ಇದೆ. ಆದರೆ ಯಾವುದೇ ಕ್ರಿಯೆಗೆ ಸಾಧನವಾಗಿರುವುದನ್ನು ಸೂಚಿಸುವಾಗ ಬರುವ –ಇಂದ ತೃತೀಯಾ ವಿಭಕ್ತಿ ಎಂದೂ

| ಸಂಖ್ಯೆ | ವಿಭಕ್ತಿ | ಅರ್ಥ (ಕಾರಾಕಾರ್ಥ) | ಹೊಸಗನ್ನಡ ಪ್ರತ್ಯಯ | ಹಳಗನ್ನಡ ಪ್ರತ್ಯಯ |
|---|---|---|---|---|
| ೧ | ಪ್ರಥಮ | ಕರ್ತೃರ್ಥ (ಕೆಲಸ ಮಾಡುವ ನಾಮಪದ) | –ಉ | –ಮ್ |
| ೨ | ದ್ವಿತೀಯಾ | ಕರ್ಮಾರ್ಥ/ ಕೆಲಸವು ಈ ನಾಮಪದದ ಮೇಲೆ ನಡೆಯುವುದು | –ಅನ್ನು | –ಅಂ |
| ೩ | ತೃತಿಯಾ | ಕರಣಾರ್ಥ (ಸಾಧನಾರ್ಥ) / ಕೆಲಸಕ್ಕೆ ಕಾರಣ | –ಇಂದ | –ಇಂ, –ಇಂದಂ, –ಇಂದೆ, –ಎ |
| ೪ | ಚತುರ್ಥೀ | ಸಂಪ್ರದಾನ (ಕೊಡುವಿಕೆ) / ತಲುಪುವ ಜಾಗ | –ಗೆ, –ಇಗೆ, –ಕ್ಕೆ, –ಅಕ್ಕೆ | –ಗೆ, –ಕೆ, –ಕ್ಕೆ |
| ೫ | ಪಂಚಮೀ | ಅಪಾದಾನ (ಅಗಲಿಕೆ) / ಪ್ರೇರಣೆ | –ಇಂದ | –ಅತ್ತಣಿಂ, –ಅತ್ತಣಿಂದಂ, –ಅತ್ತಣಿಂದೆ |
| ೬ | ಷಷ್ಠೀ | ಸಂಬಂಧ / ನಂಟು / ಬೆಸುಗೆ | –ಅ | –ಅ |
| ೭ | ಸಪ್ತಮೀ | ಅಧಿಕರಣ / ಜಾಗ | –ಅಲ್ಲಿ, –ಒಳು, –ಆಗೆ | –ಒಳ್ |

ಪಟ್ಟಿಕೆ ೩: ಕನ್ನಡದ ವಿಭಕ್ತಿಗಳು, ಅವುಗಳ ಕಾರಕಾರ್ಥ ಮತ್ತು ಹೊಸಗನ್ನಡ ಹಾಗೂ ಹಳಗನ್ನಡ ಪ್ರತ್ಯಯಗಳು

ಅಗಲಿಕೆ ಅಥವಾ ದೂರ ಇರುವಿಕೆಯನ್ನು ಸೂಚಿಸುವಾಗ ಬರುವ –ಇಂದ ಪಂಚಮೀ ವಿಭಕ್ತಿ ಎಂದೂ ಪರಿಗಣಿತವಾಗುತ್ತದೆ. ಉಳಿದಂತೆ ದ್ವಿತೀಯಾ ವಿಭಕ್ತಿಗೆ –ಅನ್ನು; ಚತುರ್ಥೀ ವಿಭಕ್ತಿಗೆ –ಗೆ, –ಇಗೆ, –ಕ್ಕೆ ಮತ್ತು –ಅಕ್ಕೆ; ಷಷ್ಠೀ ವಿಭಕ್ತಿಗೆ –ಅ; ಸಪ್ತಮೀ ವಿಭಕ್ತಿಗೆ –ಅಲ್ಲಿ ಮತ್ತು –ಒಳು; ಹಾಗೂ ಸಂಬೋಧನಾ ವಿಭಕ್ತಿಗೆ –ಏ ಎಂಬ ವಿಭಕ್ತಿ ಪ್ರತ್ಯಯಗಳಿವೆ. ಇವುಗಳ ಜೊತೆಗೆ ಸಹವಿಭಕ್ತಿಗೆ ಒಟ್ಟಿಗೆ, ಕೂಡ, ಜೊತೆ, ಸಹ ಮತ್ತು ತೌಲನಿಕ ವಿಭಕ್ತಿಗೆ –ಆಗಿ ಮತ್ತು –ಓಸ್ಕರ ಸೇರ್ಪಡೆಯಾಗಬೇಕೆಂಬ ವಾದವೂ ಇದೆ. ಅಲ್ಲದೆ ಕನ್ನಡದ ಬಳಕೆಯಲ್ಲಿ ವಿಭಕ್ತಿ ಪ್ರತ್ಯಯಗಳ ಬಳಕೆ ಲೋಪವಾಗಬಹುದು. ಪಟ್ಟಿಕೆ ೩ರಲ್ಲಿ ಕನ್ನಡದ ವಿಭಕ್ತಿಗಳು, ಅವುಗಳ ಕಾರಕಾರ್ಥ ಮತ್ತು ಹೊಸಗನ್ನಡ ಹಾಗೂ ಹಳಗನ್ನಡ ಪ್ರತ್ಯಯಗಳನ್ನು ಕೊಡಲಾಗಿದೆ.

### ೧.೭.೪. ಪುರುಷ

ವ್ಯಕ್ತಿಯನ್ನು ನಿರ್ದೇಶಿಸುವ ಪದಗಳನ್ನು ವ್ಯಕ್ತಿ ವಾಚಕಗಳು ಅಥವಾ ಪುರುಷ ವಾಚಕಗಳು ಎಂದು ಕರೆಯಲಾಗುತ್ತದೆ. ಇವುಗಳಲ್ಲಿ ಮುಖ್ಯವಾಗಿ ಮೂರು ಬಗೆಗಳಿವೆ. ಉತ್ತಮ ಪುರುಷ (ಮಾತಾಡುವ ವ್ಯಕ್ತಿಯನ್ನು ನಿರ್ದೇಶಿಸುವಂಥದು), ಮಧ್ಯಮ ಪುರುಷ (ಕೇಳುವ ವ್ಯಕ್ತಿಯನ್ನು ನಿರ್ದೇಶಿಸುವಂಥದು), ಪ್ರಥಮ ಪುರುಷ (ನಿರ್ದಿಷ್ಟ ವ್ಯಕ್ತಿ ಅಥವಾ ವಸ್ತುವನ್ನು ಸೂಚಿಸುವಂಥದು) ಕನ್ನಡದ ಉತ್ತಮ ಪುರುಷದಲ್ಲಿ ನಾನು (ಏಕವಚನ) ಮತ್ತು ನಾವು (ಬಹುವಚನ); ಮಧ್ಯಮ ಪುರುಷದಲ್ಲಿ ನೀನು (ಏಕವಚನ) ಮತ್ತು ನೀವು (ಬಹುವಚನ) ಬಳಕೆಯಾಗುತ್ತವೆ. ಪ್ರಥಮ ಪುರುಷದಲ್ಲಿ ಅವನು (ಏಕವಚನ ಪುಲ್ಲಿಂಗ), ಅವಳು (ಏಕವಚನ ಸ್ತ್ರೀಲಿಂಗ), ಅದು (ಏಕವಚನ ನಪುಂಸಕಲಿಂಗ), ಅವರು(ಬಹುವಚನ ಪುಲ್ಲಿಂಗ ಮತ್ತು ಸ್ತ್ರೀಲಿಂಗ), ಅವು (ಬಹುವಚನ ನಪುಂಸಕಲಿಂಗ), ಇವನು (ಏಕವಚನ ಪುಲ್ಲಿಂಗ), ಇವಳು(ಏಕವಚನ ಸ್ತ್ರೀಲಿಂಗ), ಇದು (ಏಕವಚನ ನಪುಂಸಕಲಿಂಗ), ಇವರು (ಬಹುವಚನ ಪುಲ್ಲಿಂಗ ಮತ್ತು ಸ್ತ್ರೀಲಿಂಗ) ಮತ್ತು ಇವು (ಬಹುವಚನ ನಪುಂಸಕಲಿಂಗ) ಎಂಬ ರೂಪಗಳು ಬಳಕೆಯಾಗುತ್ತವೆ. ಅಲ್ಲದೆ ಉತ್ತಮ ಮತ್ತು ಮಧ್ಯಮ ಪುರುಷ ವಾಚಕಗಳಲ್ಲಿ ವಚನಭೇದ ಇದೆ; ಆದರೆ ಲಿಂಗಭೇದ ಇಲ್ಲ. ಪ್ರಥಮ ಪುರುಷ ವಾಚಕಗಳಲ್ಲಿ ಲಿಂಗ ಮತ್ತು ವಚನಗಳ ಭೇದವಿದೆ. ಪ್ರಥಮ ಪುರುಷ ವಾಚಕ ಸರ್ವನಾಮಗಳನ್ನು ಮತ್ತೆ ದೂರವರ್ತಿ (ಅವನು, ಅವಳು, ಅದು, ಅವರು) ಮತ್ತು ಸಮೀಪವರ್ತಿ (ಇವನು, ಇವಳು, ಇದು, ಇವರು) ಎಂದು ವರ್ಗೀಕರಿಸಲಾಗಿದೆ.

### ೧.೭.೫. ಕಾಲ

ಕರ್ತೃವಿನ ಕ್ರಿಯೆ ನಡೆಯುವ ಕಾಲ ಅಥವಾ ಸಮಯವನ್ನು ಭಾಷೆಯಲ್ಲಿ ಸೂಚಿಸುವ ವಿಧಾನವನ್ನು ಕಾಲವ್ಯವಸ್ಥೆ ಎಂದು ಕರೆಯಲಾಗುತ್ತದೆ. ಕ್ರಿಯೆಯ ಕಾಲವನ್ನು ಕಾಲಸೂಚಕ ಪ್ರತ್ಯಯಗಳು ನಿರ್ದೇಶಿಸುತ್ತವೆ. ಭೂತಕಾಲ, ವರ್ತಮಾನಕಾಲ, ಭವಿಷ್ಯತ್ ಕಾಲಗಳು ಕ್ರಮವಾಗಿ ಹಿಂದೆ ನಡೆದ, ಈಗ ನಡೆಯುತ್ತಿರುವ ಮತ್ತು ಮುಂದೆ ನಡೆಯಬಹುದಾದ ಕಾಲವನ್ನು ಸೂಚಿಸುತ್ತವೆ. ಈ ಬಗೆಯ ಮೂರು ಕಾಲಗಳ ವ್ಯವಸ್ಥೆ ಬಹುತೇಕ ಭಾಷೆಗಳಲ್ಲಿ

ಕಂಡುಬರುತ್ತದೆ. ಕನ್ನಡದಲ್ಲಿ ಭೂತಕಾಲವನ್ನು ಸೂಚಿಸಲು –ದ್–, ಇದ್–, –ತ್, –ಟ್, –ಕ್, ಪ್ರತ್ಯಯಗಳನ್ನೂ ವರ್ತಮಾನ ಕಾಲವನ್ನು ಸೂಚಿಸಲು –ತ್ತ್–, ಉತ್ತ್–, ಪ್ರತ್ಯಯಗಳನ್ನು ಹಾಗೂ ಭವಿಷ್ಯತ್ ಕಾಲವನ್ನು ಸೂಚಿಸಲು –ವ್– ಪ್ರತ್ಯಯವನ್ನೂ ಬಳಸಲಾಗುತ್ತದೆ. ಕೆಲವು ವಿದ್ವಾಂಸರ ಪ್ರಕಾರ ಕನ್ನಡದಲ್ಲಿ ವಾಸ್ತವವಾಗಿ ಭೂತಕಾಲ ಹಾಗೂ ಅಭೂತಕಾಲ ಎಂಬ ಎರಡು ಬಗೆಯ ಕಾಲಗಳು ಮಾತ್ರ ಇವೆ. ಉದಾಹರಣೆಗೆ, 'ನಾನು ಬಂದೆ' ಎನ್ನುವುದು ಭೂತಕಾಲವಾದರೆ 'ನಾನು ಈಗ ಬರುತ್ತೇನೆ' ಹಾಗೂ 'ನಾನು ನಾಳೆ ಬರುತ್ತೇನೆ' ಎಂಬ ವರ್ತಮಾನ ಹಾಗೂ ಭವಿಷ್ಯತ್ ಕಾಲದ ರೂಪಗಳಲ್ಲಿ ಕ್ರಿಯಾಪದದ ಪ್ರತ್ಯಯ ಒಂದೇ ಆಗಿದೆ. ಹೀಗಾಗಿ ಕನ್ನಡದಲ್ಲಿ ಭೂತ ಮತ್ತು ಅಭೂತ ಎಂಬ ಎರಡು ಕಾಲಗಳಷ್ಟೇ ಇದೆ ಎಂಬ ಅಭಿಪ್ರಾಯವಿದೆ. ಹಾಗೆಯೇ ವರ್ತಮಾನ, ಭೂತ, ಭವಿಷ್ಯತ್ ಕಾಲಗಳ ಒಳಗೇ ಉಪಬೇಧಗಳನ್ನು ಕಲ್ಪಿಸುವ ವಾಡಿಕೆಯೂ ಇದೆ.

### ೧.೭.೬. ಕ್ರಿಯಾರ್ಥ

ಭಾಷೆಯನ್ನಾಡುವ ವ್ಯಕ್ತಿಯ ಮಾನಸಿಕ ಸ್ಥಿತಿಯನ್ನು ಕ್ರಿಯೆಯ ಯಾವ ರೂಪ ನಿರ್ದೇಶಿಸುತ್ತದೆಯೋ ಅದೇ ಕ್ರಿಯಾರ್ಥ ಎಂದು ಕರೆಯಲಾಗುತ್ತದೆ. ಕ್ರಿಯಾರ್ಥದಲ್ಲಿ ನಾನಾ ಬಗೆಗಳಿವೆ. 'ಅವನು ಕುಡಿದ' ಎಂಬ ವಾಕ್ಯದಲ್ಲಿ ಸಂಭಾವ್ಯಾರ್ಥ ಇದೆ. '(ಪ್ರಾಯಶಃ) ಅವನು ಬರಲಾರ' ಎಂಬ ವಾಕ್ಯವು ಸಂದೇಹಾರ್ಥವನ್ನು ಧ್ವನಿಸುತ್ತವೆ. 'ಈಗ ನೀವು ಇಲ್ಲಿಂದ ಹೋಗಿ' ಎಂಬ ವಾಕ್ಯದಲ್ಲಿ ಆಜ್ಞಾರ್ಥವಿದೆ. 'ಅವನು ಸುದ್ದಿಯನ್ನು ಸರಿಯಾಗಿ ಹೇಳಿದ್ದರೆ ಜನರಿಗೆ ಗೊಂದಲವಾಗುತ್ತಿರಲಿಲ್ಲ' ಎಂಬ ವಾಕ್ಯದಲ್ಲಿ ಸಂಕೇತಾರ್ಥವಿದೆ. ಹೀಗೆ ಕ್ರಿಯಾರ್ಥವು ಭಾಷೆಯಲ್ಲಿ ನಾನಾ ಬಗೆಯಲ್ಲಿ ಕೆಲಸ ಮಾಡುತ್ತದೆ.

### ೧.೭.೭. ಸಂಧಿ

ಸಂಧಿ ಎಂಬ ಪದವನ್ನು ಸಾಂಪ್ರದಾಯಿಕ ವ್ಯಾಕರಣಕಾರರು ಬಳಸಿರುವುದು ಹೆಚ್ಚು. ಇದರ ಅರ್ಥ 'ಬೆಸೆಯುವುದು, ಜೋಡಿಸುವುದು, ಸೇರಿಸುವುದು' ಎಂದಾಗುತ್ತದೆ. ಕನ್ನಡ ಪದಗಳಲ್ಲಿ ನಡೆಯುವ ಸಂಧಿಯನ್ನು ಸ್ವರ ಸಂಧಿ ಮತ್ತು ವ್ಯಂಜನ ಸಂಧಿ ಎಂದು ಎರಡು ಬಗೆಯಲ್ಲಿ ವಿಂಗಡಿಸುವ ವಾಡಿಕೆ ಇದೆ. ಸ್ವರ ಸಂಧಿಯಲ್ಲಿ ಲೋಪ ಸಂಧಿ ಮತ್ತು ಆಗಮ ಸಂಧಿ ಎಂಬ ಎರಡು ಬಗೆಯನ್ನೂ ಹಾಗೂ ವ್ಯಂಜನ ಸಂಧಿಯಲ್ಲಿ ಆದೇಶ ಸಂಧಿ ಎಂಬ ಬಗೆಯನ್ನೂ ಗುರುತಿಸಲಾಗಿದೆ. ಅವು ಅನುಕ್ರಮವಾಗಿ ಲುಪ್ತವಾಗುವ, ಹೊಸದಾಗಿ ಬರುವ ಹಾಗೂ ಒಂದರ ಬದಲಿಗೆ ಇನ್ನೊಂದು ಬರುವ ಧ್ವನಿವಿವಕ್ಷೆ ಮಾಡುವ ಲಿಂಗಗಳ ಬಗೆಗಳಾಗಿವೆ. ಅದೇ ರೀತಿ ಸಂಸ್ಕೃತ ಸ್ವರ ಸಂಧಿಗಳನ್ನು ಸವರ್ಣ ದೀರ್ಘ ಸಂಧಿ, ಯಣಸಂಧಿ, ಗುಣಸಂಧಿ, ಮತ್ತು ವೃದ್ಧಿಸಂಧಿ ಎಂದು ಗುರುತಿಸಲಾಗುತ್ತದೆ. ಅಲ್ಲದೆ ಸಂಸ್ಕೃತದ ವ್ಯಂಜನ ಸಂಧಿಗಳನ್ನು ವಿವಕ್ಷೆ ಮಾಡಲಾಗಿದೆ.

ಸಂಧಿಗೂ ಸಮಾಸಕ್ಕೂ ಸಂಬಂಧವಿದೆ. ಸಮಾಸದಲ್ಲಿ ತತ್ಪುರುಷ, ಕರ್ಮಧಾರಯ, ಬಹುವ್ರೀಹಿ, ದ್ವಂದ್ವ, ದ್ವಿಗು ಮತ್ತು ಅಂಶಿ ಸಮಾಸಗಳನ್ನು ಗುರುತಿಸಲಾಗಿದೆ. ಅಂಶಿ ಸಮಾಸ ಕನ್ನಡಕ್ಕಷ್ಟೇ ಸೀಮಿತವಾಗಿದೆ. ಉಳಿದ ಸಮಾಸಗಳು ಕನ್ನಡ ಮತ್ತು ಸಂಸ್ಕೃತ ಪದಗಳಲ್ಲಿ ಕಂಡುಬರುತ್ತವೆ.

ಮೇಲೆ ವಿವರಿಸಿರುವುದಕ್ಕಿಂತ ಭಿನ್ನವಾಗಿ ಭಾಷಾವಿಜ್ಞಾನದ ವಿವರಣೆ ಇದೆ. ಪದದೊಳಗೆ ಆಕೃತಿಮಾಗಳ ನಡುವೆ ವಾಕ್ಯದಲ್ಲಿ ನಡೆಯುವಂಥದು ಆಂತರಿಕ ಸಂಧಿ ಹಾಗೂ ಪದಗಳ ನಡುವೆ ವಾಕ್ಯದಲ್ಲಿ ನಡೆಯುವಂಥದು ಬಾಹ್ಯ ಸಂಧಿ ಎಂದು ಅದು ವಿವರಿಸುತ್ತದೆ. ಅಲ್ಲದೆ ಸಂಧಿ, ಸಮಾಸ ಮುಂತಾದ ಪದರಚನೆಯ ಪ್ರಕ್ರಿಯೆಗಳನ್ನು ಅದು ಆಕೃತಿಮಾ ವಿಜ್ಞಾನದಲ್ಲಿ ಕಕ್ಷೆಯಲ್ಲಿ ಮಾಡುತ್ತದೆ.

## ೧.೮. ಸಾರಾಂಶ

ವ್ಯಾಕರಣದ ಇತಿಹಾಸ ಹಾಗೂ ಅದು ಮಧ್ಯಕಾಲೀನ ಭಾರತೀಯ ಬೌದ್ಧಿಕ ಚರಿತ್ರೆಯಲ್ಲಿ ವಹಿಸಿದ ಪ್ರಮುಖ ಪಾತ್ರವನ್ನು ಇಲ್ಲಿ ನಿಮಗೆ ಪರಿಚಯ ಮಾಡಿಕೊಡಲಾಗಿದೆ. ವ್ಯಾಕರಣ ಮೂಲತಃ ವೈದಿಕ ಮಂತ್ರಗಳ ನಿಖರವಾದ ಪಠಣಕ್ಕಾಗಿ ರಚನೆಯಾದ ಶಾಸ್ತ್ರ. ಮುಂದೆ ಬೌದ್ಧ ಮತ್ತು ಜೈನ ಧರ್ಮಗಳು ತಲೆ ಎತ್ತಿದಂತೆ ಅವುಗಳ ಉದ್ದೇಶಗಳಿಗೆ ಅನುಗುಣವಾಗಿ ವ್ಯಾಕರಣದಲ್ಲಿ ಬದಲಾವಣೆಗಳು ಬಂದವಾದರೂ ಅದು ಒಂದು ನಿರಂತರವಾಗಿ ಹೊಸ ಹೊಸ ಆವಿಷ್ಕಾರಗಳನ್ನು ಮಾಡುತ್ತಾ ಬದಲಾಗುವ ಪರಂಪರೆಯಾಯಿತು. ಈ ಹಂತದಲ್ಲಿ ವ್ಯಾಕರಣ ಕಾವ್ಯ ರಚನೆಯನ್ನು ಉದ್ದೇಶಿಸಿದ ಶಾಸ್ತ್ರವಾಗಿ ಬೆಳೆಯಿತು. ನಂತರದಲ್ಲಿ ದೇಶೀಯ ಭಾಷೆಗಳಲ್ಲಿ ಸಾಹಿತ್ಯ ರಚನೆ ಆರಂಭವಾದಂತೆ ದೇಶೀಯ ಭಾಷೆಯ ವ್ಯಾಕರಣಗಳು ಅವುಗಳ ಅಗತ್ಯತೆಗಳಿಗೆ ಅನುಗುಣವಾಗಿ ರಚನೆಯಾದವು. ವಸಾಹತುಶಾಹಿ ವಿಸ್ತರಣೆ ಅನುವಾದ ಹಾಗೂ ಅದಕ್ಕೆ ಸಹಕಾರಿಯಾಗಿ ಹೊಸದಾದ ವ್ಯಾಕರಣ ಪರಂಪರೆಯೊಂದನ್ನು ಆರಂಭಿಸಿತು, ಇದು ಮುಂದೆ ಭಾಷಾವಿಜ್ಞಾನ ಒಂದು ಶೈಕ್ಷಣಿಕ ಶಿಸ್ತಾಗಿ ಆರಂಭವಾಗಲು ಪ್ರೇರೇಪಣೆಯನ್ನು ನೀಡಿತು. ಈ ಹಿನ್ನೆಲೆಗಳಲ್ಲಿ ವ್ಯಾಕರಣದ ಬಗ್ಗೆ ಚರ್ಚೆ ಮಾಡಲಾಗಿದೆಯಲ್ಲದೆ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದಂತೆ ಕೆಲವು ಪರಿಕಲ್ಪನೆಗಳನ್ನು ಇಲ್ಲಿ ಪ್ರಾಥಮಿಕ ಪರಿಚಯ ಮಾಡಿಕೊಡಲಾಗಿದೆ.

**ಅಭ್ಯಾಸ**

ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ವಸಾಹತುಶಾಹಿ ವಿಸ್ತರಣೆಯ ಬಗ್ಗೆ ವಾಲ್ಟರ್ ಮಿಂಗ್ನೊಲೋ ಅಮೆರಿಕದ ಸ್ಥಳೀಯ ಭಾಷೆಗಳನ್ನು ಕುರಿತಂತೆ ಏನೆಂದು ಹೇಳಿದ್ದಾನೆ?

೨. ಮೊದಲನೆಯ ಮತ್ತು ಎರಡನೆಯ ಮಹಾಯುದ್ಧಗಳ ಅವಧಿಯಲ್ಲಿ ಆದ ವ್ಯಾಕರಣಗಳ ರಚನೆಯ ಬಗ್ಗೆ ವಿವರಿಸಿ.

೩. 'ವ್ಯಾಕರಣದ ಕಾರ್ಖಾನೆಯಲ್ಲಿ ಸ್ಫೋಟ' ಎಂಬುದನ್ನು ವಿವರಿಸಿ.

೪. ಭಾಷೆಯಲ್ಲಿ ವ್ಯಾಕರಣದ ರಚನೆ ಆ ಭಾಷೆಯ ವೈವಿಧ್ಯತೆಗಳಿಗೆ ಮಾರಕವಾಗುತ್ತದೆ? ಚರ್ಚಿಸಿ.

೫. ವೇದಾಂಗಗಳು ಯಾವ ರೀತಿ ವೈದಿಕ ವ್ಯಾಕರಣದ ರಚನೆಯನ್ನು ರೂಪಿಸಿವೆ ಎಂಬುದನ್ನು ವಿವರಿಸಿ?

೬. ಬೌದ್ಧ ಮತ್ತು ಜೈನ ವ್ಯಾಕರಣ ಪರಂಪರೆ ಯಾವ ರೀತಿ ಪಾಣಿನಿಯ ವ್ಯಾಕರಣಕ್ಕಿಂತ ಭಿನ್ನವಾಗುತ್ತವೆ?

೭. ಪಟ್ಟಿಕೆ ೧ನ್ನು ಮುಂದಿಟ್ಟುಕೊಂಡು ಅದು ಹೇಳುತ್ತಿರುವ ಅಂಶಗಳನ್ನು ವಿವರಿಸಿ.

೮. ಕಾತಂತ್ರ ವ್ಯಾಕರಣ ಪರಂಪರೆಯನ್ನು ಪರಿಚಯ ಮಾಡಿಕೊಡಿ.

೯. ಮಧ್ಯಕಾಲೀನ ವ್ಯಾಕರಣಗಳ ದ್ವೈಭಾಷಿಕ ಹಾಗೂ ಬಹುಭಾಷಿಕ ಆಯಾಮಗಳನ್ನು ಕುರಿತು ಚರ್ಚಿಸಿ.

೧೦. ಮಣಿಪ್ರವಾಳಂ ಎಂದರೇನು, ವಿವರಿಸಿ?

೧೧. 'ವ್ಯಾಕರಣಗಳ ಪರಂಪರೆಯ ತೆರದ ಮನಸ್ಸು' ಎಂದರೇನು, ವಿವರಣೆಯನ್ನು ನೀಡಿ?

೧೨. ಕನ್ನಡ ವ್ಯಾಕರಣ ಪರಂಪರೆಯ ಪರಿಚಯವನ್ನು ಮಾಡಿ.

೧೩. ೧೯ನೆಯ ಶತಮಾನದಲ್ಲಿ ಬಂದ ಕನ್ನಡ ವ್ಯಾಕರಣಗಳ ಬಗ್ಗೆ ಬರೆಯಿರಿ.

೧೪. ಶಬ್ದ ಮತ್ತು ಅರ್ಥಗಳ ಸಂಬಂಧದ ವಿವಕ್ಷೆ ಭಾರತೀಯ ಮತ್ತು ಪಾಶ್ಚಾತ್ಯ ಪರಂಪರೆಗಳಲ್ಲಿ ಹೇಗೆ ಚರ್ಚೆಯಾಗಿವೆ, ವಿವರಿಸಿ?

೧೫. ಧ್ವನಿ ವಿಜ್ಞಾನ ಎಂದರೇನು, ವಿವರಿಸಿ?

೧೬. ಧ್ವನಿಮಾ ವಿಜ್ಞಾನದ ಪರಿಚಯ ಮಾಡಿಕೊಡಿ.

೧೭. ಆಕೃತಿಮಾ ವಿಜ್ಞಾನದ ಬಗ್ಗೆ ವಿವರಿಸಿ.

೧೮. ಧ್ವನಿಮಾ ವಿಜ್ಞಾನ ಮತ್ತು ಆಕೃತಿಮಾ ವಿಜ್ಞಾನಗಳು ಪರಸ್ಪರ ಹೇಗೆ ಸಂಬಂಧಿಸಿವೆ, ತಿಳಿಸಿ?

೧೯. ವಾಕ್ಯರಚನಾ ವಿಜ್ಞಾನ ಎಂದರೇನು?

೨೦. ಆಕೃತಿಮಾ ವಿಜ್ಞಾನ ಹಾಗೂ ವಾಕ್ಯರಚನಾ ವಿಜ್ಞಾನಗಳು ಪರಸ್ಪರ ಹೇಗೆ ಸಂಬಂಧಿಸಿವೆ, ವಿವರಿಸಿ?

೨೧. ಚಿತ್ರ ೧ನ್ನು ನೋಡಿ; ಧ್ವನಿಮಾ, ಆಕೃತಿಮಾ ಹಾಗೂ ವಾಕ್ಯರಚನೆಗಳ ಪರಸ್ಪರ ಸಂಬಂಧಗಳನ್ನು ಕುರಿತು ಚರ್ಚಿಸಿ.

೨೨. ಕನ್ನಡದಲ್ಲಿ ಹೊರಗಿನಿಂದ ಸ್ವೀಕೃತವಾಗಿರುವ ಧ್ವನಿಮಾಗಳನ್ನು ಪರಿಚಯ ಮಾಡಿಕೊಡಿ.

೨೩. ಹೊಸಗನ್ನಡದ ವಿಶಿಷ್ಟ ಧ್ವನಿಮಾಗಳು ಯಾವುವು?

೨೪. ಕನ್ನಡದಲ್ಲಿ ಲಿಂಗ ವಿವಕ್ಷೆಯನ್ನು ಹೇಗೆ ಮಾಡಲಾಗುತ್ತದೆ, ತಿಳಿಸಿ?

೨೪. ಕನ್ನಡದ ವಚನ ವ್ಯವಸ್ಥೆಯನ್ನು ಕುರಿತು ಬರೆಯಿರಿ.

೨೫. ಕನ್ನಡದ ವಿಭಕ್ತಿಗಳನ್ನು ಪರಿಚಯ ಮಾಡಿಕೊಡಿ.

೨೬. ಕನ್ನಡದಲ್ಲಿ ಪುರುಷ ವಿವಕ್ಷೆ ಮಾಡುವ ಬಗೆಯನ್ನು ಕುರಿತು ಬರೆಯಿರಿ.

೨೭. ಕಾಲ ವಿವಕ್ಷೆಯನ್ನು ಕನ್ನಡದಲ್ಲಿ ಹೇಗೆ ಮಾಡಲಾಗುತ್ತದೆ, ತಿಳಿಸಿ?

೨೮. ಕನ್ನಡದಲ್ಲಿ ಕ್ರಿಯಾರ್ಥವನ್ನು ಕುರಿತು ಚರ್ಚಿಸಿ.

ಪಠ್ಯವನ್ನು ಸಿದ್ಧಪಡಿಸಿದವರು: **ಪ್ರೊ. ಟಿ.ಎಸ್. ಸತ್ಯನಾಥ್**

# ಘಟಕ ೨

## ಕನ್ನಡ ಭಾಷೆಯ ಚರಿತ್ರೆ ಮತ್ತು ಸ್ವರೂಪ

### ಹಿನ್ನೆಲೆ

ಕನ್ನಡ ಭಾಷೆಗೆ ಸುಮಾರು ೨೦೦೦ ವರ್ಷಗಳ ಇತಿಹಾಸ ಇದೆ. ಆದರೆ ಭಾಷೆಯ ಚರಿತ್ರೆ ಮತ್ತು ಸ್ವರೂಪಗಳ ಅಧ್ಯಯನಕ್ಕೆ ಕೇವಲ ೧೫೦ ವರ್ಷಗಳ ಇತಿಹಾಸವಿದೆ. ಕನ್ನಡ ಭಾಷೆಯ ಆರಂಭಿಕ ಹಂತದ ಬಗ್ಗೆ ದಾಖಲೆಗಳು ಸಮರ್ಪಕವಾಗಿ ದೊರೆತಿಲ್ಲವಾದರೂ ಸುಮಾರು ಕ್ರಿ.ಶ. ನಾಲ್ಕನೆಯ ಶತಮಾನದ ವೇಳೆಗೆ ಕನ್ನಡದಲ್ಲಿ ಶಾಸನಗಳು ಉಪಲಬ್ಧವಾಗಲು ಆರಂಭವಾಗುತ್ತದೆ. ಈ ಸುದೀರ್ಘ ಅವಧಿಯ ಭಾಷೆಯ ಚರಿತ್ರೆಯನ್ನು ಬರೆಯುವುದಾಗಲಿ ಅಥವಾ ಅದರ ಸ್ವರೂಪವನ್ನು ವಿವರಿಸುವುದಾಗಲಿ ಸುಲಭದ ಮಾತಲ್ಲ. ಕನ್ನಡದ ಚಾರಿತ್ರಿಕ ಬೆಳವಣಿಗೆ ಕೂಡ ಬಹುಭಾಷಿಕ ವಾತಾವರಣದಲ್ಲಿ ಆಗಿದೆ. ಪರಿಣಾಮವಾಗಿ ಸಂಸ್ಕೃತ, ಪ್ರಾಕೃತ, ಅಪಭ್ರಂಶ, ಪಾರಸಿ ಹಾಗೂ ಯೂರೋಪಿನ ಭಾಷೆಗಳ ಪ್ರಭಾವ ಧ್ವನಿಮಾ, ಆಕೃತಿಮಾ ಹಾಗೂ ಶಬ್ದಕೋಶಗಳ ಮಟ್ಟದಲ್ಲಿ ವ್ಯಾಪಕವಾಗಿ ಆಗಿದೆ. ಭಾಷಾ ವೈಜ್ಞಾನಿಕ ಹಾಗೂ ಚರಿತ್ರೆಯ ತಾತ್ವಿಕತೆ ಹಾಗೂ ಅಧ್ಯಯನಕ್ರಮಗಳನ್ನು ಉಪಯೋಗಿಸಿ ಭಾಷೆಯ ಬೆಳವಣಿಗೆಯ ಚರಿತ್ರೆ, ಬದಲಾದ ಅವಸ್ಥಾಂತರಗಳ ಸ್ವರೂಪ ಹಾಗೂ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳನ್ನು ಗುರುತಿಸಲಾಗುತ್ತದೆ. ಮೂಲಭೂತವಾಗಿ ಇದು ಚಾರಿತ್ರಿಕ ಭಾಷಾವಿಜ್ಞಾನ, ಉಪಭಾಷಾ ಅಧ್ಯಯನ ಮತ್ತು ಸಾಮಾಜಿಕ ಭಾಷಾವಿಜ್ಞಾನದ ಕ್ಷೇತ್ರ. ಪ್ರಸ್ತುತ ಘಟಕ ಕನ್ನಡ ಭಾಷೆಯ ಚರಿತ್ರೆಯನ್ನು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಎಂಬ ನಾಲ್ಕು ಹಂತಗಳಲ್ಲಿ ಬೆಳೆದ ರೀತಿಯನ್ನು ಮತ್ತು ಅವುಗಳ ವಿಶಿಷ್ಟ ಲಕ್ಷಣಗಳನ್ನು ಪರಿಚಯ ಮಾಡಿಕೊಡುತ್ತದೆ. ಅದೇ ರೀತಿ ಸಮಕಾಲೀನವಾಗಿ ಕನ್ನಡದ ಪ್ರಾದೇಶಿಕ ಪ್ರಭೇದಗಳನ್ನೂ ಹಾಗೂ ಸಾಮಾಜಿಕ ಪ್ರಭೇದಗಳನ್ನೂ ವಿವರಿಸಿ ಅವುಗಳ ಲಕ್ಷಣಗಳನ್ನು ಉದಾಹರಣೆಗಳ ಸಮೇತ ಪರಿಚಯ ಮಾಡಿಕೊಡಲಾಗಿದೆ.

**ವಿಷಯಾನುಕ್ರಮಣಿಕೆ**

೨.೦. ಉದ್ದೇಶ

೨.೧. ಪೀಠಿಕೆ

೨.೧.೧. ಕನ್ನಡ ಭಾಷೆಯ ಪ್ರಾಚೀನತೆ

೨.೧.೨. ಕನ್ನಡ ಹೆಸರಿನ ನಿಷ್ಪತ್ತಿ

೨.೧.೩. ಕನ್ನಡ ನಾಡಿನ ವಿಸ್ತಾರ

೨.೧.೪. ಕರ್ನಾಟಕದಲ್ಲಿರುವ ಇತರ ದ್ರಾವಿಡ ಭಾಷೆಗಳು

೨.೧.೫. ಕನ್ನಡ ಭಾಷೆಯ ಸ್ವರೂಪ ಮತ್ತು ಲಕ್ಷಣಗಳು

೨.೧.೬. ಭಾಷಾ ಅಧ್ಯಯನ ವಿಧಾನಗಳು

ಅಭ್ಯಾಸ ೧

೨.೨. ಕನ್ನಡದ ಅವಸ್ಥಾಂತರಗಳು

೨.೨.೦. ಉದ್ದೇಶ

೨.೨.೧. ಪೀಠಿಕೆ

೨.೨.೨. ಕನ್ನಡದ ಅವಸ್ಥಾಂತರಗಳು

ಅಭ್ಯಾಸ ೨

೨.೩. ಕನ್ನಡದ ಭಾಷಾ ಪ್ರಭೇದಗಳು

೨.೩.೦. ಉದ್ದೇಶ

೨.೩.೧. ಪೀಠಿಕೆ

೨.೩.೨. ಕನ್ನಡ ಭಾಷಾ ಪ್ರಭೇದಗಳು ಮತ್ತು ಅವುಗಳ ಬಗೆಗಳು

ಅಭ್ಯಾಸ ೩

೨.೪. ಸಾಮಾಜಿಕ ಪ್ರಭೇದಗಳು

ಅಭ್ಯಾಸ ೪

೨.೫. ಸಾರಾಂಶ

## ೨.೦. ಉದ್ದೇಶ

ಈ ಭಾಗದಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದಂತೆ ನೀವು ಕೆಳಕಂಡ ಅಂಶಗಳನ್ನು ತಿಳಿಯುತ್ತೀರಿ.

೧. ಕನ್ನಡದ ಪ್ರಾಚೀನತೆ ಎಂದರೇನು?

೨. ಕನ್ನಡದ ಪ್ರಾಚೀನತೆಯ ಸ್ವರೂಪ; ಕನ್ನಡ ಪದದ ನಿಷ್ಪತ್ತಿ; ಕನ್ನಡ ಭಾಷೆಯ ಲಕ್ಷಣಗಳು.

೩. ಕನ್ನಡ ಭಾಷಾ ಅಧ್ಯಯನ ವಿಧಾನಗಳು.

೪. ಕನ್ನಡ ಭಾಷಾ ಕಲಿಕೆಗೂ ಪ್ರಾಚೀನತೆಗೂ ಇರುವ ಸಂಬಂಧ. ಇವುಗಳನ್ನು ಕಲಿಯುವುದರ ಮೂಲಕ, ಕನ್ನಡ ಹಿಂದೆ ಹೇಗೆ ಇತ್ತು, ವರ್ತಮಾನದಲ್ಲಿ ಹೇಗೆ ಬದಲಾವಣೆಯಾಗಿದೆ ಎಂಬುದನ್ನು ತಿಳಿಯುತ್ತೀರಿ.

## ೨.೧. ಪೀಠಿಕೆ

ಕನ್ನಡ ಭಾಷೆಯ ಅಧ್ಯಯನಕ್ಕೆ ತೊಡಗಲು ಹೊರಟಾಗ ಕನ್ನಡ ಯಾವ ಕಾಲದಿಂದ ಇತ್ತು, ಕನ್ನಡದ ಜೊತೆಯಲ್ಲಿ ಇದ್ದ ಭಾಷೆಗಳು ಯಾವುವು, ಕನ್ನಡದ ಪ್ರಾಚೀನತೆ ಎಂದರೇನು ಇಂತಹ ಪ್ರಶ್ನೆಗಳಿಗೆ ನಾವು ಎದುರಾಗುತ್ತೇವೆ. ವರ್ತಮಾನದ ಕನ್ನಡವನ್ನು ತಿಳಿಯಬೇಕೆಂದರೆ ಹಿಂದೆ ಇದ್ದ ಕನ್ನಡದ ಸ್ವರೂಪವನ್ನು ತಿಳಿಯಬೇಕು. ಹಾಗೆ ಪರಂಪರೆಯ ಕನ್ನಡವನ್ನು ಅರ್ಥ ಮಾಡಿಕೊಂಡರೆ ಇಂದಿನ ಕನ್ನಡದ ಸ್ವರೂಪ ಸಹಜವಾಗಿಯೇ ಅರಿವಾಗುತ್ತದೆ. ಕನ್ನಡದ ಪರಂಪರೆಯನ್ನು ಇದುವರೆಗೆ ನಾವು ಬರಹವನ್ನು ಆಧರಿಸಿ ಕಟ್ಟಿಕೊಂಡಿದ್ದೇವೆ. ಭಾಷಾವಿಜ್ಞಾನವೆಂಬ ಶಿಸ್ತು ಆಡುಮಾತನ್ನು ಆಧರಿಸಿ ಭಾಷೆಯ ಅಧ್ಯಯನವನ್ನು ನಡೆಸುತ್ತದೆ. ಈಗ ನಾವು ಇದುವರೆಗೆ ಬರಹವನ್ನು ಆಧರಿಸಿ ಕಟ್ಟಿಕೊಂಡಿದ್ದ ಮಾದರಿಯನ್ನು ಹೊರತುಪಡಿಸಿ ಆಡುಮಾತನ್ನು ಆಧರಿಸಿ ಭಾಷೆಯ ಅಧ್ಯಯನದ ನೆಲೆಯನ್ನು ಕಟ್ಟಿಕೊಳ್ಳುತ್ತಿದ್ದೇವೆ. ಹಾಗೆಂದು ಬರಹವನ್ನು ಆಧರಿಸಿದ ವ್ಯಾಕರಣದ ನೆಲೆಯನ್ನು ಬಿಟ್ಟುಕೊಟ್ಟಿಲ್ಲ. ಏಕೆಂದರೆ ಯಾವುದೇ ಭಾಷೆಯ ನಿಯಮವು ಬರಹ ಮತ್ತು ಆಡುಮಾತು ಎರಡರಲ್ಲಿಯೂ ಇರುತ್ತದೆ. ಆಡುಮಾತನ್ನು ಆಧರಿಸಿ ಕಟ್ಟಿಕೊಳ್ಳುವ ಭಾಷೆಯ ನಿಯಮಕ್ಕೆ ವ್ಯಾಕರಣದ ವಿಚಾರಗಳು ಪೂರಕವಾಗಿ ಬರುತ್ತವೆ.

ಈ ಮುಂದಿನ ಭಾಗಗಳಲ್ಲಿ ಕನ್ನಡ ಭಾಷೆಯ ಪ್ರಾಚೀನತೆ, ಅನ್ಯಭಾಷೆಗಳಲ್ಲಿ ಕನ್ನಡ ಭಾಷೆ ಮತ್ತು ಹೆಸರಿನ ಉಲ್ಲೇಖ, ಕನ್ನಡ ಪದದ ನಿಷ್ಪತ್ತಿ, ಕನ್ನಡದ ಆಡುಮಾತು ವ್ಯತ್ಯಾಸಗೊಳ್ಳುವ ಬಗೆ – ಈ ಎಲ್ಲವನ್ನು ವಿವರವಾಗಿ ನೋಡೋಣ.

### ೨.೧.೧. ಕನ್ನಡ ಭಾಷೆಯ ಪ್ರಾಚೀನತೆ

ಕನ್ನಡ ಭಾಷೆಯ ಇತಿಹಾಸವನ್ನು ತಿಳಿಯುವುದು ಎಂದರೆ ಕನ್ನಡ ಭಾಷೆ ಕಾಲ ಕಾಲಕ್ಕೂ ಬದಲಾದ ಸ್ವರೂಪವನ್ನು ಅರಿಯುವುದೇ ಆಗಿದೆ. ಕನ್ನಡ ಭಾಷೆಯು ಪ್ರಾಚೀನವಾದುದು ನಿಜ. ಆದರೆ ಕನ್ನಡ ಎಷ್ಟು ವರ್ಷಗಳಿಂದ ಇತ್ತು ಎಂಬುದನ್ನು ತಿಳಿಯುವ ಬಗೆ ಹೇಗೆ? ಕನ್ನಡ ಭಾಷೆಯಲ್ಲಿ ದೊರಕುವ ಆಧಾರಗಳಾದ ಶಾಸನಗಳು ಮತ್ತು ಸಾಹಿತ್ಯ ಕೃತಿಗಳು ಕನ್ನಡದ ಹಳಮೆಯನ್ನು ಹೇಳುತ್ತವೆ. ಇದು ಕನ್ನಡ ಭಾಷೆಯಲ್ಲಿ ದೊರಕುವ ಆಧಾರ. ಇನ್ನೊಂದು ಆಧಾರವೆಂದರೆ ಬೇರೆ ಭಾಷೆಯಲ್ಲಿ ದೊರಕುವ ಸಾಮಗ್ರಿಗಳು. ಇವೆರಡರ ಮೂಲಕ ಕನ್ನಡ ಎಷ್ಟು ವರ್ಷಗಳಿಂದ ಇದ್ದಿರಬಹುದು ಎಂಬ ಊಹೆಯನ್ನು ಮಾಡಬಹುದು. ಮೊದಲನೆಯದಾಗಿ ಅನ್ಯ ಭಾಷೆ, ಸಾಹಿತ್ಯ, ಪುರಾಣ ಇವುಗಳಲ್ಲಿ ಕನ್ನಡ ಭಾಷೆ ಮತ್ತು ಪ್ರದೇಶದ ಉಲ್ಲೇಖವಿರುವುದನ್ನು ನೋಡೋಣ.

ಪ್ರಾಕೃತ ಮತ್ತು ಸಂಸ್ಕೃತದ ಪ್ರಾಚೀನ ಕೃತಿಗಳಲ್ಲಿ ಕನ್ನಡ ಜನರ ಮತ್ತು ಕನ್ನಡ ಪದಗಳ ಉಲ್ಲೇಖಗಳಿವೆ. ಈಜಿಪ್ಟ್ ದೇಶದಲ್ಲಿ ದೊರಕಿದ ಕ್ರಿ.ಶ. ೨ನೆಯ ಶತಮಾನಕ್ಕೆ ಸೇರಿದ ಗ್ರೀಕ್ ಪ್ರಹಸನದಲ್ಲಿ ಕನ್ನಡ ಮಾತುಗಳಿವೆ ಎಂಬುದನ್ನು ಗೋವಿಂದ ಪೈ ಅವರು ತೋರಿಸಿದ್ದಾರೆ. ಇದು ಅನ್ಯದೇಶದಲ್ಲಿ ಕನ್ನಡ ಪದಗಳು ದೊರೆತ ಒಂದು ಸಾಕ್ಷಿಯಾಗಿದೆ. ಕ್ರಿ.ಶ. ೧–೨ನೆಯ ಶತಮಾನಕ್ಕೆ ಸೇರಿದ ಶಾತವಾಹನ ಅರಸು ಹಾಲನ ಪ್ರಾಕೃತ ಭಾಷೆಯಲ್ಲಿರುವ 'ಗಾಥಾಸಪ್ತಸತಿ'ಯಲ್ಲಿ ಪೆಟ್ಟು (ಹೊಡೆ), ತೀರ್ (ಶಕ್ಯವಾಗು), ಪೊಟ್ಟ (ಹೊಟ್ಟೆ), ತುಪ್ಪ ಎಂಬ ಪದಗಳು ದೊರಕಿವೆ. ಅದೇ ಕಾಲದ್ದೆಂದು ಗುರುತಿಸುವ

'ಮೃಚ್ಛಕಟಿಕ' ಎಂಬ ಸಂಸ್ಕೃತ ನಾಟಕದಲ್ಲಿ 'ಕರ್ಣಾಟ' ಎಂಬ ಪದ ಬಳಕೆಯಾಗಿದೆ. ಇದೇ ಕಾಲಘಟ್ಟದಲ್ಲಿನ ಮಾರ್ಕಂಡೇಯ ಪುರಾಣದಲ್ಲಿ 'ಕರ್ಣಾಟ' ಎಂಬ ಹೆಸರಿದೆ. ಇನ್ನು ಸಂಸ್ಕೃತದಲ್ಲಿ ಕ್ರಿ.ಶ. ೬ನೆಯ ಶತಮಾನದ ವರಾಹಮಿಹಿರನ 'ಬೃಹತ್ಸಂಹಿತೆ'ಯಲ್ಲೂ, ಸುಮಾರು ಕ್ರಿ.ಶ. ೯೦೦ರಲ್ಲಿದ್ದ ಸಂಸ್ಕೃತ ಲಕ್ಷಣಕಾರ ರಾಜಶೇಖರನ 'ಕಾವ್ಯಮೀಮಾಂಸಾ' ಗ್ರಂಥದಲ್ಲಿಯೂ ಹಾಗೂ ಹನ್ನೊಂದನೆಯ ಶತಮಾನದ ಸೋಮದೇವನ 'ಕಥಾಸರಿತ್ಸಾಗರ' ದಲ್ಲಿಯೂ ಕರ್ಣಾಟಕದ ಬಗ್ಗೆ ಉಲ್ಲೇಖಗಳಿವೆ. ಅದರಂತೆಯೇ 'ಮಹಾಭಾರತ'ದಲ್ಲೂ 'ಕರ್ಣಾಟಕಃ' ಎಂಬುದು ದೊರಕುತ್ತದೆ. ಕ್ರಿ.ಶ. ೨ನೆಯ ಶತಮಾನದಲ್ಲಿ ಭಾರತವನ್ನು ಸಂದರ್ಶಿಸಿದ ಗ್ರೀಕ್ ದೇಶದ ಟೋಲೊಮಿ ತನ್ನ ಪ್ರವಾಸ ಕಥನದಲ್ಲಿ ಕರ್ನಾಟಕದ ಅನೇಕ ಹೆಸರುಗಳನ್ನು ಹೇಳುತ್ತಾನೆ. ಪುನ್ನಾಟ, ಬಾದಾಮಿ, ಇಂಡಿ, ಮುದ್ಗಲ್ಲು, ಬನವಾಸಿ, ಹತ್ತರಿಕಿಹಾಳು, ಚಿಮ್ಮಲಿಗೆ – ಈ ಹೆಸರುಗಳನ್ನು ಗ್ರೀಕ್ ಭಾಷೆಯಲ್ಲಿ ಹೇಳಿದ್ದಾನೆ. ಚಿತ್ರದುರ್ಗ ಪ್ರದೇಶದ ಚಂದ್ರವಳ್ಳಿಯ ಉತ್ಖನನದಲ್ಲಿ ದೊರಕುವ ಗ್ರೀಕ್ ಮತ್ತು ಚೀನಾ ದೇಶಗಳ ನಾಣ್ಯಗಳು ಹಾಗೂ ಕನ್ನಡದ ಗ್ರಂಥಗಳಲ್ಲಿ ದೊರಕುವ ನಾಣ್ಯಗಳ ಹೆಸರುಗಳಾದ 'ದಿನಾರ' 'ದಮ್ಮ' ಎಂಬುವು ಕನ್ನಡ ಪ್ರದೇಶವು ಗ್ರೀಕ್ ಮತ್ತು ಚೀನಾದೊಡನೆ ಹೊಂದಿದ್ದ ವ್ಯಾಪಾರ ಸಂಬಂಧವನ್ನು ಸೂಚಿಸುತ್ತವೆ. ಇವೆಲ್ಲವೂ ಕನ್ನಡ ಪ್ರದೇಶದ ಅಸ್ತಿತ್ವವನ್ನು ಹೇಳುತ್ತವೆ. ಹಾಗೂ ಬೇರೆ ಭಾಷೆಯಲ್ಲಿ ದೊರಕುವ ಕನ್ನಡದ ಪದಗಳು ಮತ್ತು 'ಕರ್ಣಾಟ' ಎಂಬ ಉಲ್ಲೇಖವು ಕನ್ನಡವು ಕ್ರಿಸ್ತ ಶಕದ ಪ್ರಾರಂಭಕ್ಕಿಂತಲೂ ಪ್ರಾಚೀನವಾಗಿದೆ ಎಂಬುದನ್ನು ತೋರಿಸುತ್ತದೆ.

ಸುಮಾರು ಕ್ರಿ.ಶ. ೬ನೆಯ ಶತಮಾನದ ತಮಿಳು ಕಾವ್ಯ 'ಶಿಲಪ್ಪದಿಗಾರಂ'ನಲ್ಲಿ ಕನ್ನಡಿಗರನ್ನು 'ಕರುನಾಡರ್' ಎಂದು ಹೇಳಲಾಗಿದೆ. ಸುಮಾರು ಕ್ರಿ.ಶ. ೭೭೦ರಲ್ಲಿ ಇದ್ದ ಪಾಂಡ್ಯ ರಾಜ ಶಡೈಯನ್ ಹಾಕಿಸಿರುವ ತಮಿಳಿನ ವೇಳ್ವಿಕುಡಿ ಶಾಸನದಲ್ಲಿ 'ಕರುನಾಡುಗನ್' ಎಂಬ ಪದ ಇದೆ. ಅಂದರೆ ತಮಿಳು ಭಾಷೆಯೂ ಕನ್ನಡದ ಅಸ್ತಿತ್ವವನ್ನು ದಾಖಲಿಸಿದೆ.

ಕನ್ನಡದಲ್ಲಿರುವ ಬರಹಗಳಿಂದ ಕನ್ನಡದ ಪ್ರಾಚೀನತೆಯನ್ನು ಅರಿಯಲು ಸಾಧ್ಯ. ಬರಹ ಎಂದರೆ ಶಾಸನಗಳು ಹಾಗೂ ಹಳೆಯ ಸಾಹಿತ್ಯ ಕೃತಿಗಳಾಗಿವೆ. ಕಲ್ಲಿನ ಮೇಲೆ ಬರೆದಿರುವ ರಾಜನ ಆಜ್ಞೆಯಾದ ಸುಮಾರು ಕ್ರಿ.ಶ. ೪೫೦ರ ಹಲ್ಮಿಡಿ ಶಾಸನವು ಕನ್ನಡದಲ್ಲಿ ದೊರೆತಿರುವ ಮೊದಲ ಶಾಸನ. ಇದು ಕನ್ನಡದ ಪ್ರಾಚೀನತೆಯನ್ನು ಕುರಿತು ತಿಳಿಸುವ, ಕನ್ನಡ ಭಾಷೆಯು ಬರಹದಲ್ಲಿ ದೊರೆತ ಅಧಿಕೃತ ದಾಖಲೆಯಾಗಿದೆ. ಈ ಶಾಸನವು ದೊರಕುವುದಕ್ಕಿಂತ ಎಷ್ಟೋ ಹಿಂದಿನಿಂದಲೇ ಕನ್ನಡ ಪ್ರದೇಶದ ಇರುವಿಕೆಯನ್ನು ಕುರಿತಂತೆ ಹೇಳುವ ಮಾತುಗಳು ಬೇರೆ ಭಾಷೆಯ ಕೃತಿಗಳಲ್ಲಿ, ಶಾಸನಗಳಲ್ಲಿ ಕಂಡುಬರುವುದನ್ನು ಈ ಮೇಲೆ ಗಮನಿಸಿದೆವು.

ಹಲ್ಮಿಡಿ ಶಾಸನವು ದೊರಕುವುದಕ್ಕಿಂತ ಮೊದಲೇ ಕನ್ನಡದಲ್ಲಿ ಇನ್ನೂ ಕೆಲವು ಶಾಸನಗಳು ದೊರೆತಿವೆ. ಕ್ರಿ.ಶ. ೨ರಿಂದ ೪ನೆಯ ಶತಮಾನದ್ದು ಎಂದು ಹೇಳಲಾಗುವ ಮೂರು ನಾಲ್ಕು ಕನ್ನಡ ಶಾಸನಗಳು ತಾಮ್ರಪಟದಲ್ಲಿ ಇವೆ. ಆದರೆ ವಿದ್ವಾಂಸರು ಇವುಗಳನ್ನು ಕೃತಕವಾದ ಶಾಸನಗಳೆಂದು ಹೇಳಿದ್ದಾರೆ. ಹಲ್ಮಿಡಿ ಶಾಸನ ಮತ್ತು ಇದರ ಸಮಕಾಲೀನವಾದ ಶಾಸನಗಳಲ್ಲಿನ ಭಾಷೆಯನ್ನು ಗಮನಿಸಿದರೆ ಸಂಸ್ಕೃತ ಮಿಶ್ರಿತವಾದ ಕನ್ನಡವು ಬರಹದಲ್ಲಿಯಂತೂ ಬಳಕೆಯಲ್ಲಿದ್ದಿತ್ತು ಎಂಬುದು ತಿಳಿಯುತ್ತದೆ. ಬರಹದಲ್ಲಿ

ಕನ್ನಡವು ಬಳಕೆಯಲ್ಲಿದೆ ಎಂದ ಮೇಲೆ ಆಡುಮಾತು ಇದಕ್ಕಿಂತಲೂ ಬಹಳ ಹಿಂದಿನಿಂದಲೇ ಇದ್ದಿರಬೇಕು. ಆಡುಮಾತು ಬಳಕೆಯಲ್ಲಿ ಇದ್ದ ಎಷ್ಟೋ ತರುವಾಯ ಬರಹವು ಕಾಲಿಡುವುದು ಸಹಜವೇ ಆಗಿದೆ. ಈಗಾಗಲೇ ನಾವು ನೋಡಿದಂತೆ ಗ್ರೀಕ್, ಪ್ರಾಕೃತ, ಸಂಸ್ಕೃತ, ತಮಿಳು ಮುಂತಾದ ಭಾಷೆಯ ಕೃತಿಗಳಲ್ಲಿ ಕನ್ನಡ ಪದಗಳ, ಕನ್ನಡ ಪ್ರದೇಶಗಳ ಹೆಸರು ಪ್ರಸ್ತಾಪಿಸಲ್ಪಟ್ಟಿರುವುದು ಕನ್ನಡದ ಇರುವಿಕೆಯನ್ನು ಆಧಾರ ಸಮೇತ ತೋರಿಸುತ್ತದೆ. ಇದರಿಂದ ಕನ್ನಡವು ಕ್ರಿಸ್ತ ಪೂರ್ವದಲ್ಲಿ ಇದ್ದು ಕ್ರಿಸ್ತ ಶಕದ ಆರಂಭ ಕಾಲಘಟ್ಟದಲ್ಲಿ ಇನ್ನಷ್ಟು ದೃಢವಾಗುತ್ತ ನಡೆದಿದೆ. ಅಂದು ರಾಜರ ಆಸ್ಥಾನದಲ್ಲಿ ಅಧಿಕಾರದ ಸಂಕೇತವಾಗಿ ಬಳಕೆಯಾಗುತ್ತಿದ್ದ ಪ್ರಾಕೃತ ಮತ್ತು ಸಂಸ್ಕೃತದೊಡನೆ ಕನ್ನಡವು ಜೊತೆಯಾಗಿ ಹೆಜ್ಜೆ ಇಡುತ್ತಾ ಬಂದಿರುವುದನ್ನು ಕನ್ನಡ ಪ್ರದೇಶದಲ್ಲಿ ದೊರಕಿರುವ ಶಾತವಾಹನರ ಕದಂಬರ ಶಾಸನಗಳು ಹೇಳುತ್ತವೆ. ಆಡಳಿತದಲ್ಲಿ ಕನ್ನಡದ ಬಳಕೆ ಈ ರೀತಿ ಇದ್ದರೆ, ಇನ್ನು ಧಾರ್ಮಿಕ ನೆಲೆಯಲ್ಲಿ ಬೌದ್ಧ ಹಾಗೂ ಜೈನ ಧರ್ಮವು ಕನ್ನಡ ಪ್ರದೇಶದಲ್ಲಿ ಬೇರೂರಿರುವುದನ್ನು ಅನೇಕ ಕೃತಿಗಳು ಹೇಳುತ್ತವೆ.

ಕ್ರಿಸ್ತ ಪೂರ್ವದಲ್ಲಿ ಇದ್ದ ಅಶೋಕ ಚಕ್ರವರ್ತಿಯು ಹಾಕಿಸಿದ ಶಾಸನಗಳು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ದೊರಕುತ್ತವೆ. ಬೌದ್ಧ ಧರ್ಮದ ಸಂದೇಶಗಳನ್ನು ಹೊತ್ತಿರುವ ಈ ಶಾಸನಗಳು ಕನ್ನಡ ಪ್ರದೇಶದಲ್ಲಿವೆ. ಅದರಲ್ಲಿಯೂ ಉತ್ತರ ಭಾಗದ ಕನ್ನಡ ನೆಲವು ಮೌರ್ಯ ಚಕ್ರವರ್ತಿಯ ಅಧೀನದಲ್ಲಿದ್ದು, ಪ್ರಾಕೃತ ಭಾಷೆಯನ್ನು ತಿಳಿದ ಪ್ರದೇಶವಾಗಿತ್ತು. ಬುದ್ಧನ ಪ್ರಭಾವವು ಸಹಜವಾಗಿಯೇ ಈ ಪ್ರದೇಶದ ಮೇಲೆ ಆಗಿರುವ ಸಾಧ್ಯತೆಯನ್ನು ಈ ಶಾಸನಗಳು ತಿಳಿಸುತ್ತವೆ. ಆದರೆ ಬೌದ್ಧ ಧರ್ಮದ ಪ್ರಭಾವವನ್ನು ಬಳಸಿಕೊಂಡು ಕನ್ನಡದಲ್ಲಿ ಇದ್ದಿರಬಹುದಾದ ಸಾಹಿತ್ಯವು ನಮಗೆ ಇದುವರೆಗೂ ದೊರಕಿಲ್ಲ. ಇದರಿಂದಾಗಿ ಅಶೋಕನ ಶಾಸನಗಳು ಕನ್ನಡ ಪ್ರದೇಶವು ಬೌದ್ಧ ಧರ್ಮದ ಪ್ರಭಾವಕ್ಕೆ ಒಳಗಾಗಿರ ಬಹುದಾದ ಒಂದು ಸಾಧ್ಯತೆಯಾಗಿ ಮಾತ್ರ ಇದೆ.

ಶ್ರವಣಬೆಳಗೊಳದಲ್ಲಿ ಕ್ರಿಸ್ತ ಶಕದ ಆರಂಭ ಕಾಲಘಟ್ಟದಲ್ಲಿ ಉತ್ತರದಿಂದ ದಕ್ಷಿಣಕ್ಕೆ ವಲಸೆ ಬಂದ ಚಂದ್ರಗುಪ್ತ ಮೌರ್ಯನ ಆಗಮನವು ಕನ್ನಡ ಪ್ರದೇಶವು ಉತ್ತರ ಭಾರತದೊಡನೆ ಧಾರ್ಮಿಕ ವಿಷಯದಲ್ಲಿ ಹೊಂದಿದ್ದ ಸಂಬಂಧದ ಗಾಢತೆಯನ್ನು ತೋರಿಸುತ್ತದೆ. ಜೈನ ಧರ್ಮದ ಕೇಂದ್ರವಾಗಿ ಶ್ರವಣಬೆಳಗೊಳವು ಕ್ರಿಸ್ತ ಶಕದ ಆರಂಭ ಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದಿದೆ. ಮೈಸೂರಿನ ಭಾಗದಲ್ಲಿಯೂ ಜೈನಧರ್ಮವು ಪ್ರಭಾವಶಾಲಿಯಾಗಿದ್ದದ್ದನ್ನು ಗಂಗರ ಶಾಸನಗಳು ಹೇಳುತ್ತವೆ.

ಇದೆಲ್ಲವೂ ಕನ್ನಡದಲ್ಲಿ ಹಲ್ಮಿಡಿ ಶಾಸನವು ದೊರಕುವ ಮೊದಲು ಇದ್ದ ಸ್ಥಿತಿಯಾಗಿದೆ. ಇದರಿಂದ ಅನ್ಯ ರಾಜರ ಮತ್ತು ಅನ್ಯ ಧರ್ಮದ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿ ಕನ್ನಡವು ಕನ್ನಡಕ್ಕಿಂತ ಭಿನ್ನವಾದ ಭಾಷೆಗೆ ಮತ್ತು ಜನರ ಸಂಪರ್ಕಕ್ಕೆ ಒಳಗಾಗಿದ್ದದ್ದನ್ನು ಇವೆಲ್ಲವೂ ತಿಳಿಸುತ್ತವೆ. ಈ ಎಲ್ಲ ಸಂಗತಿಗಳೂ ಕನ್ನಡ ಭಾಷೆಯ ಪ್ರಾಚೀನತೆಯನ್ನು ಕ್ರಿಸ್ತ ಪೂರ್ವಕ್ಕೆ ತೆಗೆದುಕೊಂಡು ಹೋಗುತ್ತವೆ. ಇನ್ನು ಕನ್ನಡ ಎನ್ನುವ ಹೆಸರು ಇತ್ತೇ, ಈ ಪ್ರದೇಶವನ್ನು ಯಾವ ಹೆಸರಿನಿಂದ ಕರೆಯುತ್ತಿದ್ದರು ಎನ್ನುವ ಕುತೂಹಲವು ಹುಟ್ಟುತ್ತದೆ. ಅದನ್ನು ತಿಳಿಯೋಣ.

## ೨.೧.೨. ಕನ್ನಡ ಹೆಸರಿನ ನಿಷ್ಪತ್ತಿ

ಕನ್ನಡ ಎಂಬ ಪದವು 'ಕರ್ಣಾಟಕ' ಎನ್ನುವ ಸಂಸ್ಕೃತ ಪದದಿಂದ ಬಂದಿದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ 'ತುಂಬಾ ಪ್ರಸಿದ್ಧವಾದ ನಾಡು' ಎಂಬ ಅರ್ಥವಿದೆ ಎಂದು ಹೇಳಲಾಗಿದೆ. ಕೇಶೀರಾಜನು ತನ್ನ 'ಶಬ್ದಮಣಿದರ್ಪಣ' ವೆಂಬ ವ್ಯಾಕರಣ ಕೃತಿಯಲ್ಲಿ ಕನ್ನಡವು 'ಕರ್ಣಾಟಕ' ಪದದಿಂದ ಹುಟ್ಟಿದೆ ಎಂದು ಹೇಳುತ್ತಾನೆ. ಹರ್ಮನ್ ಗುಂಡರ್ಟ್ ಮತ್ತು ರಾಬರ್ಟ್ ಕಾಲ್ಡ್‌ವೆಲ್ ಅವರ ಪ್ರಕಾರ ಕರ್ + ನಾಡು ಎಂಬುದರಿಂದಾಗಿದೆ. ಅಂದರೆ 'ಕರಿಯ ಮಣ್ಣಿನ ನಾಡು' ಎಂದು ಅರ್ಥ. ಯಾಕೆಂದರೆ ಕಾಲ್ಡ್‌ವೆಲ್ ಪ್ರಕಾರ ಕನ್ನಡ ನಾಡಿನ ಬಹುತೇಕ ಪ್ರದೇಶವು ಕರಿಮಣ್ಣಿನದಾಗಿದ್ದು, ಹತ್ತಿಯ ಬೆಳೆಗೆ ಅನುಕೂಲವಾಗಿದೆ ಎಂಬುದಾಗಿದೆ. ಹಟ್ಟಿಯಂಗಡಿ ನಾರಾಯಣರಾವ್ ಅವರ ಪ್ರಕಾರ ಇಡೀ ಕರ್ಣಾಟಕವು ಸಮುದ್ರದ ಮಟ್ಟಕ್ಕಿಂತ ತುಂಬಾ ಎತ್ತರದಲ್ಲಿದ್ದು ತಪ್ಪಲು ಭೂಮಿಯಾಗಿರುವುದರಿಂದ ಕರು + ನಾಡು ಅಂದರೆ ತಪ್ಪಲುಭೂಮಿ ಎಂದು ತಿಳಿಯಬೇಕೆಂದು ಸೂಚಿಸಿದ್ದಾರೆ. ಗೋವಿಂದ ಪೈ ಅವರು ಕರ್ನಾಡು ಪದದಿಂದ ಕರಂ + ನಾಡು ಎಂದು ಹೇಳಿದ್ದಾರೆ. 'ಕರಂ' ಎಂದರೆ ವಿಸ್ತಾರವಾದ ಎಂಬ ಅರ್ಥವನ್ನು ಕೊಟ್ಟು, ಕನ್ನಡನಾಡೆಂದರೆ 'ವಿಸ್ತಾರವಾದ ನಾಡು' ಎಂಬ ಅರ್ಥವನ್ನು ಕೊಡುತ್ತಾರೆ. ಆದರೆ ಆರ್. ನರಸಿಂಹಾಚಾರ್ಯ ಅವರು 'ಕನ್ನಡ' ಪದದಿಂದಲೇ ಕನ್ನಡದ ಮೂಲವನ್ನು ನೋಡಬೇಕೆಂದು ಹೇಳುತ್ತಾರೆ. ಕಮ್ಮಿತು + ನಾಡು = ಕನ್ನಾಡು ಎಂದು ಹೇಳಿ, ಕಮ್ಮಿತು ಎಂದರೆ ಕನ್ನಡವನ್ನು ಮಾಧುರ್ಯ ಮತ್ತು ಪರಿಮಳವಾಚಕವಾದ ಎಂಬ ಅರ್ಥದಿಂದ ಬಂದಿದೆ ಎಂದು ತಿಳಿಸಿದ್ದಾರೆ. ಕರ್ನಾಟಕವು ಶ್ರೀಗಂಧದ ಮರಗಳಿಂದಲೂ, ಕಮಲದ ಹೂಗಳಿಗೂ ಪ್ರಸಿದ್ಧಿಯನ್ನು ಪಡೆದಿರುವುದರಿಂದ 'ಸುಗಂಧ' ಅರ್ಥವನ್ನು ಸೂಚಿಸುವ 'ಕಮ್ಮಿತು' ಎಂಬುದರಿಂದ ಕನ್ನಡ ಪದವು ಬಂದಿದೆ ಎನ್ನುತ್ತಾರೆ. ಈ ಮೇಲಿನ ವಿವರಣೆಗಳಲ್ಲಿ ಕನ್ನಡವನ್ನು ಪ್ರದೇಶದಿಂದ ಮತ್ತು ಕನ್ನಡ ನಾಡಿನಲ್ಲಿರುವ ವಿಶೇಷತೆಯಿಂದ ಗುರುತಿಸಲು ಪ್ರಯತ್ನಿಸಲಾಗಿದೆ.

ಬೆಟಗೇರಿ ಕೃಷ್ಣಶರ್ಮ ಹಾಗೂ ದ.ರಾ. ಬೇಂದ್ರೆಯವರು ಕನ್ (= ಕಾಣು) + ಅಳ್ = ಕನ್ನಳ > ಕನ್ನಡ ಎಂದು ಹೇಳಿ 'ಮನೋಭಾವವನ್ನು ಯಶಸ್ವಿಯಾಗಿ ಒಡಮೂಡಿಸಿ (ಕನ್) ತೋರಿಸುವ ಭಾಷೆ' ಎಂದು ಸೂಚಿಸುತ್ತಾರೆ. ಕರ್ + ನಾಟ + ಅಕಂ = ಒಳಗೊಂಡ ಪ್ರದೇಶ ಅಂದರೆ ವಿಸ್ತಾರವಾದ ನಾಡನ್ನು ಒಳಗೊಂಡ ಪ್ರದೇಶ ಎನ್ನುವ ಅರ್ಥದಲ್ಲಿ ಕರ್ನಾಟಕವಾಗಿದೆ ಎಂದು ಬಿ.ಎಂ.ಶ್ರೀ. ಹೇಳುತ್ತಾರೆ. ರೆವರೆಂಡ್ ಚನ್ನಪ್ಪ ಉತ್ತಂಗಿಯವರು ಕನ್ (ಣ್) + ಅಡಿಗರ್ ಎಂದರೆ 'ಅಡಿಯಲ್ಲಿ ಕಣ್ಣು ಉಳ್ಳವರು ಯಾರೋ ಅವರು' ಎಂದು ಅರ್ಥವನ್ನು ಹೇಳಿದ್ದಾರೆ.

ಹೀಗೆ 'ಕರ್ಣಾಟಕ', 'ಕರ್ನಾಟಕ' ಮತ್ತು 'ಕನ್ನಡ' ಎಂಬುದನ್ನು ವಿವಿಧ ರೀತಿಯಲ್ಲಿ ಅರ್ಥ ಮಾಡಲು ವಿದ್ವಾಂಸರು ಪ್ರಯತ್ನಿಸಿದ್ದಾರೆ. ಶಂಬಾ ಜೋಷಿಯವರ ಪ್ರಕಾರ ಈ ಮೇಲಿನ ಯಾವ ವಿವರಣೆಯಲ್ಲಿಯೂ ಕರ್ಣಾಟಕದ ಪ್ರಾಚೀನ ಸಾಂಸ್ಕೃತಿಕ ಪರಂಪರೆ ಮತ್ತು ಇತಿಹಾಸದ ಗುರುತು ಕಾಣುವುದಿಲ್ಲ. ಅವರ ಪ್ರಕಾರ ಕನ್ನಡವೆಂದರೆ ಕನ್ (ಣ್) ಜನಾಂಗ ಇದ್ದ ನಾಡು. ಇದರಿಂದ ಕನ್ನಡವನ್ನು ಜನಾಂಗದ ಮೂಲದಿಂದ ಗುರುತಿಸುತ್ತಾರೆ. ಕ್ರಿ.ಶ. ೧೨೩೫ರಲ್ಲಿ ಆಂಡಯ್ಯನೆಂಬ ಕವಿ 'ಕನ್ನಡಮೆನಿಪ್ಪಾನಾಡು ಚೆಲ್ವಾಯ್ತು'

ಎಂದು ಹೇಳುತ್ತಾನೆ. ಇದರಲ್ಲಿ ಬಳಕೆಯಾಗಿರುವ ಕನ್ನಡ ಎನ್ನುವ ಹೆಸರಿನೊಡನೆ ಇರುವ ನಾಡು ಎಂಬುದು ಕನ್ನಡ ಪ್ರದೇಶ ಎಂಬುದನ್ನು ಹೇಳುತ್ತದೆ. ಈ ಮೇಲಿನ ಎಲ್ಲ ವಿವರಣೆಗಳನ್ನು ನೋಡಿದರೆ ಕನ್ನಡ ಮತ್ತು ಕರ್ಣಾಟಕ ಎಂಬ ಎರಡು ಮೂಲದಿಂದ ಕನ್ನಡದ ಪ್ರದೇಶದ ಅರ್ಥವನ್ನು ವಿವರಿಸಲು ಹೊರಟಿದ್ದಾರೆ. ಇದರಲ್ಲಿ ಸರಿಯಾದ ರೂಪ ಎಂದು ಯಾವುದನ್ನೂ ಹೇಳಲಾಗುವುದಿಲ್ಲ. ಕಾರಣ ಇವೆಲ್ಲವೂ ವಿದ್ವಾಂಸರು ತಮಗೆ ಸರಿ ಕಂಡಂತೆ ವಿವರಿಸಿದ್ದಾರೆ. ಈ ಎಲ್ಲಾ ಬಗೆಗಳಿಂದ ಕನ್ನಡ ಪದದ ಮೂಲವನ್ನು ಹೇಳಲು ಸಾಧ್ಯ ಎಂದು ಮಾತ್ರ ಹೇಳಬಹುದು.

## ೨.೧.೩. ಕನ್ನಡ ನಾಡಿನ ವಿಸ್ತಾರ

ಕನ್ನಡ ನಾಡಿನ ಉತ್ತರ ಮತ್ತು ದಕ್ಷಿಣದ ಗಡಿಗಳ ಉಲ್ಲೇಖ ಬಹಳ ಪ್ರಾಚೀನ ಕಾಲದಿಂದಲೇ ಕಂಡುಬರುತ್ತದೆ. ಉತ್ತರದ ನರ್ಮದಾನದಿಯಿಂದ ದಕ್ಷಿಣದ ಕಾವೇರಿಯ ವರೆಗೂ ಕನ್ನಡ ಮಾತನಾಡುವ ಪ್ರದೇಶವಿತ್ತು. ಆದರೆ ಸುಮಾರು ಕ್ರಿ.ಶ. ೮೫೦ರ ವೇಳೆಗೆ ಶ್ರೀವಿಜಯನಿಂದ ರಚಿತವಾಗಿರುವ 'ಕವಿರಾಜಮಾರ್ಗ' ಎಂಬ ಕೃತಿಯಲ್ಲಿ 'ಕಾವೇರಿ ಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್' ಎಂದು ಕನ್ನಡ ನಾಡಿನ ಸೀಮೆಯನ್ನು ಉತ್ತರದಲ್ಲಿ ಗೋದಾವರಿ ಎಂಬುದಾಗಿ ಬದಲಾಗಿರುವುದನ್ನು ತಿಳಿಸುತ್ತದೆ. ಕಾವೇರಿಯಿಂದ ಗೋದಾವರಿಯವರೆಗೆ ಇರುವ ನಾಡು ಕನ್ನಡ ಎನ್ನುವ ಹೇಳಿಕೆಯಲ್ಲಿ ಈ ಭೂಭಾಗ ಕನ್ನಡ ಭಾಷೆಯನ್ನು ಮಾತನಾಡುತ್ತಿದ್ದ ಪ್ರದೇಶ ಎಂದು ತಿಳಿಯಬಹುದು.

## ೨.೧.೪. ಕರ್ನಾಟಕದಲ್ಲಿರುವ ಇತರ ದ್ರಾವಿಡ ಭಾಷೆಗಳು

ಭಾರತದಲ್ಲಿ ಹಿಂದಿ, ಬಂಗಾಳಿ, ಕಾಶ್ಮೀರಿ, ಗುಜರಾತಿ, ಮರಾಠಿ, ಅಸ್ಸಾಮಿ, ಒಡಿಯಾ ಮುಂತಾದ ಭಾಷೆಗಳನ್ನು ಬಳಸುತ್ತಾರೆ. ಇವುಗಳನ್ನು ಇಂಡೋ ಆರ್ಯನ್ ಭಾಷಾ ಪರಿವಾರದ ಭಾಷೆಗಳು ಎಂದು ಹೇಳುತ್ತಾರೆ. ಇಂತಹ ಹಲವು ಭಾಷಾ ಪರಿವಾರಗಳಿದ್ದು ಅದರಲ್ಲಿ ದ್ರಾವಿಡ ಭಾಷಾ ಪರಿವಾರವೂ ಒಂದು. ಇದರ ಭಾಷೆಗಳು ಭಾರತದ ವಿವಿಧ ಭಾಗಗಳಲ್ಲಿ ಹಂಚಿಹೋಗಿವೆ. ನಕ್ಷೆ ೧ರಲ್ಲಿ ವಿವಿಧ ದ್ರಾವಿಡ ಭಾಷೆಗಳು ಉತ್ತರ, ಮಧ್ಯ ಹಾಗೂ ದಕ್ಷಿಣ ಭಾರತದಲ್ಲಿ ಹಂಚಿಕೆಯಾಗಿರುವುದನ್ನು ನೋಡಬಹುದು. ದ್ರಾವಿಡ ಭಾಷೆಗಳೆಂದರೆ ಪ್ರಮುಖವಾಗಿ ದಕ್ಷಿಣದಲ್ಲಿರುವ ಕನ್ನಡ, ತಮಿಳು, ತೆಲುಗು, ಮಲೆಯಾಳಂ ಮತ್ತು ತುಳು ಮತ್ತು ಮಧ್ಯ ಹಾಗೂ ಉತ್ತರ ಭಾರತದಲ್ಲಿರುವ ಕೆಲವು ಬುಡಕಟ್ಟು ಭಾಷೆಗಳು. ಇದರಲ್ಲಿ ಕನ್ನಡ, ತಮಿಳು, ತೆಲುಗು, ಮಲೆಯಾಳಂ ಭಾಷೆಗಳಿಗೆ ಬೇರೆ ಬೇರೆ ಲಿಪಿ ಇದ್ದು ಸಾಹಿತ್ಯವೂ ಇದೆ. ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಸುಮಾರು ಆರು ಕೋಟಿ ಕನ್ನಡಿಗರಿದ್ದಾರೆ. ಕನ್ನಡ ಪ್ರದೇಶದಲ್ಲಿ ಕನ್ನಡ ಭಾಷೆಯ ಲಕ್ಷಣಗಳಿರುವ ಮತ್ತು ಕನ್ನಡದಿಂದ ಅಲ್ಪಸ್ವಲ್ಪ ಭಿನ್ನತೆಯನ್ನು ಹೊಂದಿರುವ ಕೆಲವು ಭಾಷೆಗಳಿವೆ. ಅವುಗಳೆಂದರೆ ಗುಲಬರ್ಗಾ ಕನ್ನಡ, ಮೈಸೂರು ಕನ್ನಡ, ಕೊಡವ, ಸೋಲಿಗ ಕನ್ನಡ, ಹವ್ಯಕ ಕನ್ನಡ, ಗೌಡ ಕನ್ನಡ, ಹಾಲಕ್ಕಿ ಒಕ್ಕಲಿಗರ ಕನ್ನಡ ಇತ್ಯಾದಿ. ಇವುಗಳನ್ನು ಮುಂದೆ ವಿವರವಾಗಿ ತಿಳಿಯಬಹುದು.




ನಕ್ಷೆ ೧: ದ್ರಾವಿಡ ಭಾಷೆಗಳನ್ನು ತೋರಿಸುವ ನಕ್ಷೆ (ಕೃಪೆ: ವಾರ್ತಾ ಭಾರತಿ)

## ೨.೧.೫. ಕನ್ನಡ ಭಾಷೆಯ ಸ್ವರೂಪ ಮತ್ತು ಲಕ್ಷಣಗಳು

ಕನ್ನಡ ಭಾಷೆಯು ದ್ರಾವಿಡ ಭಾಷಾ ವರ್ಗದ ಭಾಷೆಯೇ ಆಗಿದ್ದರೂ, ಕನ್ನಡ ಭಾಷೆಗೆ ಕೆಲವು ವಿಶಿಷ್ಟವಾದ ಗುಣಗಳಿವೆ. ಕನ್ನಡ ಭಾಷೆಯು ಪ್ರಾಚೀನ ಕಾಲದಲ್ಲಿ ಇದ್ದಂತೆ ಇಲ್ಲ. ಈಗ ಬಳಕೆಯಲ್ಲಿರುವ ಕನ್ನಡವನ್ನು ಹಳೆಯ ಸಾಹಿತ್ಯದಲ್ಲಿ, ಶಾಸನಗಳಲ್ಲಿ ಇದ್ದ ಕನ್ನಡಕ್ಕೆ ಹೋಲಿಸಿ ನೋಡಿದರೆ ಸಾಕಷ್ಟು ಬದಲಾವಣೆಗಳಾಗಿರುವುದು ಕಂಡು ಬರುತ್ತದೆ. ಈ ಬದಲಾವಣೆಗಳೆಲ್ಲವನ್ನೂ ಕನ್ನಡದ ವಿಶಿಷ್ಟ ಗುಣಗಳು ಎನ್ನಲಾಗುತ್ತದೆ. ಕನ್ನಡ ಭಾಷೆಯಲ್ಲಿ ಮುಖ್ಯವಾಗಿ ಕೆಲವು ಧ್ವನಿಗಳು ಬದಲಾವಣೆ ಹೊಂದಿವೆ. ಅವುಗಳೆಂದರೆ: ಪದದ ಮೊದಲಿನ ಪ ಕಾರವು ಹ ಕಾರವಾಗಿ ಬದಲಾಗಿದೆ. ಉದಾ., ಪಾಲು > ಹಾಲು. ಪದದ ಮೊದಲಿನ ವ ಕಾರವು ಬ ಕಾರವಾಗಿ ಬದಲಾಗಿದೆ. ಉದಾ., ವೆಟ್ಟ > ಬೆಟ್ಟ, ೞ ಧ್ವನಿಯು ಳ ಧ್ವನಿಯಾಗಿ ಬದಲಾಗಿದೆ. ಱ ಧ್ವನಿಯು ರ ಧ್ವನಿಯಾಗಿದೆ. ಇನ್ನು ಇ ಸ್ವರವು ಎ ಸ್ವರವಾಗಿ, ಉ ಸ್ವರವು ಒ ಸ್ವರವಾಗಿ ಬದಲಾಗಿದೆ. ಉದಾ., ಕಿಡು > ಕೆಡು, ಕುಡು > ಕೊಡು. ಇವು ಕನ್ನಡದ ಧ್ವನಿಗಳಲ್ಲಿ ಉಂಟಾಗಿರುವ ಬದಲಾವಣೆಗಳು.

ಕನ್ನಡದಲ್ಲಿ ಸ್ವರಗಳ ಬಳಕೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಒಂದು ಸ್ವರದ ಮುಂದೆ ಇನ್ನೊಂದು ಸ್ವರ ಬರುವಂತೆ ಇಲ್ಲ. ಉದಾ: ಅ ಮುಂದೆ ಇ ಅಥವಾ ಯಾವುದೇ ಸ್ವರ ಬರಲಾರದು. ಐ ಮತ್ತು ಔ ಗಳು ಸಂಧಿಸ್ವರಗಳೆಂದು ಹೇಳಿದರೂ, ಕನ್ನಡದಲ್ಲಿ ಐ ಎನ್ನುವುದು ಅಯ್ ಆಗುತ್ತದೆ. ಔ ಎನ್ನುವುದು ಅವ್ ಆಗುತ್ತದೆ. ಕನ್ನಡದ ಅ, ಇ, ಉ, ಎ –ಇವು ಪದದ ಆದಿ, ಪದದ ಮಧ್ಯ ಮತ್ತು ಪದದ ಕೊನೆಯಲ್ಲಿ ಕಾಣಿಸಿಕೊಳ್ಳಬಲ್ಲವು. ಉದಾ., ಅರಸ, ಇಲಿ, ಕಿಡಿ, ಉಳಿ, ಸುಡು, ಕೆರೆ, ಎತ್ತು ಮುಂತಾದವು. ಅ (ಅ ಗಿಂತ ಭಿನ್ನವಾದ ಸ್ವರ) ಹಾಗೂ ಒ ಗಳು ಪದದ ಆದಿ ಮತ್ತು ಪದದ ಮಧ್ಯದಲ್ಲಿ ಮಾತ್ರ ಬಳಕೆಯಾಗುತ್ತವೆ. ದೀರ್ಘಸ್ವರಗಳು ಪದದ ಮೊದಲಲ್ಲಿ

ಮಾತ್ರ ಬರುತ್ತದೆ. ಎರಡನೇ ಅಥವಾ ಮುಂದಿನ ಅಕ್ಷರಗಳಲ್ಲಿ ದೀರ್ಘಸ್ವರಗಳಿರುವ ಪದಗಳು ಸಮಾಸ ಪದಗಳೆಂದು ತಿಳಿಯಬಹುದು. ಉದಾ., ಆಟೋಟ, ಓಡಾಟ, ಹಾರಾಟ ಇತ್ಯಾದಿ. ಪದದ ಕೊನೆಯಲ್ಲಿ ದೀರ್ಘಸ್ವರಗಳು ಪ್ರತ್ಯಯವಾಗಿ ಕಾಣಿಸುತ್ತವೆ. ಉದಾ., ಯಾರೋ, ಬಂದನಾ.

ಈಗ ಕನ್ನಡದಲ್ಲಿ ವ್ಯಂಜನದ ಬಳಕೆಯನ್ನು ತಿಳಿಯೋಣ. ಕನ್ನಡ ಪದದ ಆರಂಭದಲ್ಲಿ ಳ್, ಣ್, ಷ್ ಧ್ವನಿಗಳಿಂದ ಪದಗಳು ಪ್ರಾರಂಭವಾಗುವುದಿಲ್ಲ. ಹಾಗೆಯೇ ಙ್, ಞ್ ಗಳು ಅವೇ ವರ್ಗದ ಹಿಂದೆ ಮಾತ್ರ ಬರುತ್ತವೆ. ಉದಾ., ಗಂಗ, ಮಂಚ. ಟ್, ಡ್ ಗಳು ಪದದ ಆದಿಯಲ್ಲಿ ಕೆಲವೇ ಕೆಲವು ಪದಗಳಲ್ಲಿ ಕಾಣಿಸಿಕೊಳ್ಳುತ್ತವೆ. ಉದಾ., ಟಗರು, ಟೋಪಿ, ಡೇರೆ, ಡಬ್ಬಿ ಇತ್ಯಾದಿ. ಉಳಿದ ಎಲ್ಲ ವ್ಯಂಜನಗಳು ಪದದ ಪ್ರಾರಂಭದಲ್ಲಿ ಬರಬಲ್ಲವು. ಪದದ ಮಧ್ಯದಲ್ಲಿ ಎಲ್ಲ ವ್ಯಂಜನಗಳೂ ಬರಬಲ್ಲವು. ವ್ಯಂಜನದಲ್ಲಿ ಯಾವ ಪದವೂ ಕನ್ನಡದಲ್ಲಿ ಕೊನೆಯಾಗುವುದಿಲ್ಲ. ಉದಾ., ಶೇಖರ್. ಇದನ್ನು ಶೇಖರ ಎಂದು ಬಳಸಲಾಗುತ್ತದೆ. ಇತ್ತೀಚೆಗೆ ಇಂಗ್ಲಿಷ್ ಭಾಷೆಯ ಪ್ರಭಾವದಿಂದ ವ್ಯಂಜನಾಂತ್ಯದಿಂದ ಪದಗಳನ್ನು ಬಳಸುವುದು ಕಾಣಿಸಿಕೊಳ್ಳುತ್ತಿದೆ. ಆಡುಮಾತಿನ ಇಂತಹ ಸ್ವರೂಪ ಬರಹದಲ್ಲಿಯೂ ಕಾಣಿಸಿಕೊಳ್ಳುತ್ತಿದೆ. ಉದಾ., ಕ್ಲಾಸ್‌ನಲ್ಲಿ, ರೋಡ್‌ನಲ್ಲಿ, ಪೆನ್‌ಗೆ ಇತ್ಯಾದಿ. ಪದದ ಪ್ರಾರಂಭದಲ್ಲಿ ಸಜಾತೀಯ ದ್ವಿತ್ವಗಳು ಬರುವುದಿಲ್ಲ. ಉದಾ: ವ್ವ, ಪ್ಪ – ಇವುಗಳಿಂದ ಪದವು ಪ್ರಾರಂಭವಾಗುವುದಿಲ್ಲ. ಆದರೆ ಕನ್ನಡದಲ್ಲಿ ವಿಜಾತೀಯ ದ್ವಿತ್ವಗಳೂ ಪದದ ಆರಂಭದಲ್ಲಿ ಕಾಣಿಸಿಕೊಳ್ಳುತ್ತವೆ. ಉದಾ., ಪ್ರಕಾರ, ಕ್ರಾಂತಿ, ಗ್ಲಾಸು, ಬ್ಲೇಡು, ಕ್ರೂರ, ನ್ಯಾಯ, ಪ್ಲೇಟು ದ್ರಾಕ್ಷಿ. ಪದದ ಮಧ್ಯದಲ್ಲಿಯೂ ಹಾಗೂ ಕೊನೆಯಲ್ಲಿಯೂ ವಿಜಾತೀಯ ದ್ವಿತ್ವಗಳು ಬರಬಲ್ಲವು. ಉದಾ., ಮುಕ್ತಿ, ಕಷ್ಟ, ನಕ್ಷತ್ರ, ಶಿಕ್ಷೆ, ಉಗ್ರಾಣ, ಲಾಂದ್ರ ಇತ್ಯಾದಿ. ಇಂತಹ ಪದಗಳು ಕನ್ನಡದಲ್ಲಿ ಕಂಡುಬಂದರೆ ಅವು ಅನ್ಯಭಾಷೆಯಿಂದ ತೆಗೆದುಕೊಂಡ ಪದಗಳಾಗಿರುತ್ತವೆ. ಮೂರು ವ್ಯಂಜನ ಸಂಯುಕ್ತಗಳು ಕನ್ನಡದಲ್ಲಿ ಬಹಳ ಕಡಿಮೆ. ಉದಾ., ಸ್ಟ್ರಾಂಗ್, ಸ್ತ್ರೀ, ಸ್ಟ್ರೈಕ್, ಸಂಸ್ಕೃತಿ. ಇವೂ ಸಹ ಅನ್ಯಭಾಷೆಯಿಂದ ಬಂದ ಪದಗಳಾಗಿವೆ. ಈ ಮೇಲೆ ನೋಡಿದಂತೆ ವಿವಿಧ ರೀತಿಯ ವ್ಯಂಜನ ಸಂಯುಕ್ತಗಳು ಪದದ ಆರಂಭ, ಮಧ್ಯ ಮತ್ತು ಕೊನೆಯಲ್ಲಿ ಕಂಡುಬರುತ್ತವೆ.

## ೨.೧.೬. ಭಾಷಾ ಅಧ್ಯಯನ ವಿಧಾನಗಳು

### ೧. ವ್ಯಾಕರಣ ವಿಧಾನ

ಒಂದು ಭಾಷೆಯ ನಿಯಮವನ್ನು ಅದರ ಸ್ವರೂಪವನ್ನು ಅರಿಯಲು ಬೇರೆ ಬೇರೆ ವಿಧಾನಗಳಿಂದ ಭಾಷೆಯ ಒಳಗೆ ಹೋಗಲು ಸಾಧ್ಯವಾಗುತ್ತದೆ. ಇದನ್ನು ಅಧ್ಯಯನದ ವಿಧಾನವೆನ್ನಲಾಗುತ್ತದೆ. ಉದಾ., ಲಿಪಿಯನ್ನು ಆಧರಿಸಿ ಕಟ್ಟಿರುವ ಬರಹದ ಕನ್ನಡ. ಅಥವಾ ಆಡುಮಾತನ್ನು ಆಧರಿಸಿ ಇರುವ ಕನ್ನಡ ಭಾಷೆ. ಇಲ್ಲಿ ಬರಹವನ್ನು ಆಧರಿಸಿ ಅಥವಾ ಆಡುಮಾತನ್ನು ಆಧರಿಸಿ ಭಾಷೆಯ ನಿಯಮವನ್ನು ಅರಿಯುವುದು ಎಂಬುದು ಅಧ್ಯಯನ ವಿಧಾನವಾಗುತ್ತದೆ. ಇಂದು ಕನ್ನಡ ಭಾಷೆಯನ್ನು ಅಧ್ಯಯನ ಮಾಡುವ ವಿಧಾನಗಳು ಈಗ ಮೊದಲಿಗಿಂತ ಬೇರೆಯಾಗಿವೆ. ಬರಹದ ಭಾಷೆಯನ್ನು ಆಧರಿಸಿದ ವ್ಯಾಕರಣವು ಭಾಷೆಯನ್ನು ಅಧ್ಯಯನ ಮಾಡುವ ಒಂದು ವಿಧಾನ. ಈಗಲೂ ಪ್ರಾಥಮಿಕ,

ಮಾಧ್ಯಮಿಕ, ಪ್ರೌಢಶಾಲೆಯಲ್ಲಿ ವ್ಯಾಕರಣವನ್ನು ಆಧರಿಸಿ ಕನ್ನಡದ ನಿಯಮವನ್ನು ಕಲಿಸಲಾಗುತ್ತದೆ. ನಾಮಪದ, ಕ್ರಿಯಾಪದ, ಗುಣವಾಚಕ, ಅವ್ಯಯ, ಕೃದಂತಗಳು, ತದ್ಧಿತಗಳು, ವಿಭಕ್ತಿ ಪ್ರತ್ಯಯ – ಹೀಗೆ ವ್ಯಾಕರಣದ ಪಾರಿಭಾಷಿಕ ಪದಗಳನ್ನು ಬಳಸಿಕೊಂಡು ಕನ್ನಡದ ನಿಯಮವನ್ನು ಹೇಳಿಕೊಡುವುದು ಒಂದು ವಿಧಾನ.

### ೨. ವರ್ಣನಾತ್ಮಕ ವಿಧಾನ

ಆಡುಮಾತನ್ನು ಆಧರಿಸಿ ಕನ್ನಡ ಭಾಷೆಯ ನಿಯಮಗಳನ್ನು ಅರಿಯುವುದು ಇನ್ನೊಂದು ಅಧ್ಯಯನ ವಿಧಾನ. ಇದರಲ್ಲಿ ಧ್ವನಿಯನ್ನು ಆಧರಿಸಿ ಭಾಷೆಯನ್ನು ಅಧ್ಯಯನ ಮಾಡಲಾಗುತ್ತದೆ. ಆಡುಮಾತು ಬರಹದ ಭಾಷೆಗಿಂತ ಹೇಗೆ ಭಿನ್ನವಾಗಿದೆ? ಆಡುಮಾತಿನ ಸ್ವರೂಪವು ಧ್ವನಿಯನ್ನು ಆಧರಿಸಿ ಹೇಗೆ ಇದೆ? ಆಡುಮಾತಿನ ಲಕ್ಷಣವು ಪ್ರಾದೇಶಿಕವಾಗಿ ಮತ್ತು ಸಾಮಾಜಿಕವಾಗಿ ಹೇಗೆ ಭಿನ್ನವಾಗಿದೆ ಎಂಬುದನ್ನು ಈ ವಿಧಾನದಲ್ಲಿ ಗುರುತಿಸಲಾಗುತ್ತದೆ. ಆಡುಮಾತಿನಲ್ಲಿ ಸರಿ ಮತ್ತು ತಪ್ಪು ಎನ್ನುವುದು ಇಲ್ಲ; ಭಾಷೆಯನ್ನು ಹೀಗೆಯೇ ಬಳಸಬೇಕು ಎಂಬುದು ಇಲ್ಲ; ಬದಲಾಗಿ ಆಡುಮಾತಿನ ಸ್ವರೂಪವು ಹೇಗೆ ಇದೆ; ಮಾತನಾಡುವಾಗ ಯಾವ ರೀತಿಯಲ್ಲಿ ಅರ್ಥವಾಗುತ್ತದೆ; ಒಂದು ಧ್ವನಿಯು ಇನ್ನೊಂದು ಧ್ವನಿಯೊಡನೆ ಹೇಗೆ ಜೋಡಿಸಿಕೊಳ್ಳುತ್ತದೆ; ಕನ್ನಡದ ಧ್ವನಿಯ ನಿಯಮಗಳು ಯಾವುವು – ಇಂತಹ ಹಲವು ಅಂಶಗಳನ್ನು ಅಧ್ಯಯನ ಮಾಡಲಾಗುತ್ತದೆ. ಇದರ ಮೂಲಕ ಜಗತ್ತಿನ ಭಾಷೆಯ ಲಕ್ಷಣಗಳು ಒಂದು ಪ್ರಾದೇಶಿಕ ಭಾಷೆಯಲ್ಲಿ ಹೇಗೆ ಇರುತ್ತದೆ ಎಂಬುದನ್ನು ಅರಿಯಲಾಗುತ್ತದೆ. ಭಾಷೆಯ ಸ್ವರೂಪವನ್ನು ವಿವರವಾಗಿ ಅಧ್ಯಯನ ಮಾಡುವುದರಿಂದ ಇದನ್ನು ವರ್ಣನಾತ್ಮಕ ಭಾಷಾವಿಜ್ಞಾನ ಎನ್ನಲಾಗುತ್ತದೆ. ಪ್ರಪಂಚದ ಎಲ್ಲ ಭಾಷೆಯಲ್ಲಿರುವ ಸಾಮಾನ್ಯ ನಿಯಮವನ್ನು ತಿಳಿಯಲು ಅಧ್ಯಯನ ಕೈಗೊಳ್ಳುವುದರಿಂದ ಇದನ್ನು 'ಸಾಮಾನ್ಯ ಭಾಷಾವಿಜ್ಞಾನ'ವೆಂದೂ ಕರೆಯಲಾಗುತ್ತದೆ. ವ್ಯಾಕರಣದ ಪಾರಿಭಾಷಿಕ ಪದಗಳನ್ನು ಹಾಗೂ ನಿಯಮಗಳನ್ನು ವರ್ಣನಾತ್ಮಕ ಭಾಷಾವಿಜ್ಞಾನದಲ್ಲಿಯೂ ಬಳಕೆ ಮಾಡಲಾಗುತ್ತದೆ. ಉದಾ., ನಾಮಪದ, ಸರ್ವನಾಮ, ಅವ್ಯಯ, ಸಂಧಿ, ವಿಭಕ್ತಿ ಪ್ರತ್ಯಯ, ಅಂತ್ಯ ಪ್ರತ್ಯಯ – ಇಂತಹ ನಿಯಮಗಳನ್ನು ಬಳಸಿಕೊಂಡು ಭಾಷೆಯ ನಿಯಮವನ್ನು ಅರಿಯಲಾಗುತ್ತದೆ. ಇವು ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ಇರುವ ಸಾಮಾನ್ಯವಾದ ನಿಯಮಗಳೂ ಆಗಿರುತ್ತದೆ. ಆದರೆ ಕೆಲವು ಭಾಷೆಯಲ್ಲಿ ವಿಶಿಷ್ಟವಾದ ಅಂಶಗಳಿರಬಹುದು. ಉದಾ., ದ್ರಾವಿಡ ಭಾಷಾವರ್ಗದಲ್ಲಿ ಱ ಮತ್ತು ೞ ಎಂಬ ವಿಶಿಷ್ಟ ಧ್ವನಿಯು ಪ್ರಪಂಚದ ಯಾವ ಭಾಷೆಯಲ್ಲಿಯೂ ಬಳಕೆಯಲ್ಲಿ ಇಲ್ಲ. ಇದು ದ್ರಾವಿಡ ಭಾಷೆಯ ವಿಶಿಷ್ಟ ಧ್ವನಿಯಾಗಿದೆ. ಇಂತಹ ಅಂಶಗಳು ಬಹಳ ಮುಖ್ಯವಾದ ಅಂಶವಾಗುತ್ತವೆ.

### ೩. ತೌಲನಿಕ ವಿಧಾನ

ತೌಲನಿಕ ಭಾಷಾವಿಜ್ಞಾನವೆನ್ನುವುದು ಎರಡು ಭಾಷೆಯ ಸ್ವರೂಪವನ್ನು ಹೋಲಿಸಿ ಅಧ್ಯಯನ ಮಾಡುವ ವಿಧಾನ. ಎರಡು ಭಾಷೆಗಳು ಒಂದೇ ಭಾಷಾವರ್ಗಕ್ಕೆ ಸೇರಿರಬಹುದು. ಉದಾ., ಕನ್ನಡ ಮತ್ತು ತೆಲುಗು ಭಾಷೆಯ ತೌಲನಿಕ ಅಧ್ಯಯನ. ಅಥವಾ ಒಂದೇ ಭಾಷೆಯ ಬೇರೆ ಬೇರೆ ಕಾಲಘಟ್ಟದ್ದಾಗಿರಬಹುದು. ಉದಾ., ಕ್ರಿ.ಶ. ೧೧ನೆಯ ಶತಮಾನದ ಕನ್ನಡ ಮತ್ತು ೧೫ನೆಯ ಶತಮಾನದ ಕನ್ನಡದ ಅಧ್ಯಯನ. ಹಾಗೂ ಒಂದೇ ಕಾಲಘಟ್ಟದಲ್ಲಿ

ಪ್ರಾದೇಶಿಕ ಭಿನ್ನತೆ ಇರುವ ಭಾಷೆ ಆಗಿರಬಹುದು. ಉದಾ., ಮಂಗಳೂರು ಕನ್ನಡ ಮತ್ತು ಮೈಸೂರು ಕನ್ನಡ. ಈ ರೀತಿಯ ಅಧ್ಯಯನದಿಂದ ಭಾಷೆಯಲ್ಲಿ ಉಂಟಾಗಿರುವ ವ್ಯತ್ಯಾಸವನ್ನು ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ಭಾಷೆಯಲ್ಲಿ ಉಂಟಾಗಿರುವ ವ್ಯತ್ಯಾಸವು ಒಂದೇ ಕಾಲಘಟ್ಟದ್ದು ಆದಾಗ ಭಾಷೆಯ ವಿಶಿಷ್ಟತೆ ಅರಿಯಲು ಸಾಧ್ಯವಾಗುತ್ತದೆ. ಅಥವಾ ವಿಭಿನ್ನ ಕಾಲಘಟ್ಟದ್ದು ಆದಾಗ ಭಾಷೆಯು ಯಾವ ರೀತಿ ಬದಲಾವಣೆಗೆ ಒಳಗಾಗುತ್ತಿದೆ ಮತ್ತು ಇದರ ಮೂಲಕ ಇಂದಿನ ಭಾಷೆಯ ಸ್ವರೂಪವು ಯಾವ ಯಾವ ವ್ಯತ್ಯಾಸವನ್ನು ಹೇಗೆ ಮೈಗೂಡಿಸಿಕೊಂಡಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಒಂದು ಭಾಷೆಯ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ.

**ಅಭ್ಯಾಸ ೧**

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಕನ್ನಡದ ಪ್ರಾಚೀನತೆಯು ಬೇರೆ ಭಾಷೆಯ ಗ್ರಂಥಗಳಲ್ಲಿ ಎಲ್ಲೆಲ್ಲಿ ಕಂಡುಬಂದಿದೆ?

೨. ದ್ರಾವಿಡ ಭಾಷೆಗಳಲ್ಲಿ ಕನ್ನಡವು ಯಾವ ರೀತಿಯಲ್ಲಿ ಉಲ್ಲೇಖಿಸಲ್ಪಟ್ಟಿದೆ?

೩. ಕನ್ನಡ ಪ್ರದೇಶದಲ್ಲಿ ದೊರಕುವ ಅತ್ಯಂತ ಪ್ರಾಚೀನ ಶಾಸನಗಳು ಎಲ್ಲಿವೆ? ಅದನ್ನು ಹಾಕಿಸಿದವರು ಯಾರು?

೪. ಗೋವಿಂದ ಪೈ ಅವರು ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ಹೇಳುವ ಮಾತುಗಳನ್ನು ವಿವರಿಸಿ.

೫. ಕನ್ನಡದ ಪ್ರಾಚೀನತೆಯ ಬಗ್ಗೆ ವಿದ್ವಾಂಸರ ನಿಲುವುಗಳೇನು?

೬. ೨೦೧೧ರ ಜನಗಣತಿ ಪ್ರಕಾರ ಕನ್ನಡ ನಾಡಿನ ಜನಸಂಖ್ಯೆ ಎಷ್ಟು?

೭. ಕವಿರಾಜಮಾರ್ಗಕಾರ ಕನ್ನಡದ ಪ್ರಭೇದದ ಬಗ್ಗೆ ಏನು ಹೇಳಿದ್ದಾನೆ?

೮. ಕನ್ನಡ ಪದದ ಮೂಲವನ್ನು ಯಾವುದರಿಂದ ಹೇಳಲಾಗಿದೆ?

೯. ಕನ್ನಡ ನಾಡಿನ ವಿಸ್ತಾರವನ್ನು ಕುರಿತು ತಿಳಿಸಿ?

೧೦. ಶಂಬಾ ಜೋಷಿಯವರು ಕನ್ನಡದ ಮೂಲವನ್ನು ಹೇಗೆ ತಿಳಿಸಿದ್ದಾರೆ?

೧೧. 'ಕವಿರಾಜಮಾರ್ಗ'ದಲ್ಲಿ ಇರುವ ವಿಷಯಗಳು ಯಾವುವು?

೧೨. ಕನ್ನಡ ಭಾಷೆಯ ಲಕ್ಷಣಗಳನ್ನು ವಿವರಿಸಿ.

೧೩. ಕನ್ನಡದಲ್ಲಿ ಸ್ವರ ಬಳಕೆಯಾಗುವ ಬಗೆಯನ್ನು ವಿವರಿಸಿ.

೧೪. ಸಜಾತೀಯ ದ್ವಿತ್ವಗಳು ಕನ್ನಡಲ್ಲಿ ಎಲ್ಲಿ ಬಳಕೆಯಾಗುತ್ತವೆ?

೧೫. ಕನ್ನಡದ ಮೊದಲ ಶಾಸನ ಯಾವುದು?

೧೬. ಕನ್ನಡದಲ್ಲಿ ಮೊದಲು ದೊರೆತಿರುವ ಗ್ರಂಥ ಯಾವುದು?

೧೭. ಭಾಷೆಯ ಅಧ್ಯಯನ ವಿಧಾನಗಳು ಯಾವುದು?

೧೮. ಕನ್ನಡ ಭಾಷೆಯನ್ನು ಅಧ್ಯಯನ ಮಾಡುತ್ತಿರುವ ಅಧ್ಯಯನ ವಿಧಾನಗಳು ಯಾವುವು?

೧೯. ತೌಲನಿಕ ಅಧ್ಯಯನವೆಂದರೇನು? ಇದರ ಪ್ರಯೋಜನವನ್ನು ಸ್ಪಷ್ಟಪಡಿಸಿ.

೨೦. ಭಾಷೆಯ ಚರಿತ್ರೆಯನ್ನು ಯಾವ ವಿಧಾನದಿಂದ ಅಧ್ಯಯನ ಮಾಡಲು ಸಾಧ್ಯ?

೨೧. ವರ್ಣನಾತ್ಮಕ ಭಾಷಾ ಅಧ್ಯಯನ ಎಂದರೇನು?

# ೨.೨. ಕನ್ನಡದ ಅವಸ್ಥಾಂತರಗಳು

## ೨.೨.೦. ಉದ್ದೇಶ

ಹಿಂದಿನ ಭಾಗದಲ್ಲಿ ಕನ್ನಡದ ಪ್ರಾಚೀನತೆಯನ್ನು ಅದರ ಸ್ವರೂಪವನ್ನು ತಿಳಿದುಕೊಂಡೆವು. ಕನ್ನಡವು ಬಹಳ ಪ್ರಾಚೀನವಾದುದು ಎಂಬುದನ್ನು ತಿಳಿದುಕೊಂಡೆವು. ಇಂದಿನ ಕನ್ನಡವು ಹಲವು ಹಂತಗಳನ್ನು ಎದುರಿಸಿ ಇವತ್ತಿನ ಸ್ಥಿತಿಯನ್ನು ತಲುಪಿದೆ. ಅವುಗಳ ಸ್ವರೂಪವನ್ನು ಈ ಭಾಗದಲ್ಲಿ ಅರಿಯುತ್ತೇವೆ.

## ೨.೨.೧. ಪೀಠಿಕೆ

ಕನ್ನಡದ ಹಲವು ಹಂತಗಳನ್ನು ಅವಸ್ಥಾಂತರಗಳೆಂದು ಕರೆಯಲಾಗುತ್ತದೆ. ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ – ಇವು ಅವಸ್ಥಾಂತರಗಳು. ಪ್ರತಿಯೊಂದು ಹಂತದ ಸ್ವರೂಪವನ್ನು ಆಯಾ ಕಾಲಘಟ್ಟದ ಶಾಸನ ಅಥವಾ ಸಾಹಿತ್ಯದ ಉದಾಹರಣೆ ಯೊಂದಿಗೆ ಈಗ ನಾವು ತಿಳಿದುಕೊಳ್ಳುತ್ತೇವೆ.

## ೨.೨.೨. ಕನ್ನಡದ ಅವಸ್ಥಾಂತರಗಳು

ಕನ್ನಡವು ಇಂದು ಈ ಇಂದಿನ ಲಕ್ಷಣಗಳನ್ನು ರೂಢಿಸಿಕೊಳ್ಳುವುದಕ್ಕೆ ಮುನ್ನ ಹಲವು ಹಂತಗಳನ್ನು ದಾಟಿ ಬಂದಿದೆ. ಇವುಗಳನ್ನು ಕನ್ನಡ ಭಾಷೆಯಲ್ಲಿನ ಬದಲಾವಣೆಯ ಘಟ್ಟಗಳು ಎಂದು ಕರೆಯುತ್ತೇವೆ. ಕೆಲವು ವಿದ್ವಾಂಸರು ಇದನ್ನು ಕನ್ನಡ ಭಾಷೆಯ ಅವಸ್ಥೆಗಳು ಎಂದೂ ಕರೆಯುತ್ತಾರೆ. ಇದನ್ನು ಕೆಲವರು ಕನ್ನಡದ ಚಾರಿತ್ರಿಕ ಪ್ರಭೇದಗಳು ಎಂದೂ ಹೇಳುತ್ತಾರೆ. ಕನ್ನಡದ ಅವಸ್ಥೆ ಎಂದರೆ – ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ. ಈ ಬೆಳವಣಿಗೆಯನ್ನು ನಕ್ಷಾತ್ಮಕವಾಗಿ ಚಿತ್ರ ೨ರಲ್ಲಿ ತೋರಿಸಲಾಗಿದೆ. ಇವೆಲ್ಲವೂ ನಿಖರವಾಗಿ ಒಂದು ಇನ್ನೊಂದರ ಮುಂದುವರಿಕೆಯಲ್ಲ. ಸ್ಥೂಲವಾಗಿ ಕ್ರಿಶ. ೯ನೆಯ ಶತಮಾನದ ಹಿಂದಿನದ್ದು ಪೂರ್ವದ ಹಳೆಗನ್ನಡವೆಂದು ಗುರುತಿಸಬಹುದು. ಮುಂದಿನ ಹಂತದಲ್ಲಿ ನಿಖರವಾಗಿ ವಿವಿಧ ಕನ್ನಡಗಳ ಕಾಲವನ್ನು ಇದೇ ಎಂದು ನಿರ್ಧರಿಸುವುದು ಕಷ್ಟ. ಈ ಒಂದೊಂದೂ ಹಂತದ ಕನ್ನಡದ ಲಕ್ಷಣ ಬೇರೆ ಬೇರೆಯಾಗಿದೆ. ಅವುಗಳ ಸ್ವರೂಪವನ್ನು ಒಂದೊಂದಾಗಿ ಪರಿಶೀಲನೆ ಮಾಡೋಣ.




ಚಿತ್ರ ೨: ಕನ್ನಡದ ಅವಸ್ಥಾಂತರಗಳ ಬೆಳವಣಿಗೆ

ignou THE PEOPLE'S UNIVERSITY

ಮೂಲದ್ರಾವಿಡವೆಂಬ ಒಂದು ಕಲ್ಪಿತ ಭಾಷೆಯಿಂದ ಕನ್ನಡವು ಬೇರೆಯಾದ ಸಂದರ್ಭದಲ್ಲಿ ಇದ್ದ ಭಾಷಾ ಲಕ್ಷಣವೊಂದನ್ನು ಕನ್ನಡಕ್ಕೆ ಊಹೆ ಮಾಡಲಾಗಿದೆ. ಸುಮಾರು ಕ್ರಿ.ಶ. ೮೫೦ರ 'ಕವಿರಾಜಮಾರ್ಗ'ಕ್ಕಿಂತ ಹಿಂದಿನ ಕನ್ನಡವನ್ನು ಶಾಸನಗಳಲ್ಲಿ ಗುರುತಿಸಲಾಗಿದೆ. 'ಕವಿರಾಜಮಾರ್ಗ'ದಲ್ಲಿ ಪಳಗನ್ನಡ ಎಂಬ ಪದವನ್ನು ಬಳಸಲಾಗಿದೆ. 'ಕವಿರಾಜಮಾರ್ಗ'ದ ಕಾಲಕ್ಕಿಂತ ಹಿಂದಿನ ಕನ್ನಡವನ್ನು ಸುಮಾರಾಗಿ ಇದು ಎಂದು ಗುರುತಿಸಬಹುದು. ಇದೇ ಸಂದರ್ಭದಲ್ಲಿ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಮಾತೆಂದರೆ ಪೂರ್ವದ ಹಳಗನ್ನಡವೆಂದು ಅಧ್ಯಯನಕ್ಕಾಗಿ ಮಾಡಿಕೊಂಡಿರುವ ವಿಭಾಗ ಮಾತ್ರ ಆಗಿದೆ. ಈ ಕಾಲಘಟ್ಟದ ಭಾಷೆಯ ಲಕ್ಷಣವು ಮುಂದಿನ ಘಟ್ಟಗಳಲ್ಲಿಯೂ ಪುನರಾವರ್ತನೆ ಯಾಗುವ ಅವಕಾಶವಿರುತ್ತದೆ. ಏಕೆಂದರೆ ಭಾಷೆಯ ಬದಲಾವಣೆ ಎಂಬುದು ಕಾಲದಲ್ಲಿ ನಿಧಾನವಾಗಿ ಜರುಗುವ ಒಂದು ಪ್ರಕ್ರಿಯೆ.

**ಅ. ಪೂರ್ವದ ಹಳಗನ್ನಡದ ಕೆಲವು ಲಕ್ಷಣಗಳು**

ಸುಮಾರು ಕ್ರಿ.ಶ. ೯ನೆಯ ಶತಮಾನಕ್ಕಿಂತ ಹಿಂದಿನ ಕನ್ನಡವನ್ನು ಪೂರ್ವದ ಹಳೆಗನ್ನಡವೆಂದು ಕರೆಯಲಾಗುತ್ತದೆ. ಈ ಕಾಲಘಟ್ಟದಲ್ಲಿ ಶಾಸನಗಳು ಹೆಚ್ಚು ದೊರಕುತ್ತವೆ. ಹಲ್ಮಿಡಿ ಶಾಸನವು ಕನ್ನಡದ ಮೊದಲ ಶಾಸನವೆಂದು ಗುರುತಿಸಲ್ಪಟ್ಟಿದೆ. ಪೂರ್ವದ ಹಳೆಗನ್ನಡದ ಲಕ್ಷಣಗಳು ಹೀಗಿವೆ:

೧. ಪೂರ್ವದ ಹಳೆಗನ್ನಡದಲ್ಲಿ ಕ್ರಿಯಾಪದಗಳಿಗೆ ಸೇರುವ ಪುರುಷವಾಚಕ ಪ್ರತ್ಯಯಗಳು ದೀರ್ಘಸ್ವರದಲ್ಲಿ ಇವೆ.
   ಉದಾ., ಕೊಟ್ಟಾರ್ (ಆರ್), ಕೊಂದೋನ್ (ಓನ್), ಪಡೆದಾನ್ (ಆನ್).

೨. ದ್ವಿತೀಯಾ ವಿಭಕ್ತಿ ಪ್ರತ್ಯಯ ದೀರ್ಘವಾಗಿದೆ.
   ಉದಾ., ಆನ್; ಕೋಟೆಯಾನ್, ನೃಪನಾನ್, ಮಿಕ್ಕುದಾನ್.

೩. ಷಷ್ಠಿ ವಿಭಕ್ತಿ ಪ್ರತ್ಯಯವೂ ದೀರ್ಘವಾಗಿದೆ.
   ಉದಾ., ನರಕದಾ, ಮಂಗಳೀಸನಾ.

೪. ನಿಷೇಧಾರ್ಥಕ ಕ್ರಿಯಾಪದ ದೀರ್ಘವಾಗಿದೆ.
   ಉದಾ., ತಪ್ಪಾದೆ. ಧ್ವನಿಗಳೂ ಕೆಲವು ವ್ಯತ್ಯಾಸದಲ್ಲಿದೆ.

೫. ಪದದ ಆದಿಯಲ್ಲಿ ವ ಕಾರವಿದೆ.
   ಉದಾ., ವೆಟ್ಟ < ಬೆಟ್ಟ, ವಿಟ್ಟಾರ್ < ಬಿಟ್ಟಾರ್.

೬. ಪೂರ್ವದ ಹಳೆಗನ್ನಡದಲ್ಲಿ ಪದದ ಮೊದಲು ಎ ಮತ್ತು ಒ ಕಾರವು ಕಂಡುಬರುತ್ತದೆ.
   ಉದಾ., ಎರ (= ಇರುವೆ), ಕಿಡು (= ಕೆಡು), ಪೊಗು (= ಪುಗು).

೭. ಪೂರ್ಣ ಕ್ರಿಯಾಪದದಲ್ಲಿ ಲಿಂಗ, ಕಾಲ, ವಚನವನ್ನು ತಿಳಿಸುವ ರೂಪಗಳು ಇಲ್ಲ. ಬದಲಾಗಿ, ಕ್ರಿಯಾಧಾತುಗಳು –ಕುಂ ಇಲ್ಲವೇ –ಗುಂ ಎಂಬ ಪ್ರತ್ಯಯಗಳೊಡನೆ ಇವೆ. ಉದಾ., ಇರ್ಕುಂ, ಬರ್ಕುಂ, ಉಳಿಗುಂ

೮. ವ್ಯಂಜನದ್ವಿತ್ವದ ಬಳಕೆ ಹೆಚ್ಚಾಗಿತ್ತು.
   ಉದಾ., ಸರ್ವ್ವ, ಧರ್ಮ್ಮ, ಸ್ವರ್ಗ್ಗ.

೯. ಸಬಿಂದುಕಗಳು ಬಳಕೆಯಲ್ಲಿದ್ದವು.
   ಉದಾ., ಬೆಡಂಗು, ದಾಂಟು.

೧೦. ಱ ಕಾರ ಮತ್ತು ೞ ಕಾರದ ಬಳಕೆ ಸ್ಪಷ್ಟವಾಗಿತ್ತು.

೧೧. ಚತುರ್ಥಿ ವಿಭಕ್ತಿ –ಕ್ಕೆ, –ಗೆ ಎಂಬ ಎರಡು ರೂಪಗಳು ಬಳಕೆಯಲ್ಲಿದ್ದವು.

ಉದಾ., ದೇವರ್ಕ್ಕೆ, ಮುತ್ತರಸರ್ಗ್ಗೆ.

ಈ ಮೇಲಿನ ಲಕ್ಷಣಗಳಿಗೆ ಉದಾಹರಣೆಯಾಗಿ ಕನ್ನಡದ ಪ್ರಥಮ ಶಾಸನವಾದ ಹಲ್ಮಿಡಿ ಶಾಸನವನ್ನು ಗಮನಿಸಿ. ಮೊದಲ ಎರಡು ಸಾಲುಗಳು ಸಂಸ್ಕೃತದಲ್ಲಿವೆ.

ಜಯತಿ ಶ್ರೀಪರಿಷ್ವಙ್ಗ ಶ್ಯಾರ್ಙ್ಗ [ವ್ಯಾನತಿ] ರಚ್ಯುತಃ ದಾನವಾಕ್ಷ್ಣೋೀರ್ಯು<br>
ಗಾನ್ತಾಗ್ನಿಃ [ಶಿಷ್ಟಾನಾನ್ತು] ಸುದರ್ಶನಃ<br>
ನಮಃ ಶ್ರೀಮತ್ಕದಂಬಪನ್ತ್ಯಾಗಸಂಪನ್ನನ್ಕಲಭೋರ [ನಾ] ಅರಿ ಕ<br>
ಕುಸ್ಥಭಟ್ಟೋರನಾಳೆ ನರಿದಾವಿ [ಳೆ] ನಾಡುಳ್ ಮೃಗೇಶ ನಾ<br>
ಗೇನ್ದ್ರಾಭೀಳರ್ಭ್ಭಟಹರಪ್ಪೊರ್ ಶ್ರೀಮೃಗೇಶನಾಗಾಹ್ವಯ<br>
ರಿರ್ವ್ವರಾ ಭಟರಿಕುಲಾಮಲವ್ಯೋಮತಾರಾಧಿನಾಥನ್ನಳಪ<br>
ಗಣಪಶುಪತಿ ಮಾದಕ್ಷಿಣಾಪಥಬಹುಶತಹವನಾ<br>
ಹವದು [ಳ್] ಪಶುಪ್ರದಾನ ಶೌರ್ಯ್ಯೋದ್ಯಮಭರಿತೋ [ನ್ದಾನ] ಪ<br>
ಶುಪತಿಯೆನ್ದು ಪೊಗಟ್ಟೆಪ್ಪೊಟ್ಟಣ ಪಶುಪತಿ<br>
ನಾಮಧೇಯನಾ ಸರಕ್ಕೆಲ್ಲಭಟರಿಯಾ ಪ್ರೇಮಾಲಯ<br>
ಸುತನ್ಗೆ ಸೇನ್ದ್ರಕ ಬಣೋಭಯ ದೇಶದಾ ವೀರಾಪುರುಷ ಸಮಕ್ಷ<br>
ದೆ ಕೇಕಯಪಲ್ಲವರಂ ಕಾದೆಱೆದು ಪೆತ್ತಜಯನಾ ವಿಜ<br>
ಅರಸನ್ಗೆ ಬಾಳ್ಗಟ್ಟು ಪಲ್ಮಡಿಉಂ ಮೂಟಿವಳ್ಳಿಉಂ ಕೊ<br>
ಟ್ಟಾರ್ ಬಟಾರಿಕುಲದೊನ್ ಅಳುಕದಮ್ಬನ್ ಕಳ್ದೋನ್ ಮಹಾಪತಾಕನ್<br>
ಇರ್ವ್ವರುಂ ಸಟ್ಬಿಙ್ಗದರ್ ವಿಜಾರಸರುಂ ಪಲ್ಮಡಿಗೆ ಕುಱು<br>
ಮ್ಬಿಡಿವಿಟ್ಟಾರ್ ಅದಾನಳಿವೊನ್ಗೆ ಮಹಾಪಾತಕಮ್ ಸ್ವಸ್ತಿ<br>
ಭಟ್ಟರ್ಗ್ಗಿಗಟ್ದಿ ಒಡ್ಡಲಿ ಆಪತ್ತೊನ್ದಿವಿಟ್ಟಾರಕರ

## ಆ. ಹಳಗನ್ನಡದ ಕೆಲವು ಲಕ್ಷಣಗಳು

ಸುಮಾರು ಕ್ರಿ.ಶ. ೯ನೆಯ ಶತಮಾನದಿಂದ ೧೨ನೆಯ ಶತಮಾನದ ಕಾಲಾವಧಿಯನ್ನು ಹಳೆಗನ್ನಡವೆಂದು ಕರೆಯಲಾಗುತ್ತದೆ. ಈ ಅವಧಿಯಲ್ಲಿ ಪಂಪ, ರನ್ನ, ಪೊನ್ನ, ನಾಗಚಂದ್ರ ಮೊದಲಾದ ಕವಿಗಳಿಂದ ಕಾವ್ಯವು ರಚನೆಯಾಗಿದೆ. ಹಳಗನ್ನಡದ ಲಕ್ಷಣಗಳು ಹೀಗಿವೆ:

೧. ಪೂರ್ವದ ಹಳಗನ್ನಡದಲ್ಲಿ ದೀರ್ಘವಾಗಿದ್ದ ಕ್ರಿಯಾಪದಕ್ಕೆ ಸೇರುವ ಪುರುಷ ಪ್ರತ್ಯಯಗಳು ಹ್ರಸ್ವವಾಗುತ್ತವೆ.
   ಉದಾ., ಸಂದಾನ್ > ಸಂದೋನ್, ಮುಡುಪ್ಪಿದಾರ್ > ಮುಡುಪ್ಪಿದರ್
೨. ಷಷ್ಠಿ ವಿಭಕ್ತಿ ಪ್ರತ್ಯಯದ ಸ್ವರ ಹಳಗನ್ನಡದಲ್ಲಿ ಹ್ರಸ್ವವಾಗುತ್ತದೆ.
   ಉದಾ., ನರಕದಾ > ನರಕದ, ಮಂಗಳೀಸನಾ > ಮಂಗಳೀಸನ
೩. ನಿಷೇಧಾರ್ಥಕ ಪ್ರತ್ಯಯಗಳ ಸ್ವರ ಹಳಗನ್ನಡದಲ್ಲಿ ಹ್ರಸ್ವವಾಗುತ್ತದೆ.
   ಉದಾ., ತಪ್ಪಾದೆ > ತಪ್ಪದೆ
೪. ಉತ್ತಮ ಪುರುಷ ಬಹುವಚನ ರೂಪಗಳಾದ ಸಮಾವೇಶಕ ಮತ್ತು ಅಸಮಾವೇಶಕ ರೂಪಗಳು ಹಳಗನ್ನಡದಲ್ಲಿ ಕಂಡುಬರುತ್ತವೆ.

ಉದಾ., ಆಮ್ (ನಿಮ್ಮನ್ನು ಬಿಟ್ಟು ನಾವು) ಅಸಮಾವೇಶಕ

ನಾಮ್ (ನಿಮ್ಮನ್ನೂ ಸೇರಿಸಿ ನಾವು) ಸಮಾವೇಶಕ

೫. ಸಪ್ತಮಿ ವಿಭಕ್ತಿಯು ಒಳ್ ಆಗಿ ಬದಲಾಗಿದೆ.

ಉದಾ., ಆಹವದುಳ್ > ಆಹವದೊಳ್

೬. ಎ ಮತ್ತು ಸ್ವರಗಳು ಇ ಮತ್ತು ಉ ಗಳಾಗಿ ಬದಲಾಗಿವೆ

ಉದಾ., ಕೆಡು > ಕಿಡು, ತೊಡು > ತುಡು

೭. ಹಳಗನ್ನಡದಲ್ಲಿ ಮ ಕಾರವು ವ ಕಾರವಾಗಿ ಬದಲಾಗುತ್ತದೆ.

ಉದಾ., ನೀಮ್ > ನೀವು, ನಾಮ್ > ನಾವು

೮. ಪ ಕಾರವು ಹ ಕಾರವಾಗಿ ಬದಲಾಗುತ್ತದೆ.

ಉದಾ., ಅಪ್ಪನ್ > ಅಹನ್

೯. ವರ್ತಮಾನಕಾಲವನ್ನು ಸೂಚಿಸಲು ದ, ದಪ / ದಪ್ಪ ಪ್ರತ್ಯಯಗಳು ಬಳಕೆಯಾಗುತ್ತಿದ್ದವು.

ಉದಾ., ಬರೆದಪ್ಪಂ, ಪೋದಪಂ

೧೦. ರಳ (ೞ)ದ ಉಚ್ಚಾರಣೆ ಕ್ರಿಸ್ತ ಶಕ ೮–೯ನೆಯ ಶತಮಾನದ ನಂತರ ಕೆಲವೆಡೆ ಅಂದರೆ ಸ್ವರದ ಮಧ್ಯ ಮತ್ತು ಪದಾಂತ್ಯದಲ್ಲಿ ಳ ಕಾರವಾಗಿ ಕೆಲವೆಡೆ ರೇಫ (ರ)ವಾಗಿ ಬದಲಾಯಿತು.

ಉದಾ., ಏೞ್ > ಏಳ್, ಬಾೞೆ > ಬಾಳೆ

ಆೞ್ದು > ಅರ್ದು, ಗೞ್ದೆ > ಗರ್ದೆ

೧೧. ಕರ್ಮಣಿ ಪ್ರಯೋಗವು ಕೇವಲ ಕವಿ ಹಾಗೂ ವಿದ್ವಾಂಸರಿಂದ ರಚನೆಯಾಗಿ ಬಳಕೆಗೊಂಡಿದೆ.

೧೨. ಕಾವ್ಯಗಳಲ್ಲಿ ಸಂಸ್ಕೃತದ ಪದಗಳು ಹೇರಳವಾಗಿ ಬಳಕೆಯಾಗಿವೆ.

೧೩. ಪ್ರೇರಣಾರ್ಥಕವಾಗಿ ಹಳೆಗನ್ನಡದಲ್ಲಿ –ಸು ಮತ್ತು –ಇಸು ರೂಪಗಳು ಬಳಕೆಗೊಂಡಿವೆ.

ಉದಾ., ಬರಿಸು, ಕೊಲ್ಲಿಸು.

ಈ ಮೇಲಿನ ಲಕ್ಷಣಗಳಿಗೆ ಉದಾಹರಣೆಯಾಗಿ ಕನ್ನಡದ ಪ್ರಥಮ ಗದ್ಯಗ್ರಂಥ 'ವಡ್ಡಾರಾಧನೆ'ಯ ಕಥೆಯೊಂದರ ಸಾಲುಗಳನ್ನು ಗಮನಿಸಿ:

> ಮತ್ತೊಂದು ದಿವಸಂ ಕೌಶಳಾಧಿಪತಿಯಪ್ಪ ಅತಿಬಲನೆಂಬರಸಂಗಂ ಕಳಿಂಗಾಧಿಪತಿ ಯಪ್ಪ ಕಾಳಿಂಗನೆಂಬರಸಂಗಂ ತಮ್ಮೊಳ್ವಿಗ್ರಹವಾದೊಡೆ ಗಂಧಭಾಜನನೃಪತಿ ತನ್ನ ಮತಿಶ್ರುತನೆಂಬ ಮಂತ್ರಿಯನಟ್ಟಿ ಇರ್ವರ್ಗ್ಗಂ ಸಂಧಿಮಾಡಿದೊಡೆ ಕಾಳಿಂಗನೆಂಬರಸಂ ಮಧುಸೂದನನೆಂಬ ತನ್ನ ಪೆರ್ಗ್ಗಡೆಯ ಕೈಯೊಳ್ಮದಾಂಧ ಗಂಧಹಸ್ತಿಯಾ ಗಂಧಬಾಜನ ನೃಪತಿಗೆ ಪಾಗುಡವಟ್ಟಿದೊಡದಂ ಸೊರ್ಕ್ಕಿನಿಂದಂ ಮಸಗಿದುದಂ ಗಂಧಹಸ್ತಿಯಂ ಸುಕೇಶಿನಿ ಕಂಡು ಜಾತಿಸ್ಮರೆಯಾಗಿ ಮೂರ್ಚ್ಛೆವೋಗಿರ್ದೊಡಂ ದಾದಿ ಮೊದಲಾಗಿ ಕೆಲ ದೊಳಿರ್ದ್ದೋರೆಲ್ಲಂ ಚಂದನದ ನೀರ್ಗಳಂತಳಿದು ಬೀಸಿ ನೀಡಱಿಂದೆೞ್ಚೆತ್ತಳನ್ನೆಗಮರಸಂ ಉತ್ತವಳನಾಗಿ ಪರಿತಂದಿದೇನೀಕೆ ಗಿಂತೇಕಾಯ್ತೆಂದು ಬೆಸಗೊಳೆ ದಾದಿಯೆಂದಳ್ ಸೊರ್ಕ್ಕಾನೆಯಂ ಕಂಡು ಮೂರ್ಚ್ಛೆವೋದಳೆಂದು...

## ಇ. ನಡುಗನ್ನಡದ ಲಕ್ಷಣಗಳು



ಸುಮಾರು ಕ್ರಿ.ಶ. ೧೨ನೆಯ ಶತಮಾನದಿಂದ ೧೮ನೆಯ ಶತಮಾನದ ಅವಧಿಯ ಕನ್ನಡವನ್ನು ನಡುಗನ್ನಡವೆಂದು ಕರೆಯಲಾಗಿದೆ.

ಈ ಕಾಲಘಟ್ಟದ ಕನ್ನಡದ ಲಕ್ಷಣಗಳು ಹೀಗಿವೆ:

೧. ವ್ಯಂಜನಾಂತಗಳಿಂದ ಕೊನೆಯಾಗುತ್ತಿದ್ದ ಪದಗಳು ಸ್ವರಾಂತಗಳಾದವು.
  ಉದಾ., ಕಣ್ಣ್ > ಕಣ್ಣು, ಕಾಲ್ > ಕಾಲು

೨. ಸರ್ವನಾಮಗಳಲ್ಲಿ ಮ್ ಕಾರವು ವ್ ಕಾರವಾಗುತ್ತದೆ.
  ಉದಾ., ನೀಮ್ > ನೀವು

೩. ಪದದ ಮಧ್ಯದಲ್ಲಿ ಸ್ವರಭಕ್ತಿಯು ವಿಜಾತೀಯ ದ್ವಿತ್ವಗಳ ಸಂದರ್ಭದಲ್ಲಿ ಕಾಣಿಸಿಕೊಂಡಿತು.
  ಉದಾ., ಭಕ್ತಿ > ಭಕುತಿ, ಮುಕ್ತಿ > ಮುಕುತಿ

೪. ಅನ್ಯಭಾಷೆಯ ಪದಗಳು ಈ ಕಾಲಘಟ್ಟದಲ್ಲಿ ಹೆಚ್ಚುಹೆಚ್ಚಾಗಿ ಸೇರಿಕೊಂಡವು.

೫. ಱ ಮತ್ತು ರ ಧ್ವನಿಗಳ ನಡುವೆ ಭೇದ ಇಲ್ಲವಾಗಿ ರ ಕಾರವನ್ನೇ ಬಳಸುವಂತಾಯಿತು.

೬. ೞ ಧ್ವನಿಯು ಳ ಧ್ವನಿಯಾಗಿ ಬದಲಾಯಿತು.
  ಉದಾ., ಬಾೞ > ಬಾಳು

೭. ಪ ಧ್ವನಿಯು ಹ ಕಾರವಾಗುವುದು ಪೂರ್ಣಗೊಂಡಿತು.
  ಉದಾ., ಪಂದಿ > ಹಂದಿ, ಪಲಗೆ > ಹಲಗೆ

೮. ಸಂಸ್ಕೃತ ಪದಗಳ ಬದಲಾಗಿ ತದ್ಭವ, ಅಪಭ್ರಂಶ ಪದಗಳು ಹೆಚ್ಚಾದವು.
  ಉದಾ., ಆಕಾಶ > ಆಗಸ

೯. ಲ್ ಕಾರದ ಸ್ಥಾನದಲ್ಲಿ ಳ್ ಕಾರ ಬಳಕೆ ರೂಢಿಗೆ ಬಂದಿತು.
  ಉದಾ., ಬೆರಲ್ > ಬೆರಳು

ನಡುಗನ್ನಡದಲ್ಲಿ ಕನ್ನಡದ ಛಂದಸ್ಸಾದ ತ್ರಿಪದಿ, ಷಟ್ಪದಿ, ಸಾಂಗತ್ಯ ಇಂತಹವನ್ನು ಬಳಸಿಕೊಂಡು ಸಾಕಷ್ಟು ಜನ ಕವಿಗಳು ತಮ್ಮ ಸಾಹಿತ್ಯವನ್ನು ರಚನೆ ಮಾಡಿದ್ದಾರೆ. ಪ್ರಸಿದ್ಧವಾದ ಕನ್ನಡದ ವಚನ ಸಾಹಿತ್ಯವು ಈ ಕಾಲಘಟ್ಟದ್ದೇ ಆಗಿದೆ. ಜನರು ತಾವು ಬಳಸುತ್ತಿದ್ದ ಕನ್ನಡದಲ್ಲಿ ವಚನಗಳನ್ನು ಕಟ್ಟಿದ್ದಾರೆ. ಹರಿಹರ, ರಾಘವಾಂಕ, ಕುಮಾರವ್ಯಾಸ, ಚಾಮರಸ, ರತ್ನಾಕರವರ್ಣಿ ಇವರೆಲ್ಲರೂ ನಡುಗನ್ನಡಕ್ಕೆ ಸೇರಿದ ಕವಿಗಳು. ಇದನ್ನು ಮಧ್ಯಕಾಲೀನ ಸಾಹಿತ್ಯವೆಂದೂ ಹೇಳುತ್ತಾರೆ.

ಉದಾಹರಣೆಗಾಗಿ, ಹರಿಹರನ 'ಮಲುಹಣನ ರಗಳೆ'ಯ ಭಾಗವನ್ನು ಗಮನಿಸಿ:

> ಇತ್ತ ಮಲುಹಣದೇವಂ ವಿಜಯೇಶ್ವರ ದೇವರ ದಿವ್ಯಪಾದ ಪ್ರಣುತ
> ನಿತ್ಯ ನಿಯಮಾಸಕ್ತನಾಗಿ ನೊಸಲೊಳಿಟ್ಟ ಭಸಿತದ ಕೀಲಿಸಿದ ಕರ್ಣಾಭರಣದ
> ಕೈಗೊಳಿಸಿದ ತೋರಹಾರದ ಉಟ್ಟು ಹೊದೆದ ಹೊಸದುಕೂಲದ
> ಕಿವಿಯೊಳಂಕೆಗೊಂಡ ಮೃಗಮದದ ಕಕ್ಷಪುಟದೊಳ್ಮಗಮಗಿಪ ಕತ್ತುರಿಯ
> ಸಾರದ ಉದ್ವರ್ತನಂಗೆಯ್ಯ ಚಂದನದ ತುರುಂಬಿದ ಕುಸುಮಾವಳಿಯ
> ಪೊಸಕಂಪುಂ ಸೊಗಯಿಸುವ ಸೊಂಪುಂ ಮೋಹಿಸುವ ಬೆಳಗುಂ
> ಮುಪ್ಪುರಿಗೊಂಡು ಬಳಸಿ ಬೀದಿವರೆಯೆ ಏರುಂಜವ್ವನದುರ್ಬು ಕೊರ್ಬು
> ಪರ್ಬುಗೆವಡೆಯೆ ನಿಜನಿಯಮಮಂ ಪೊರಮಟ್ಟು ಬರ್ಪಾಗಳ್...

## ಈ. ಹೊಸಗನ್ನಡದ ಕೆಲವು ಲಕ್ಷಣಗಳು

ಈ ಕಾಲಘಟ್ಟದಲ್ಲಿ ಬರಹವು ಹೆಚ್ಚುಹೆಚ್ಚಾಗಿ ಬಳಕೆಗೆ ಬಂದಿತು. ಇದರಿಂದಾಗಿ ಕನ್ನಡದಲ್ಲಿ ಎರಡು ಸ್ತರಗಳು ಮುಖ್ಯವಾಗಿ ಕಂಡುಬರುತ್ತವೆ. ಬರಹ ಮತ್ತು ಶಿಷ್ಟ ಕನ್ನಡವು ಒಂದು ಬಗೆಯಾದರೆ ಪ್ರಾದೇಶಿಕತೆಯನ್ನು ಬಳಸಿಕೊಂಡ ಆಡುಮಾತಿನ ಶೈಲಿ – ಇವು ಕನ್ನಡದ ಸ್ತರಗಳು. ಇವೆರಡರ ನಡುವೆ ಭಿನ್ನತೆ ಇದೆ. ಔಪಚಾರಿಕವಾಗಿ ಬಳಸುವ ಕನ್ನಡ ಮತ್ತು ಆಡುಮಾತಿನ ಸಂದರ್ಭದ ಕನ್ನಡ (ಅನೌಪಚಾರಿಕ ಕನ್ನಡ) ಇವೆರಡರ ನಡುವೆ ಸ್ಪಷ್ಟವಾಗಿ ಕಾಣುವ ವ್ಯತ್ಯಾಸವು ಈ ಅವಧಿಯಲ್ಲಿ ಹೆಚ್ಚು ಖಚಿತಗೊಂಡಿತು. ಇದರೊಡನೆ ಕಾಣುವ ಹೊಸಗನ್ನಡದ ರೂಪಗಳು ಹೀಗಿವೆ:

೧. ಅಡೆ ಎನ್ನುವ ಪಕ್ಷಾರ್ಥ ಹೊಸಗನ್ನಡಲ್ಲಿ ಸೇರಿತು.
   ಉದಾ., ಹೋದಡೆ

೨. ಅರಬ್ಬಿ, ಪೋರ್ಚುಗೀಸ್, ಇಂಗ್ಲಿಷ್ ಭಾಷೆಯ ಪದಗಳು ಹೆಚ್ಚಾಗಿ ಹೊಸಗನ್ನಡದಲ್ಲಿ ಕಂಡುಬಂದವು.

   ಉದಾ., ಕುರ್ಸಿ, ಮೇಜು, ಬಸ್ಸು.

೩. ಫ಼್, ಜ಼್ ಧ್ವನಿಗಳು ಹೊಸಗನ್ನಡದಲ್ಲಿ ಸೇರಿದವು.
   ಉದಾ., ಫ಼ಾರಿನ್ನು, ಜ಼ಹಜು

೪. ಹೊಸಗನ್ನಡದಲ್ಲಿ ಅಸ್ತಿತ್ವವಾಚಿಯಾದ ಇದೆ, ಇವೆ ಎಂಬುದು ಸ್ಪಷ್ಟವಾಗಿ ಕಾಣಿಸಿತು.
   ಉದಾ., ಅವನು ಇದ್ದಾನೆ

೫. ವ್ಯಂಜನಾಂತ ಪದಗಳು ಸ್ವರಾಂತಗಳಾಗಿ ಬಳಕೆಯಾದವು.
   ಉದಾ., ಊರ್ > ಊರು

೬. ಹೊಸಗನ್ನಡದಲ್ಲಿ ಸಾಮಾಜಿಕ ಮತ್ತು ಪ್ರಾದೇಶಿಕ ಪ್ರಭೇದಗಳು ಅರಿವಿಗೆ ಬಂದಿತು.

೭. ಕನ್ನಡದ ಹಲವಾರು ಪದಗಳು ಬಳಕೆಯಿಂದ ಮಾಯವಾಗಿ ಅವುಗಳ ಸ್ಥಳದಲ್ಲಿ ಇಂಗ್ಲಿಷು ಮತ್ತು ಸಂಸ್ಕೃತ ಪದಗಳು ಬಳಕೆಗೆ ಬಂದವು.

೮. ವರ್ತಮಾನದಲ್ಲಿ ನಿರಂತರತೆಯನ್ನು ಹೇಳುವ ಪ್ರತ್ಯಯವಾಗಿ –ಉತ್ತ ಬಳಕೆಯಾಗ ತೊಡಗಿತು.

ಹೊಸಗನ್ನಡದಲ್ಲಿ ಆದ ಹಲವಾರು ಬದಲಾವಣೆಗಳು ವಸಾಹತುಶಾಹಿಯ ಪ್ರಭಾವದಿಂದ ಆಯಿತು ಎಂದು ಹೇಳಲಾಗುತ್ತದೆ. ಇಂಗ್ಲಿಷರು ತಮ್ಮ ಶಿಕ್ಷಣವ್ಯವಸ್ಥೆಯನ್ನು ಭಾರತದಲ್ಲಿ ತಂದ ಕಾರಣದಿಂದ ಭಾಷೆಯ ಬಳಕೆಯಲ್ಲಿಯೂ ಬದಲಾವಣೆ ಆಯಿತು ಎಂದು ಹೇಳಲಾಗುತ್ತದೆ. ಆದರೆ ನಡುಗನ್ನಡದ ಕಾಲಕ್ಕಾಗಲೇ ಆಡುಮಾತಿನ ಲಕ್ಷಣಗಳು ಕಾಣಿಸಿ ಕೊಂಡಿರುವುದನ್ನು ನೋಡಿದ್ದೇವೆ. ಕ್ರಿ.ಶ. ೧೭ನೆಯ ಶತಮಾನದಲ್ಲಿದ್ದ ಸಂಚಿ ಹೊನ್ನಮ್ಮನ 'ಹದಿಬದೆಯ ಧರ್ಮ' ಎಂಬ ಕೃತಿಯಲ್ಲಿ ಹೊಸಗನ್ನಡದ ಲಕ್ಷಣಗಳು ಸಾಕಷ್ಟು ಕಾಣಿಸಿಕೊಂಡಿವೆ. ಉದಾಹರಣೆಗೆ ಅವಳ ಈ ಪದ್ಯವನ್ನು ಗಮನಿಸಿ: 'ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ / ಪೆಣ್ಣಲ್ಲವೆ ಪೊರೆದವಳು' ಈ ಸಾಲುಗಳಲ್ಲಿ ಕನ್ನಡದ ಬದಲಾವಣೆಯು ಸ್ಪಷ್ಟವಾಗಿ ಕಾಣಿಸುತ್ತಿದೆ. ವಸಾಹತುಶಾಹಿಯಿಂದ ಇಂಗ್ಲಿಷ್ ಪದಗಳು ಕನ್ನಡದಲ್ಲಿ ಬಳಕೆಯಾಗುವುದು ಹೆಚ್ಚಾಯಿತು. ಹಾಗೂ ಕನ್ನಡದ ಬಳಕೆಯು ತೀವ್ರಗೊಳ್ಳಲು ಶಿಕ್ಷಣ ಮತ್ತು ಪತ್ರಿಕೋದ್ಯಮ ಕಾರಣವಾಯಿತು. ಮುದ್ರಣ ಯಂತ್ರವು ಪುಸ್ತಕವನ್ನು ಅಚ್ಚು ಹಾಕಿಸಲು, ಆ ಮೂಲಕ ಹೆಚ್ಚು ಹೆಚ್ಚು ಜನರು ಅಕ್ಷರಕ್ಕೆ ತೆರೆದುಕೊಳ್ಳಲು ಕಾರಣವಾಯಿತು. ಈ ಕಾಲಘಟ್ಟದಲ್ಲಿ ಸಾಹಿತ್ಯ ಚಟುವಟಿಕೆಗಳು ತೀವ್ರಗೊಂಡವು.

ಉದಾಹರಣೆಗೆ, ಅ.ನ.ಕೃ. ಅವರ 'ಸಂಧ್ಯಾರಾಗ' ಕಾದಂಬರಿಯ ಈ ಭಾಗವನ್ನು ಗಮನಿಸಿ:

> ಭಜನೆಮನೆ ಸಾಲುವುದಿಲ್ಲವೆಂದು ಮುಂದೆ ಒಂದು ದೊಡ್ಡ ಚಪ್ಪರವನ್ನೇ ಎಬ್ಬಿಸಿಬಿಟ್ಟರು. ಅಡಿಕೆ ಮರಗಳಿಗೂ, ತೆಂಗಿನ ಗರಿಗಳಿಗೂ ಏನೂ ಕ್ಷಾಮ ವಿರಲಿಲ್ಲ. ಸೊಗಸಾಗಿ ಚಪ್ಪರ ಹಾಕಿ ಕಂಬಕ್ಕೆಲ್ಲಾ ಕಾಡುಹೂವಿನ ಅಲಂಕಾರ ಮಾಡಿ ಹಾಡುವವರಿಗೆ ಗರ್ಲ್ಸ್ ಸ್ಕೂಲಿನಿಂದ ನಾಲ್ಕು ಬೆಂಚು ತರಿಸಿ ವೇದಿಕೆ ಹಾಕಿಸಿ ಪೆಟ್ರೊಮ್ಯಾಕ್ಸ್ ದೀಪದ ವ್ಯವಸ್ಥೆಮಾಡಿ ಜರ್ಬು ಮಾಡಿಬಿಟ್ಟರು. ಪಕ್ಕವಾದ್ಯಗಳಿಗೆ ಯಥಾಪ್ರಕಾರ ರಂಗಸ್ವಾಮಿ ಅಯ್ಯಂಗಾರಿ, ವೆಂಕಟಶಾಮಿ ಕುಳಿತರು.

ಇದುವರೆಗೆ ಉದಾಹರಣೆ ಸಮೇತ ಕನ್ನಡದಲ್ಲಿರುವ ವಿವಿಧ ಕಾಲಘಟ್ಟಗಳ ಕನ್ನಡದ ಸ್ವರೂಪವನ್ನು ನೋಡಿದೆವು. ಈಗಾಗಲೇ ತಿಳಿಸಿರುವಂತೆ ಆಧುನಿಕ ಸಂದರ್ಭದಲ್ಲಿಯೂ ಕವಿಗಳು ಹಳೆಗನ್ನಡವನ್ನು ತಮ್ಮ ಕಾವ್ಯದಲ್ಲಿ ಬಳಸಿಕೊಂಡಿದ್ದಾರೆ. ಇದಕ್ಕೆ ಉದಾಹರಣೆ ಎಂದರೆ ಕುವೆಂಪು ಅವರ 'ರಾಮಾಯಣ ದರ್ಶನಂ' ಕೃತಿ. ಇದರಲ್ಲಿ ಕವಿ ಹಳೆಗನ್ನಡ, ನಡುಗನ್ನಡದ ಭಾಷೆಯನ್ನು ಬಳಸಿಕೊಂಡು ತಮ್ಮ ಕಾವ್ಯವನ್ನು ಕಟ್ಟಿದ್ದಾರೆ. ಕವಿ ತನ್ನ ಸ್ವಂತ ಆಯ್ಕೆಯಿಂದ ಮಾಡಿಕೊಂಡಿರುವ ವ್ಯತ್ಯಾಸವಾದರೂ ಇದನ್ನು ಈಗಲೂ ಓದಲು ಸಾಧ್ಯ. ಹೀಗಾಗಿ ಒಂದು ಕಾಲಘಟ್ಟದ ಕನ್ನಡವು ಸಂಪೂರ್ಣವಾಗಿ ಅಳಿಸಿ ಹೋಗಿರುತ್ತದೆ ಎಂದು ಹೇಳಲಾಗುವುದಿಲ್ಲ. ವರ್ಣನಾತ್ಮಕ ಭಾಷಾ ವಿಜ್ಞಾನವು ಆಡುಮಾತನ್ನು ಕೇಂದ್ರೀಕರಿಸಿ ಒಂದು ಕಾಲಘಟ್ಟದ ಭಾಷೆಯ ಸ್ವರೂಪವನ್ನು ಗುರುತಿಸುವಲ್ಲಿ ಪ್ರಧಾನವಾದ ಒಂದು ರೂಪುರೇಷೆಯನ್ನು ಒದಗಿಸುತ್ತಿರುತ್ತದೆ. ಇದರಿಂದ ಒಂದು ಘಟ್ಟದ ಭಾಷೆಯು ಇನ್ನೊಂದು ಘಟ್ಟದ ಮುಂದುವರಿಕೆಯಲ್ಲ. ಪೂರ್ವದ ಹಳೆಗನ್ನಡದ ಮುಂದುವರಿದ ಸ್ವರೂಪವಾಗಿ ಹಳೆಗನ್ನಡವೆಂದು ತಿಳಿಯಲು ಆಗುವುದಿಲ್ಲ. ಉದಾಹರಣೆಗೆ, ಪೂರ್ವದ ಹಳೆಗನ್ನಡದ ಉತ್ತಮ ಪುರುಷ ಬಹುವಚನದ ಸಮಾವಿಷ್ಟ (ನಾಮ್) ಮತ್ತು ಅಸಮಾವಿಷ್ಟವು (ಆಮ್) ಹಳೆಗನ್ನಡಲ್ಲಿಯೂ ಮುಂದುವರಿದಿತ್ತು. ಈಗಲೂ ಹವ್ಯಕ ಕನ್ನಡದ ಭಾಷೆಯಲ್ಲಿ ಉಳಿದಿದೆ. ಹೀಗಾಗಿ ಮೇಲೆ ಹೇಳಿದ ಘಟ್ಟಗಳು ಸ್ಥೂಲವಾಗಿ ಒಂದು ಕಾಲಘಟ್ಟದ ಭಾಷಾ ಸ್ವರೂಪವೆಂದು ಹೇಳಲು ಸಾಧ್ಯ.

**ಅಭ್ಯಾಸ ೨**

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಪೂರ್ವದ ಹಳೆಗನ್ನಡವನ್ನು ಯಾವ ಕಾಲದಿಂದ ಗುರುತಿಸಲಾಗುತ್ತದೆ ಮತ್ತು ಇದರ ಸ್ವರೂಪವೇನು?

೨. ಯಾವುದರ ಆಧಾರದಿಂದ ಪೂರ್ವದ ಹಳೆಗನ್ನಡವನ್ನು ಗುರ್ತಿಸಲಾಗುತ್ತಿದೆ?

೩. ಹಳೆಗನ್ನಡದ ಸ್ವರೂಪವೇನು?

೪. ಪೂರ್ವದ ಹಳೆಗನ್ನಡದ ಸ್ವರೂಪವು ಹಳೆಗನ್ನಡದಲ್ಲಿಯೂ ಮುಂದುವರಿದಿದೆಯೇ?

೫. ನಿಮಗೆ ಕೊಟ್ಟಿರುವ ಉದಾಹರಣೆಯಲ್ಲಿ ಹಳೆಗನ್ನಡದ ಸ್ವರೂಪವನ್ನು ಗುರುತಿಸಿ.

೬. ಹಳೆಗನ್ನಡದ ಇಬ್ಬರು ಕವಿಗಳನ್ನು ಹೆಸರಿಸಿ, ಅವರ ಕಾವ್ಯಗಳ ಹೆಸರು ಹೇಳಿ.

೭. ಕನ್ನಡದ ಅವಸ್ಥಾಂತರ ಎಂದರೇನು? ವಿವರಿಸಿ.

೮. ನಡುಗನ್ನಡ ಎಂದರೇನು?

೯. ನಡುಗನ್ನಡದ ಕವಿಗಳನ್ನು ಹೆಸರಿಸಿ.

೧೦. ನಿಮಗೆ ನೀಡಿರುವ ಉದಾಹರಣೆಯಲ್ಲಿರುವ ನಡುಗನ್ನಡದ ಲಕ್ಷಣವನ್ನು ವಿವರಿಸಿ.

೧೧. ಹೊಸಗನ್ನಡದ ಲಕ್ಷಣವನ್ನು ತಿಳಿಸಿ.

೧೨. ಹೊಸಗನ್ನಡದಲ್ಲಿ ಸಾಹಿತ್ಯದ ಚಟುವಟಿಕೆ ಹೆಚ್ಚಾಗಲು ಕಾರಣವೇನು?

೧೩. ಈ ಕೆಳಗಿನ ಉದಾಹರಣೆಗಳು ಭಾಷೆಯ ಯಾವ ಅವಸ್ಥೆಗೆ ಸೇರುತ್ತವೆ ಎಂಬುದನ್ನು ಗುರುತಿಸಿ.

೧. ದೇವಪುರದ ಜನರಲ್ಲಿ ಬಹುಪಾಲು ಧರ್ಮಶ್ರದ್ಧೆ ಉಳ್ಳವರು. ಅಮೂರ್ತದಲ್ಲಿ ನಂಬಿಕೆ ಇರುವವರು, ಆಧ್ಯಾತ್ಮವಾದಿಗಳು, ತಿರುಪತಿ, ಧರ್ಮಸ್ಥಳ, ಈಚೆಗೆ ಅಯ್ಯಪ್ಪ ಸ್ವಾಮಿ, ಈ ಎಲ್ಲಾ ಕಡೆಗೂ ಹೋಗಿ ಶಕ್ತ್ಯಾನುಸಾರ ಹರಕೆ ಒಪ್ಪಿಸಿ ಬರುವವರು. ದುಡ್ಡು ಮಾಡುವ ಹಂಬಲ ಉಳ್ಳವರಾದರೂ ತಮ್ಮ ಅಮೂರ್ತ ಆಸೆಗಳ ವ್ಯಕ್ತ ಸಂಕೇತದಂತಿರುವ ದುಡ್ಡಿಗೂ ದೇವರಿಗೂ ನಡುವೆ ಯಾವ ವಿರೋಧಾಭಾಸವನ್ನೂ ಅವರು ಕಾಣಲಿಲ್ಲ. ಅದಕ್ಕೆ ಮಟ್ಕಾ, ಲಾಟ್ರಿ, ಸಟ್ಟಾಗಳೆಲ್ಲ ಊರಿಗೆ ಕಾಲಿಟ್ಟಾಗ ಅವೆಲ್ಲಾ ತಮ್ಮ ಧಾರ್ಮಿಕ ಜೀವನದ ವಿಸ್ತರಣೆಗಳಂತೆಯೇ ಕಂಡವು. ಎಲ್ಲಿಂದಲೋ ಬರುವ ನಂಬರಿನಿಂದ ಇಲ್ಲಿ ನಡೆಯುವ ಬಟವಾಡೆ, ಯಾವುದೋ ಟಿಕೆಟ್ಟಿಗೆ ಉದುರುವ ದುಡ್ಡು ಅವರ ಅಮೂರ್ತದ ನಂಬಿಕೆಯನ್ನು ದೃಢಪಡಿಸುತ್ತಲೇ ಹೋಯ್ತು, ಕಾಸಿಗೆ ಕಾಸು ಗಂಟು ಹಾಕುತ್ತಾ ಹೋದಂತೆ ಅವರ ಆಧ್ಯಾತ್ಮಿಕ ಶ್ರದ್ಧೆಯೂ ಬೆಳೆಯುತ್ತಾ ಹೋಯ್ತು.

೨. ಅನ್ನೆಗಮಿತ್ತ ಶಂತನುತನೂಜನುಂ ಮಂದಾಕಿನೀನಂದನನುಂ ವಸಿಷ್ಠಶಾಪ ವಸುಂಧರಾವತೀರ್ಣಾವಶಿಷ್ಟವಸುವುಂ ಜಾಮದಗ್ನ್ಯಶಿಷ್ಯನುಂ ಪರಶುರಾಮ ವಿಜಯಿಯುಂ ಕನಕತಾಳಧ್ವಜನುಂ ದೇವವ್ರತಿಯುಂ ಸ್ವೇಚ್ಛಾಮೃತ್ಯುವುಂ ಕುರುಕುಲ ಪಿತಾಮಹನುಂ ಆಹವಭೀಷ್ಮನುಮೆನಿಸಿದ ಭೀಷ್ಮನ ಶರಶಯನದೊಳಂ ಭಾರದ್ವಾಜ ಗೋತ್ರನುಂ ಕುಂಭಸಂಭವನುಮುಭಯಬಲ ಪ್ರಧಾನೋಪಾಧ್ಯಾಯನುಂ ತ್ರೈಲೋಕ್ಯಧನುರ್ಧರನುಂ ರುದ್ರಾವತಾರ ಜನಕನುಂ ಜಾಮದಗ್ನ್ಯಶಸ್ತ್ರ ಸ್ವಪ್ರತಿಗ್ರಹಪ್ರಣಯ ಪವಿತ್ರಪ್ರಭಾವನುಂ ಚಾಪಸಾಮರ್ಥ್ಯ ಸಂಪನ್ನನುಂ ಶೋಣಾಶ್ವಸೇನ ಯಜ್ಞಸಾರಥಿಯುಂ ಕನಕಕಲಶಧ್ವಜನುಮೆನಿಸಿದ ಬಿಲ್ಲ ಜಾಣಂ ದ್ರೋಣನಟಿುವಿನೊಳಂ ಸಿಂಧು ದೇಶಾಧೀಶ್ವರನುಂ ದುಶ್ಶಳೆಯ ಮನೋನಯನ ವಲ್ಲಭನುಂ ಶಲ್ಯಸಾರಥಿಯುಂ ದುಶ್ಶಾಸನನ ಮನೋರಥಸಾರಥಿಯುಮೆನಿಸಿದ ತನ್ನ ಮೈದುನಂ ಜಯದ್ರಥನ ವಿಪತ್ತಿನೊಳಂ ಭೌಮಸುತನುಂ...

೩. ಇಂತು ದಕ್ಷಿಣದೇಶಮಂ ಪೊಕ್ಕು ಚೋಳಂಗೆ ಪ್ರತ್ಯಕ್ಷಮಂ ತೋರಿ ಕಂಥೆಯಕ ಮನೀಯರೂಪಂ ವಜ್ರಕುಂಡಲದ ವಜ್ರಧರಂ ಲಾಕುಳದ ಲೋಕೈಕಬಂಧು ಮೆಟ್ಟಿದ ಪಾವುಗೆಯಕಟ್ಟಧಿಕಂ ಕೋವಣದ ಭಾವಕಂ ಅಂಗಜರಿಪುವೆನಿಸಿರ್ದ ರೇವಣಸಿದ್ಧಂ ಸಿದ್ಧಕುಲಚಕ್ರವರ್ತಿ ತಿರುಗಿ ಬಂದುತ್ತರ ದಿಶಾಭಾಗದ ಮಾಸನೂರ ಪೊರಗಿರ್ಪ ಶಿವಾಲಯದೊಳಗವತರಿಸಿ ಸಂಧ್ಯಾಸಮಯದೊಳ್ರಂಗಮಂಟಪದ ನಡುವೆ ಸಾರ್ದು ಕುಳ್ಳಿರ್ಪುದು, ಅಲ್ಲಿಯ ಪೂಜಾರಿ ಕಂಡು ಎಲೆಯಯ್ಯ ಎಲೆಸಿದ್ಧ ಇಲ್ಲೇಕಿರ್ದಪೆ...

೪. ಸ್ವಸ್ತಿ ಶ್ರೀಮತ್ಪ್ರಿ[ಪೃ]ಥಿವೀವಲ್ಲಭ ಮಂಗಲೀಸ[ಶ]ನಾ
ಕಲ್ಮನೆಗೆ ಇತ್ತೊದು ಲಂಜಿಗೇಸರಂ ದೇವರ್ಕೆ ಪೂನಿಜುವ
ಮಾಲ[ಲಾ]ಕಾರರ್ಗ್ಗೆ ಅರ್ದ್ಧ ವಿಸದಿ ಇತ್ತೊದಾನಟಿವೊನ್
ಪಞ್ಚಮಹಾಪಾತಕನಕುಂ[ಕ್ಕುಂ] ಏಟನೆಯಾ ನರಕದಾ
ಪುಟು ಅಕು[ಕ್ಕು]ಮ್.

## ೨.೩. ಕನ್ನಡದ ಭಾಷಾ ಪ್ರಭೇದಗಳು

### ೨.೩.೦. ಉದ್ದೇಶ

ಕನ್ನಡ ಭಾಷೆಯಲ್ಲಿ ಅವಸ್ಥಾಂತರಗಳು ಇರುವ ಬಗೆಯನ್ನು ತಿಳಿದೆವು. ಈಗ ರೂಢಿಯಲ್ಲಿರುವ ಕನ್ನಡದಲ್ಲಿ ವಿವಿಧ ಬಗೆಗಳಿವೆ. ಕರ್ನಾಟಕದಲ್ಲಿ ಕನ್ನಡ ಮಾತನ್ನು ಆಡುವವರಲ್ಲಿಯೇ ವ್ಯತ್ಯಾಸಗಳಿವೆ. ಅವುಗಳನ್ನು ಈ ಮುಂದಿನ ಭಾಗದಲ್ಲಿ ವಿವರವಾಗಿ ತಿಳಿಯೋಣ.

### ೨.೩.೧. ಪೀಠಿಕೆ

ಕನ್ನಡದಲ್ಲಿ ಪ್ರಾದೇಶಿಕ ಪ್ರಭೇದ ಮತ್ತು ಸಾಮಾಜಿಕ ಪ್ರಭೇದಗಳೆಂಬ ಎರಡು ಬಗೆಯನ್ನು ಗುರುತಿಸಿದೆ. ಪ್ರಾದೇಶಿಕತೆಯ ಆಧಾರದ ಮೇಲೆ ಕನ್ನಡದ ವ್ಯತ್ಯಾಸಗಳನ್ನೂ ಹಾಗೂ ಅದರ ಲಕ್ಷಣಗಳನ್ನೂ ನೋಡಬಹುದು. ಹಾಗೆಯೇ ಕನ್ನಡ ಭಾಷೆಯನ್ನು ಮಾತನಾಡುವ ಸಮುದಾಯದಲ್ಲಿ ಆಯಾ ಸಮುದಾಯಕ್ಕೆ ತಕ್ಕಂತೆ ಬದಲಾವಣೆಗಳಿರುವುದನ್ನು ಗಮನಿಸಲಾಗಿದೆ. ಇದರ ಸ್ವರೂಪವನ್ನು ಈ ಭಾಗದಲ್ಲಿ ವಿವರವಾಗಿ ಅಧ್ಯಯನ ಮಾಡುತ್ತೇವೆ.

### ೨.೩.೨. ಕನ್ನಡ ಭಾಷಾ ಪ್ರಭೇದಗಳು ಮತ್ತು ಅವುಗಳ ಬಗೆಗಳು

ಕನ್ನಡ ಭಾಷೆಯಲ್ಲಿ 'ಹಲವು ಕನ್ನಡಂಗಳ್' ಇವೆ ಎಂದು ಕವಿರಾಜಮಾರ್ಗಕಾರ ಗುರುತಿಸಿ ಕನ್ನಡದ ಈ ಬಗೆಗಳಿಂದ 'ವಾಸುಗಿಯುಂ ಬೇಸರುಗಂ' ಎಂದು ಹೇಳುತ್ತಾನೆ. ಇದು ಕನ್ನಡ ಭಾಷೆಯಲ್ಲಿನ ಹಲವು ಬಗೆಗಳು ಬಹಳ ಹಿಂದಿನಿಂದಲೇ ಇದೆ ಎಂದು ಗುರುತಿಸಿರುವ ಮಾತಾಗಿದೆ. ಕನ್ನಡ ನಾಡಿನಲ್ಲಿ ಹಲವು ಭಾಷೆಗಳ ಸಂಪರ್ಕ ಒದಗಿಬಂದಿದೆ. ಮೊದಲು ಪ್ರಾಕೃತ, ಸಂಸ್ಕೃತ, ನಂತರದಲ್ಲಿ ಅರಬ್ಬಿ, ಪರ್ಷಿಯನ್, ಮರಾಠಿ, ತಮಿಳು, ತೆಲುಗು, ಮಲೆಯಾಳಂ, ಇಂಗ್ಲಿಷ್ ಭಾಷಾ ಸಂಪರ್ಕವು ಒಂದೊಂದು ಪ್ರದೇಶದಲ್ಲಿ ಒಂದೊಂದು ವಿಧವಾಗಿ ಆಗಿದೆ. ಇದರೊಡನೆ ಭೌಗೋಳಿಕವಾದ ಪರ್ವತ, ಬೆಟ್ಟ, ಗುಡ್ಡ, ನದಿಗಳ ಕಾರಣದಿಂದ ಜನರ ಓಡಾಟವು ಮಿತಿಗೊಂಡು ಅಲ್ಲಲ್ಲಿಗೆಯೇ ಸೀಮಿತಗೊಂಡ ಜನರ ಭಾಷೆಯೂ ಒಂದೊಂದು ಬಗೆಯ ವಿಶಿಷ್ಟತೆಯಿಂದ ಕೂಡಿದೆ. ಇಂತಹದ್ದನ್ನು ಪ್ರಭೇದ ಎನ್ನಲಾಗುತ್ತದೆ. ಪ್ರಭೇದಗಳ ನಡುವೆ ಶಬ್ದಕೋಶ, ಉಚ್ಚಾರಣೆ ಮತ್ತು ವ್ಯಾಕರಣದಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸವಿರುತ್ತದೆ. ಹೀಗೆ ಎದ್ದು ತೋರುವ ವ್ಯತ್ಯಾಸಗಳು ಭಾಷೆಯನ್ನು ಅರ್ಥ ಮಾಡಿಕೊಳ್ಳಲು ತೊಡಕು ಉಂಟಾಗದೇ ಇರುವುದು ಪ್ರಭೇದಗಳಲ್ಲಿ ಕಂಡುಬರುತ್ತದೆ. ಹೀಗೆ ಗಮನಾರ್ಹವಾದ ವ್ಯತ್ಯಾಸ ಇರುವುದನ್ನು ಉಪಭಾಷೆ ಎಂದು ಕರೆಯಲಾಗಿದೆ.

| ಪ್ರಾದೇಶಿಕ ಪ್ರಬೇಧಗಳು | ಸಾಮಾಜಿಕ ಪ್ರಬೇಧಗಳು | ಬಹುಭಾಷಿಕತೆ |
|---|---|---|
| ಮೈಸೂರು ಕನ್ನಡ | ಬಡಗ ಕನ್ನಡ<br>ಸೋಲಿಗ ಕನ್ನಡ<br>ಕುರುಂಬ ಕನ್ನಡ | ತಮಿಳು<br>ಮಲಯಾಳಂ<br>ಮರಾಠಿ |
| ಗುಲ್ಬರ್ಗಾ ಕನ್ನಡ | -- | ತೆಲುಗು<br>ಮರಾಠಿ<br>ದಕ್ಖನಿ<br>ಲಮಾಣಿ |
| ಕರಾವಳಿ ಕನ್ನಡ | ಹವ್ಯಕ ಕನ್ನಡ<br>ಹಾಲಕ್ಕಿ ಕನ್ನಡ<br>ಸಿದ್ದಿ ಕನ್ನಡ<br>ದೀವರ ಕನ್ನಡ<br>ನಾಮಧಾರಿಗಳ ಕನ್ನಡ<br>ಅರೆ ಬಾಸೆ<br>ಬ್ಯಾರಿ ಕನ್ನಡ | ಕೊಂಕಣಿ<br>ತುಳು<br>ಕೊರಗ<br>ಕೊಡವ<br>ಮಲಯಾಳಂ |
| ಧಾರವಾಡ ಕನ್ನಡ | -- | ಮರಾಠಿ<br>ದಕ್ಖನಿ<br>ಲಮಾಣಿ |

ಪಟ್ಟಿಕೆ ೧: ಕನ್ನಡದ ಪ್ರಾದೇಶಿಕ ಹಾಗೂ ಸಾಮುದಾಯಿಕ ಪ್ರಭೇದಗಳು ಮತ್ತು ಬಹುಭಾಷಿಕತೆ (ಕೆಲವು ಪ್ರಭೇದಗಳು ಸ್ವತಂತ್ರ ಭಾಷೆಯೋ ಅಥವಾ ಕನ್ನಡದ ಭಾಷೆಯೋ ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ)

ಪ್ರಾದೇಶಿಕತೆಯ ಕಾರಣದಿಂದ ಉಂಟಾಗಿರುವ ಪ್ರಭೇದವನ್ನು ಪ್ರಾದೇಶಿಕ ಕನ್ನಡವೆಂದು ಗುರುತಿಸಬಹುದು. ಇದರಲ್ಲಿ ನಾಲ್ಕು ಬಗೆ: ಅವುಗಳೆಂದರೆ: ಮೈಸೂರು ಕನ್ನಡ, ಗುಲ್ಬರ್ಗಾ ಕನ್ನಡ, ಕರಾವಳಿ ಕನ್ನಡ, ಧಾರವಾಡ ಕನ್ನಡ. ಪಟ್ಟಿಕೆ ೧ರಲ್ಲಿ ಕರ್ನಾಟಕದ ಪ್ರಾದೇಶಿಕ, ಸಾಮಾಜಿಕ ಪ್ರಭೇದಗಳು ಹಾಗೂ ಬಹುಭಾಷಿಕತೆಗಳನ್ನು ಕೊಡಲಾಗಿದೆ.

ಭಾರತೀಯ ಸಮುದಾಯದಲ್ಲಿ ಭಾಷೆಯ ನಡುವೆ ವ್ಯತ್ಯಾಸವನ್ನು ಉಂಟು ಮಾಡುವ ಇನ್ನೊಂದು ಕಾರಣವೆಂದರೆ ಜನ ಸಮುದಾಯಗಳ ಗುಂಪು. ಇದನ್ನು ಸಾಮಾಜಿಕ ವ್ಯತ್ಯಾಸವೆಂದು ಹೇಳುತ್ತೇವೆ. ಬೇರೆ ಬೇರೆ ಜನಸಮುದಾಯದ ಗುಂಪುಗಳ ನಡುವೆ ಹೆಚ್ಚು ಸಂಪರ್ಕವಿರದ ಕಾರಣ ಒಂದೊಂದು ಸಮಾಜವೂ ತನ್ನದೇ ಆದ ಭಾಷೆಯನ್ನು ಮೈಗೂಡಿಸಿಕೊಂಡಿದೆ. ಇದನ್ನು ಸಾಮಾಜಿಕ ಪ್ರಭೇದವೆಂದು ಕರೆಯುತ್ತೇವೆ. ಇದರಲ್ಲಿ ವೃತ್ತಿ ಆಧಾರಿತವಾಗಿ, ಸಮಾಜ ಆಧಾರಿತವಾಗಿ, ಜಾತಿ ಆಧಾರಿತವಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗುತ್ತದೆ. ಅವುಗಳೆಂದರೆ: ಹವ್ಯಕ ಕನ್ನಡ, ಬಡಗ ಕನ್ನಡ, ಸೋಲಿಗ ಕನ್ನಡ, ಕುರುಂಬ ಕನ್ನಡ, ಬ್ರಾಹ್ಮಣರ ಕನ್ನಡ, ಬ್ರಾಹ್ಮಣೇತರ ಕನ್ನಡ – ಹೀಗೆ ವಿಭಾಗ

ಮಾಡಿಕೊಂಡು ಅವುಗಳ ಸ್ವರೂಪವನ್ನು ಗುರುತಿಸಿಕೊಳ್ಳಲಾಗುತ್ತದೆ. ಇದರಲ್ಲಿ ಆಡುಮಾತನ್ನು ಮುಖ್ಯವಾಗಿ ಪರಿಗಣಿಸಲಾಗುತ್ತದೆ.

ಉಪಭಾಷೆ ಎಂದು ಕರೆಸಿಕೊಳ್ಳುವ ಕನ್ನಡದಲ್ಲಿ ಒಂದು ಪ್ರದೇಶದಲ್ಲಿನ ಹಲವು ಸಾಮಾಜಿಕ ಉಪಭಾಷೆಯ ಲಕ್ಷಣಗಳು ಇರುತ್ತವೆ. ಒಂದು ಪ್ರದೇಶದ ಉಪಭಾಷೆ ಎಂಬುದು ಸಾಮಾನ್ಯವಾಗಿ ಅಲ್ಲಿಯ ಮೇಲ್ವರ್ಗದ ಸಮಾಜದ ಉಪಭಾಷೆಯನ್ನು ಕುರಿತು ಹೇಳುತ್ತಿರುತ್ತದೆ; ಅಥವಾ ಅದನ್ನು ಹೋಲುತ್ತಿರುತ್ತದೆ; ಅಥವಾ ಕೆಲವೊಮ್ಮೆ ಇದು ಯಾವುದೂ ಆಗಿರದೆ ಬೇರೆಯೇ ಆಗಿರಬಹುದು. ಉದಾಹರಣೆಗೆ, ಕರಾವಳಿ ಕನ್ನಡ ಇಂತಹದ್ದು. ಇಂತಹ ಕನ್ನಡದಲ್ಲಿ ಅಲ್ಲಿಯ ಸಾಮಾಜಿಕ ಪ್ರಭೇದಲ್ಲಿನ ವ್ಯತ್ಯಾಸಗಳು ಕಡಿಮೆಯಾಗಿ ಆಯಾ ಪ್ರದೇಶದ ಜನರು ಸಂಪರ್ಕಕ್ಕಾಗಿ ಬಳಸುವ ಒಂದು ಸಾಮಾನ್ಯ ಕನ್ನಡವೇ ಅಲ್ಲಿನ ಪ್ರಾದೇಶಿಕ ಕನ್ನಡವಾಗಿರುತ್ತದೆ. ಸಾಮಾಜಿಕ ಪ್ರಭೇದವೆನ್ನುವುದು ಸಮಾಜದ ಜನರ ನಡುವೆ ಬಳಸುವ ಒಂದು ಪ್ರಭೇದ. ಇವೆಲ್ಲವೂ ಒಂದು ಸ್ಥೂಲ ವ್ಯತ್ಯಾಸ ಮಾತ್ರ. ಒಂದು ಪ್ರಭೇದಕ್ಕೂ ಇನ್ನೊಂದು ಪ್ರಭೇದಕ್ಕೂ ನಡುವೆ ಎಷ್ಟು ವ್ಯತ್ಯಾಸವಿದ್ದರೆ ಅದನ್ನು ಉಪಭಾಷೆ ಎಂದು ಕರೆಯಬಹುದು ಎಂಬುದಕ್ಕೆ ಯಾವ ಮಾನದಂಡವೂ ನಿಗದಿಯಾಗಿಲ್ಲ. ಆದರೆ ಎರಡು ಪ್ರಭೇದಗಳ ನಡುವೆ ಉಚ್ಚಾರಣೆ, ವ್ಯಾಕರಣ, ಶಬ್ದಕೋಶಗಳಲ್ಲಿ ವ್ಯತ್ಯಾಸವಿರುವುದನ್ನು ಗಮನಿಸಲು ಸಾಧ್ಯ. ಆಗ ಅವುಗಳನ್ನು ಉಪಭಾಷೆಗಳೆನ್ನಬಹುದು. ಇದಕ್ಕೆ ಪ್ರತಿಯಾಗಿ ಶಿಷ್ಟಭಾಷೆ, ಪ್ರಮಾಣ ಭಾಷೆ ಅಥವಾ ಮಾನಕ ಭಾಷೆ ಎಂದು ಬಳಕೆ ಮಾಡಲಾಗುತ್ತದೆ. ಇದು ಎಲ್ಲ ಬಗೆಯ ಕನ್ನಡ ಮಾತನಾಡುವ ಪ್ರದೇಶ ಹಾಗೂ ಸಮಾಜಗಳಲ್ಲಿನ ಸಾಮಾನ್ಯ ಲಕ್ಷಣಗಳಿಂದ ಕೂಡಿರುತ್ತದೆ. ಕನ್ನಡದ ಸಮುದಾಯದ ಸಂಪರ್ಕ ಭಾಷೆಯಾಗಿ ಈ ಪ್ರಮಾಣ ಕನ್ನಡ ಬಳಕೆಯಾಗುತ್ತಿರುತ್ತದೆ. ಇದು ಬರಹದ ರೂಪವನ್ನು ಒಳಗೊಂಡ, ಒಂದು ಪ್ರದೇಶದ ಪ್ರಾದೇಶಿಕ ಲಕ್ಷಣವನ್ನು ಹೆಚ್ಚಾಗಿ ಒಳಗೊಳ್ಳುವ ರೂಪವಾಗಿರುತ್ತದೆ. ಶಿಕ್ಷಣಕ್ಕಾಗಿ, ಸಮೂಹ ಮಾಧ್ಯಮಕ್ಕಾಗಿ, ಆಡಳಿತದ ಅನುಕೂಲಕ್ಕಾಗಿ ಪ್ರಮಾಣ ಕನ್ನಡ ಬೇಕಾಗುತ್ತದೆ. ಇದು ಯಾವ ನಿಶ್ಚಿತ ಪ್ರದೇಶ ಹಾಗೂ ಸಮುದಾಯದ ಭಾಷೆಯೂ ಅಲ್ಲ; ಆದರೆ ಕನ್ನಡದ್ದೇ ಒಂದು ಪ್ರಭೇದ ಎನ್ನುವುದು ಸರಿಯಾದ ಮಾತು. ಈಗ ಪ್ರಾದೇಶಿಕ ಭಾಷೆಯ ಲಕ್ಷಣಗಳನ್ನು ಗಮನಿಸೋಣ.

### ೧. ಮೈಸೂರು ಕನ್ನಡ

ಹಳೆ ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು ಪ್ರದೇಶಗಳ ಸುತ್ತಮುತ್ತಲ ಕನ್ನಡವನ್ನು ಮೈಸೂರನ್ನು ಕೇಂದ್ರ ಮಾಡಿಕೊಂಡು ಗುರುತಿಸಲಾಗಿದೆ. ಇಲ್ಲಿನ ಕನ್ನಡವು ಪ್ರಮಾಣ ಭಾಷೆಗೆ ಹತ್ತಿರವಾಗಿದೆ. ಮೈಸೂರು ಕನ್ನಡದಲ್ಲಿ ಮತ್ತೆ ಒಳಭೇದಗಳಿವೆ. ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ದಾವಣಗೆರೆ – ಈ ಪ್ರದೇಶಗಳಲ್ಲಿ ಪದದ ಆದಿಯಲ್ಲಿ ಹ ಕಾರದ ಬಳಕೆಯಿದೆ. ಮೈಸೂರು ಸುತ್ತಮುತ್ತಲ ಪ್ರದೇಶದ ಕನ್ನಡದಲ್ಲಿ ಮಹಾಪ್ರಾಣಗಳು, ಸಂಧ್ಯಕ್ಷರಗಳು ಲೋಪಗೊಳ್ಳುತ್ತವೆ. ಪದದ ಆದಿಯಲ್ಲಿರುವ ಹ ಕಾರ ಲೋಪಗೊಳ್ಳುತ್ತದೆ. ಉದಾ., ಹಾಲು > ಆಲು. ಇಂಗ್ಲಿಷ್ ಭಾಷೆಯ ಪದಗಳು ಹೆಚ್ಚು ಇದರಲ್ಲಿ ಬಳಕೆಯಾಗುತ್ತವೆ. ಪದದ ಆದಿಯಲ್ಲಿ ಬರುವ ಏ ಮತ್ತು ಓ ಸ್ವರಗಳು ಯಾ ಮತ್ತು ವಾ ಗಳಾಗುತ್ತವೆ. ಉದಾ., ಏಕೆ > ಯಾಕೆ, ಓದು > ವಾದು, ಹೋದನು > ವಾದ್‌ನು, ತೋಟ >

ತ್ವಾಟ. ವ್ಯಂಜನಾಂತವಾಗಿ ಪದಗಳ ಉಚ್ಚಾರಣೆ ಈ ಪ್ರಭೇದದ ಕನ್ನಡದಲ್ಲಿದೆ. ಉದಾ., ಬೆಂಗಳೂರ್, ಅವನ್‌ಗೆ, ಮಗೀಗ್ ಕೊಡು. ಕನ್ನಡದಲ್ಲಿ ಬಳಕೆಯಲ್ಲಿರುವ ಷ, ಶ, ಸ ಗಳು ಯಾವುದೇ ವ್ಯತ್ಯಾಸವಿಲ್ಲದೆ ಬಳಕೆಯಾಗುತ್ತವೆ. ಕೆಲವು ಸ್ವೀಕೃತ ಪದಗಳಲ್ಲಿ ಫ಼ ಮತ್ತು ಜ಼ ಧ್ವನಿಗಳು ಪ, ಜ ಗಳಾಗಿ ಉಚ್ಚಾರಗೊಳ್ಳುತ್ತವೆ. ಉದಾ: ಕಾಫ಼ಿ > ಕಾಪಿ, ಡಜ಼ನ್ > ಡಜನ್.

## ಮೈಸೂರು ಭಾಗದ ಕನ್ನಡ

'ಕಿಟಕಿ ಬಿಗಿಯಾಗಿ ಹಾಕಿದ್ದೀರಲ್ಲಾ ಸಾರ್' ಎಂದು ನನ್ನನ್ನೇ ನೇರ ದೃಷ್ಟಿಯಿಂದ ನೋಡಿದ. ಅವನೊಂದು ನೋವಿನ ಮುದ್ದೆಯಾಗಿದ್ದ. ಕಷ್ಟಪಟ್ಟು ನುಡಿದ:

'ನೋಡಿ ಸಾರ್, ಈ ಜಗತ್ತಿನಲ್ಲಿ ದುಷ್ಟರಿಗೇ ಆಳುವವರ ಬೆಂಬಲ. ದೇವರೂ ಅಷ್ಟೆ ಅವರನ್ನು, ನಗುನಗುತ್ತಲೇ ಕ್ಷಮಿಸುತ್ತಾನೆ'.

ಕಣ್ಣೊರಸಿಕೊಂಡವನೇ ದಿಢೀರನೆ ಮೇಲೆದ್ದು 'ಮುಂದಿನ ಊರಿನಲ್ಲಿ ಬಸ್ಸು ನಿಲ್ಲಿಸಿ... ದಯವಿಟ್ಟು ನಿಲ್ಲಿಸಿ' ಎಂದು ಕಂಡಕ್ಟರನನ್ನು ಪ್ರಾರ್ಥಿಸಿಕೊಂಡ. ಕಂಡಕ್ಟರ್ ಹೇಳಿದ: 'ಸ್ವಾಮಿ ಇದು ಎಕ್ಸ್‌ಪ್ರೆಸ್. ನಿಲ್ಲಿಸಿದರೆ ಯಾರಾದರೂ ನನ್ನ ಮೇಲೆ ದೂರು–ಗೀರು ಕೊಡಬಹುದು. ಇಲ್ಲಿ ನೀವು ಇಳಿದು ಅಮೃತಕೋಟೆಗೆ ನಡದೇ ಹೋಗಬೇಕು. ನಾಗಮಂಗಲಕ್ಕೆ ಬನ್ನಿ, ಅಲ್ಲಿಂದ ಅಮೃತಕೋಟೆಗೆ ನೇರವಾಗಿ ಷಟಲ್ ಬಸ್ಸು ಸಿಗ್ತದೆ'.

– (ಬೆಸಗರಹಳ್ಳಿ ರಾಮಣ್ಣ ಅವರ 'ಗಂಗಾ' ಕಥೆಯಿಂದ).

## ೨. ಕರಾವಳಿ ಕನ್ನಡ

ಮಂಗಳೂರು ಕನ್ನಡ ಅಥವಾ ದಕ್ಷಿಣ ಕನ್ನಡದ ಕನ್ನಡ ಎಂದೂ ಇದನ್ನು ಹೇಳಬಹುದು. ಇಲ್ಲಿ ೬ನೆಯ ಶತಮಾನದ ಕಾಲಕ್ಕೇ ಕನ್ನಡದಲ್ಲಿ ಶಾಸನಗಳು ದೊರಕುವುದರಿಂದ ಕನ್ನಡ ಈ ಪ್ರದೇಶದ ಆಡಳಿತ ಭಾಷೆಯಾಗಿತ್ತು. ಈ ಭಾಗವು ತುಳು ಮಾತನಾಡುವವರ ಪ್ರದೇಶವಾಗಿದೆ. ಜೊತೆಗೆ ಕೊಂಕಣಿ, ಮಲೆಯಾಳಂ ಹಾಗೂ ಕನ್ನಡ ಭಾಷೆಗಳ ಬಳಕೆಯೂ ವ್ಯಾಪಕವಾಗಿವೆ. ಹೀಗಾಗಿ ದಕ್ಷಿಣ ಕನ್ನಡವೆಂಬುದು ಹಲವು ಭಾಷೆಗಳ ಪ್ರದೇಶವಾಗಿದೆ. ಇಲ್ಲಿನ ಕನ್ನಡವೆಂಬುದು ಕಲಿತ ಕನ್ನಡ. ಸಮುದಾಯದಲ್ಲಿ ಬೆರೆತು ಆಡುವ ಕನ್ನಡವೂ ಬರಹದ ಕನ್ನಡದಂತೆಯೇ ಇದೆ ಈ ಭಾಗದ ಜನರಲ್ಲಿ ತುಳು ಪ್ರಧಾನವಾಗಿದ್ದು, ಕನ್ನಡವನ್ನು ಬರಹದಂತೆಯೇ ಕಲಿತು ಬಳಸುವುದು ಕಂಡುಬರುತ್ತದೆ.

ಕರಾವಳಿ ಕನ್ನಡದಲ್ಲಿಯೇ ಹಲವು ಬಗೆಗಳಿವೆ. ಕುಂದಾಪುರ ಕನ್ನಡ, ಕೋಟ ಕನ್ನಡ, ಪುತ್ತೂರು ಕನ್ನಡ – ಹೀಗೆ ಇಲ್ಲಿಯ ಕನ್ನಡವೂ ವೈಶಿಷ್ಟ್ಯತೆಯಿಂದ ಕೂಡಿದೆ. ಕರಾವಳಿ ಕನ್ನಡದಲ್ಲಿ ತಾಲವ್ಯದ (ಚ, ಜ) ಬಳಕೆ ಹೆಚ್ಚು ಕಂಡುಬರುತ್ತದೆ. ಉದಾ., ಕೊಣಾಜೆ, ಸಂಪಾಜೆ. ಈ ಕನ್ನಡದಲ್ಲಿ ಇ ಮತ್ತು ಉ ಸ್ವರಗಳು ಎ ಮತ್ತು ಒ ಗಳಾಗಿ ಬಳಕೆಗೊಳ್ಳುತ್ತವೆ. ಉದಾ., ಕಿವಿ > ಕೆಮಿ, ಬಿಳಿ > ಬೆಳಿ, ಮಿಡಿ > ಮೆಡಿ, ತುಳಿ > ತೊಳಿ. ಅ ಸ್ವರವು ಎ ಸ್ವರವಾಗಿ ಬಳಕೆಯಲ್ಲಿದೆ. ಉದಾ., ನಡ > ನೆಡ, ಜನ > ಜೆನ.

ದೀರ್ಘ ಆ ಸ್ವರವು ಏ ಸ್ವರವಾಗುತ್ತದೆ. ಉದಾ., ಆಮೆ > ಏಮೆ, ಆಡು > ಏಡು. ಈ ಭಾಗದ ಕನ್ನಡದಲ್ಲಿ ನಾಸಿಕವನ್ನು ಪದದ ಕೊನೆಯಲ್ಲಿ ಬಳಸುವುದು ನೋಡಬಹುದು. ಉದಾ: ನಾಯೆನ್, ಅಜ್ಜನ್. ಬಹುವಚನದಲ್ಲಿ 'ಕ್ಕೊ, ಗೊ' ಪ್ರತ್ಯಯ ಬಳಸಲಾಗುತ್ತದೆ. ಇದು ಹವ್ಯಕ ಕನ್ನಡದ ರೂಪವಾಗಿದೆ. ಉದಾ., ಮರಂಗೊ = ಮರಗಳು, ಕಣ್ಣಿಗೊ = ಕಣ್ಣುಗಳು, ಅಕ್ಕೊ = ಅಕ್ಕಂದಿರು, ತಂಗೆಕ್ಕೊ = ತಂಗಿಯಂದಿರು. ಪದದ ಕೊನೆಯಲ್ಲಿ 'ಉಂಟು' ಪದ ಪ್ರಯೋಗದ ಬಳಕೆ ಇದೆ. ಉದಾ., ಬರಲಿಕ್ಕೆ ಉಂಟು, ಮಾಡಲಿಕ್ಕೆ ಉಂಟು. ಇದೆ ಎನ್ನುವ ಅರ್ಥದಲ್ಲಿ ಉಂಟು ಪ್ರಯೋಗಗೊಳ್ಳುತ್ತದೆ. ಬೇರೆ ಭಾಗದ ಕನ್ನಡದಂತೆ ಇಲ್ಲಿ ಉರ್ದು, ಮರಾಠಿ, ತೆಲುಗು ಅಥವಾ ತಮಿಳು ಭಾಷೆಯ ಬೆರಕೆ ಇಲ್ಲಿ ಕಂಡುಬರುವುದಿಲ್ಲ.

ಉದಾಹರಣೆಗೆ ಮಂಗಳೂರು ಕನ್ನಡದ ಈ ಬರಹ ಗಮನಿಸಿ:

> 'ಇದೆಲ್ಲಿಂದ ಬೆತ್ತ? ಈಗ ಕಡಿದ ಹಾಗಿಲ್ಲ' ಎಂದರು ನನ್ನಪ್ಪ. 'ಶಾಸ್ತಾವಿನ ಬಳಿಯಲ್ಲಿ ಬಿದ್ದಿತ್ತು. ಯಾರೋ ಪುಣ್ಯಾತ್ಮರು ಕಡಿದಿಟ್ಟಿದ್ದರು. ಬಿಡುವುದಕ್ಕೆ ಮನಸ್ಸು ಬರಲಿಲ್ಲ; ತೆಗೆದುಕೊಂಡೆ. ಇದರ ಮಚ್ಚೆ ನೋಡಿ! ಇದರ ಗಂಟುಗಳು ಎಷ್ಟು ಹತ್ತಿರ; ಒಂದಕ್ಕೊಂದು ಎಷ್ಟು ಸಮ! ಇಂಥಾ ಬೆತ್ತವನ್ನೇ ನಮ್ಮ ಪಟೇಲರು ಎಲ್ಲಿಂದಲೋ ಹೋದ ವರ್ಷ ತರಿಸಿದ್ದರು. ಐದು ರೂಪಾಯಿ ಕೊಟ್ಟರಂತೆ. ಅದಕ್ಕಿಂತ ಇದು ಒಂದು ಬಣ್ಣ ಮಿಗಿಲಾದೀತು ಹೊರತು ಕಮ್ಮಿಯಲ್ಲ. ಬೆಳ್ಳಿ ಕಟ್ಟಿಸಿದರೆ ಮುದ್ದುಮುದ್ದಾಗಿ ಕಂಡೀತು. ಒಬ್ಬನಿಗೆ ಒಂದೇ ಹೊಡೆತ ಸಾಕು. ನೋಡಿ ಇದರ ಭಾರ!' ಎಂದರು 'ಅವರು'. ನನ್ನಪ್ಪ, 'ನಿನಗೆ ಬೆತ್ತ ಬೇಕಾದರೆ ನಾನು ತರಿಸಿ ಕೊಡುತ್ತಿದ್ದೆ. ಅಲ್ಲಿರುವುದೆಲ್ಲ ಶಾಸ್ತಾವಿನ ಬೆತ್ತ. ತಂತ್ರಿಗಳಿಲ್ಲದೆ ನಾವದನ್ನು ಕಡಿಯುವ ಕಟ್ಟಳೆ ಇಲ್ಲ, ಅಷ್ಟೆ' ಎಂದರು. 'ಏನು ಮಾವ, ನಿಮಗೆ ಭ್ರಾಂತೋ ಕುಂಪಿನಿಯವರಿಗೆ ಈ ಶಂಕೆಯೆಲ್ಲ ಉಂಟೇ ನೋಡಿ, ಈಗ ನಮ್ಮೂರಿಂದ ಮಂಗಳೂರಿಗೆ ಮಾರ್ಗ ಕಡಿಸಲು ತೊಡಗಿದ್ದಾರೆ. ಕಳೆದ ತಿಂಗಳಲ್ಲಿ ಏನಾಯಿತು ಗೊತ್ತುಂಟೋ?'
>
> – (ಸೇಡಿಯಾಪು ಕೃಷ್ಣಭಟ್ಟ ಅವರ 'ನಾಗರಬೆತ್ತ' ಕಥೆಯಿಂದ)

### ೩. ಗುಲ್ಬರ್ಗಾ ಕನ್ನಡ

ಗುಲ್ಬರ್ಗ, ಬೀದರ್, ರಾಯಚೂರು ಜಿಲ್ಲೆ, ವಿಜಾಪುರ ಜಿಲ್ಲೆಯ ಪೂರ್ವ ಉತ್ತರ ಭಾಗದ ಕನ್ನಡವನ್ನು ಗುಲ್ಬರ್ಗಾ ಕನ್ನಡ ಎಂದು ಗುರುತಿಸಲಾಗುತ್ತದೆ. ಗುಲ್ಬರ್ಗ ಕನ್ನಡದಲ್ಲಿ ಮರಾಠಿ ಮತ್ತು ಉರ್ದು ಭಾಷೆಯ ಪ್ರಭಾವ ಹೆಚ್ಚು. ಈ ಪ್ರದೇಶವು ಕ್ರಿ.ಶ. ೧೪ನೆಯ ಶತಮಾನದಲ್ಲಿ ಬಹಮನಿ ಸುಲ್ತಾನರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದ್ದುದರಿಂದ ಉರ್ದು ಪ್ರಭಾವ ಸಹಜವಾಗಿಯೇ ಇಲ್ಲಿಯ ಕನ್ನಡದ ಮೇಲೆ ಉಂಟಾಗಿದೆ. ಮಹಾರಾಷ್ಟ್ರದ ಗಡಿಗೆ ಈ ಪ್ರದೇಶಗಳು ಹೊಂದಿಕೊಂಡಿರುವುದರಿಂದ ಮರಾಠಿ ಪ್ರಭಾವವೂ ಇದೆ. ಮಾಂವಸಿ, ವೈನಿ ಇಂತಹ ಸಂಬಂಧವಾಚಕಗಳು ಮರಾಠಿಯಿಂದ ಸ್ವೀಕೃತಗೊಂಡಿವೆ. ಅವಶ್ಯಕತೆ ಇಲ್ಲದ ಕಡೆಯಲ್ಲಿಯೂ ಮಹಾಪ್ರಾಣಗಳ ಬಳಕೆ ಇಲ್ಲಿ ಹೆಚ್ಚು. ಉದಾ.,

ignou THE PEOPLE'S UNIVERSITY

ಕ್ಯಂ, ಖಬ್ಬು ಇತ್ಯಾದಿ. ಸರ್ವನಾಮಗಳು 'ಕ' ಕಾರಾದಿಯಲ್ಲಿ ಬಳಕೆಯಾಗುತ್ತವೆ. ಉದಾ., ಅವ > ಕಿಂವ, ಅದು > ಕಿದು, ಅಷ್ಟು > ಕಿಷ್ಟು. ದ್ವಿತೀಯಾ ವಿಭಕ್ತಿಯ (ಅನ್ನು) ಸ್ಥಳದಲ್ಲಿ ಚತುರ್ಥಿ ವಿಭಕ್ತಿ (ಕೆ, ಗೆ)ಯ ಬಳಕೆಯಾಗುವುದು ಹೆಚ್ಚು. ಉದಾ., 'ಹಣ್ಣನ್ನು ಕಡಿ' ಎನ್ನುವುದು 'ಹಣ್ಣಿಗ್ ಕಡಿ' ಎಂದಾಗುತ್ತದೆ. ಸಂಬಂಧವಾಚಕದಲ್ಲಿನ ಬಹುವಚನ ಪ್ರತ್ಯಯ –ಅಂದಿರು ಎನ್ನುವುದು ಇಲ್ಲಿಯ ಕನ್ನಡದಲ್ಲಿ –ದೇರು, –ಗೋಳು, –ಗೊಳು ಆಗುತ್ತವೆ. ಉದಾ., ಅಣ್ಣದೇರು, ಅಕ್ಕಗೋಳು, ಮನಿಗೊಳು. ಪಂಚಮಿ ವಿಭಕ್ತಿಯು –ಲಿಂದ ಆಗಿದೆ. ಉದಾ., ಬಜಾರಲಿಂದ. ಸಪ್ತಮಿ ವಿಭಕ್ತಿ –ಅಲ್ಲಿ ಎಂಬುದು ಗುಲ್ಬರ್ಗಾ ಕನ್ನಡದಲ್ಲಿ –ಆಗ ಎಂದಾಗಿದೆ. ಉದಾ., ಮನಿಯಾಗ. ಕ್ರಿಯಾಪದಕ್ಕೆ ಸೇರುವ ಆಖ್ಯಾತ ಪ್ರತ್ಯಯವಾದ ಇದ್ದಾನೆ, ಇದ್ದಾಳೆ, ಇದ್ದಾರೆ ಎಂಬುವು ಹಾನ, ಹಾಳ, ಹರ ಆಗಿವೆ. ಮಾಡೋಣ, ನೋಡೋಣ ಎಂಬ ರೂಪಗಳು ಈ ಪ್ರದೇಶದಲ್ಲಿ ಮಾಡಾಮು, ನೋಡಾಮು ಆಗಿವೆ. –ಕೊಂಡು ಎಂಬ ಸಹಾಯಕ ಕ್ರಿಯಾಪದವು –ಕೇಸಿ ಆಗಿದೆ. ಉದಾ., ಮಾಡಕೇಸಿ.

ಉದಾಹರಣೆಗೆ ಗುಲ್ಬರ್ಗಾ ಕನ್ನಡವು ಈ ರೀತಿ ಬಳಕೆಯಾಗುತ್ತದೆ:

> ಕಲಬುರ್ಗಿಯ ಸಂತೆಗೆ ಹೋಗಿದ್ದವರಿಗೆ ಬಾಜಾರದಲ್ಲಿಯೇ ಹೊತ್ತು ಹೋದದ್ದು ಗೊತ್ತಾಗಿರಲಿಲ್ಲ. ಉಪ್ಪು, ಮೆಣಸಿನಕಾಯಿ, ಉಳ್ಳಾಗಡ್ಡಿ, ಅರಿಷಿಣ ಬಳ್ಳೊಳ್ಳಿ, ಒಣಮೀನು ಅಂತೆಲ್ಲ ವ್ಯಾಪಾರ ಮಾಡಿ ಗಂಟು ಕಟ್ಟಿದ್ದರು. ಚಾ ಕುಡಿಯೋದಕ್ಕಂತ 'ಸಂಗಮ' ಸಿನೆಮಾ ಥೇಟರ ಮುಂದಿನ ಗೋಣಿ ಚೀಲಾ ಗಂಟಿನಿಂದ ಕಟ್ಟಿ ತಯಾರಿಸಿದ ಭೀಮಳ್ಳಿ ಗಿರ್ಯಾನ ಹೋಟೆಲ್‌ಗೆ ಹೋದರು. ಅಲ್ಲೇ ಹೊತ್ತು ಮುಳುಗಿತ್ತು. ಆ ಮಾತು ಈ ಮಾತು ಆಡುತ್ತ ಇಬ್ಬರೂ ಅಂಚು ಹರಿದು ಮುಕ್ಕಾದ ಗಾಜಿನ ಗಿಲಾಸಿನಲ್ಲಿ ಸಿಂಗಲ್ ಚಾ ಕುಡ್ದು ಚುಟ್ಟಾ ಹಚಗೊಂಡರು.
>
> – (ಗೀತಾ ನಾಗಭೂಷಣ ಅವರ 'ಹಸಿಮಾಂಸ ಮತ್ತು ಹದ್ದುಗಳು' ಕೃತಿಯಿಂದ).

**೪. ಧಾರವಾಡ ಕನ್ನಡ**

ಧಾರವಾಡ, ಬೆಳಗಾವಿ, ವಿಜಾಪುರ, ಹಾವೇರಿ, ಗದಗ, ಉತ್ತರಕನ್ನಡ ಜಿಲ್ಲೆಯ ಹಾಗೂ ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳನ್ನು ಧಾರವಾಡ ಕನ್ನಡವೆಂದು ಕರೆಯಲಾಗುತ್ತದೆ. ಧಾರವಾಡ ಕನ್ನಡಕ್ಕೆ ಗುಲ್ಬರ್ಗಾ ಕನ್ನಡದೊಂದಿಗೆ ಅನೇಕ ವಿಷಯದಲ್ಲಿ ಹೋಲಿಕೆ ಇದೆ. ತುಂಗಭದ್ರೆಯ ಉತ್ತರ ಮತ್ತು ದಕ್ಷಿಣದ ಭಾಷೆಗಳಿಗೆ ಸಂಬಂಧಿಸಿದಂತೆ ಕೆಲವು ಹೋಲಿಕೆಗಳು ಇವೆ. ಉದಾಹರಣೆಗೆ, 'ಎ' ಕಾರಾಂತ ಪದಗಳು 'ಇ' ಕಾರಾಂತವಾಗಿ ಬಳಕೆಯಾಗುವುದು (ಕೆರಿ, ಮನಿ) ಎರಡೂ ಭಾಗಗಳಲ್ಲಿದೆ. ದ್ವಿತೀಯಾ ವಿಭಕ್ತಿಯ ಸ್ಥಳದಲ್ಲಿ (ಅನ್ನು) ಚತುರ್ಥಿಯ ಬಳಕೆ (ಗೆ, ಕೆ) ಎರಡೂ ಪ್ರಭೇದಗಳಲ್ಲಿದೆ. ಉರ್ದುವಿನ ಪ್ರಭಾವ ಧಾರವಾಡದ ಸುತ್ತಮುತ್ತಲ ಕನ್ನಡದಲ್ಲಿ ಇಲ್ಲ. ಗುಲ್ಬರ್ಗಾ ಕನ್ನಡದಲ್ಲಿ ಸಹಾಯಕ ಕ್ರಿಯಾಪ್ರತ್ಯಯವಾಗಿ ಬಳಕೆಯಾಗುವ –ಕ್ಯಾಸ ಎಂಬುದರ ಬಳಕೆ ಈ ಭಾಗದ ಕನ್ನಡದಲ್ಲಿ –ಕೇಸಿ ಎಂಬುದಾಗಿ ಇದೆ. ಉದಾ., ಮಾಡಕೇಸಿ. ಇದರೊಡನೆ ಕೆಲವು ವಿಶಿಷ್ಟ ಲಕ್ಷಣಗಳೂ

ಇವೆ. ಪಂಚಮಿ ರೂಪವಾಗಿ –ದಿಂದ ಬಳಕೆಯಾಗುತ್ತದೆ. ಉದಾ., ಮನೇದಿಂದ, ಬಜಾರದಿಂದ. ಧಾರವಾಡ ಕನ್ನಡದಲ್ಲಿ ಪದದ ಕೊನೆಯ ಉ ಸ್ವರವು ಇಲ್ಲವಾಗುತ್ತದೆ. ಉದಾ., ನೀರ, ಹೋಟಲ, ಕಾಲೇಜ, ಟೇಬಲ್ಲ. ಶಿಷ್ಟಭಾಷೆಯ ಕೆಲವು ಪದಗಳು ಭಿನ್ನವಾಗಿ ಪ್ರಯೋಗಕ್ಕೆ ಒಳಗಾಗುತ್ತವೆ. ಉದಾ., ಮೇಲೆ > ಮ್ಯಾಲ, ಪೇಟೆ > ಪ್ಯಾಟೆ, ಬೇಳೆ > ಬ್ಯಾಳೆ ಇತ್ಯಾದಿ. ಸರ್ವನಾಮ ರೂಪಗಳು ಇಧಾನ, ಇಧಾಳ, ಅಂವ, ಅಲ್ಲಿ ಎಂಬುದಾಗಿ ಬಳಕೆಯಾಗುತ್ತವೆ. ಕೆಲವು ಶಬ್ದಗಳಿಗೆ ಬೇರೆಯೇ ಆದ ಅರ್ಥ ಇಲ್ಲಿದೆ. ಉದಾ., ತಿಂಡಿ (ಮೈಸೂರು ಕನ್ನಡ) = ಬೆಳಗಿನ ತಿನಿಸು, ಧಾರವಾಡ ಕನ್ನಡದಲ್ಲಿ ತಿಂಡಿ ಎಂದರೆ ತುರಿಕೆ. ಮೈಸೂರು ಕನ್ನಡದಲ್ಲಿ ಹೆಂಗ್ಸು ಎಂದರೆ ಪ್ರೌಢ ಮಹಿಳೆ. ಧಾರವಾಡ ಕನ್ನಡದಲ್ಲಿ ಹೆಂಡತಿ.

ಧಾರವಾಡ ಕನ್ನಡದ ಪ್ರಭೇದಕ್ಕೆ ಈ ಕೆಳಗಿನ ಉದಾಹರಣೆ ಗಮನಿಸಿ:

> ಅವತ್ತ ರಾತ್ರಿ ಅಕ್ಕವ್ವನ ಕೂಸು ಕಿಟಾರನೇ ಕಿರುಚಿ ರಚ್ಚೆ ಹಿಡಿದ ದಿನದಿಂದ ಮುಂದೆ ವರ್ಷ ಎರಡು ವರ್ಷದಾಗ ವಾಸುದೇವಾಚಾರ್ಯರ ತಾಯಿ ಸಾವಿತ್ರಿಬಾಯಿ ತೀರಿ ಹೋದಳು. ನಾರಾಯಣನ್ನ ಹಡೆದು ಅಕ್ಕವ್ವನೂ ಸತ್ತಳು. ಅಂಬಕ್ಕ ತಲಿ ಬೋಳಿಸಿಕೊಂಡು ಮನಿ ಹಿಡಿದ ಕೂತಳು. ತುಳಸಕ್ಕ, ಲಕ್ಷುಂಬಾಯಿ, ತಿಪ್ಪಕ್ಕ ಇವರದೆಲ್ಲ ಒಂದೆರಡು ಬಾಣಂತನ ಆದವು. ಅದರಾಗ ಒಂದೆರಡು ಹೋದವು. ತಿನ್ನೋ ಬಾಯಿ ಬೆಳೀಲಿಕ್ಕೆ ಹತ್ತಿದ್ದವು. ವಾಸಣ್ಣ ಒಂಮ್ಮಿಂದೊಂಮ್ಮೆಲೆ ಹಿರೇ ಮನಿಶಾ ಆಗಿಬಿಟ್ಟಾ. ಈಗ ಅವಗ ಮನ್ಯಾಗ ಎಲ್ಲರೂ ಕಾಕಾ ಅನಲಿಕ್ಕೆ ಹತ್ತಿದ್ದರು. ಊರವರು ವಾಸುದೇವಾಚಾರು ಅಥವಾ ವಾಸಣ್ಣಾರು ಅನ್ನಲಿಕ್ಕೆ ಹತ್ತಿದ್ದರು.
>
> – (ಶ್ರೀನಿವಾಸ ವೈದ್ಯ ಅವರ 'ಹಳ್ಳ ಬಂತು ಹಳ್ಳ' ಕೃತಿಯಿಂದ).

**ಅಭ್ಯಾಸ ೩**

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಕನ್ನಡದಲ್ಲಿರುವ ಭಾಷಿಕ ಪ್ರಭೇದಗಳನ್ನು ವಿವರಿಸಿ.

೨. ಪ್ರಾದೇಶಿಕ ಪ್ರಭೇದವನ್ನು ಯಾವುದರ ಆಧಾರದ ಮೇಲೆ ವಿಂಗಡಿಸಲಾಗುತ್ತದೆ?

೩. ಕರಾವಳಿ ಕನ್ನಡವು ಒಳಗೊಳ್ಳುವ ಪ್ರದೇಶಗಳು ಯಾವುವು?

೪. ಕರಾವಳಿ ಕನ್ನಡದ ಸ್ವರೂಪ ವಿವರಿಸಿ.

೫. ಗುಲ್ಬರ್ಗಾ ಕನ್ನಡದ ಸ್ವರೂಪವನ್ನು ತಿಳಿಸಿ.

೬. ಗುಲ್ಬರ್ಗಾ ಮತ್ತು ಧಾರವಾಡ ಕನ್ನಡಕ್ಕೆ ಇರುವ ಸಾಮ್ಯತೆ ಮತ್ತು ಭಿನ್ನತೆಯನ್ನು ವಿವರಿಸಿ.

೭. ಮೈಸೂರು ಕನ್ನಡ ಎಂದರೇನು? ಅದರ ಲಕ್ಷಣಗಳೇನು?

# ೨.೪. ಸಾಮಾಜಿಕ ಪ್ರಭೇದಗಳು

ಇಲ್ಲಿಯವರೆಗೆ ಕನ್ನಡದ ಪ್ರಾದೇಶಿಕ ಪ್ರಭೇದಗಳನ್ನು ನೋಡಿದೆವು. ಒಂದು ಸಮಾಜದಲ್ಲಿ ವೃತ್ತಿ, ಜಾತಿ, ವರ್ಗ, ಶಿಕ್ಷಣ ಆಧಾರಿತವಾಗಿ ಹಲವು ಉಪಭಾಷೆಗಳು ರೂಪುಗೊಳ್ಳುತ್ತವೆ. ಒಂದು ಪ್ರದೇಶದ ಕನ್ನಡಕ್ಕಿಂತ ಅದೇ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಇತರ ಜಾತಿ ಸಮುದಾಯಗಳ ಕನ್ನಡವು ಬೇರೆಯಾಗಿರುತ್ತದೆ. ಇದರಿಂದ ಜಾತಿ ಸಮುದಾಯಗಳು ಒಂದು ರೀತಿಯ ರಚನೆಯನ್ನು ತಮ್ಮೊಳಗೆ ತಮ್ಮ ವೃತ್ತಿ, ಆಚಾರ, ನಡವಳಿಕೆಗಳಿಂದಾಗಿ ಕಟ್ಟಿಕೊಂಡಿರುತ್ತವೆ. ಮತ್ತು ಇಂತಹ ವ್ಯವಸ್ಥೆಯ ಭಾಗವಾಗಿ ಭಾಷೆಯೂ ಇರುತ್ತದೆ. ಬ್ರಾಹ್ಮಣ, ವೀರಶೈವ, ಒಕ್ಕಲಿಗ, ದಲಿತ, ಬುಡಕಟ್ಟು ಸಮುದಾಯಗಳ ಕನ್ನಡವು ಭಿನ್ನವಾಗಿದೆ. ಸಮಾಜದ ರಚನೆಯಲ್ಲಿ ಭಿನ್ನತೆ ಹೆಚ್ಚಾದಂತೆ ಭಾಷೆಯಲ್ಲಿ ವೈವಿಧ್ಯತೆಯೂ ಕಂಡುಬರುತ್ತದೆ. ಉತ್ತರ ಕನ್ನಡದಲ್ಲಿ ಹಾಲಕ್ಕಿ ಒಕ್ಕಲಿಗ, ಸಿದ್ದಿ ಜನರ ಕನ್ನಡ ಕಂಡುಬಂದರೆ ದಕ್ಷಿಣ ಕನ್ನಡದಲ್ಲಿ ಹವ್ಯಕ, ಕೊರಗ ಭಾಷೆಯಿದೆ. ದಕ್ಷಿಣ ಕರ್ನಾಟಕದ ಮೈಸೂರು ಭಾಗದಲ್ಲಿ ಬಡಗ, ಸೋಲಿಗ, ಕುರುಂಬ ಕನ್ನಡ ಇದೆ. ಶಿವಮೊಗ್ಗ ಜಿಲ್ಲೆಯಲ್ಲಿ ದೀವರು, ನಾಮಧಾರಿ ಸಮುದಾಯದ ಕನ್ನಡವಿದೆ. ಇನ್ನು ವೃತ್ತಿಯಿಂದ ನೋಡುವುದಾದರೆ ಕುಂಬಾರ, ಒಕ್ಕಲಿಗ, ಕಲ್ಲುಕುಟಿಗ, ಚಮ್ಮಾರ ಇಂತಹವರಲ್ಲಿ ಅವರ ವೃತ್ತಿಗೇ ಸಂಬಂಧಿಸಿದಂತಹ ವಿಶಿಷ್ಟ ಪದಗಳಿವೆ. ಇವುಗಳಲ್ಲಿ ಕೆಲವು ಉದಾಹರಣೆಗಳನ್ನು ನೋಡೋಣ.

**೧. ಸೋಲಿಗ ಕನ್ನಡ**

ಈ ಕೆಳಗಿನ ಉದಾಹರಣೆ ಗಮನಿಸಿ.

> ಸಿವನಿಗ ಏಕ ಕಜ್ಜಿ ಬಂದ್ರುದೆ? ಅವ ಜಿನಾವೇ ನೀರು ಉಯ್ಯದಿಲೆ. ಅವ ಬೂದಿಲಿ ಬಿದ್ರು ಒದ್ದಾಡಿದವನೆ. ಸಿವನ ಕಾಡಿನಲ್ಲಿ ಸೊಣೆ ನೀರಿನಲ್ಲಿ ಓಗಿ ನೀರ ಉಯ್ಯ. ಸೊಣೆ ನೀರಿನಲ್ಲಿ ಕಡ್ಡಿ, ಕಸ ಎಲ್ಲಾವೇ ಕೊಳೆತ್ರು ನಾರ್ದದೆ. ಅದರಲ್ಲಿ ನೀರ ಉಯ್ದಲೆ ಕಜ್ಜಿ ಬಂದಾದೆ. ನಾವು ಬಾವಿ ನೀರು ಇದಲೆ ನೆಲ್ಲಿ ನೀರವೆ ಮೀಯಾಕು. ಅಳ್ಳದ ನೀರೂ ಸರಿಯೇ. ಬಟ್ಟೆಯೆಲ್ಲಾವೇ ಈ ನೀರಿನಲ್ಲೇವೇ ಕುಸುರಾಕು. ಜಿನಾವೇ ಕುಕ್ಕಿ ಮಡಗಿರ ಬಟ್ಟೆ ಆಕಿದಲೆ ಅದೇಕೆ ಕಜ್ಜಿ ಬಂದಾದು?
>
> (ಈ ಮೇಲಿನ ಉದಾಹರಣೆ 'ಕನ್ನಡ ಭಾಷೆಯ ರಚನೆ ಮತ್ತು ಬಳಕೆ'ಯಿಂದ ಆಯ್ದ ಭಾಗ).

ಈ ಮೇಲಿನ ಭಾಗವು ಸೋಲಿಗರ ಕನ್ನಡವಾಗಿದೆ. ಕನ್ನಡದ ಪ್ರಮಾಣ ಭಾಷೆಯಲ್ಲಿ ಎ ಕಾರಾಂತವಾಗಿರುವ ಪದಗಳು ಇದರಲ್ಲಿ ಅ ಕಾರಾಂತವಾಗಿವೆ. ಉದಾ., ನೀರ, ಏಕ, ಸಿವನನಿಗ. –ಅರೆ ಎಂಬ ಪಕ್ಷಾರ್ಥವನ್ನು ಹೇಳುವ ಪ್ರತ್ಯಯವು –ಅಲೆ ಆಗಿದೆ. ಉದಾ., ಆಕಿದಲೆ, ಉಯ್ಯದಿಲೆ. ಹ ಕಾರಾಂತವು ಅ ಕಾರಾಂತವಾಗಿ ಬಳಕೆಯಲ್ಲಿದೆ. ಉದಾ., ಹಳ್ಳದ ನೀರು > ಅಳ್ಳದ ನೀರೂ. ಬೇಕು ಎಂಬ ಅವ್ಯಯದೊಂದಿಗೆ ಕೊನೆಗೊಳ್ಳುವ ಕ್ರಿಯಾಪದಗಳು –ಆಕು ವಿನಿಂದ ಕೊನೆಗೊಂಡಿವೆ. ಉದಾ., ಮೀಯಾಕು. ಕ್ರಿಯಾಪದಗಳಿಗೆ ಹತ್ತುವ ಪ್ರಥಮ ಪುರುಷ ಪುಲ್ಲಿಂಗ ಏಕವಚನದ (ಅವನು) ರೂಪವು ಇಲ್ಲಿ ಭಿನ್ನವಾಗಿದೆ. ಉದಾ., ಮೂಸಿನ, ಸೋತೋನ್ನ. ಸೋಲಿಗರ ಕನ್ನಡದಲ್ಲಿ ಐ ಕಾರವು

ಬಳಕೆಯಲ್ಲಿದೆ. ಸ ಕಾರವು ಚ ಕಾರವಾಗಿ ಬಳಕೆಯಲ್ಲಿದೆ. ಉದಾ., ಸಾಸುವೆ > ಚಾಚಿಮೆ, ಸಿಡಿಲು > ಚೆಡ್ಳು. ದ ಕಾರವು ಜ ಕಾರ ರೂಪದಲ್ಲಿದೆ. ಉದಾ., ದಿನ > ಜಿನ. ಭೂತಕಾಲದ ಕಾಲಸೂಚಕ ಪ್ರತ್ಯಯವು –ದ ಲೋಪಗೊಂಡಿದೆ. ಉದಾ., ಉಯ್ನ.

**೨. ಹವ್ಯಕ ಕನ್ನಡ**

ಈ ಕೆಳಗಿನ ಉದಾಹರಣೆ ಗಮನಿಸಿ.

'ನಿನಗೆ ಹೆಂಡತಿ ಬಂದ ಮೇಲೆ ಅಪ್ಪ ಅಬ್ಬೆ ಹೇಳ್ವವು ಇತ್ತಿದ್ದವು ಹೇಳುವ ಅರಿವೂ ಹೋಯಿದು. ನಿನ್ನ ಹೆತ್ತು ಹೊತ್ತು ಸಾಂಕಿ ಸಲಹಿ ದೊಡ್ಡದು ಮಾಡಿದವು ಹೇಳುವ ಜ್ಞಾನವೇ ನಿನಗಿಲ್ಲೆ. ಪ್ರತಿಯೊಂದಕ್ಕೂ ಹೆಂಡತಿಯ ಮಾತು ಕೇಳ್ಯೊಂಡು ಕೋಲೆಬಸವನ ಹಾಂಗೆ ಮೆರೆದೆ, ಇಲ್ಲಸಲ್ಲದ ಅಪವಾದವ ಹೆಂಡತಿ ಹೇಳಿದರೂ ಅದುವೇ ಸತ್ಯ ಹೇಳಿ ಎನ್ನ ಬಾಯಿಗೆ ಬಂದ ಹಾಂಗೆ ಜರವಲೆ ಸುರುಮಾಡಿದೆ. ಆನು ಕೂದರೂ ತಪ್ಪು ನಿಂದರೂ ತಪ್ಪು ಹೇಳುವಲ್ಲಿವರೆಗೆ ಎನ್ನ ದಂಡುಸಿದೆ. ಇಪ್ಪತ್ತೈದು ವರ್ಷ ಕಷ್ಟಪಟ್ಟು ಸಾಂಕಿದ ಅಬ್ಬೆಂದ ನಿನಗೆ ಬಂದು ಇಪ್ಪತ್ತು ದಿನ ಆದ ಹೆಂಡತಿಯೇ ದೊಡ್ಡದಾಗಿ ಕಂಡತ್ತು. ಅದು ಹೇಳಿದ್ದೆಲ್ಲಾ ನಿಜ ಹೇಳಿ ನಂಬಿಕೊಂಡು ಬಂದೆ.

– (ಡಾ. ಸಬಿತಾ ಮರಕಿಣಿ ಅವರ 'ಮಾಂಗ್ಣಿ ಮಾಸ್ತ್ರಂಗೆ ನಮಸ್ಕಾರ' ಕೃತಿಯ ಭಾಗ).

ಈ ಮೇಲಿನ ಭಾಗವು ಹವ್ಯಕ ಕನ್ನಡದ್ದು. ಉತ್ತಮ ಪುರುಷ ಬಹುವಚನದಲ್ಲಿ ಸಮಾವಿಷ್ಟ ಮತ್ತು ಅಸಮಾವಿಷ್ಟ ಇರುವುದು ಸರಿಯಷ್ಟೇ. ಅದರಂತೆ ಉತ್ತಮ ಪುರುಷ ಏಕವಚನದಲ್ಲಿ ಆನು, ಎನ್ನ ಬಳಕೆಯಲ್ಲಿದೆ. ಅನುನಾಸಿಕದ ಬಳಕೆ ಹೆಚ್ಚಾಗಿರುವುದು ಕಾಣಿಸುತ್ತದೆ. ಉದಾ., ಹಾಂಗೆ, ಸಾಂಕಿ. 'ತ' ಕಾರವು 'ದ' ಕಾರವಾಗಿ ಬಳಕೆಯಲ್ಲಿದೆ. ಉದಾ., ಕೂದರೂ. ನಿಷೇಧಾರ್ಥಕದಲ್ಲಿ ಬರುವ ಇಲ್ಲ ಎನ್ನುವುದು ಪೂರ್ಣ ಕ್ರಿಯಾಪದ ರೂಪಗಳಿಗೆ ಇಲ್ಲೆ ಎಂದು ಸೇರುವುದರಿಂದ ಲಿಂಗ, ವಚನ, ಪುರುಷ ವ್ಯತ್ಯಾಸವನ್ನು ಹೇಳುತ್ತವೆ. ಸ್ತ್ರೀ ಲಿಂಗವು ನಪುಂಸಕ ಲಿಂಗದಂತೆ ಬಳಕೆಯಾಗುತ್ತದೆ. ಉದಾ., ಅದು ಹೇಳಿದ್ದೆಲ್ಲಾ.

**೩. ಚಾಮರಾಜನಗರದ ಆಡುಮಾತು**

ಈ ಕೆಳಗಿನ ಉದಾಹರಣೆ ಗಮನಿಸಿ.

ಈ ಚಂದವು ನಿದ್ದ ಬಂದು ಆ ಜನಕ ಗುದ್ದವರ್ಗೂ ನಡ್ದು, ಅಲ್ಲಿ ನಿಂತೋರು ತಲ್ಗ ಒಂದ್ಸಲವಾದರೂ 'ಅದ್ಯಾನುಡ ಯಾಡ' ಅಂತ ಕೇಳೀ ಆ ಕೇಳ್ದವರ್ಗ ಸುಸ್ತಾಗಿಸಿ ಕೊನಗ ಯಾಡನು 'ನಂ ಆಡು ಕುರಿ ದನುವಿ' ಅಂತ ಉಸುರ ಬುಟ್ಟನು. ಅಕ್ಕಮಾದೇವಮ್ಮಗಾಗ ದೊಡ್ಡಜೀವ ಎತ್ತಿಟ್ಟಂತಾಗಿ ತಾರ್ಸದು ಕುಟ್ಟೋದು ನಿಲ್ಸಿ ಕೂತು ಬೆಪ್ಪಾದಳು. ಸುತ್ತಾಲೂ ಜನವಾಗಿ

ಗಾಳಿಯಾಡಲು ಕಷ್ಟವಾಗಿ, ಅಲ್ಲಾಡುತ್ತಿದ್ದ ಗಾಳಿಗ ಉಸುರು ಸಿಕ್ಕಾಕಿಕೊಂಡಿರಲು ಯಾಡ ಅಂದನು.

– (ದೇವನೂರ ಮಹಾದೇವ ಅವರ 'ಕುಸುಮಬಾಲೆ' ಕೃತಿಯಿಂದ).

ಈ ಮೇಲಿನ ಗದ್ಯಭಾಗದಲ್ಲಿ ಎ ಕಾರದಿಂದ ಕೊನೆಗೊಳ್ಳುವ ಪದಗಳು ಅ ಕಾರದಿಂದ ಕೊನೆಗೊಂಡಿವೆ. ಉದಾ., ಚಂದ, ಜನಕ, ನಿದ್ದ, ತಲ್ಗ, ಗಾಳಿಗ. ಪ್ರಮಾಣ ಕನ್ನಡದಲ್ಲಿನ ಪದಗಳ ನಡುವೆ ಸ್ವರಗಳ ಬಳಕೆ ಇದರಲ್ಲಿ ಇಲ್ಲವಾಗಿದೆ. ಉದಾ., ತಾರ್ಸದು, ನಿಲ್ಸಿ, ಕೇಳ್ದವರ್ಗ. ಕೆಲವು ವಿಶಿಷ್ಟ ಪದಗಳ ಬಳಕೆ ಇದೆ. ಅದ್ಯಾನುಡ.

**೪. ಬಡಗ ಕನ್ನಡ**

ಇದು ನೀಲಗಿರಿ ಬೆಟ್ಟಗಳಲ್ಲಿ ಇರುವ ಬುಡಕಟ್ಟು ಜನಾಂಗದ ಭಾಷೆ. ಕನ್ನಡದಲ್ಲಿ ಬಡಗು ಎಂದರೆ ಉತ್ತರ ಎಂದು ಅರ್ಥ. ಹೆಸರೇ ಸೂಚಿಸುವಂತೆ ಈ ಬುಡಕಟ್ಟು ಜನಾಂಗವು ಉತ್ತರದಿಂದ ಬಂದು ನೀಲಗಿರಿಯಲ್ಲಿ ನೆಲೆಸಿರುವ ಸಾಧ್ಯತೆಗಳಿವೆ. ಇದನ್ನು ಕನ್ನಡದ ಉಪಭಾಷೆ ಎಂದು ಹೇಳುತ್ತಾರೆ. ಇದು ಕನ್ನಡದ ಪ್ರಾಚೀನ ಪ್ರಭೇದ. ಇದರಲ್ಲಿ ಱ ಮತ್ತು ೞ ಧ್ವನಿಗಳು ಬಳಕೆಯಲ್ಲಿವೆ. ಈ ಕೆಳಗಿನ ಉದಾಹರಣೆಯಲ್ಲಿ ಕಾಣಿಸುವ 'ಮಕ್ಕೞ್ದರು' ಎಂಬುದರಲ್ಲಿ ೞ ಬಳಕೆ ಇರುವುದನ್ನು ನೋಡಬಹುದು. ಮ್ ಕಾರವು ಪದದ ಕೊನೆಯಲ್ಲಿ ಕಾಣಿಸುತ್ತದೆ. ಉತ್ತಮಪುರುಷ ಏಕವಚನದಲ್ಲಿ ಎನಗ ಬಳಕೆ ಇದೆ. ಉದಾ., ಯೆನಗ, ಎಮ್ಮ. 'ಸ / ಶ' ಕಾರದ ಸ್ಥಳದಲ್ಲಿ 'ಚ' ಕಾರವಿದೆ. ಉದಾ., ದೇಚ್ಚ. ನಾಮಪದವು ಕೊನೆಯಲ್ಲಿ ಹಳೆಗನ್ನಡದಲ್ಲಿ ಇರುವಂತೆ ಮ್ ಇಂದ ಕೊನೆಯಾಗುತ್ತದೆ. ಉದಾ., ಕುನ್ನವ*(ಮ್), ಹಾೞಮಾಡಿಬುಟ್ಟ*(ಮ್).

ಈ ಕೆಳಗಿನ ಉದಾಹರಣೆ ಗಮನಿಸಿ:

ಒಬ್ಬ ಮನಿಚಗ ಎರಡು ಮಕ್ಕೞ್ದರು, ಅವಕರ್ಳೊಗೆ ಕುನ್ನವ*(ಮ್) ಅಪ್ಪ*(ಮ್)ಗ, ಅಪ್ಪಾ! ಆಸ್ತಿಯೊ ಯೆನಗ ಬಪ್ಪಕೂರ ಯೆನಗತಾ ಎಮ್ಮನೆ, ಅವ*(ಮ್) ಅವಕ ಗಬದುಕಕೂರ್ಹಚ್ಚ*(ಮ್). ಜೋಚಿಜಿನಗ್ದಿಂದೆ ಕುನ್ನಮಾತಿ ಎಲ್ಲಾವ ಸೇತಿಯುಂಡು, ದೂರದೇಚಗ ಕಡೆದು ಹೋಗಿ, ಅಲ್ಲಿ ಕೆಟ್ಟವ*(ಮ್)ನಾಗಿ ಬದಿಕಿ, ತನ್ನ ಬದುಕೆಲ್ಲಾವ ಬೀೞಿ, ಹಾೞಮಾಡಿ ಬುಟ್ಟ*(ಮ್). ಆಲೆ ಅವ*(ಮ್) ಎಲ್ಲಾವ ಬೆಚ್ಚಮಾಡಿದದೆಮ್ಮನೆ, ಆದೇ ಚಬಕ್ಕೆಲ್ಲ ಅನಹಂಜ ಉಟ್ಟಾತು;

– ('ಲಿಂಗ್ವಿಸ್ಟಿಕ್ ಸರ್ವೇ ಅಫ್ ಇಂಡಿಯಾ'ದಿಂದ; ಈ '*' ಸಂಕೇತವು (ಮ್), ಅಂದರೆ ಅನುನಾಸಿಕೀಕರಣವನ್ನು ಸೂಚಿಸುತ್ತದೆ).

**ಅಭ್ಯಾಸ ೪**

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಸಾಮಾಜಿಕ ಪ್ರಭೇದ ಎಂದರೇನು?

೨. ಕನ್ನಡದ ಸಾಮಾಜಿಕ ಪ್ರಭೇದಗಳು ಯಾವುವು?

೩. ಸಾಮಾಜಿಕ ಪ್ರಭೇದಕ್ಕೂ ಪ್ರಾದೇಶಿಕ ಪ್ರಭೇದಕ್ಕೂ ಇರುವ ವ್ಯತ್ಯಾಸವನ್ನು ವಿವರಿಸಿ.

೪. ನಿಮ್ಮ ಪ್ರದೇಶದಲ್ಲಿ ಇಂತಹ ಭಾಷಿಕ ವ್ಯತ್ಯಾಸಗಳನ್ನು ಗುರುತಿಸಿದ್ದೀರಾ?

೫. ಸೋಲಿಗರ ನುಡಿಯ ಸ್ವರೂಪವೇನು?

೬. ಪ್ರಮಾಣ ಕನ್ನಡ ಎಂದರೇನು?

೭. ಈ ಕೆಳಗಿನ ಉದಾಹರಣೆಯಲ್ಲಿರುವ – ನಮ್ಮ, ಒಂದು, ಏಲಕ್ಕಿ, ಇಂತಹ, ಹುಟ್ಟಿದ – ಇಂತಹ ಪದಗಳು ಕೊಡಗು ಭಾಷೆಯಲ್ಲಿ ಪಡೆದಿರುವ ಸ್ವರೂಪವನ್ನು ಗುರುತಿಸಿ. ಮತ್ತು ಈ ಭಾಷೆಯಲ್ಲಿರುವ ಸಂಸ್ಕೃತ ಪದಗಳನ್ನು ಪಟ್ಟಿಮಾಡಿ.

> ನಂಗಡ ರಾಷ್ಟ್ರ ಬಾರತ, ಭಾರತ ದೇಶತ್‌ರ ಒರ್ ರಾಜ್ಯ ಕರ್ನಾಟಕ, ಕರ್ನಾಟಕತ್ ಪ್ರಕೃತಿರ ಕಾಮನೆ ಎಣ್ಣಿತ್ತೆ ಪೆದ ಎಡ್ತ ಜಿಲ್ಲೆ ಕೊಡಗ್, ಕಾಪಿ, ಯಾಲ, ತೇನ್‌ರ ಗೂಡ್ ಕೊಡಗ್. ಇಲ್ಲಿ ಪುಣ್ಯ ಕಾವೇರಿ ಪೊಳೆ ಪುಟ್ಟಿತ್ ಒಕ್ಕುವ. ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಜನರಲ್ ತಿಮ್ಮಯ್ಯ... ಇನ್ನತ ಗಟ್ಟಿಗಂಗ ಪುಟ್ಟ್‌ನ ನಾಡೂ ಇದೆ.
>
> – ('ಕೊಡವ ಭಾರತಿ ೧'ರಿಂದ)

## ೨.೫. ಸಾರಾಂಶ

ಈ ಮೇಲಿನ ಭಾಗಗಳಲ್ಲಿ ಕನ್ನಡದ ಪದವನ್ನು ಯಾವ ರೀತಿ ವಿವರಿಸಿಕೊಂಡಿದ್ದೇವೆ ಎನ್ನುವುದರಿಂದ ಹಿಡಿದು, ಕನ್ನಡವು ಯಾವ ಕಾಲದಿಂದ ಅಸ್ತಿತ್ವದಲ್ಲಿ ಇತ್ತು ಎಂಬುದನ್ನು ನೋಡಿದೆವು. ಇದರಿಂದ ಕನ್ನಡವು ಕ್ರಿಸ್ತ ಶಕ ಮೊದಲ ಸಹಸ್ರಮಾನದಲ್ಲಿ ಇದ್ದಿರಲೇಬೇಕೆಂಬ ಊಹೆಯನ್ನು ಈಗ ದೊರೆತಿರುವ ಆಧಾರಗಳಿಂದ ಹೇಳಬಹುದು ಎಂದು ತಿಳಿದುಕೊಂಡೆವು. ಇದಲ್ಲದೆ ಕನ್ನಡವು ಯಾವ ಕಾಲಘಟ್ಟದಲ್ಲಿ ಹೇಗೆ ಇತ್ತು ಎಂಬುದನ್ನು ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ವಿಭಾಗಗಳಲ್ಲಿ ಗಮನಿಸಿದೆವು. ಕನ್ನಡ ಭಾಷೆ ಎಂಬುದು ಒಂದು ಎನ್ನುವಂತೆ ಕಾಣಿಸುತ್ತಿದ್ದರೂ ಅವುಗಳಲ್ಲಿ ಹಲವಾರು ಬಗೆಗಳಿವೆ ಎಂಬುದನ್ನು ಅರ್ಥ ಮಾಡಿಕೊಂಡೆವು. ಕನ್ನಡದಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕ ವ್ಯತ್ಯಾಸಗಳನ್ನು ಆಡುಮಾತನ್ನು ಆಧರಿಸಿ ನೋಡುತ್ತಿದ್ದೇವೆ. ಇಂತಹ ಭಾಷಿಕ ವ್ಯತ್ಯಾಸಗಳು 'ಕವಿರಾಜಮಾರ್ಗ'ದ ಕಾಲದಿಂದಲೂ ಇತ್ತು ಎಂಬುದು ಮುಖ್ಯವಾದ ವಿಷಯ. ಕನ್ನಡ ಒಂದೇ ಎಂಬಂತೆ ಇದ್ದರೂ ಅವುಗಳಲ್ಲಿ ಇರುವ ಪ್ರಭೇದಗಳು ಹೇಗೆ ಇವೆ ಎಂಬುದನ್ನು ಇದುವರೆಗೆ ನೋಡಿದೆವು.

ಪಠ್ಯವನ್ನು ಸಿದ್ಧಪಡಿಸಿದವರು: **ಡಾ. ಎಚ್. ಶಶಿಕಲಾ**

## ಘಟಕ ೩

# ಸಾಹಿತ್ಯ ಸಂಸ್ಕೃತಿಯ ಚರಿತ್ರೆ

### ಹಿನ್ನೆಲೆ

ಸಾಹಿತ್ಯ ಚರಿತ್ರೆಯನ್ನು ಒಂದು ರಾಷ್ಟ್ರದ ಸಾಂಸ್ಕೃತಿಕ ಸಂಪತ್ತು ಎಂದು ಪರಿಗಣಿಸುವ ವಾಡಿಕೆ ಇದೆ. ಆದರೆ ಸಾಹಿತ್ಯ ಚರಿತ್ರೆ ಎಂಬ ಪರಿಕಲ್ಪನೆಯೇ ಅನೇಕ ಸಮಸ್ಯಾತ್ಮಕವಾದ ಆಯಾಮಗಳಿಂದ ಕೂಡಿದೆ. ಅವುಗಳಿಗೆ ಸಮರ್ಪಕವಾಗಿ ಉತ್ತರ ಸಿಗುವುದು ಕಷ್ಟವಾದರೂ ಆ ಸಮಸ್ಯೆಗಳನ್ನು ಗುರುತಿಸಿಕೊಳ್ಳುವುದು ಸಾಹಿತ್ಯ ಚರಿತ್ರೆಯ ರಚನೆಯ ಜ್ಞಾನ ಅಥವಾ 'ಲಿಟ್ರರಿ ಹಿಸ್ಟೋರಿಯೋಗ್ರಫಿ' ಎಂಬ ಶಿಸ್ತಿಗೆ ತೀರ ಅಗತ್ಯ. ಸಾಹಿತ್ಯ ರಚನೆಯ ಜ್ಞಾನಕ್ಕೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಇಲ್ಲಿ ನಿಮ್ಮ ಮುಂದೆ ಇಡಲಾಗಿದೆ. ಮೊದಲನೆಯದಾಗಿ ಸಾಹಿತ್ಯ ಚರಿತ್ರೆ ಒಂದು ದೇಶದ ಅಥವಾ ನಾಡಿನ ಸಾಹಿತ್ಯ ಚರಿತ್ರೆಯೋ, ಒಂದು ಜನಾಂಗ ಅಥವಾ ಸಮುದಾಯದ ಸಾಹಿತ್ಯ ಚರಿತ್ರೆಯೋ, ಒಂದು ಭೌಗೋಳಿಕ ಪ್ರದೇಶದ ಬೌದ್ಧಿಕ ಅಥವಾ ಕಲಾತ್ಮಕ ಅಭಿವ್ಯಕ್ತಿಯ ಚರಿತ್ರೆಯೋ ಎಂಬುದನ್ನು ಉತ್ತರಿಸುವುದು ಕಷ್ಟ. ಎರಡನೆಯದಾಗಿ ಸಾಹಿತ್ಯ ಚರಿತ್ರೆಯಾಗಲಿ ಅಥವಾ ಸಾಹಿತ್ಯ ಸಂಸ್ಕೃತಿಯ ಚರಿತ್ರೆಯಾಗಲಿ ಅದು ಒಂದು ಸಾಹಿತ್ಯ ಬೆಳೆದುಬಂದ ರೀತಿಯ ಕರಾರುವಾಕ್ಕಾದ ಚರಿತ್ರೆಯಲ್ಲ. ಯಾವುದೇ ಚರಿತ್ರೆ ಒಂದು ರಚನೆ ಅಷ್ಟೆ; ವಾಸ್ತವಿಕ ಸತ್ಯ ಅಲ್ಲ. ಅದರ ರಚನೆಯ ಹಿಂದೆ ಯೋಚನಾಕ್ರಮಗಳು ಕೆಲಸ ಮಾಡುತ್ತಿರುತ್ತವೆ. ಹೀಗಾಗಿ ಯೋಚನಾಕ್ರಮ ಬದಲಾದಂತೆ ಸಾಹಿತ್ಯ ಚರಿತ್ರೆಯ ಮರುರಚನೆ ಅನಿವಾರ್ಯವಾಗುತ್ತದೆ. ಅಂದರೆ ನಾವು ನೋಡುತ್ತಿರುವ ಚರಿತ್ರೆಗಳು ಓರಿಯೆಂಟಲಿಸ್ಟ್, ರಾಷ್ಟ್ರೀಯತೆ, ಮಾರ್ಕ್ಸ್‌ವಾದ, ಸ್ತ್ರೀವಾದ, ಉಪೇಕ್ಷಿತ ವರ್ಗ (ಸಬಾಲ್ಟ್ರನ್) ಮುಂತಾದ ವೈಚಾರಿಕ ಚೌಕಟ್ಟುಗಳ ಪ್ರಭಾವದಲ್ಲಿ ರೂಪುಗೊಂಡಿವೆ. ಈ ಕಾರಣದಿಂದಲೇ ಸಾಹಿತ್ಯ ರಚನೆಯ ಕೆಲಸ ಅದು ಎಷ್ಟೇ ಸಮರ್ಪಕವಾಗಿದ್ದರೂ ಅಪೂರ್ಣವೇ ಹೌದು. ಹೊಸ ವೈಚಾರಿಕ ಚಿಂತನೆಗಳು ಬಂದಂತೆ ಹೊಸ ಸಾಹಿತ್ಯ ಚರಿತ್ರೆಯ ರಚನೆಯ ಕೆಲಸ ಮುಂದುವರೆಯುತ್ತಲೇ ಇರುತ್ತದೆ. ಮೂರನೆಯದಾಗಿ ಮಾಹಿತಿ ಕಣಜದ ಸ್ವರೂಪವು ಸಾಹಿತ್ಯ ಚರಿತ್ರೆಯ ಸ್ವರೂಪವನ್ನು ಗಮನಾರ್ಹವಾಗಿ ನಿರ್ಧರಿಸುತ್ತದೆ. ಮಾಹಿತಿ ಕಣಜವನ್ನು ಬಳಸಿಕೊಳ್ಳುವಲ್ಲಿ ತೆಗೆದುಕೊಳ್ಳುವ, ಆಯ್ಕೆಯಾಗುವ ಹಾಗೂ ನಿರಾಕರಣೆಯಾಗುವ ಅಂಶಗಳು ಸಂಸ್ಕೃತಿ ಹಾಗೂ ಭಾಷೆಯ ಸಾಂಸ್ಕೃತಿಕ ರಾಜಕಾರಣದ ಅಂಗವಾಗಿದ್ದು ರಚನೆಯಾಗುವ ಚರಿತ್ರೆಯ ಸ್ವರೂಪವನ್ನು ನಿರ್ಣಾಯಕವಾಗಿ ನಿರ್ದೇಶಿಸುತ್ತಿರುತ್ತದೆ. ನಾಲ್ಕನೆಯದಾಗಿ ಸಾಹಿತ್ಯ ಚರಿತ್ರೆಯ ರಚನೆಗೆ

ಉಪಯೋಗಿಸುವ ಅಧ್ಯಯನಕ್ರಮ ಅದರ ಖಚಿತತೆ ಹಾಗೂ ವ್ಯಾಪ್ತಿಗಳ ಮಟ್ಟವನ್ನು ಕೊಡುತ್ತದೆ. ಹೀಗಾಗಿ ಅಧ್ಯಯನಕ್ರಮದ ಹೊಸ ಆವಿಷ್ಕಾರಗಳು ಸಾಹಿತ್ಯ ಚರಿತ್ರೆಯ ಹೊಸ ರೀತಿಯ ಓದುಗಳನ್ನು ಸಾಧ್ಯಮಾಡಬಲ್ಲವು. ಎಲ್ಲದಕ್ಕಿಂತ ಮುಖ್ಯವಾದ ಅಂಶವೆಂದರೆ ಸಾಹಿತ್ಯ ಚರಿತ್ರೆಯ ರಚನೆ ಯಾವಾಗಲೂ ಒಂದು ಅಪೂರ್ಣವಾದ ಕ್ರಿಯೆ; ಆದ್ದರಿಂದ ಅದು ನಿರಂತರವಾಗಿ ನಡೆಯುತ್ತಲೇ ಇರಬೇಕಾದ ಸಾಹಿತ್ಯಿಕ ಚಟುವಟಿಕೆ. ಕನ್ನಡ ಸಾಹಿತ್ಯ ಸಂಸ್ಕೃತಿಯ ಚರಿತ್ರೆ ಕೇವಲ ಕನ್ನಡದಲ್ಲಿ ಬಂದಿರುವ ಲಿಖಿತ ಪಠ್ಯಗಳ ಚರಿತ್ರೆಯಾಗದೆ ಕರ್ನಾಟಕದ ಬಹುಭಾಷಿಕತೆ, ಅದರ ಎಲ್ಲ ಭಾಷಿಕ ಸಮುದಾಯಗಳ ಲಿಪಿಕೇಂದ್ರಿತ (ಬರಹ ಸಂಸ್ಕೃತಿ), ಧ್ವನಿಕೇಂದ್ರಿತ (ಮೌಖಿಕ ಸಂಸ್ಕೃತಿ) ಹಾಗೂ ದೇಹಕೇಂದ್ರಿತ (ಪ್ರದರ್ಶನ, ಕಲೆಗಳು) ಪ್ರತಿನಿಧೀಕರಣಗಳು, ಅನುವಾದಗಳು ಮತ್ತು ಬಹುಳ ಸಾರ್ವಜನಿಕ ವಲಯಗಳ ಸಂವೇದನೆಗಳನ್ನು ದಾಖಲಿಸುವ ಚರಿತ್ರೆಯಾಗಬೇಕು. ಈ ಘಟಕ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ವಿಶ್ವ, ಭಾರತೀಯ ಹಾಗೂ ಪ್ರಾದೇಶಿಕ ಸಾಹಿತ್ಯ ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಪರಿಚಯ ಮಾಡಿಸುವ ಪ್ರಯತ್ನವನ್ನು ಮಾಡುತ್ತದೆ.

**ವಿಷಯಾನುಕ್ರಮಣಿಕೆ**

೩.೦. ಉದ್ದೇಶ
೩.೧. ಪೀಠಿಕೆ
೩.೨. ಭಾರತದಲ್ಲಿ ಸಾಹಿತ್ಯ ಚರಿತ್ರೆಯ ಇತಿಹಾಸ
೩.೩. ಕನ್ನಡ ಸಾಹಿತ್ಯ ಚರಿತ್ರೆಯ ಇತಿಹಾಸ: ಒಂದು ಸ್ಥೂಲ ನೋಟ
೩.೪. ಸಾಹಿತ್ಯ ಸಂಸ್ಕೃತಿಯ ರಚನೆಯ ಇತಿಹಾಸ
೩.೫. ಕನ್ನಡ ಸಾಹಿತ್ಯ ಸಂಸ್ಕೃತಿ: ಒಂದು ಒಟ್ಟು ನೋಟ
೩.೬. ಕನ್ನಡ ಸಾಹಿತ್ಯ ಚರಿತ್ರೆ: ಬಹುಮುಖೀ ಜ್ಞಾನವ್ಯವಸ್ಥೆ
೩.೭. ವಸಾಹತುಶಾಹಿ ಆಗಮನ ಹಾಗೂ ಆಧುನಿಕ ಸಾಹಿತ್ಯ ಸಂಸ್ಕೃತಿ
ಅಭ್ಯಾಸ
೩.೮. ಸಾರಾಂಶ

## ೩.೦. ಉದ್ದೇಶ

ಈ ಘಟಕದ ಅಭ್ಯಾಸದಿಂದ ಕೆಳಕಂಡ ಅಂಶಗಳು ಮನದಟ್ಟಾಗುತ್ತವೆ.

೧. ಸಾಹಿತ್ಯ ಸಂಸ್ಕೃತಿ ಎಂಬ ಪರಿಕಲ್ಪನೆಯ ಪರಿಚಯ.

೨. ಸಾಹಿತ್ಯ ಸಂಸ್ಕೃತಿಯ ಸ್ವರೂಪ.

೩. ಭಾರತೀಯ ಸಾಹಿತ್ಯ ಸಂಸ್ಕೃತಿಯ ಪರಿಚಯ.

೪. ಕನ್ನಡ ಸಾಹಿತ್ಯ ಸಂಸ್ಕೃತಿಯ ಒಟ್ಟುನೋಟ.

೫. ಕನ್ನಡ ಸಾಹಿತ್ಯ ಸಂಸ್ಕೃತಿಯ ವಿಭಾಗಕ್ರಮಗಳು.

೬. ಕಾಲಾನುಕ್ರಮಣಿಕೆ, ಭಾಷಾವೈಜ್ಞಾನಿಕ, ಸಾಹಿತ್ಯರೂಪ, ಕವಿಕೇಂದ್ರಿತ ಹಾಗೂ ಧಾರ್ಮಿಕತೆಗಳ ಮೂಲಕ ಕನ್ನಡ ಸಾಹಿತ್ಯದ ಅವಧೀಕರಣ.

ignou THE PEOPLE'S UNIVERSITY

೮. ಸಾಹಿತ್ಯ ರೂಪಗಳ ಮೂಲಕ ಕನ್ನಡ ಸಾಹಿತ್ಯ ಸಂಸ್ಕೃತಿಯ ದೂರದ ಓದು.
೯. ಪರ್ಷಿಯನ್ ಸಾಹಿತ್ಯದ ಪ್ರವೇಶ ಹಾಗೂ ಅದರ ಪರಿಣಾಮಗಳು.
೧೦. ವಸಾಹತುಶಾಹಿ ಆಗಮನ ಹಾಗೂ ಆಧುನಿಕ ಸಾಹಿತ್ಯ ಸಂಸ್ಕೃತಿಯ ಉಗಮ.

## ೩.೧. ಪೀಠಿಕೆ

ಸಾಹಿತ್ಯ ಚರಿತ್ರೆ ಒಂದು ಭಾಷೆಯಲ್ಲಿ ಬಂದಿರುವ ಸಾಹಿತ್ಯ ಕೃತಿಗಳ ಬೆಳವಣಿಗೆಗಳು, ಬದಲಾವಣೆಗಳು ಹಾಗೂ ಪ್ರಯೋಗಶೀಲತೆಗಳನ್ನು ಒಟ್ಟಾಗಿ ನೋಡುವ ಪ್ರಯತ್ನ ಮಾಡುತ್ತದೆ. ಸಾಹಿತ್ಯ ಕೃತಿಗಳ ವಸ್ತು, ಸಾಹಿತ್ಯರೂಪ, ಶೈಲಿ, ಆಶ್ರಯ, ಓದುಗ ಸಮುದಾಯ ಮುಂತಾದ ಅಂಶಗಳನ್ನು ಕ್ರೋಢೀಕರಿಸಿ, ತೌಲನಿಕವಾಗಿ ಪರಿಶೀಲಿಸಿ ಅವಧೀಕರಣದ ಮೂಲಕ ಪರಿಚಯಾತ್ಮಕ ಒಟ್ಟುನೋಟವನ್ನು ಕಟ್ಟಿಕೊಡುತ್ತದೆ.

ಸಾಹಿತ್ಯ ಚರಿತ್ರೆ ಒಂದು ಬಗೆಯ ಚರಿತ್ರೆ ಹಾಗೂ ಒಂದು ಭಾಷೆಯಲ್ಲಿ ರಚನೆಯಾದ ಸಾಹಿತ್ಯ ಕೃತಿಗಳ ಒಟ್ಟು ನೋಟ. ಆದರೆ ಚರಿತ್ರೆ ಎಂಬ ಪರಿಕಲ್ಪನೆ ಹಾಗೂ ಅದರ ರಚನೆಯ ಪ್ರಕ್ರಿಯೆ ತುಂಬಾ ಸಂಕೀರ್ಣವಾದುದು. ಆದ್ದರಿಂದ ಸಾಹಿತ್ಯ ಚರಿತ್ರೆಯ ರಚನೆಯನ್ನು ಕುರಿತಾದ ಪರಿಕಲ್ಪನೆಗಳ ಬಗ್ಗೆ ತಿಳಿದುಕೊಳ್ಳಬೇಕಾದ ಅಗತ್ಯವಿದೆ. ಕನ್ನಡ ಸಾಹಿತ್ಯಕ್ಕೆ ಸುಮಾರು ೧೨೦೦ ವರ್ಷಗಳಿಗೂ ಮೀರಿದ ಚರಿತ್ರೆ ಇದೆಯಾದರೂ ಅದರ ಸಾಹಿತ್ಯ ರಚನೆಯ ಚರಿತ್ರೆಗೆ ೧೫೦ ವರ್ಷಗಳ ಚರಿತ್ರೆ ಕೂಡ ಇಲ್ಲ. ೧೯ನೆಯ ಶತಮಾನದಲ್ಲಿ ಯೂರೋಪಿನಲ್ಲಿ ಪ್ರಮುಖ ಸಾಹಿತ್ಯಿಕ ಚಟುವಟಿಕೆಯಾಗಿದ್ದ ಸಾಹಿತ್ಯ ಚರಿತ್ರೆಗಳ ರಚನೆ ೨೦ನೆಯ ಶತಮಾನದಲ್ಲಿ ಹೊಸದಾಗಿ ಸ್ವಾತಂತ್ರ ಪಡೆದುಕೊಂಡ ರಾಷ್ಟ್ರಗಳ ಪ್ರಮುಖ ಸಾಹಿತ್ಯ ಚಟುವಟಿಕೆ ಆಗಿ ಪರಿಣಮಿಸಿತ್ತು. ಆದ್ದರಿಂದ ಸಾಹಿತ್ಯ ಚರಿತ್ರೆಯ ರಚನೆಯ ಯೋಚನಾಕ್ರಮವೇ ಇತ್ತೀಚಿಗೆ ರೂಢಿಗೆ ಬಂದ ಪ್ರಕಾರ. ಯೂರೋಪಿನ ಜ್ಞಾನ ಪರ್ವ ಹಾಗೂ ವಸಾಹತುಶಾಹಿ ವಿಸ್ತರಣೆಯೊಂದಿಗೆ ರಾಷ್ಟ್ರ ಹಾಗೂ ಅದರ ಸಾಂಸ್ಕೃತಿಕ ಚರಿತ್ರೆಯ ಬಗ್ಗೆ ಹೆಮ್ಮೆ ಉಗಮವಾಯಿತು. ಈ ಹೆಮ್ಮೆಯ ತಂತು ಯಾವುದೇ ಸಾಹಿತ್ಯ ಚರಿತ್ರೆಯ ರಚನೆಯಲ್ಲಿ ಒಂದು ಸ್ಥಾಯಿ ಅಂಶವಾಗಿ ಇದ್ದೇ ಇರುತ್ತದೆ.

ಸಾಹಿತ್ಯ ಚರಿತ್ರೆ ಒಂದು ಸಾಹಿತ್ಯದಲ್ಲಿ ಬಂದಿರುವ ಸಂಕಥನ, ಚಳುವಳಿ, ಸೌಂದರ್ಯ ಮೀಮಾಂಸೆ, ಕೃತಿ, ಕವಿ, ವಸ್ತು, ರೂಪ, ಆಶ್ರಯ, ಪ್ರಕಟನಾ ಸಂಸ್ಥೆ, ಓದುಗ ಮುಂತಾದ ಸಾಂಸ್ಕೃತಿಕ ಅಂಶಗಳನ್ನು ವರ್ಗೀಕರಿಸುವ, ಅವುಗಳ ಪರಸ್ಪರ ಸಂಬಂಧಗಳನ್ನು ವಿವರಿಸುವ ಹಾಗೂ ತೌಲನಿಕವಾಗಿ ಅಧ್ಯಯನ ಮಾಡುವ ಒಂದು ನಿರೂಪಣೆ. ಈ ಸಾಂಸ್ಕೃತಿಕ ಅಂಶಗಳನ್ನು ಒಟ್ಟಾಗಿ ಅಥವಾ ಬಿಡಿಬಿಡಿಯಾಗಿ ಪರಿಗಣಿಸುವುದರ ಮೂಲಕ ಭಿನ್ನಭಿನ್ನ ರೀತಿಯ ಸಾಹಿತ್ಯ ಚರಿತ್ರೆಗಳನ್ನು ರಚಿಸಲು ಸಾಧ್ಯವಾಗುತ್ತದೆ. ರಾಷ್ಟ್ರದ ಪರಿಕಲ್ಪನೆ ಭಾಷೆ, ಧರ್ಮ ಮುಂತಾದ ಯಾವುದಾದರೊಂದು ಏಕೀಕರಣಗೊಳಿಸಲು ಸಾಧ್ಯವಿರುವ ಅಂಶದ ಆಧಾರದ ಮೇಲೆ ರೂಪುಗೊಳ್ಳುತ್ತದೆ. ಅದೇ ಕಾರಣದಿಂದ ರಾಷ್ಟ್ರ ಅದರ ಸಮುದಾಯಗಳ ಭಿನ್ನತೆಗಳನ್ನು ಏಕರೂಪೀಕರಣಗೊಳಿಸುತ್ತದೆ. ಆದರೆ ವಾಸ್ತವದಲ್ಲಿ ಉಪಭಾಷೆಗಳು, ಬಹುಭಾಷಿಕತೆ, ಸಹಬಾಳ್ವೆ, ವಲಸೆ, ವ್ಯಾಪಾರ, ಅನುವಾದ ಮುಂತಾದ ಸಂಕೀರ್ಣ ಸಂಬಂಧಗಳು ರಾಷ್ಟ್ರದ ಏಕರೂಪಿ ರಚನೆಯನ್ನು ಪ್ರಶ್ನಿಸಿ ಒಂದತ್ತ ಅದರ ವಿರಚನೆ

ಇನ್ನೊಂದತ್ತ ರಾಷ್ಟ್ರದ ಬಗ್ಗೆ ಪರ್ಯಾಯ ಚಿಂತನೆಗಳನ್ನು ಸಾಧ್ಯಮಾಡಿವೆ. ತತ್ಪರಿಣಾಮವಾಗಿ ಬಹುಳತೆಯನ್ನು ಒಳಗೊಳ್ಳಲು ಸಾಧ್ಯ ಮಾಡುವ ಸಾಹಿತ್ಯ ಚರಿತ್ರೆಗಳ ಬಗ್ಗೆ ಕೂಡ ಚಿಂತಿಸಲು ಅನುವು ಮಾಡಿಕೊಟ್ಟಿವೆ.

ಸಾಹಿತ್ಯ ಚರಿತ್ರೆಯ ರಚನೆ ಯೂರೋಪಿನಲ್ಲಿ 'ಒಂದು ಭಾಷೆ–ಒಂದು ರಾಷ್ಟ್ರ' ಎಂಬ ಏಕಭಾಷಿಕ ಮಾದರಿಯನ್ನು ಉಪಯೋಗಿಸಿದ್ದರ ಫಲವಾಗಿ ಮೊದಲಿಗೆ ರಚನೆಯಾದ ಸಾಹಿತ್ಯ ಚರಿತ್ರೆಗಳು ಏಕರೂಪೀಕರಣದ ಮಾದರಿಯಲ್ಲಿ ರಚನೆಗೊಂಡವು. ಇದರ ಪರಿಣಾಮವಾಗಿ ಬಹುಭಾಷಿಕತೆಯನ್ನು ನೆಲೆಗಟ್ಟಾಗಿ ಹೊಂದಿರುವ ಭಾರತದಂತಹ ರಾಷ್ಟ್ರಗಳು ತಮ್ಮ ಅನೇಕ ಭಾಷೆಗಳ ಸಾಹಿತ್ಯ ಚರಿತ್ರೆಗಳನ್ನು ಪರಸ್ಪರ ಸಂಬಂಧವಿಲ್ಲದಂತೆ ಏಕರೂಪಿ ಸಾಹಿತ್ಯ ಚರಿತ್ರೆಯ ಮಾದರಿಯಲ್ಲಿ ರಚಿಸಬೇಕಾಯಿತು. ಇಂತಹ ಕೊರತೆಯನ್ನು ಸರಿತೂಗಿಸುವ ಸಲುವಾಗಿಯೇ ತೌಲನಿಕ ಭಾರತೀಯ ಸಾಹಿತ್ಯ ಚರಿತ್ರೆಗಳ ರಚನೆಯಾಗಿವೆ. ಆದರೂ ಈ ತನಕ ಬಂದಿರುವ ಸಾಹಿತ್ಯ ಚರಿತ್ರೆಗಳು ಬುಡಕಟ್ಟು ಸಂಸ್ಕೃತಿ, ಜಾನಪದ, ಸಂಗೀತ, ಅಂತರ್ಮಾಧ್ಯಮ ಅಭಿವ್ಯಕ್ತಿ ಹಾಗೂ ಪ್ರದರ್ಶನ ರೂಪಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಆದರೂ ಭಾರತದ ಬಹುಭಾಷಿಕ ಹಾಗೂ ಬಹುಸಾಂಸ್ಕೃತಿಕ ಆಯಾಮಗಳನ್ನು ಕೊಂಚಮಟ್ಟಿಗಾದರೂ ಗ್ರಹಿಸಲು ಕೆಲವಾದರೂ ತೌಲನಿಕ ಸಾಹಿತ್ಯ ಚರಿತ್ರೆಗಳು ಪ್ರಯತ್ನ ಮಾಡಿವೆ. ಭಾರತೀಯ ಹಾಗೂ ಕನ್ನಡದಲ್ಲಿ ಬಂದಿರುವ ಸಾಹಿತ್ಯ ಚರಿತ್ರೆಗಳ ಬಗ್ಗೆ ಮುಂದಿನ ಭಾಗದಲ್ಲಿ ಪ್ರಸ್ತಾಪಿಸಲಾಗಿದೆ.

## ೩.೨. ಭಾರತದಲ್ಲಿ ಸಾಹಿತ್ಯ ಚರಿತ್ರೆಯ ಇತಿಹಾಸ

ಭಾರತದಲ್ಲಿ ಚರಿತ್ರೆ ಹೇಗೆ ೧೯ನೆಯ ಶತಮಾನದ ಬೆಳವಣಿಗೆಯೋ ಅದೇ ರೀತಿ ಸಾಹಿತ್ಯ ಚರಿತ್ರೆಯ ಬೆಳವಣಿಗೆಯೂ ಅದೇ ಶತಮಾನದಲ್ಲಿ ಕಂಡುಬರುವ ಬೆಳವಣಿಗೆ. ಆರಂಭಿಕ ಹಂತದ ಸಾಹಿತ್ಯ ಚರಿತ್ರೆಗಳು ಬಹುತೇಕ ಯೂರೋಪಿನ ವಿದ್ವಾಂಸರಿಂದ ಅಥವಾ ಮಿಷನರಿಗಳಿಂದ ಆದ ರಚನೆಗಳು ಹಾಗೂ ಅವರಿಗೆ ಉಪಲಬ್ಧವಿದ್ದ ಯೂರೋಪಿನ ಮಾದರಿಗಳನ್ನು ಅನುಸರಿಸಿ ರಚಿತವಾದವು. ಮೊದಲ ಭಾರತೀಯ ಸಾಹಿತ್ಯ ಚರಿತ್ರೆಯ ಕೃತಿ ಆಲ್ಬ್ರೆಕ್ಟ್ ವೆಬರ್ ೧೮೫೨ರಲ್ಲಿ ಜರ್ಮನ್ ಭಾಷೆಯಲ್ಲಿ ರಚಿಸಿದ 'ದ ಹಿಸ್ಟರಿ ಆಫ್ ಇಂಡಿಯನ್ ಲಿಟ್ರೇಚರ್' ಎಂಬ ಕೃತಿ. ಆದರೆ ಅದರಲ್ಲಿ ಕಂಡುಬರುವುದು ಬಹುತೇಕ ಸಂಸ್ಕೃತ ಭಾಷೆಯ ಸಾಹಿತ್ಯ ಚರಿತ್ರೆ. ಮುಂದೆ ೧೮೮೭ರಲ್ಲಿ ರಚನೆಯಾದ ಮಾರಿಸ್ ವಿಂಟರ್ನಿಟ್ಸನ 'ಎ ಹಿಸ್ಟರಿ ಆಫ್ ಇಂಡಿಯನ್ ಲಿಟ್ರೇಚರ್' ಸಂಸ್ಕೃತ, ಪ್ರಾಕೃತ ಹಾಗೂ ಪಾಲಿ ಭಾಷೆಗಳ ಸಾಹಿತ್ಯ ಕೃತಿಗಳನ್ನು ಒಳಗೊಳ್ಳುತ್ತದಲ್ಲದೆ ಹಲವಾರು ದೇಶೀಯ ಭಾಷೆಗಳ ಸಾಹಿತ್ಯದ ಬಗ್ಗೆ ಅರಿವನ್ನೂ ಪ್ರಕಟಪಡಿಸುತ್ತದೆ. ದೇಶೀಯ ವಿದ್ವಾಸರಿಂದ ಇಂಗ್ಲಿಷಿನಲ್ಲಿ ಪ್ರಕಟಗೊಂಡ ಭಾರತೀಯ ಭಾಷೆಯ ಸಾಹಿತ್ಯ ಚರಿತ್ರೆಗಳಲ್ಲಿ ಮೊದಲ ಗಮನಾರ್ಹ ಕೃತಿ ೧೯೧೧ರಲ್ಲಿ ರಚಿತವಾದ ದಿನೇಶ್‌ಚಂದ್ರ ಸೇನ್ ಅವರ 'ಹಿಸ್ಟರಿ ಆಫ್ ಬೆಂಗಾಲಿ ಲಾಂಗ್‌ವೇಜ್ ಅಂಡ್ ಲಿಟ್ರೇಚರ್'.

ಸ್ವಾತಂತ್ರ್ಯ ಚಳುವಳಿಯ ಆರಂಭ ರಾಷ್ಟ್ರ ರಚನೆಯ ಚಳುವಳಿಯಾದ್ದರಿಂದ ಭಾರತೀಯ ಭಾಷೆಗಳಲ್ಲಿ ಸಾಹಿತ್ಯ ಚರಿತ್ರೆಗಳ ರಚನೆಯನ್ನು ಚುರುಕುಗೊಳಿಸಿತು. ಸ್ವಾತಂತ್ರ್ಯ ಬಂದ

ನಂತರದಲ್ಲಿ ೧೯೫೪ರಲ್ಲಿ ಆರಂಭವಾದ ಸಾಹಿತ್ಯ ಅಕಾದಮಿ ಮೊದಲಿಗೆ ಸಂವಿಧಾನದಲ್ಲಿ ಅಂಗೀಕೃತವಾಗಿರುವ ಭಾರತೀಯ ಭಾಷೆಗಳ ಸಾಹಿತ್ಯ ಚರಿತ್ರೆಯನ್ನು ರಚಿಸಿ ಪ್ರಕಟಿಸುವ ಕಾರ್ಯವನ್ನು ಮಾಡಿತು. ರಂ.ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ'ಯ ಇಂಗ್ಲಿಷ್ ಅವತರಣಿಕೆ ಈ ಮಾಲಿಕೆಯಲ್ಲಿ ೧೯೭೫ರಲ್ಲಿ ಪ್ರಕಟವಾಗಿ ಹಲವಾರು ಭಾರತೀಯ ಭಾಷೆಗಳಿಗೆ ಅನುವಾದಗೊಂಡಿದೆ. ಇದಲ್ಲದೆ ಶಿಶಿರ್‌ಕುಮಾರ್ ದಾಸ್ ಅವರ 'ಎ ಹಿಸ್ಟರಿ ಅಫ಼್ ಇಂಡಿಯನ್ ಲಿಟ್ರೇಚರ್' ಎಂಬ ಶೀರ್ಷಿಕೆಯಲ್ಲಿ ಸಮಗ್ರ ಭಾರತೀಯ ಸಾಹಿತ್ಯ ಚರಿತ್ರೆಯು ತೌಲನಿಕ ಚೌಕಟ್ಟಿನಲ್ಲಿ ಮೂರು ಸಂಪುಟಗಳಲ್ಲಿ ಕ್ರಮವಾಗಿ ೧೯೯೧, ೧೯೯೫ ಮತ್ತು ೨೦೦೫ರಲ್ಲಿ ಪ್ರಕಟವಾಯಿತು. ಇತ್ತೀಚೆಗೆ ಶೆಲ್ಡನ್ ಪೊಲಾಕ್ (೨೦೦೩) ಅವರು ಸಂಪಾದಕತ್ವದಲ್ಲಿ ಬಂದ 'ಲಿಟ್ರೆರಿ ಕಲ್ಚರ್ಸ್ ಇನ್ ಹಿಸ್ಟರಿ: ರಿಕನ್‌ಸ್ಟ್ರಕ್ಷನ್ಸ್ ಫ಼್ರಂ ಸೌತ್ ಏಷ್ಯಾ' ಎಂಬ ಕೃತಿಯಲ್ಲಿ ಭಾರತೀಯ ಸಾಹಿತ್ಯ ಸಂಸ್ಕೃತಿಯನ್ನು ಒಟ್ಟಾಗಿ ಗ್ರಹಿಸುವ ಪ್ರಯತ್ನಮಾಡಿದ್ದು ಅದರಲ್ಲಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಡಿ.ಆರ್. ನಾಗರಾಜ್ ಅವರ 'ಕ್ರಿಟಿಕಲ್ ಟೆನ್ಷನ್ಸ್ ಇನ್ ದಿ ಹಿಸ್ಟರಿ ಅಫ಼್ ಕನ್ನಡ ಲಿಟ್ರರಿ ಕಲ್ಚರ್' ಎಂಬ ಸುದೀರ್ಘ ಲೇಖನವಿದೆ.

## ೩.೩. ಕನ್ನಡ ಸಾಹಿತ್ಯ ಚರಿತ್ರೆಯ ಇತಿಹಾಸ: ಒಂದು ಸ್ಥೂಲ ನೋಟ

ಕನ್ನಡ ಸಾಹಿತ್ಯದ ಮೊದಲ ಚರಿತ್ರೆ ಕಿಟ್ಟೆಲ್ ಅವರು ೧೮೭೫ರಲ್ಲಿ ಒಂದನೆಯ ನಾಗವರ್ಮನ 'ಛಂದೋಂಬುಧಿ'ಗೆ ಬರೆದ ಸುದೀರ್ಘ ಪೀಠಿಕೆಯಾಗಿದ್ದು ಇದರಲ್ಲಿ ಸುಮಾರು ೮೯ ಕೃತಿಗಳನ್ನು ಸಂಕ್ಷಿಪ್ತವಾಗಿ ಮತ್ತು ಪರಿಚಯಾತ್ಮಕವಾಗಿ ಇಂಗ್ಲಿಷಿನಲ್ಲಿ ವೀಕ್ಷಣೆ ಮಾಡಲಾಗಿದೆ. ಕಿಟ್ಟೆಲ್ ಕನ್ನಡ ಸಾಹಿತ್ಯಕ್ಕೆ ಪ್ರಾಚೀನ ಮತ್ತು ಮಧ್ಯಕಾಲೀನ ಎಂಬ ಎರಡು ಹಂತಗಳ ಅವಧೀಕರಣವನ್ನು ಇಲ್ಲಿ ಸೂಚಿಸಿದ್ದಾರೆ. ಕ್ರಿ.ಶ. ೮೦೦–೧೩೦೦ರ ಪ್ರಾಚೀನ ಅವಧಿಯಲ್ಲಿ ೩೬ ಕೃತಿಗಳನ್ನೂ, ೧೩೦೦–೧೮೭೨ರ ಎರಡನೆಯ ಮಧ್ಯಕಾಲೀನ ಅವಧಿಯಲ್ಲಿ ೫೩ ಕೃತಿಗಳನ್ನೂ ಅವರು ಇಲ್ಲಿ ಪರಿಚಯ ಮಾಡಿಕೊಟ್ಟಿದ್ದಾರೆ. ಇದಲ್ಲದೆ ಮೂರನೆಯ ಆಧುನಿಕ ಹಂತವನ್ನೂ ಅವರು ಸೂಚಿಸಿದ್ದಾರೆ. ಇದರ ನಂತರದಲ್ಲಿ ಬಂದ ರಾ. ನರಸಿಂಹಾಚಾರ್ಯರ 'ಕರ್ಣಾಟಕ ಕವಿಚರಿತೆ'ಯ ಮೊದಲನೆಯ ಸಂಪುಟ ೧೯೦೭ರಲ್ಲೂ ಎರಡನೆಯ ಸಂಪುಟ ೧೯೧೯ರಲ್ಲೂ ಹಾಗೂ ಮೂರನೆಯ ಸಂಪುಟ ೧೯೨೯ರಲ್ಲೂ ಪ್ರಕಟವಾಯಿತು. ಮೂರೂ ಸಂಪುಟಗಳು ಸೇರಿದಂತೆ ಸುಮಾರು ೭೧೨ ಪುಟಗಳಷ್ಟು ಬೃಹತ್ತಾದ ಈ ರಚನೆ ಕವಿಕೇಂದ್ರಿತವಾಗಿದ್ದು ಕಾಲಾನುಕ್ರಮಣಿಕೆಯಲ್ಲಿ ಸುಮಾರು ೫೬೭ ಕವಿಗಳನ್ನೂ ಹಾಗೂ ಅವರ ಕೃತಿಗಳನ್ನೂ ಇಲ್ಲಿ ಪರಿಚಯ ಮಾಡಿ ಕೊಡಲಾಗಿದೆ. ಬಹುಷಃ ಇಷ್ಟು ದೊಡ್ಡ ಪ್ರಮಾಣದಲ್ಲಿ ಕವಿಗಳನ್ನು ಸಾಹಿತ್ಯ ಚರಿತ್ರೆಯ ಅವಗಾಹನೆಯಲ್ಲಿ ತರುವ ಪ್ರಯತ್ನ ಇದೊಂದೇ ಎನ್ನಬಹುದು. ಆದರೆ ಇದು ಕೇವಲ ಕವಿಗಳನ್ನು ಒಂದೆಡೆ ಕ್ರೋಢೀಕರಿಸುವ ಹಾಗೂ ಪರಿಚಯ ಮಾಡಿಕೊಡುವ ಪ್ರಯತ್ನ ಅಷ್ಟೆ.

೨೦ನೆಯ ಶತಮಾನದಲ್ಲಿ ನೂರಾರು ಕನ್ನಡ ಸಾಹಿತ್ಯ ಚರಿತ್ರೆಗಳು ಬಂದಿವೆಯಾದರೂ ೧೯೭೦ರ ದಶಕವನ್ನು ಕನ್ನಡ ಸಾಹಿತ್ಯ ಚರಿತ್ರೆಗಳ ಸುಗ್ಗಿಯ ಕಾಲ ಎಂದು ಹೇಳಬಹುದು.

ಬಹುಸಂಪುಟಗಳ ನಾಲ್ಕು ಸಾಹಿತ್ಯ ಚರಿತ್ರೆಗಳು ಈ ದಶಕದಲ್ಲಿ ಭಿನ್ನಭಿನ್ನ ದೃಷ್ಟಿಕೋನಗಳಿಂದ ರಚನೆಯಾಗಿವೆ. ಇವುಗಳ ವಿಶೇಷವೆಂದರೆ ಹಿಂದೆ ನೋಡಿದಂತೆ ಏಕ ವ್ಯಕ್ತಿಯಿಂದ ರಚನೆಗೊಂಡ ಸಾಹಿತ್ಯ ಚರಿತ್ರೆಗಳಲ್ಲ; ಇವೆಲ್ಲವೂ ಸಾಂಸ್ಥಿಕವಾಗಿ ನಿರ್ವಹಣೆಗೊಂಡ ಹಾಗೂ ಪ್ರತಿಭಾವಂತ ವಿದ್ವಾಂಸರ ಸಹಕಾರದಿಂದ ರಚನೆಗೊಂಡ ಸಾಹಿತ್ಯ ಚರಿತ್ರೆಗಳು. ಇವುಗಳಲ್ಲಿ ಮೊದಲನೆಯ ಪ್ರಯತ್ನ ಮೈಸೂರು ವಿಶ್ವವಿದ್ಯಾನಿಲಯದ್ದಾಗಿದ್ದು ಅದು 'ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ' ಎಂಬ ಶೀರ್ಷಿಕೆಯಲ್ಲಿ ಹಾಗೂ ಟಿ.ವಿ. ವೆಂಕಟಾಚಲ ಶಾಸ್ತ್ರಿಯವರ ಸಂಪಾದಕತ್ವದಲ್ಲಿ ಮೊದಲ ಸಂಪುಟವನ್ನು ೧೯೭೪ರಲ್ಲಿ ಪ್ರಕಟಿಸುವ ಮೂಲಕ ಆರಂಭವಾಯಿತು. ಅದರ ಮುಂದಿನ ೫ ಸಂಪುಟಗಳು ಮುಂದಿನ ಕೆಲವು ವರ್ಷಗಳಲ್ಲಿ ಹೊರಬಂದವು. ಬಹುತೇಕ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ವಿದ್ವಾಂಸರಿಂದಲೇ ರಚನೆಗೊಂಡಿರುವ ಈ ಸಂಪುಟಗಳು ಕನ್ನಡ ಸಾಹಿತ್ಯ ಚರಿತ್ರೆಯ ಸಾಂಸ್ಥಿಕ ನೋಟವೊಂದನ್ನು ಕಟ್ಟಿಕೊಡುತ್ತದೆ. ಇದೇ ಸರಿ ಸುಮಾರಿಗೆ ಬೆಂಗಳೂರು ವಿಶ್ವವಿದ್ಯಾಲಯದ ವತಿಯಿಂದ ಜಿ.ಎಸ್. ಶಿವರುದ್ರಪ್ಪನವರ ಸಂಪಾದಕತ್ವದಲ್ಲಿ ಬಂದ ೬ ಸಂಪುಟಗಳ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' ಭಿನ್ನವಾದ ರಾಚನಿಕ ಚೌಕಟ್ಟನ್ನು ಒಳಗೊಂಡಿದೆ. ೧೯೭೬ರಲ್ಲಿ ಪ್ರಕಟವಾದ ಮೊದಲನೆಯ ಸಂಪುಟದ ನಂತರ ಮುಂದಿನ ಕೆಲವು ವರ್ಷಗಳಲ್ಲಿ ಹೊರಬಂದ ಈ ಸಾಹಿತ್ಯ ಚರಿತ್ರೆಯ ಸಂಪುಟಗಳಲ್ಲಿ ಸುಮಾರು ३೦೦ಕ್ಕೂ ಮೀರಿದ ಲೇಖನಗಳನ್ನು ಅಷ್ಟೇ ಸಂಖ್ಯೆಯ ವಿದ್ವಾಂಸರು ಬರೆದಿದ್ದಾರೆ. ಈ ದಿಸೆಯಲ್ಲಿ ಇದು ಸಾಹಿತ್ಯ ಚರಿತ್ರೆಯನ್ನು ಕುರಿತು ಕನ್ನಡ ವಿದ್ವಾಂಸ ವಲಯದ ಪ್ರಾತಿನಿಧಿಕತೆ ಹಾಗೂ ವೈವಿಧ್ಯತೆ ಎರಡನ್ನೂ ಕ್ರೋಢೀಕರಿಸಿ ರೂಪಿಸಿರುವ ಸಾಹಿತ್ಯ ಚರಿತ್ರೆ ಮತ್ತು ಭಿನ್ನವಾದ ಚಿಂತನಾಕ್ರಮವನ್ನು ಒಳಗೊಂಡಿದೆ. ಹೆಚ್ಚು ಕಡಿಮೆ ಈ ಸಂಪುಟಗಳ ಜೊತೆಯಲ್ಲೇ ೧೯೭೫ರಲ್ಲಿ ಬಂದ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಅದರ ಶೀರ್ಷಿಕೆಯೇ ಸೂಚಿಸುವಂತೆ ಜನಸಾಮಾನ್ಯರನ್ನು ಉದ್ದೇಶಿಸಿದ ಹಾಗೂ ಸಾಹಿತ್ಯ ರೂಪಗಳನ್ನು ಕೇಂದ್ರೀಕರಿಸಿದ ೧೦ ಕಿರು ಸಂಪುಟಗಳಲ್ಲಿ ಕನ್ನಡದ ಸಾಹಿತ್ಯವನ್ನು ಪರಿಚಯ ಮಾಡಿಕೊಡುವ ಒಂದು ಜನಪ್ರಿಯ ಪ್ರಯತ್ನ. ಜಿ.ಎಸ್. ಶಿವರುದ್ರಪ್ಪನವರು ಸಂಪಾದಕರಾಗಿರುವ ಈ ಸಂಪುಟಗಳು 'ಕನ್ನಡ ಸಾಹಿತ್ಯ ಸಮೀಕ್ಷೆ', 'ಶಾಸನ ಮತ್ತು ಗದ್ಯ', 'ಶಾಸ್ತ್ರಸಾಹಿತ್ಯ', 'ಚಂಪೂ ಕವಿಗಳು', 'ವಚನ ಸಾಹಿತ್ಯ', 'ಷಟ್ಪದಿ ಸಾಹಿತ್ಯ', 'ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ', 'ಕೀರ್ತನಕಾರರು', 'ಸಾಂಗತ್ಯ ಕೃತಿಗಳು' ಹಾಗೂ 'ಹೊಸಗನ್ನಡ ಸಾಹಿತ್ಯ ಚರಿತ್ರೆ' ಎಂಬ ಶೀರ್ಷಿಕೆಗಳಲ್ಲಿ ಬೇರೆಬೇರೆ ಲೇಖಕರಿಂದ ರಚನೆಗೊಂಡಿವೆ. ಒಂದು ತುದಿಯಲ್ಲಿ ಶಾಸ್ತ್ರೀಯ ಚಂಪೂ ಇನ್ನೊಂದು ತುದಿಯಲ್ಲಿ ಜನಪದ ಸಾಹಿತ್ಯವನ್ನು ಉದ್ದೇಶಿಸಿದ್ದರೂ ಸಾಹಿತ್ಯಿಕವಾಗಿ ಯಾವುದೇ ವಿಮರ್ಶಾತ್ಮಕ ಹೊಂದಾಣಿಕೆಯನ್ನು ಮಾಡಿಕೊಳ್ಳದೆ ಸಾಮಾನ್ಯ ಓದುಗರಿಗೆ ಕನ್ನಡ ಸಾಹಿತ್ಯವನ್ನು ಪರಿಚಯ ಮಾಡಿಸುವ ಉದ್ದೇಶದಿಂದ ಹೊರಬಂದ ಈ ಸಂಪುಟಗಳು ೪೦ ವರ್ಷಗಳ ನಂತರವೂ ಮರುಮುದ್ರಣಗೊಳ್ಳುತ್ತಿವೆ. ಇದೆಲ್ಲಕ್ಕಿಂತ ಭಿನ್ನವಾದ ರೀತಿಯ ಸಾಹಿತ್ಯ ಚರಿತ್ರೆಯ ಸಂಪುಟಗಳನ್ನು ಐ.ಬಿ.ಎಚ್. ಪ್ರಕಾಶನ ೧೯೭೦ರ ದಶಕದಲ್ಲಿಯೇ ವಿ. ಸೀತಾರಾಮಯ್ಯನವರ ಸಂಪಾದಕತ್ವದಲ್ಲಿ ಕೈಗೆತ್ತಿಕೊಂಡಿತು. ಪ್ರಮುಖವಾಗಿ ಕವಿಕೇಂದ್ರಿತವಾದ ಈ ಯೋಜನೆ ಕನ್ನಡ ಸಾಹಿತ್ಯ ಪರಂಪರೆಯ ಸುಮಾರು ३४ ಕವಿಗಳನ್ನು ಹಾಗೂ ಸಾಹಿತ್ಯ ರೂಪಗಳನ್ನು ಆಯ್ದುಕೊಂಡು ಅವರ ಬಗ್ಗೆ ಒಂದೊಂದು ಸಂಪುಟವನ್ನು ಹೊರತಂದಿತು. ಪ್ರತಿ ಸಂಪುಟದಲ್ಲೂ ಒಬ್ಬ ನಿರ್ದಿಷ್ಟ ಕವಿ ಹಾಗೂ

ಅವನ ಕೃತಿಗಳ ಬಗ್ಗೆ ಇಬ್ಬರು ಅಥವಾ ಮೂವರು ವಿದ್ವಾಂಸರ ಲೇಖನಗಳ ಜೊತೆಗೆ ಸಂಪಾದಕರು ಒಂದು ಸುದೀರ್ಘ ಪೀಠಿಕೆಯನ್ನೂ ಹಾಗೂ ಒಂದು ಹಿನ್ನುಡಿಯನ್ನೂ ತೌಲನಿಕ ಚೌಕಟ್ಟಿನಲ್ಲಿ ಪರಿಶೀಲಿಸಿ ಬರೆದಿದ್ದಾರೆ. ಜನಪದ ಸಾಹಿತ್ಯದಂತಹ ಸಾಹಿತ್ಯ ರೂಪಗಳು ಇದರಲ್ಲಿ ಸೇರ್ಪಡೆಯಾಗಿವೆ ಎಂಬುದು ಇಲ್ಲಿ ಗಮನಾರ್ಹ. ಇದಲ್ಲದೆ ೧೯೮೬ರಲ್ಲಿ ಸಿ. ವೀರಣ್ಣನವರು ಎರಡು ಸಂಪುಟಗಳಲ್ಲಿ ಪ್ರಕಟಿಸಿರುವ 'ಕನ್ನಡ ಸಾಹಿತ್ಯ: ಚಾರಿತ್ರಿಕ ಬೆಳವಣಿಗೆ'ಯು ಮಾರ್ಕ್ಸವಾದಿ ಚೌಕಟ್ಟಿನಲ್ಲಿ ಕನ್ನಡ ಸಾಹಿತ್ಯವನ್ನು ಪರಿಚಯ ಮಾಡಿಕೊಡುತ್ತದೆ.

ಕೇವಲ ಗ್ರಂಥಗಳಲ್ಲದೆ ಸಂಶೋಧನ ಪತ್ರಿಕೆಗಳೂ ಕನ್ನಡ ಸಾಹಿತ್ಯ ಚರಿತ್ರೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ಹಾಗೂ 'ಪ್ರಬುದ್ಧ ಕರ್ನಾಟಕ'ಗಳ ಆರಂಭಿಕ ಸಂಚಿಕೆಗಳಲ್ಲಿ ರಾ. ನರಸಿಂಹಾಚಾರ್ಯರ ಕಾಲಘಟ್ಟದ ಮಾದರಿಯನ್ನು ಅನುಸರಿಸಿ ಪ್ರತಿಯೊಂದು ಶತಮಾನದ ಸಾಹಿತ್ಯ ಚರಿತ್ರೆಗಳು ಬಂದಿರುವುದನ್ನು ನಾವು ನೋಡಬಹುದು. ಸಾಹಿತ್ಯ ಚರಿತ್ರೆಯು ಸಾಮಾನ್ಯವಾಗಿ ಕೊಡುತ್ತಿದ್ದ ಒಟ್ಟು ನೋಟಕ್ಕೆ ಪರ್ಯಾಯವಾಗಿ ನಿರ್ದಿಷ್ಟ ಚಿಕ್ಕ ಅವಧಿಯ ಆಳವಾದ ನೋಟವನ್ನು ಕೊಡುವ ಪ್ರಯತ್ನಗಳೂ ನಡೆದಿವೆ. ಈ ಬಗೆಯ ಭಿನ್ನನೋಟ ೧೯೫೮–೬೦ರ ಅವಧಿಯಲ್ಲಿ ಧಾರವಾಡದ ಮನೋಹರ ಗ್ರಂಥಮಾಲೆ ತನ್ನ ಬೆಳ್ಳಿಹಬ್ಬದ ಆಚರಣೆಯ ಅಂಗವಾಗಿ ಮಾಡಿದ ಪ್ರಯತ್ನವಾಗಿದ್ದು ಕೀರ್ತಿನಾಥ ಕುರ್ತುಕೋಟಿಯವರ ಸಂಪಾದಕತ್ವದಲ್ಲಿ 'ನಡೆದು ಬಂದ ದಾರಿ'ಯ ಮೂರು ಸಂಪುಟಗಳನ್ನು ಹೊರತಂದಿತು. ಇದು ಆಧುನಿಕತೆಯ ಅವಧಿಯ ಕನ್ನಡ ಸಾಹಿತ್ಯ ಚರಿತ್ರೆಯಾಗಿದ್ದು ಮುಂದೆ ೧೯೬೭ರಲ್ಲಿ 'ಯುಗಧರ್ಮ ಹಾಗೂ ಸಾಹಿತ್ಯದರ್ಶನ' ಎಂಬ ಶೀರ್ಷಿಕೆಯಲ್ಲಿ ಮರುಪ್ರಕಟಣೆ ಕಂಡಿತು. ಇದಲ್ಲದೆ ೧೯೯೦ರಲ್ಲಿ ಪ್ರಕಟವಾದ ಕೀರ್ತಿನಾಥ ಕುರ್ತುಕೋಟಿಯವರ 'ಕನ್ನಡ ಸಾಹಿತ್ಯ ಸಂಗಾತಿ' ಕೂಡ ವೈವಿಧ್ಯತೆ ಹಾಗೂ ಭಿನ್ನತೆಯ ದೃಷ್ಟಿಯಿಂದ ಗಮನಾರ್ಹವಾದ ಸಾಹಿತ್ಯ ಚರಿತ್ರೆಯಾಗಿದೆ. ಕನ್ನಡ ಸಾಹಿತ್ಯದ ಬಗೆಗಿನ 'ಕೊಲೇಜ್' ಮಾದರಿಯ ಚದುರುನೋಟವನ್ನು ಕೊಡುವ ಈ ಕೃತಿ ಕ್ರಿ.ಶ. ೫ನೆಯ ಶತಮಾನದ ಹಲ್ಮಿಡಿ ಶಾಸನದಿಂದ ಆರಂಭವಾಗಿ ೨೦ನೆಯ ಶತಮಾನದ ಜನಪದ ಕಾವ್ಯದವರೆಗೆ ಹರಡಿರುವ ಕನ್ನಡ ಸಾಹಿತ್ಯದ ಆಯ್ದ ಕೃತಿಗಳ ಚರಿತ್ರೆ ಮತ್ತು ವಿಮರ್ಶೆಯನ್ನು ಮಾಡುತ್ತದೆ. ಇಲ್ಲಿ ಕುರ್ತುಕೋಟಿಯವರು ತಾವು ಆಯ್ಕೆ ಮಾಡಿಕೊಂಡ ಕೃತಿಗಳ ಬಗ್ಗೆ ಕೆಲವು ಹೊಸದಾದ ಅಪೂರ್ವ ಒಳನೋಟಗಳನ್ನು ನೀಡಿದ್ದಾರೆ.

ಮೇಲಿನ ಎಲ್ಲ ಪ್ರಯತ್ನಗಳಿಗಿಂತ ಭಿನ್ನವಾಗಿ ಸಾಹಿತ್ಯ ಚರಿತ್ರೆಯನ್ನು ಸಾಮಾಜಿಕ ಚರಿತ್ರೆಯ ರೂಪದಲ್ಲಿ ರಚಿಸುವ ಪ್ರಯತ್ನವೊಂದು ಇತ್ತೀಚೆಗೆ ೨೦೨೦ರಲ್ಲಿ ಪ್ರಕಟವಾದ ಷ. ಶೆಟ್ಟರ್ ಅವರ 'ಹಳಗನ್ನಡ: ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ' ಎಂಬ ಕೃತಿಯಲ್ಲಿ ಕಂಡುಬರುತ್ತದೆ. ಅದು ನೀಡುವ ಹೊಸ ಒಳನೋಟ ಹಾಗೂ ಸಾಮಾಜಿಕ ಜ್ಞಾನಗಳಿಗಾಗಿ ನಾವು ಅದನ್ನು ಗಮನಿಸಬೇಕು. 'ಸಾಹಿತ್ಯ ಚರಿತ್ರೆಯ ಒಂದು ಓದು, ಸಾಮಾಜಿಕ ಚರಿತ್ರೆಯ ಮರುಓದು' ಎಂಬ ಉಪಶೀರ್ಷಿಕೆಯನ್ನು ಹೊಂದಿರುವ ಈ ಕೃತಿ ದಟ್ಟವಾದ ಶಾಸನಗಳ ಮಾಹಿತಿಕಣಜವನ್ನು ಆಧರಿಸಿದೆ. ಕ್ರಿ.ಶ.ದ ಮೊದಲನೆಯ ಸಹಸ್ರಮಾನದಲ್ಲಿ ಸಿಕ್ಕಿರುವ ಸುಮಾರು ೨,೦೨೦ ಕನ್ನಡ, ೩೦೦ ಸಂಸ್ಕೃತ ಹಾಗೂ ೩೦೦ ಪ್ರಾಕೃತ ಶಾಸನಗಳನ್ನು ಆಕರವಾಗಿಟ್ಟುಕೊಂಡು ಅದರಿಂದ ಮೂಡುವ ಸಾಂಸ್ಕೃತಿಕ ಚರಿತ್ರೆಯನ್ನು

ಶೆಟ್ಟರ್ ನಮಗೆ ಕಟ್ಟಿಕೊಟ್ಟಿದ್ದಾರೆ. ಈ ಚರಿತ್ರೆಯು ವಿದ್ವಾಂಸರು ಈ ವರೆಗೆ ಕ್ರಿ.ಶ. ಮೊದಲನೆಯ ಸಹಸ್ರಮಾನದ ಬಗ್ಗೆ ತಳೆದಿದ್ದ ಹಲವಾರು ನಿರ್ಧಾರಗಳನ್ನು ಮರುವಿವೇಚನೆಗೆ ಒಳಪಡಿಸುತ್ತದೆ. ಪ್ರಮುಖವಾಗಿ ಶಾಸನಗಳ ಪ್ರಕಾರ ಸಂಸ್ಕೃತೀಕರಣ ಹಾಗೂ ಬ್ರಾಹ್ಮಣೀಕರಣ ಪ್ರಕ್ರಿಯೆಗಳು ವಿದ್ವಾಂಸರು ಹೇಳಿರುವಷ್ಟು ವ್ಯಾಪಕವಾಗಿ ನಡೆದಿಲ್ಲ ಎಂಬ ಅಂಶವನ್ನು ಒತ್ತಿ ಹೇಳುವುದಲ್ಲದೆ ಕನ್ನಡದ ಬಳಕೆ ಬ್ರಾಹ್ಮಣ ಹಾಗೂ ಬ್ರಾಹ್ಮಣೇತರ ಜಾತಿಗಳಲ್ಲಿ ಏಕರೀತಿಯಲ್ಲಿ ವ್ಯಾಪಕವಾಗಿತ್ತು ಎಂಬುದನ್ನೂ ಶೆಟ್ಟರ್ ತೋರಿಸಿದ್ದಾರೆ. ಎಲ್ಲದಕ್ಕಿಂತ ಮುಖ್ಯವಾಗಿ ಬಾದಾಮಿಯ ಗುಹಾಂತರ ದೇವಾಲಯಗಳಲ್ಲಿ ಕೆಲಸ ಮಾಡಿರುವ ಶಿಲ್ಪಿಗಳು ಕರ್ನಾಟಕ, ತಮಿಳುನಾಡು ಹಾಗೂ ಉತ್ತರ ಭಾರತದ ಮಥುರಾಗಳಿಂದ ಬಂದವರಾಗಿದ್ದರು ಎಂಬುದನ್ನು ಅವರ ಹೆಸರಿನ ಆಧಾರದ ಮೇಲೆ ತೋರಿಸುವ ಮೂಲಕ ಕರ್ನಾಟಕದ ಆರಂಭಿಕ ಸಾಂಸ್ಕೃತಿಕ ದಾಖಲೆಗಳಲ್ಲಿ ಕುಶಲಕರ್ಮಿ ಸಮುದಾಯದ ಪ್ರಾಮುಖ್ಯತೆಯನ್ನು ಗುರುತಿಸಿದ್ದಾರೆ. ಭಾರತದ ಬೇರೆ ಬೇರೆ ಭಾಗಗಳ ಕುಶಲಕರ್ಮಿಗಳು ತಮ್ಮೊಡನೆ ತಂದಿರಬಹುದಾದ ವಾಸ್ತು ಮತ್ತು ಶಿಲ್ಪಕಲೆಗಳ ಜ್ಞಾನ ಕರ್ನಾಟಕದ ಶೈಲಿಯೊಂದರ ಬೆಳವಣಿಗೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದಂತೆ ಕಾಣುತ್ತದೆ. ಇದು ಕರ್ನಾಟಕದ ಕಲಾತ್ಮಕತೆಯ ಬೆಳವಣಿಗೆಯಲ್ಲಿ ಆರಂಭಿಕ ಹಂತದಿಂದಲೇ ಕಂಡುಬರುವ ವಿಶ್ವಾತ್ಮಕತೆ ಹಾಗೂ ಮುಕ್ತ ವಾತಾವರಣವನ್ನು ಸೂಚಿಸುತ್ತದೆ. ಇದು ಕನ್ನಡ ಸಂಸ್ಕೃತಿ ಆರಂಭಿಕ ಹಂತದಿಂದಲೇ ಉದ್ದೇಶಪೂರ್ವಕವಾಗಿ ತನ್ನಲ್ಲಿ ವಿಶ್ವಾತ್ಮಕ ಸಂವೇದನೆಗಳನ್ನು ರೂಪಿಸಿಕೊಳ್ಳಲು ಮಾಡಿದ ಪ್ರಯತ್ನವನ್ನಾಗಿ ಪರಿಭಾವಿಸಬಹುದು. ತಮಿಳು ಲಿಪಿಯ ಬೆಳವಣಿಗೆ ಹಾಗೂ ಕನ್ನಡ–ಕದಂಬ ಲಿಪಿಯ ಬೆಳವಣಿಗೆಗಳನ್ನು ತೌಲನಿಕವಾಗಿ ಪರಿಶೀಲಿಸಿದರೆ ಕನ್ನಡ ಲಿಪಿ ಹಾಕಿರುವ ದಾಪುಗಾಲು ಸ್ಪಷ್ಟವಾಗುತ್ತದೆ. ಅದರ ಪರಿಣಾಮವಾಗಿ ರೂಪುಗೊಂಡ ಕನ್ನಡ ಸಾಹಿತ್ಯ ಸಂಸ್ಕೃತಿಗೆ ಹಲವಾರು ಅಪೂರ್ವವಾದ ಆಯಾಮಗಳು ದೊರೆತಿವೆ. ಸಾಹಿತ್ಯ ಚರಿತ್ರೆಯಲ್ಲಿ ಹೊಸ ವಿಧಾನಗಳಾದ ಸ್ಥಳೀಕರಣ ಹಾಗೂ ಸಾಮಾಜಿಕೀಕರಣ ಅಧ್ಯಯನಕ್ರಮಗಳನ್ನು ತಮ್ಮ ಅಧ್ಯಯನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಾಹಿತ್ಯ ಚರಿತ್ರೆಯನ್ನು ಸಾಮಾಜಿಕ ಚರಿತ್ರೆಯಾಗಿ ನಿರೂಪಿಸಿ ಅದಕ್ಕೆ ಅಂತರ್–ಶಿಸ್ತೀಯ ಹಾಗೂ ಸಾಹಿತ್ಯ ಸಂಸ್ಕೃತಿ ಚರಿತ್ರೆಯ ಆಯಾಮಗಳನ್ನು ಶೆಟ್ಟರ್ ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನಕ್ಕೆ ನೀಡಿದ್ದಾರೆ. ಸಾಹಿತ್ಯ ರಚನೆಯ ಹೊಸ ಮಾದರಿಯನ್ನು ರೂಪಿಸುವಲ್ಲಿ ಶೆಟ್ಟರ್ ಅವರ ಅಧ್ಯಯನ ಸಾಹಿತ್ಯ ಚರಿತ್ರೆಕಾರರಿಗೆ ಮಾರ್ಗದರ್ಶಿಯಾಗಬಲ್ಲದು.

## ೩.೪. ಸಾಹಿತ್ಯ ಸಂಸ್ಕೃತಿಯ ರಚನೆಯ ಇತಿಹಾಸ

### ೩.೪.೧. ೨೦ನೆಯ ಶತಮಾನದ ಬೆಳವಣಿಗೆಗಳು

೨೦ನೆಯ ಶತಮಾನದ ಬೆಳವಣಿಗೆಗಳಲ್ಲಿ ನಾವು ಒಂದತ್ತ ಬಂಡವಾಳಶಾಹಿ ರಾಷ್ಟ್ರಗಳ ಉಗಮವನ್ನೂ ಇನ್ನೊಂದತ್ತ ಅದರ ವಿರೋಧಿಯಾದ ಸಮಾಜವಾದಿ ರಾಷ್ಟ್ರಗಳ ಉಗಮವನ್ನೂ ಕಾಣುತ್ತೇವೆ. ಇದರ ಪರಿಣಾಮವಾಗಿ ೧೯ನೆಯ ಶತಮಾನದಲ್ಲಿ ಅತ್ಯಂತ ಪ್ರಬಲವಾಗಿದ್ದ ವಸಾಹತುಶಾಹಿ ನಿಧಾನವಾಗಿ ದುರ್ಬಲಗೊಳ್ಳುತ್ತಾ ಹೋಯಿತು.

ತತ್ಪರಿಣಾಮವಾಗಿ ವಸಾಹತುಗಳು ತಮ್ಮ ಯಜಮಾನ ಸಂಸ್ಕೃತಿಗಳ ಆಳ್ವಿಕೆಯ ಹಿಡಿತದಿಂದ ಹೊರಬರುವ ಹಾಗೂ ತಮ್ಮ ರಾಷ್ಟ್ರವನ್ನು ಕಟ್ಟಿಕೊಳ್ಳುವ ಸ್ವಾತಂತ್ರ್ಯ ಚಳುವಳಿಗಳನ್ನು ಆರಂಭಿಸಿದವು. ಈ ದಿಸೆಯಲ್ಲಿ ಸಾಂಸ್ಕೃತಿಕ ಬಂಡವಾಳವಾಗಿ ಸಾಹಿತ್ಯ ಚರಿತ್ರೆಗಳನ್ನು ಕಟ್ಟಿಕೊಳ್ಳುವುದು ಅವುಗಳ ಸ್ವಾತಂತ್ರ್ಯ ಚಳುವಳಿಗಳ ಅವಿಭಾಜ್ಯ ಅಂಗವಾಯಿತು. ವಸಾಹತುಶಾಹಿ ಆಳ್ವಿಕೆಯ ಅವಧಿಯಲ್ಲಿ ರಚನೆಗೊಂಡ ಸಾಹಿತ್ಯ ಚರಿತ್ರೆಗಳು ಓರಿಯೆಂಟಲಿಸ್ಟ್ ಸಂಕಥನದ ಆಶಯಗಳನ್ನು ಹೊಂದಿದ್ದರೆ ಅವಕ್ಕೆ ಪ್ರತಿಕ್ರಿಯೆಯಾಗಿ ಬಂದ ರಾಷ್ಟ್ರವಾದಿ ಸಾಹಿತ್ಯ ಚರಿತ್ರೆಗಳು ರಾಷ್ಟ್ರೀಯ ಸಂಕಥನದ ಆಶಯಗಳನ್ನು ವ್ಯಕ್ತಪಡಿಸುತ್ತಿದ್ದವು. ರಾಷ್ಟ್ರದ ಸಾಹಿತ್ಯ, ಸಂಗೀತ ಹಾಗೂ ಕಲೆಗಳನ್ನು ಕ್ರೋಢೀಕರಿಸಿ ಅದನ್ನು ರಾಷ್ಟ್ರದ ಸಾಂಸ್ಕೃತಿಕ ಬಂಡವಾಳದ ರೂಪದಲ್ಲಿ ಸಮುದಾಯದ ಒಗ್ಗಟ್ಟಿಗಾಗಿ ಉಪಯೋಗಿಸುವುದು ರಾಷ್ಟ್ರವಾದ ರೂಪಿಸಿಕೊಂಡ ದಾರಿಗಳಲ್ಲಿ ಒಂದು. ಈ ಕಾಲದಲ್ಲಿ ಭಾರತೀಯ ಭಾಷೆಗಳಲ್ಲಿ ಬಂದಿರುವ ಸಾಹಿತ್ಯ ಚರಿತ್ರೆ, ಪ್ರವಾಸಕಥನ, ದೇಶಭಕ್ತಿ ಗೀತೆಗಳು ಮುಂತಾದವುಗಳ ಹಿಂದೆ ಈ ಬಗೆಯ ಸಾಂಸ್ಕೃತಿಕ ಬಂಡವಾಳವನ್ನು ಕಟ್ಟುವ ಆಶಯ ಇರುವುದನ್ನು ನಾವು ಗಮನಿಸ ಬಹುದು.

ರಾಷ್ಟ್ರವಾದಿ ಚರಿತ್ರೆಯ ರಚನೆಗೆ ಪ್ರತಿಕ್ರಿಯೆಯಾಗಿ ಫ್ರಾನ್ಸಿನಲ್ಲಿ ೧೯೨೯ರಲ್ಲಿ 'ಆನಲ್ಸ್' ಎಂಬ ಸಂಶೋಧನ ಪತ್ರಿಕೆಯು ಅಸ್ತಿತ್ವಕ್ಕೆ ಬಂದಿತು. ಈ ಪತ್ರಿಕೆಯ ಹಿಂದೆ ಕಾರ್ಯ ಪ್ರವೃತ್ತವಾಗಿದ್ದ ಗುಂಪನ್ನು ಆನಲ್ಸ್ ಪಂಥ ಎಂದು ಕರೆಯಲಾಗುತ್ತದೆ. ಇದು ಪಾರಂಪರಿಕ ಚರಿತ್ರೆ ಮತ್ತು ಅನ್ಯಶಿಸ್ತುಗಳ ನಡುವೆ ಏರ್ಪಟ್ಟಿದ್ದ ಗೋಡೆಗಳನ್ನು ಒಡೆದು, ಚರಿತ್ರೆಯ ಜೊತೆ ಸಾಹಿತ್ಯ, ಮನೋವಿಜ್ಞಾನ ಮತ್ತು ವಿಶೇಷವಾಗಿ ಸಾಮಾಜಿಕ ವಿಜ್ಞಾನಗಳ ಕೊಳುಕೊಡೆಗೆ ಸಾಧ್ಯಮಾಡಿತು. ಪ್ರತಿಯೊಂದು ಯುಗಕ್ಕೂ ತನ್ನದೇ ಆದ ಮನೋರೀತಿ (ಮೆಂಟಾಲಿಟಿ) ಇರುತ್ತದೆ ಎಂದು ವಾದಿಸಿದ ಈ ಪಂಥ ಮುಂದೆ ೧೯೫೦ರ ವೇಳೆಗೆ 'ಒಟ್ಟು ಚರಿತ್ರೆ' (ಟೋಟಲ್ ಹಿಸ್ಟರಿ) ಎಂಬ ಪರಿಕಲ್ಪನೆಯನ್ನು ರೂಢಿಗೆ ತಂದಿತು. ಒಟ್ಟು ಚರಿತ್ರೆಯ ಪರಿಕಲ್ಪನೆ ಸಮಾಜವನ್ನು ಬೇರೆ ಬೇರೆ ಶಿಸ್ತುಗಳಾಗಿ ನೋಡದೆ ಇಡಿಯಾಗಿ ನೋಡುವ, ಹಲವಾರು ಅಂಶಗಳನ್ನು ಒಟ್ಟಾಗಿ ಪರಿಗಣಿಸುವ ಹಾಗೂ ಅವುಗಳ ಅಂತರ್–ಸಂಬಂಧಗಳನ್ನು ಗಮನಿಸುವ ಆಶಯಗಳಿಂದ ಕೂಡಿತ್ತು.

೧೯೭೦ರ ದಶಕದಲ್ಲಿ ಸಾಹಿತ್ಯ, ಸಾಮಾಜಿಕ ವಿಜ್ಞಾನ ಹಾಗೂ ಚರಿತ್ರೆಯ ಶಿಸ್ತುಗಳಲ್ಲಿ ಮೂಡಿಬಂದ ಒಂದು ಹೊಸ ಸಂಕಥನವನ್ನು ಭಾಷಾವೈಜ್ಞಾನಿಕ ತಿರುವು ಎಂದು ಕರೆಯಲಾಗುತ್ತದೆ. ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಉಂಟಾದ ಹೊಸ ಚಿಂತನೆಗಳ ಪರಿಣಾಮವಾಗಿ ಮೂಡಿಬಂದ ಈ ಸಂಕಥನದ ಉದ್ದೇಶ ಭಾಷೆ, ಅದರ ಬಳಕೆದಾರರು ಹಾಗೂ ಜಗತ್ತಿನ ಅಂತರ್–ಸಂಬಂಧಗಳನ್ನು ಕುರಿತಾದ ಜಿಜ್ಞಾಸೆಯ ಪರಿಣಾಮವಾಗಿತ್ತು. ಮಾನವ ಸಮುದಾಯ ಅರ್ಥವನ್ನು ಪಡೆದುಕೊಳ್ಳುವಲ್ಲಿ ಭಾಷೆಯ ಪ್ರಾಮುಖ್ಯತೆಯನ್ನು ಕುರಿತಾದ ಚಿಂತನೆ ಇದು. ಕೃತಿಯ ರಚನೆಕಾರ ಹಾಗೂ ಪಠ್ಯದಿಂದ ಅದರ ಓದುವಿಕೆಯತ್ತ, ಆ ಮೂಲಕ ಅದನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯತ್ತ ಗಮನ ಸೆಳೆದ ಸಂಕಥನ ಇದು.

ಭಾಷಾವೈಜ್ಞಾನಿಕ ತಿರುವು ತಲೆದೋರಿದ ಸಮಯದಲ್ಲೇ ಉಂಟಾದ ಮತ್ತೊಂದು ಪ್ರಮುಖ ತಿರುವನ್ನು ಸಾಂಸ್ಕೃತಿಕ ತಿರುವು ಎಂದು ಕರೆಯಲಾಗುತ್ತದೆ. ಸಂಸ್ಕೃತಿಯನ್ನು ಸಮಾಜದ ಆಗುಹೋಗುಗಳ ಕೇಂದ್ರವಾಗಿ ನೋಡಿದ ಈ ಸಂಕಥನ ಚರಿತ್ರೆಯನ್ನು ಭೂತಕಾಲ ಹಾಗೂ ಅದು ಜರುಗಿದ ಸ್ಥಳದೊಂದಿಗೆ ಅರ್ಥ ಮಾಡಿಕೊಳ್ಳಲು ಒತ್ತಾಯ ತಂದಿತು. ಇದರ ಪರಿಣಾಮವಾಗಿ ಸಾಹಿತ್ಯ ಚರಿತ್ರೆಯ ರಚನೆ ಸಾಂಸ್ಕೃತಿಕ ಆಚರಣೆಗಳ ಹಾಗೂ ಸಾಮಾಜಿಕ ಅಂಶಗಳ ಚರಿತ್ರೆಯಾಗಿ ರೂಪುಗೊಳ್ಳಲು ಸಾಧ್ಯವಾಯಿತು.

ಮುಂದೆ ೧೯೯೦ರ ದಶಕದಲ್ಲಿ ಕಂಡು ಬಂದ 'ಸ್ಥಳ–ಕೇಂದ್ರಿತ' (ಸ್ಪೇಶಿಯಲ್) ತಿರುವು ಮಾನವಿಕದ ಶಿಸ್ತುಗಳಲ್ಲಿ ಒಂದು ಪ್ರಮುಖ ಬೆಳವಣಿಗೆಯಾಗಿದ್ದು ಅಧ್ಯಯನ ಕೇಂದ್ರವನ್ನು ಚರಿತ್ರೆಯಿಂದ ಭೂಗೋಳದತ್ತ ಬದಲಿಸಿದ ಅಧ್ಯಯನ ಕ್ರಮವಾಗಿದೆ. ೧೯೯೦ರ ದಶಕದಲ್ಲಿ ವ್ಯಾಪಕವಾಗಿ ಬಳಕೆಗೆ ಬಂದ ಗಣಕಯಂತ್ರದ ಬಳಕೆಯ ಸಾಧ್ಯತೆಗಳು ಸಾಹಿತ್ಯ ಹಾಗೂ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಒಂದತ್ತ ಅಂತರ್–ಮಾಧ್ಯಮತೆ (ಇಂಟರ್–ಮೀಡಿಯಾಲಿಟಿ) ಇರುವ ಶಬ್ದ ಮತ್ತು ದೃಶ್ಯಗಳ ಆಯಾಮವನ್ನೂ ಇನ್ನೊಂದತ್ತ ಸ್ಥಳದ ಆಯಾಮವನ್ನೂ ಸಾಹಿತ್ಯಿಕ ಅಧ್ಯಯನಗಳಲ್ಲಿ ತರುವ ಮೂಲಕ ಸಾಹಿತ್ಯ ಚರಿತ್ರೆಯನ್ನು ಸಾಹಿತ್ಯ ಸಂಸ್ಕೃತಿಯ ಚರಿತ್ರೆ ಆಗುವಲ್ಲಿ ಹಾಗೂ ಅದರ ರಚನಾಕ್ರಮದಲ್ಲಿ ಹೊಸ ಸಾಧ್ಯತೆಗಳನ್ನು ತೋರಿಸಿವೆ.

## ೩.೪.೨. ಆಧುನಿಕೋತ್ತರ ಸಂಕಥನ ಹಾಗೂ ಸಾಹಿತ್ಯ ಚರಿತ್ರೆ

೧೯೫೦ರ ದಶಕದಲ್ಲಿ ಆಧುನಿಕೋತ್ತರ ಸಂಕಥನ ಸಾಹಿತ್ಯ ಚರಿತ್ರೆಯ 'ಮಹಾ ನಿರೂಪಣೆ'ಗಳನ್ನು ಪ್ರಶ್ನೆ ಮಾಡಿತು. ಇದೇ ಸುಮಾರಿನಲ್ಲಿ ಸಾಹಿತ್ಯವನ್ನು ಸುಸಂಸ್ಕೃತ ವಲಯದ ಚಟುವಟಿಕೆಯನ್ನಾಗಿ ನೋಡುವ ಬಗ್ಗೆ ಆತಂಕ ಹಾಗೂ ಆಕ್ಷೇಪಣೆಯನ್ನು ವ್ಯಕ್ತಪಡಿಸಿ ಜನಪ್ರಿಯ ಸಾಂಸ್ಕೃತಿಕ ರೂಪಗಳ ಅಧ್ಯಯನದತ್ತ ಗಮನ ಹರಿಸುವ ಅಗತ್ಯವಿದೆ ಎಂಬ ವಾದವೂ ಆರಂಭವಾಯಿತು. ಇಂತಹ ವಾದದ ಸ್ಪಷ್ಟ ಬೆಳವಣಿಗೆಯನ್ನು ನಾವು ಎಡಿನ್‌ಬರೋ ವಿಶ್ವವಿದ್ಯಾಲಯದಲ್ಲಿ ಸ್ಟುವರ್ಟ್ ಹಾಲ್ ಹಾಗೂ ರಿಚರ್ಡ್ ಹೊಗಾರ್ತ್ ಅವರ ನೇತೃತ್ವದಲ್ಲಿ ೧೯೬೪ರಲ್ಲಿ ಆರಂಭವಾದ 'ಸೆಂಟರ್ ಫಾರ್ ದಿ ಸ್ಟಡಿ ಅಫ್ ಕಾಂಟೆಂಪೊರೆರಿ ಕಲ್ಚರಲ್ ಸ್ಟಡೀಸ್' ಎಂಬ ಅಧ್ಯಯನ ಕೇಂದ್ರದ ಚಟುವಟಿಕೆಗಳಲ್ಲಿ ಕಾಣಬಹುದು. ಈ ಅಧ್ಯಯನ ಕೇಂದ್ರದ ಚಟುವಟಿಕೆಗಳು ಸಾಂಸ್ಕೃತಿಕ ಅಧ್ಯಯನ ಒಂದು ಶೈಕ್ಷಣಿಕ ಶಿಸ್ತಾಗಿ ಬೆಳೆಯುವುದರಲ್ಲಿ ಹಾಗೂ ಸಾಹಿತ್ಯ ಚರಿತ್ರೆ ಸಾಂಸ್ಕೃತಿಕ ಚರಿತ್ರೆಯಾಗಿ ರೂಪಾಂತರಗೊಳ್ಳುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದೆ.

ಆಧುನಿಕ ವಿಮರ್ಶೆಯನ್ನು ರೆನೆ ವೆಲಕ್ ಅಂತರ್ಮುಖಿ (ಇಂಟ್ರಿನ್‌ಸಿಕ್) ಹಾಗೂ ಬಹಿರ್ಮುಖಿ (ಎಕ್ಸ್‌ಟ್ರಿನ್‌ಸಿಕ್) ಎಂದು ವಿಂಗಡಿಸುತ್ತಾನೆ ಹಾಗೂ ಅಂತರ್ಮುಖಿ ವಿಮರ್ಶೆಯನ್ನು ಬೆಂಬಲಿಸುತ್ತಾನೆ. ಬಹಿರ್ಮುಖಿ ವಿಮರ್ಶೆಯ ಅಂಗಗಳಾದ ಸಾಮಾಜಿಕ, ಚಾರಿತ್ರಿಕ ಮುಂತಾದ ವಿವರಗಳು ಸಾಹಿತ್ಯಕ್ಕೆ ಹೊರತಾದ ವಿವರಗಳು ಹಾಗೂ ಅವು ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಲಾರವು ಎಂದು ಈ ವಿಮರ್ಶಾ ಪಂಥ ಭಾವಿಸುತ್ತದೆ. ಸಸ್ಯೂರನ ರಾಚನಿಕತೆ, ರಷ್ಯನ್ ಫಾರ್ಮಲಿಸಂ ಮುಂತಾದ ರೂಪಕೇಂದ್ರಿತ ಚಿಂತನೆಗಳ ಪರಿಣಾಮವಾಗಿ ರೂಪುಗೊಂಡ ಈ ಪಂಥವನ್ನು ಹೊಸ ವಿಮರ್ಶೆ ಅಥವಾ ರೂಪನಿಷ್ಠ ವಿಮರ್ಶೆ ಎಂದು ಕರೆಯಲಾಗಿದೆ. ಸಾಹಿತ್ಯ ಚರಿತ್ರೆ ಅದರ ಹೆಸರೇ ಸೂಚಿಸುವಂತೆ ಸಾಹಿತ್ಯ ಹಾಗೂ ಚರಿತ್ರೆಗಳ ಅಂತರ್–ಶಿಸ್ತಿನ ಹಾಗೂ ಬಹಿರ್ಮುಖಿ ಅಧ್ಯಯನ. ಹೀಗಾಗಿ ರೆನೆ ವೆಲಕ್ ಮತ್ತು ಆಸ್ಟಿನ್ ವಾರೆನ್ ೧೯೪೮ರಲ್ಲಿ ರಚಿಸಿದ ತಮ್ಮ 'ಥಿಯರಿ ಅಫ್ ಲಿಟ್ರೇಚರ್'ನಲ್ಲಿ 'ಸಾಹಿತ್ಯ ಚರಿತ್ರೆಯನ್ನು ಬರೆಯಲು ಸಾಧ್ಯವೇ; ಅದು ಏಕಕಾಲದಲ್ಲಿ ಸಾಹಿತ್ಯ ಹಾಗೂ ಚರಿತ್ರೆ ಎರಡೂ ಆಗಿರಲು ಸಾಧ್ಯವೇ? ಎಂಬ ಪ್ರಶ್ನೆಯನ್ನು ಎತ್ತುತ್ತಾರೆ. 'ಬಹುಪಾಲು ಸಾಹಿತ್ಯ ಚರಿತ್ರೆಗಳು ಸಾಮಾಜಿಕ ಚರಿತ್ರೆಗಳು ಇಲ್ಲವೇ ಸಾಹಿತ್ಯದಲ್ಲಿ ಮೂಡಿಬಂದಿರುವ ಚಾರಿತ್ರಿಕ ಯೋಚನೆಗಳು ಅಥವಾ ಕಾಲಾನು

ಕ್ರಮಣಿಕೆಯಲ್ಲಿ ಜೋಡಿಸಿದ ಅಭಿಪ್ರಾಯಗಳು' ಎಂದು ಅವುಗಳನ್ನು ಟೀಕಿಸುತ್ತಾರೆ. ೧೯೭೩ರಲ್ಲಿ ರೆನೆ ವೆಲಕ್ ಮುಂದುವರೆದು, 'ಸಾಹಿತ್ಯ ಚರಿತ್ರೆಯಲ್ಲಿ ಯಾವ ಮುನ್ನಡೆಯೂ ಆಗುತ್ತಿಲ್ಲ; ಅದೊಂದು ಕೇವಲ ಬರಹಗಾರರ, ಸಂಸ್ಥೆಗಳ ಹಾಗೂ ತಂತ್ರಗಳ ಪಟ್ಟಿಯಾಗಿದೆ. ನನಗಂತೂ ಇದು ಸಾಹಿತ್ಯ ಚರಿತ್ರೆಯ ಅಂತ್ಯದಂತೆ ತೋರುತ್ತಿದೆ' ಎಂದು ಘೋಷಿಸಿದ.

ಆದರೆ ಅದು ವಾಸ್ತವವಾಗಿ ಸಾಹಿತ್ಯ ಚರಿತ್ರೆಯ ಅಂತ್ಯದ ಘೋಷಣೆಯೇನೂ ಆಗಲಿಲ್ಲ. ಹೊಸ ಚಾರಿತ್ರಿಕತೆ, ತೌಲನಿಕ ಸಾಹಿತ್ಯದ ಹೊಸ ಆಯಾಮಗಳು, ಅದರಲ್ಲೂ ಸಾಹಿತ್ಯ ಚರಿತ್ರೆಯನ್ನು ಬಹುಭಾಷಿಕತೆ ಮತ್ತು ಸಾಂಸ್ಕೃತಿಕ ಬಹುಳತೆಗಳ ಚರಿತ್ರೆಯಾಗಿ ಪರಿಭಾವಿಸುವ ಆಧುನಿಕೋತ್ತರ ಚೌಕಟ್ಟಿನ ಪ್ರಯತ್ನಗಳು ಒಟ್ಟಾಗಿ ಸಾಹಿತ್ಯ ಚರಿತ್ರೆಯನ್ನು ಸಾಹಿತ್ಯ ಸಂಸ್ಕೃತಿಯ ಚರಿತ್ರೆಯನ್ನಾಗಿ ಪುನರ್ರೂಪಿಸುವಲ್ಲಿ ಯಶಸ್ವಿಯಾಗಿವೆ. ೧೯೯೨ರಲ್ಲಿ ಡೇವಿಡ್ ಪರ್ಕಿನ್ಸ್ ತುಂಬಾ ಸಂದಿಗ್ಧವಾದ ಆದರೆ ಹೊಸ ರೀತಿಯಲ್ಲಿ ಸಾಹಿತ್ಯ ಚರಿತ್ರೆಯ ಚಿಂತನೆಯನ್ನು ಆರಂಭಿಸುವ 'ಈಸ್ ಲಿಟ್ರೆರಿ ಹಿಸ್ಟರಿ ಪಾಸಿಬಲ್?' ಎಂಬ ಪ್ರಶ್ನಾತ್ಮಕ ಕೃತಿಯನ್ನು ಪ್ರಕಟಿಸಿದ. ಸಾಹಿತ್ಯ ಚರಿತ್ರೆಯ ರಚನೆ ಸಾಧ್ಯ ಮತ್ತು ಸಾಧ್ಯವಿಲ್ಲ ಎಂಬ ಎರಡೂ ಪಕ್ಷಗಳನ್ನು ಪರಿಶೀಲಿಸಿ, ಸಾಧ್ಯವಿಲ್ಲ ಎಂಬ ನಿರ್ಣಯಕ್ಕೆ ತಲುಪಿದರೂ ಇದರ ಸ್ಪಷ್ಟ ಉತ್ತರಕ್ಕಾಗಿ ನಾವು ಹಲವಾರು ಆಯಾಮಗಳಲ್ಲಿ ಆಲೋಚಿಸಬೇಕಾಗಿದೆ ಎಂದು ಹೇಳಿದ. ಮುಂದೆ ೨೦೦೦ದಲ್ಲಿ ಡೂವೆ ಫ್ಲೊಕ್ಕೇಮಾ ನಮಗೆ ಸಾಹಿತ್ಯ ಚರಿತ್ರೆಯ ಅಗತ್ಯ ಏಕೆ ಎಂದು ಪ್ರಶ್ನಿಸಿ, ವಿಶದವಾಗಿ ಚರ್ಚಿಸಿ, ಸಾಹಿತ್ಯ ಚರಿತ್ರೆಯನ್ನು ರಚಿಸುವ ಅಗತ್ಯ ಇದೆ ಎಂದು ವಾದಿಸಿದ. ಈ ಹಿನ್ನೆಲೆಯಲ್ಲಿ ೧೯೯೦ರ ದಶಕ ಸಾಹಿತ್ಯ ಚರಿತ್ರೆಯ ಬಗೆಗಿನ ಚಿಂತನೆಗಳು ಸಾಹಿತ್ಯ ಚರಿತ್ರೆಯ ರಚನೆಯನ್ನು ಕುರಿತಂತೆ ಹೊಸ ಯೋಚನಾ ಕ್ರಮಗಳನ್ನು ತಂದಿತು ಎಂದು ಹೇಳಬಹುದು. ಇದರ ಬಗ್ಗೆ ಕೊಂಚ ವಿವರವಾಗಿ ನೋಡುವ ಅಗತ್ಯವಿದೆ.

೧೯೯೦ರ ನಂತರ ನಡೆದಿರುವ ಸಾಹಿತ್ಯಿಕ ಅಧ್ಯಯನಗಳು ಎರಡು ಪ್ರಮುಖ ತಿರುವುಗಳನ್ನು ಪಡೆದಿವೆ. ಮೊದಲನೆಯದನ್ನು ಸ್ಥಳದ ತಿರುವು ಅಥವಾ 'ಸ್ಪೇಷಿಯಲ್ ಟರ್ನ್' ಎಂದು ಕರೆಯಲಾಗುತ್ತದೆ. ಎಡ್ವರ್ಡ್ ಸೋಜ ೧೯೯೬ರಲ್ಲಿ ಈ ತಿರುವಿನ ಅಗತ್ಯವನ್ನು ಪ್ರತಿಪಾದಿಸಿದ ವಿದ್ವಾಂಸ. ವಾಸ್ತವಿಕ (ಭೌತಿಕ) ಹಾಗೂ ಕಲ್ಪಿತ (ಮಾನಸಿಕ) ಎಂಬ ಎರಡು ಬಗೆಯ ಸ್ಥಳದ ಪರಿಕಲ್ಪನೆಗಳನ್ನು ಅಧ್ಯಯನ ಕಕ್ಷೆಗೆ ತರುವ ಮೂಲಕ 'ಲಿಟ್ರೇಚರ್ ಕಾರ್ಟೋಗ್ರಫಿ' ಎಂಬ ಅಧ್ಯಯನ ಸಾಧ್ಯತೆಯನ್ನು ಹೊಸದಾಗಿ ಸೃಷ್ಟಿಸಲಾಗಿದೆ. ಫ್ರಾಂಕೋ ಮೊರೆಟ್ಟಿ ೨೦೦೦ದಲ್ಲಿ ರೂಢಿಗೆ ತಂದ 'ದೂರದ ಓದು' (ಡಿಸ್ಟೆಂಟ್ ರೀಡಿಂಗ್) ಕೂಡ ಸ್ಥಳದ ಅಧ್ಯಯನಕ್ಕೆ ಸಂಬಂಧಿಸಿದ ಪರಿಕಲ್ಪನೆಯಾಗಿದೆಯಲ್ಲದೆ ಸಾಹಿತ್ಯ ಚರಿತ್ರೆಯ ರಚನೆಗೆ ಸಂಬಂಧಿಸಿದ ಹೊಸ ತಿರುವಾಗಿ ಪರಿಣಮಿಸಿದೆ.

ಈ ಬಗೆಯ ವಾದವಿವಾದಗಳು ನಡೆಯುತ್ತಿದ್ದಾಗ ೧೯೯೦ರ ದಶಕದಲ್ಲಿ 'ಇಂಟರ್-ನ್ಯಾಷನಲ್ ಕಂಪ್ಯಾರಿಟಿವ್ ಲಿಟ್ರೇಚರ್ ಅಸೋಸಿಯೇಷನ್' ಮುಂದೆ ಬಂದು ಲ್ಯಾಟಿನ್ ಅಮೆರಿಕನ್ ಸಾಹಿತ್ಯಗಳ ಚರಿತ್ರೆಯ ಯೋಜನೆಯೊಂದನ್ನು ನೂರಾರು ವಿದ್ವಾಂಸರ ಹಾಗೂ ಹಲವಾರು ರಾಷ್ಟ್ರಗಳ ಸಹಯೋಗದಲ್ಲಿ ರೂಪಿಸಿತು. ತೌಲನಿಕ ಚೌಕಟ್ಟು, ಬಹುಭಾಷಿಕತೆ ಹಾಗೂ ಸ್ಥಳದ ತಿರುವುಗಳನ್ನು ಮೊದಲ ಬಾರಿಗೆ ಅಂತಸ್ಥಗೊಳಿಸಿಕೊಂಡ ಸಾಹಿತ್ಯ ಚರಿತ್ರೆಯ ಯೋಜನೆ ಇದು. ಮರಿಯೋ ಜೆ ವಾಲ್ಡೆಸ್ ಮತ್ತು ಲಿಂಡಾ ಹಚಿಯೋನ್ ಇದರ ಸಂಪಾದಕರು. ಈ ಯೋಜನೆ ೧೯೯೫-೨೦೦೦ದ ವರೆಗಿನ ೫

ವರ್ಷಗಳ ಅವಧಿಯ ಯೋಜನೆಯಾಗಿದ್ದು ೧೯೯೨ರಿಂದಲೇ ಅದರ ಚಾರಿತ್ರಿಕ ಪರಿಕಲ್ಪನೆಗಳ ಸ್ವರೂಪ ಹಾಗೂ ಅಧ್ಯಯನಕ್ರಮಗಳನ್ನು ಖಚಿತಪಡಿಸಿಕೊಳ್ಳುವ ಬಗ್ಗೆ ತಯಾರಿ ನಡೆಯಿತು. ಈ ತಯಾರಿಯ ಅಂಗವಾಗಿ ೧೯೯೪ರಲ್ಲಿ ಪ್ರಕಟಿಸಿದ 'ರಿಥಿಂಕಿಂಗ್ ಲಿಟ್ರರಿ ಹಿಸ್ಟರಿ ಕಂಪ್ಯಾರಿಟಿವ್ಲಿ' ಎಂಬ ಲೇಖನದಲ್ಲಿ ಸಂಪಾದಕರು ಇಲ್ಲಿ ಬಂದಿರುವ ಮೂರೂ ಪರಿಕಲ್ಪನೆಗಳನ್ನು, ಅಂದರೆ ಮರುಚಿಂತನೆ, ಸಾಹಿತ್ಯ ಚರಿತ್ರೆ ಮತ್ತು ತೌಲನಿಕತೆಗಳನ್ನು ಮರುವ್ಯಾಖ್ಯೆಗೆ ಒಳಪಡಿಸುತ್ತಾರೆ. ಸಾಹಿತ್ಯ ಚರಿತ್ರೆಯನ್ನು ಸಾಮಾಜಿಕ ವಿಜ್ಞಾನ, ಭೂಗೋಳ, ಜನಸಂಖ್ಯಾ ಅಧ್ಯಯನ, ರಾಜಕೀಯ ಅರ್ಥಶಾಸ್ತ್ರ, ಭಾಷಾವಿಜ್ಞಾನ, ಮಾನವಶಾಸ್ತ್ರ ಹಾಗೂ ಸಮಾಜ ವಿಜ್ಞಾನಗಳ ಜೊತೆ ಮುಖಾಮುಖಿಯಾಗಿಸಿ ಸಾಹಿತ್ಯ ಸಂಸ್ಕೃತಿಯ ಬಗ್ಗೆ ವಿಶೇಷವಾದ ಒಳನೋಟಗಳನ್ನು ಇಲ್ಲಿ ಪಡೆಯಲಾಗಿದೆ. ಈ ಸಾಹಿತ್ಯ ಚರಿತ್ರೆಯ ಯೋಜನೆ ಒಂದು ಬಹುಶಿಸ್ತೀಯ ಅಧ್ಯಯನವಾಗಿ ರೂಪುಗೊಳ್ಳುತ್ತಿರುವಂತೆಯೇ ಈ ಶಿಸ್ತುಗಳ ಸ್ವಕೇಂದ್ರಿತ ಪರಿಕಲ್ಪನೆಗಳು ಹಾಗೂ ಅಧ್ಯಯನಕ್ರಮಗಳನ್ನು ಸಾಂಸ್ಕೃತಿಕ ಸಾಹಿತ್ಯ ಚರಿತ್ರೆಯ ರಚನೆಗೆ ಸೂಕ್ತ ಹೊಂದಾಣಿಕೆಗಳೊಂದಿಗೆ ಅಳವಡಿಸಿಕೊಳ್ಳುವ ಹೊಸ ಮೈಲುಗಲ್ಲಿನ ಪ್ರಯತ್ನವೂ ಆಗಿತ್ತು.

ನಂತರದಲ್ಲಿ ೨೧ನೆಯ ಶತಮಾನದ ಆರಂಭ ಒಂದತ್ತ ತೌಲನಿಕ ಸಾಹಿತ್ಯ ಅಧ್ಯಯನ ಕೇಂದ್ರದಿಂದ ತೌಲನಿಕ ಸಾಂಸ್ಕೃತಿಕ ಅಧ್ಯಯನಗಳ ಕೇಂದ್ರದತ್ತ ಚಲಿಸುವ ಸೆಳೆತವಾದರೆ ಇನ್ನೊಂದತ್ತ ಜಗದ್ವಲಯದತ್ತ (ಕಾಸ್ಮೋಪಾಲಿಟನಿಸಂ) ಚಲಿಸುವ ಸೆಳೆತವೂ ಆಗಿ ರೂಪುಗೊಂಡಿತು. ಇದರಿಂದಾಗಿ ಅಂತರ್-ಶಿಸ್ತೀಯತೆ, ರಾಷ್ಟ್ರದ ಕೇಂದ್ರವನ್ನು ಮೀರಿದ ವಿಸ್ತೃತ ಕಾಳಜಿಗಳು ಮತ್ತು ಮರೆತುಹೋದ ಹಾಗೂ ಹೊಸದಾದ ಸಾಂಸ್ಕೃತಿಕ ಸಂಬಂಧಗಳನ್ನು ಹುಡುಕುವಿಕೆಗಳ ಸಂದರ್ಭದಲ್ಲಿ ಮೂಡಿಬಂದ ತಿಳಿವುಗಳು ಸಾಹಿತ್ಯ ಸಂಸ್ಕೃತಿಯ ಚರಿತ್ರೆಯ ಹೊಸ ಚೌಕಟ್ಟನ್ನು ಮೂಡಿಸಲು ಸಾಧ್ಯವಾಯಿತು. ಲ್ಯಾಟಿನ್ ಅಮೆರಿಕನ್ ಸಾಹಿತ್ಯ ಚರಿತ್ರೆ ರಚನೆಯ ಹಿನ್ನೆಲೆಯಲ್ಲಿ ಹೆಚ್ಚುಕಡಿಮೆ ಇದೇ ತಿಳಿವುಗಳು ಪ್ರೇರಕ ಶಕ್ತಿಯಾಗಿದ್ದವು ಎಂಬುದನ್ನು ನಾವು ಗಮನದಲ್ಲಿಡಬೇಕು. ಇಂತಹ ಸಾಹಿತ್ಯ ಚರಿತ್ರೆಯ ಹೊಸ ಚೌಕಟ್ಟನ್ನು ಪರಿಚಯ ಮಾಡಿಕೊಳ್ಳಲು ನಾವು ನಂತರದಲ್ಲಿ ಬಂದಿರುವ 'ಇಂಟರ್ನ್ಯಾಷನಲ್ ಕಂಪ್ಯಾರಟಿವ್ ಲಿಟ್ರೇಚರ್ ಅಸೋಸಿಯೇಷನ್' ಮತ್ತು 'ಅಮೆರಿಕನ್ ಕಂಪ್ಯಾರಟಿವ್ ಲಿಟ್ರೇಚರ್ ಅಸೋಸಿಯೇಷನ್'ಗಳ ಸಹಯೋಗದಲ್ಲಿ ಹಾಗೂ ಮಾರಿಸ್ ಕಾರ್ನಸ್-ಪೋಪ್ ಮತ್ತು ಜೇಮ್ಸ್ ನ್ಯುಬೌರ್ರ್ ಅವರ ಸಂಪಾದಕತ್ವದಲ್ಲಿ ೨೦೦೪-೨೦೧೦ರ ಅವಧಿಯಲ್ಲಿ ಹೊರಬಂದ 'ಹಿಸ್ಟರಿ ಅಫ್ ಲಿಟ್ರೇಚರ್ಸ್ ಅಫ್ ಈಸ್ಟ್-ಸೆಂಟ್ರಲ್ ಯೂರೋಪ್'ನ ೪ ಸಂಪುಟಗಳ ಸಾಹಿತ್ಯ ಚರಿತ್ರೆಯತ್ತ ನೋಡಬೇಕು. ಈ ಸಂಪುಟಗಳು ಲ್ಯಾಟಿನ್ ಅಮೆರಿಕದ ಸಾಹಿತ್ಯ ಚರಿತ್ರೆಯ ಮಾದರಿಯ ಮುಂದುವರಿಕೆ ಯಾದರೂ ಎರಡರ ನಡುವೆ ಗಮನಾರ್ಹ ವ್ಯತ್ಯಾಸಗಳಿವೆ. ಮೊದಲನೆಯದಾಗಿ ಪೂರ್ವಮಧ್ಯ ಯೂರೋಪಿನ ಯೋಜನೆಯು ಸಾಹಿತ್ಯ ಚರಿತ್ರೆಯ ರಚನೆಯಲ್ಲಿ ತಾತ್ವಿಕ ಚೌಕಟ್ಟನ್ನು ಮರುನಿರೂಪಣೆಗೆ ಒಳಗಾಗಿಸುವ ಅಗತ್ಯವಲ್ಲದೆ ಸಾಹಿತ್ಯಿಕ ಅಧ್ಯಯನಗಳ ಕ್ಷೇತ್ರವ್ಯಾಪ್ತಿಯನ್ನು ಹೊಸದಾಗಿ ಗುರುತಿಸಿಕೊಳ್ಳುವ ಅಗತ್ಯತೆಯೂ ಇತ್ತು. ಇದರ ಜೊತೆಗೆ ೨೦ನೆಯ ಶತಮಾನದಲ್ಲಿ ಸಾಮೂಹಿಕವಾಗಿ ಯೂರೋಪಿನ ಏಕಭಾಷಾಕೇಂದ್ರಿತ ವೈಚಾರಿಕ ಯಜಮಾನಿಕೆಗೆ ಒಳಗಾದ ಬಹುಭಾಷಿಕ ಸಂಸ್ಕೃತಿಗಳನ್ನು ಮರುನಿರೂಪಿಸುವ ಅನುಸಂಧಾನವೂ ಆಗಿತ್ತು. ಎರಡನೆಯದಾಗಿ ಏಕಭಾಷಿಕ ಸಾಹಿತ್ಯಗಳ ತೌಲನಿಕ ಸಾಹಿತ್ಯ

ಅಧ್ಯಯನಗಳೇ ಪ್ರಧಾನವಾಗಿದ್ದ ಯೂರೋಪು-ಕೇಂದ್ರಿತ ಸಾಹಿತ್ಯ ಚರಿತ್ರೆಗಳ ಮಾದರಿಗೆ ಪರ್ಯಾಯವಾಗಿ ಬಹುಭಾಷಿಕ ಸಂದರ್ಭ ಹಾಗೂ ಪಶ್ಚಿಮೇತರ ಸಂಸ್ಕೃತಿಗಳ ಸಾಹಿತ್ಯ ಸಂಸ್ಕೃತಿಯ ಮಾದರಿಯೊಂದನ್ನು ರೂಪಿಸಿಕೊಳ್ಳುವ ಸಾಧ್ಯತೆಯನ್ನೂ ಈ ಯೋಜನೆ ಮಾಡಿತು. ಮೂರನೆಯದಾಗಿ ೨೦ನೆಯ ಶತಮಾನದುದ್ದಕ್ಕೂ ವಸಾಹತುಶಾಹಿ ಹಾಗೂ ಯೂರೋಪಿನ ಯಜಮಾನ ಸಂಸ್ಕೃತಿಗಳು ಯಾವ ಸಮುದಾಯಗಳನ್ನು ಪರಿಧಿಯಿಂದ ಬಂದವು ಮತ್ತು ಉಪೇಕ್ಷಿತವಾದವು ಎಂದು ಅವಗಣನೆಗೆ ಗುರಿಮಾಡಿದ್ದರೋ ಅದೇ ಸಂಕಥನದ ವಿರುದ್ಧ ಹಾಗೂ ಅದೇ ಉಪೇಕ್ಷಿತ ಸಮುದಾಯಗಳ ಸಾಹಿತ್ಯ ಚರಿತ್ರೆಯ ಮೂಲಕ ಒಂದು ಹೊಸ ಪ್ರತಿಸಂಕಥನವನ್ನು ಕಟ್ಟಬೇಕಾದ ಒತ್ತಡವನ್ನೂ ಹೊಂದಿತ್ತು. ಹೀಗಾಗಿ ಈ ಸಾಹಿತ್ಯ ಚರಿತ್ರೆಯ ಯೋಜನೆ ಪರಿಧಿಗಳ ನೋಟದಿಂದ ಕಟ್ಟಿದ 'ಮಾರ್ಜಿನೋ-ಸೆಂಟ್ರಿಕ್' ಆದ ನೋಟ. ಇದರಲ್ಲಿ ಪೂರ್ವಮಧ್ಯ ಯೂರೋಪು ಎಂಬ ಭೌಗೋಳಿಕ ಪರಿಕಲ್ಪನೆಯೇ ತುಂಬ ಸಮಸ್ಯೀಕರಣಗೊಳಿಸುವ ರಚನೆಯಾಗಿದೆ. ಏಕ ಕಾಲದಲ್ಲಿ ಜಗದ್ವಲಯತನ, ತಲ್ಲಣಗಳು, ಅನಿಕೇತನ ಭಾವ, ಬಹುಭಾಷಿಕತೆಯಿಂದಾಗಿ ಸಹಜವಾಗಿ ಬೆಳೆದ ಅನುವಾದದ ವಾತಾವರಣ, ವಲಸೆ ಹಾಗೂ ಗಡೀಪಾರುಗಳಿಂದ ಉಂಟಾದ ಭೌತಿಕ ಮತ್ತು ಮಾನಸಿಕ ಅನಾಥಪ್ರಜ್ಞೆ ಹಾಗೂ ಯಾವ ಬಗೆಯ ಒತ್ತಾಯ ಇಲ್ಲದೆ ಅನೇಕ ಸಂಸ್ಕೃತಿಗಳ ಅವಿಭಾಜ್ಯ ಭಾಗವಾಗಿರುವಿಕೆಯ ಸಂವೇದನೆಯ ಅನುಭವಗಳನ್ನು ನಮ್ಮ ಗಮನಕ್ಕೆ ತರುವ ಈ ಸಾಹಿತ್ಯ ಚರಿತ್ರೆಯ ಮಾದರಿ ಭಾರತದಂತಹ ಮೂರನೆಯ ಜಗತ್ತಿನ ಬಹುಭಾಷಿಕ ರಾಷ್ಟ್ರಗಳ ಸಾಹಿತ್ಯ ಚರಿತ್ರೆಯ ರಚನೆಗೆ ತುಂಬಾ ಮೌಲಿಕವಾದ ಒಳನೋಟಗಳನ್ನು ಕೊಡುತ್ತದೆ.

ಒಂದತ್ತ ವಿಕೇಂದ್ರೀಕರಣಗೊಳಿಸಿದ ತಾತ್ವಿಕ ಚೌಕಟ್ಟು ಇನ್ನೊಂದತ್ತ ರಾಷ್ಟ್ರೀಯ ಹಾಗೂ ವಸ್ತು ಕೇಂದ್ರಿತ ಸಾಹಿತ್ಯ ಮೀಮಾಂಸೆಯಿಂದ ದೂರ ಸರಿಯಲು ಪ್ರಯತ್ನಿಸುವ ಪೂರ್ವಮಧ್ಯ ಯೂರೋಪಿನ ಮಾದರಿ ಹಲವಾರು ಹೊಸ ಪರಿಕಲ್ಪನೆಗಳನ್ನು ಸಾಹಿತ್ಯ ರಚನೆಯ ಕ್ರಮದೊಳಗೆ ತರುತ್ತದೆ. ಅದರ ಸಂಪುಟಗಳು ಕವಲುಗಳಿಂದ (ನೋಡ್) ಕೂಡಿದ ಜಾಲವ್ಯವಸ್ಥೆಗಳನ್ನು (ನೆಟ್‌ವರ್ಕ್) ರೂಪಿಸುವ ಮೂಲಕ ಭೌಗೋಳಿಕ ಪ್ರದೇಶದ ಬಹುಳತೆಯ ಅಸ್ಮಿತೆಗಳನ್ನು ಉಳಿಯುವಂತೆ ನೋಡಿಕೊಳ್ಳುತ್ತವೆ. ಈ ಅರ್ಥದಲ್ಲಿ ರಾಷ್ಟ್ರೀಯ ಪರಂಪರೆಗಳಿಗೆ ಮಾತ್ರ ಸೀಮಿತಗೊಳಿಸಿಕೊಳ್ಳುವ ಬದಲಿಗೆ ಅದರ ಗಡಿಗಳನ್ನು ಮೀರಿ ನಿಲ್ಲುವ ರಾಷ್ಟ್ರಾಂತರ ರಚನೆಯಾಗಿ ಈ ಜಾಲವ್ಯವಸ್ಥೆಗಳು ವರ್ತಿಸುತ್ತವೆ. ಇಂತಹ ಜಾಲವ್ಯವಸ್ಥೆಗಳು ದ್ವಿಮುಖೀ ಹಾಗೂ ಬಹುಮುಖೀ ಸಂವಾದವನ್ನು ಸಾಧ್ಯ ಮಾಡುತ್ತವಾದರೂ ಈ ಕವಲುಗಳ ಪರಿಕಲ್ಪನೆ ಅಗತ್ಯ ಬಿದ್ದಲ್ಲಿ ಜಾಲವ್ಯವಸ್ಥೆಗಳನ್ನು ವಿಘಟಿಸಿ ಹೊಸ ಜಾಲವ್ಯವಸ್ಥೆಗಳನ್ನು ಕಟ್ಟುವ ಸಾಧ್ಯತೆಯನ್ನೂ ಕೊಡುತ್ತವೆ. ಎಲ್ಲಕ್ಕಿಂತ ಮಿಗಿಲಾಗಿ ಕವಲುಗಳು ಸಾಹಿತ್ಯ ಚರಿತ್ರೆಯ ಲೇಖಕರು ಒಂದು ನಿರ್ದಿಷ್ಟ ಅಂಶವನ್ನು ಬೇರೆಬೇರೆ ದೃಷ್ಟಿಕೋಣಗಳಿಂದ ನೋಡುವ ಸಾಧ್ಯತೆಯನ್ನು ನೀಡಿದ್ದು ಸಾಹಿತ್ಯ ಚರಿತ್ರೆಯ ದಟ್ಟವಾದ ಹಾಗೂ ಪರ್ಯಾಯವಾದ ಓದುಗಳನ್ನು ಸಾಧ್ಯಮಾಡುತ್ತದೆ. ಪೂರ್ವಮಧ್ಯ ಯೂರೋಪಿನ ಸಾಹಿತ್ಯ ಚರಿತ್ರೆ ಮೇಲೆ ವಿವರಿಸಿದ ರೀತಿಯ ೬ ಕವಲುಗಳನ್ನು ಗುರುತಿಸಿದೆ: (೧) ಹೈಬ್ರಿಡಿಟಿ, (೨) ಗಡಿಗಳು (ಬೌಂಡರೀಸ್), (೩) ಮಾರ್ಜಿನೋ-ಸೆಂಟ್ರಿಸಿಟಿ, (೪) ಬಹುಸಾಂಸ್ಕೃತಿಕ ಒಳದಾರಿಗಳು (ಮಲ್ಟಿಕಲ್ಚರಲ್ ಕಾರಿಡಾರ್ಸ್), (೫) ಸಾಂಸ್ಕೃತಿಕ ಅಂತರ್ಮುಖತೆಗಳು (ಕಲ್ಚರಲ್ಸ್ ಇಂಟರ್‌ಫೇಸಸ್), ಹಾಗೂ (೬) ಕಲ್ಪಿತ ಸಮುದಾಯಗಳು (ಇಮ್ಯಾಜಿನ್ಡ್

ಕಮ್ಯುನಿಟೀಸ್). ಈ ಕವಲುಗಳ ಪರಿಕಲ್ಪನೆ ನಕ್ಷತ್ರಪುಂಜದ (ಕಾನ್‌ಸ್ಟಲೇಷನ್) ಮಾದರಿಯಲ್ಲಿ ಅಥವಾ 'ಪ್ಲಾನೆಟರಿ' ನೋಟದ ಮಾದರಿಯಲ್ಲಿ ಬಹುಳತೆಯ ನೋಟಗಳನ್ನು ಕೊಡಬಲ್ಲವು. ಅದರ ಜೊತೆಗೇ ಸಾಹಿತ್ಯದ ಸೌಂದರ್ಯಾತ್ಮಕ ಓದುಗಳನ್ನು ಅದರ ಚಾರಿತ್ರಿಕ, ಸಾಂಸ್ಥಿಕ ಹಾಗೂ ಸಾಮಾಜಿಕ ಆಯಾಮಗಳೊಡನೆ ಸಂಬಂಧ ಕಲ್ಪಿಸಿಕೊಡುವ ಸಾಧ್ಯತೆಗಳನ್ನೂ ಕೊಡುತ್ತದೆ. ಹೀಗಾಗಿ ಪೂರ್ವಮಧ್ಯ ಯೂರೋಪಿನ ಸಾಹಿತ್ಯ ಚರಿತ್ರೆ ತೌಲನಿಕ ಚೌಕಟ್ಟನ್ನು ಉಪಯೋಗಿಸಿ ಕೊಂಡು ಚಾರಿತ್ರಿಕ ಕವಲುಗಳು, ಹೈಬ್ರಿಡ್ ನಗರಕೇಂದ್ರಗಳು, ಬಹುಭಾಷಿಕ ರಚನೆಗಳು, ಸಾಂಸ್ಕೃತಿಕ ಸಂಸ್ಥೆಗಳು ಹಾಗೂ ರಾಷ್ಟ್ರದ ಅಂಗವಾಗಿ ಬರೆಯುತ್ತಲೇ ಜಾಗತಿಕತೆಯತ್ತ ಚಾಚಿಕೊಳ್ಳುವ ಲೇಖಕರು ಒಂದು ಬಹುಳತೆಯ ಭೂಭಾಗದಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿರುವಿಕೆಯ ಪರಿಣಾಮಗಳನ್ನು ದಾಖಲು ಮಾಡುತ್ತದೆ. ಇಂತಹ ತಾತ್ವಿಕ ಹಾಗೂ ಅಧ್ಯಯನಕ್ರಮಗಳ ಬದಲಾವಣೆಗಳ ಹಿನ್ನೆಲೆಯಲ್ಲಿ ಸಾಹಿತ್ಯ ಚರಿತ್ರೆಗಳು ಸಾಹಿತ್ಯ ಸಂಸ್ಕೃತಿಯ ಚರಿತ್ರೆಯಾಗಿ ರೂಪಾಂತರಗೊಳ್ಳುತ್ತವೆ. ಇದೇ ಮಾದರಿಯನ್ನು ಮುಂದುವರೆಸಿ ೨೦೧೦ರಲ್ಲಿ 'ಇಂಟರ್‌ನ್ಯಾಷನಲ್ ಕಂಪ್ಯಾರಿಟಿವ್ ಲಿಟ್ರೇಚರ್ ಅಸೋಸಿಯೇಷನ್' ಸಹಯೋಗದಲ್ಲಿ ಬಂದ 'ಎ ಕಂಪ್ಯಾರಿಟಿವ್ ಹಿಸ್ಟರಿ ಅಫ್ ಲಿಟ್ರೇಚರ್ಸ್ ಇನ್ ದಿ ಐಬೀರಿಯನ್ ಪೆನಿನ್ಸುಲ' ಎಂಬ ೨ ಸಂಪುಟಗಳ ಸಾಹಿತ್ಯ ಚರಿತ್ರೆ ರಚನೆಯಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಮುಂದೆ ಬರಲಿರುವ ಯಾವುದೇ ಸಾಹಿತ್ಯ ಚರಿತ್ರೆ, ಅದರಲ್ಲೂ ಭಾರತೀಯ ಅಥವಾ ಕನ್ನಡ ಸಾಹಿತ್ಯ ಚರಿತ್ರೆಗೆ ಪೂರ್ವಮಧ್ಯ ಯೂರೋಪಿನ ಸಾಹಿತ್ಯ ಚರಿತ್ರೆಯ ಮಾದರಿ ಒಳ್ಳೆಯ ಮಾರ್ಗದರ್ಶಿ ಯಾಗಬಲ್ಲದು. ವಾಸ್ತವವಾಗಿ ಯಾವುದೇ ಸಾಹಿತ್ಯ ಚರಿತ್ರೆ ತೌಲನಿಕತೆ, ಬಹುಭಾಷಿಕತೆ, ರಾಷ್ಟ್ರಾಂತರತೆ ಹಾಗೂ ಜಗದ್ವಲಯತನ ಮುಂತಾದ ಪರಿಕಲ್ಪನೆಗಳ ಹಿನ್ನೆಲೆಯಲ್ಲಿಯೇ ರಚನೆಯಾಗಬೇಕಾದ ಅಗತ್ಯವನ್ನು ಇಲ್ಲಿ ನಾವು ಅಗತ್ಯವಾಗಿ ಗಮನಿಸಬೇಕಾಗಿದೆ.

## ೩.೫. ಕನ್ನಡ ಸಾಹಿತ್ಯ ಸಂಸ್ಕೃತಿ: ಒಂದು ಒಟ್ಟು ನೋಟ

ಕನ್ನಡ ಸಾಹಿತ್ಯ ಸಂಸ್ಕೃತಿಯ ಚರಿತ್ರೆಯನ್ನು ಪೂರ್ವಮಧ್ಯ ಯೂರೋಪಿನ ಮಾದರಿಯಲ್ಲಿ ರಚಿಸುವ ಪ್ರಯತ್ನ ಮಾಡುವುದು ಒಂದು ದೊಡ್ಡ ಪ್ರಮಾಣದ ಯೋಜನೆಯ ಮೂಲಕ ಮಾತ್ರ ಸಾಧ್ಯ. ಆದರೆ ಅಂತಹ ಯೋಜನೆಗೆ ಹಲವಾರು ಬಗೆಯ ಪೂರ್ವಭಾವಿ ತಯಾರಿಗಳನ್ನು ನಡೆಸಬೇಕಾಗುತ್ತದೆ. ಆದ್ದರಿಂದ ಅಂತಹ ಪ್ರಯತ್ನವೊಂದರ ಕಿರುಮಾದರಿ ಅಭ್ಯಾಸವೊಂದನ್ನು ಇಲ್ಲಿ ಮಾಡಲು ಪಯತ್ನಿಸಲಾಗಿದೆ. ಇಂದು ನಾವು ಕರ್ನಾಟಕ ಎಂದು ಕರೆಯುವ ಭೂಭಾಗ ಹಾಗೂ ಚಾರಿತ್ರಿಕವಾಗಿ ಕನ್ನಡ ಸಾಹಿತ್ಯ ಸಂಸ್ಕೃತಿ ಬೆಳೆದುಬಂದ ರೀತಿಗಳಲ್ಲಿ ವೈಪರೀತ್ಯಗಳಿದ್ದು ಅವು ನಿರಂತರವಾಗಿ ಬದಲಾಗುತ್ತಾ ಬಂದಿವೆ. ಹಲವಾರು ಭಾಷೆಗಳ ಸಹಯೋಗದಲ್ಲಿ ಕನ್ನಡ ಸಾಹಿತ್ಯ ಬೆಳೆದು ಬಂದಿದೆಯಲ್ಲದೆ ಕನ್ನಡ ಭಾಷೆ ಉಪಯೋಗವಾಗುತ್ತಿದ್ದ ಭಾಷೆಯ ಸ್ವರೂಪ, ಸಾರ್ವಜನಿಕ ವಲಯ (ಪಬ್ಲಿಕ್ ಸ್ಫಿಯರ್), ಆಶ್ರಯ, ಪೋಷಣೆ, ಆರ್ಥಿಕ ವ್ಯವಸ್ಥೆ, ಸಾಹಿತ್ಯದ ವಸ್ತು, ರೂಪ ಮತ್ತು ರಾಚನಿಕತೆಗಳು ಹಾಗೂ ಸಂವಹನ ಪ್ರಕ್ರಿಯೆಗಳು ನಿರಂತರವಾಗಿ ಬದಲಾಗುತ್ತಾ ಬಂದಿವೆ. ಇದಕ್ಕೆ ಪರ್ಯಾಯವಾಗಿ ಹಲವಾರು ಸಾಂಸ್ಕೃತಿಕ ಅಂಶಗಳು ಯಾವ ರೀತಿಯ

ಬದಲಾವಣೆಗಳಿಗೂ ಒಳಗಾಗದೆ ಮುಂದುವರೆದುಕೊಂಡು ಬಂದಿವೆ. ಈ ಬಗೆಯ ಮುಂದುವರಿಕೆ ಮತ್ತು ಬದಲಾವಣೆಗಳ ಹಿನ್ನೆಲೆಯಲ್ಲಿ ಒಟ್ಟಾಗಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಒಟ್ಟು ನೋಟವನ್ನು ಪರಿಭಾವಿಸಲು ಇಲ್ಲಿ ಪ್ರಯತ್ನ ಮಾಡಿದೆ.

ದಕ್ಷಿಣ ಭಾರತದಲ್ಲಿ ನೂತನ ಶಿಲಾಯುಗದ ಪಶುಪಾಲಕ ಸಂಸ್ಕೃತಿಯನ್ನು ಕ್ರಿ.ಪೂ. ೧೭-೧೬ನೆಯ ಶತಮಾನದಷ್ಟು ಪುರಾತನವಾಗಿರಬಹುದು ಎಂದು ಗುರುತಿಸಲಾಗಿದೆ. ಈ ಸಂಸ್ಕೃತಿ ಪಶುಪಾಲನೆಯನ್ನು ಪ್ರಧಾನವಾಗಿ ಅವಲಂಬಿಸಿತ್ತಾದರೂ ಜೊತೆಗೆ ತೋಟಗಾರಿಕೆಯನ್ನೂ ಮಾಡುತ್ತಿತ್ತು. ಅದೇ ರೀತಿ ಕ್ರಿ.ಪೂ. ೧೦೦೦ದ ವೇಳೆಗೆ ಕೊಮರನಹಳ್ಳಿಯಲ್ಲಿ ಕಬ್ಬಿಣ ಹಾಗೂ ಅದರಿಂದ ಮಾಡಿದ ಉಪಕರಣಗಳ ಉತ್ಪಾದನೆ ಆಗುತ್ತಿತ್ತು ಎಂದೂ ತಿಳಿದುಬಂದಿದೆ. ಕ್ರಿ.ಪೂ. ೩೦೦ರ ವೇಳೆಗೆ ಉತ್ತಮ ಮಟ್ಟದ 'ಮೂಸೆಯಿಂದ ಮಾಡಿದ ಉಕ್ಕು' ಈ ಭೂಭಾಗದಲ್ಲಿ ತಯಾರಾಗುತ್ತಿತ್ತು. ಇಷ್ಟೆಲ್ಲ ಬೆಳವಣಿಗೆಗಳ ಬಗ್ಗೆ ಮಾಹಿತಿ ಇದ್ದರೂ ಈ ಕಾಲಾವಧಿಯ ಭಾಷಿಕ ಸ್ವರೂಪದ ಬಗ್ಗೆ ನಮಗೆ ಯಾವುದೇ ಬಗೆಯ ಮಾಹಿತಿ ಇಲ್ಲ. ಕ್ರಿ.ಪೂ. ೨೬೦ರ ಸುಮಾರಿನಲ್ಲಿ ಬಂದ ಅಶೋಕನ ಶಾಸನಗಳೇ ಕರ್ನಾಟಕದ ಮೊದಲ ಭಾಷಿಕ ದಾಖಲೆಗಳು. ಆದರೆ ಅವುಗಳ ಭಾಷೆ ಪ್ರಾಕೃತ. ಅಶೋಕನ ಸುಮಾರು ೧೩ ಶಾಸನಗಳು ಕರ್ನಾಟಕದಲ್ಲಿ ದೊರೆತಿದ್ದು ಈ ಭೂಭಾಗಕ್ಕೆ ಮೌರ್ಯರು ನೀಡಿದ್ದ ಪ್ರಾಧಾನ್ಯತೆಯನ್ನು ಇದು ತೋರುತ್ತದೆ. ಸಾಂಬಾರ ಪದಾರ್ಥಗಳು, ಚಿನ್ನ, ಕಬ್ಬಿಣ ಮತ್ತು ಉಕ್ಕು ಹಾಗೂ ಹತ್ತಿ ಇಲ್ಲಿನ ಮುಖ್ಯ ಉತ್ಪಾದನೆಗಳಾಗಿದ್ದು ಬಹುಶಃ ಅಶೋಕನ ಶಾಸನಗಳ ಈ ದಟ್ಟತೆ ಕರ್ನಾಟಕದ ಸಂಪನ್ಮೂಲಗಳ ಬಗ್ಗೆ ಮೌರ್ಯರಿಗಿದ್ದ ವ್ಯಾಪಾರದ ಆಸಕ್ತಿಗಳನ್ನು ಸೂಚಿಸುತ್ತದೆ. ವಾಸ್ತವವಾಗಿ ಅಶೋಕನು ಕರ್ನಾಟಕಕ್ಕೆ ನೀಡಿದ ಲಿಪಿಗಳು ಎರಡು; ಬ್ರಾಹ್ಮಿ ಮತ್ತು ಖರೋಷ್ಠಿ. ಬ್ರಹ್ಮಗಿರಿಯ ಶಾಸನದಲ್ಲಿ ಚಪಡ ಎಂಬ ಲಿಪಿಕಾರನು 'ಚಪಡೇನ ಲಿಖಿತೇ' ಎಂದು ಬ್ರಾಹ್ಮಿ ಲಿಪಿಯಲ್ಲಿ ಎಡದಿಂದ ಬಲಕ್ಕೂ ಅದಾದ ನಂತರ 'ಲಿಪಿಕರೇಣ' ಎಂದು ಖರೋಷ್ಠಿಲ್ಲಿ ಬಲದಿಂದ ಎಡಕ್ಕೂ ಬರೆದಿದ್ದಾನೆ. ಆದರೂ ಮುಂದೆ ರೂಢಿಗೆ ಬಂದದ್ದು ಕೇವಲ ಬ್ರಾಹ್ಮಿ ಲಿಪಿ ಮಾತ್ರ. ಮೊದಲಿಗೆ ಕೇವಲ ಪ್ರಾಕೃತ ಶಾಸನಗಳಲ್ಲಷ್ಟೇ ಬಳಕೆಯಾದ ಈ ಲಿಪಿ, ಕ್ರಿ.ಶ. ೫ನೆಯ ಶತಮಾನದ ವೇಳೆಗೆ ಸಂಸ್ಕೃತ ಹಾಗೂ ಕನ್ನಡ ಭಾಷೆಗಳನ್ನು ಬರೆಯುವ ವಿಸ್ತಾರವನ್ನು ಪಡೆದುಕೊಂಡಿತು. ನಂತರದ ಅವಧಿಯಲ್ಲಿ ಈ ಬ್ರಾಹ್ಮಿ ಮತ್ತು ಅದರ ಆರಂಭಿಕ ಬದಲಾವಣೆಗಳಿಂದ ಮೂಡಿದ ಕದಂಬ-ಕನ್ನಡ ಲಿಪಿ ಕನ್ನಡ ಭಾಷೆ ಪಡೆದುಕೊಂಡ ಅತ್ಯಂತ ಸಮರ್ಪಕವಾದ ಸುಧಾರಣೆ ಎಂದರೆ ಅತಿಶಯವಲ್ಲ. ಈಗಾಗಲೇ ಪ್ರಸ್ತಾಪಿಸಿರುವಂತೆ ದಕ್ಷಿಣ ಭಾರತದಾದ್ಯಂತ ಕ್ರಿ.ಶ.ದ ಮೊದಲನೆಯ ಸಹಸ್ರಮಾನದಲ್ಲಿ ಎಲ್ಲ ಭಾರತೀಯ ಭಾಷೆಗಳ ಪೈಕಿ ಅತ್ಯಂತ ಹೆಚ್ಚು ಸಂಖ್ಯೆಯ ಶಾಸನಗಳು ಸಿಕ್ಕಿರುವುದು ಕನ್ನಡದಲ್ಲಿ ಎಂಬುದು ಇಲ್ಲಿ ಗಮನಾರ್ಹ. ಇದು ಕರ್ನಾಟಕ ಈ ಅವಧಿಯಲ್ಲಿ ಹೊಂದಿದ್ದ ಭಾರತೀಯ ಮಟ್ಟದ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ಈ ಕದಂಬ-ಕನ್ನಡ ಲಿಪಿ ಒಂದು ಬಗೆಯ ಜಗದ್ವಲಯತನವನ್ನು ಕನ್ನಡಕ್ಕೆ ಕೊಟ್ಟಿದೆ. ಈ ಲಿಪಿ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡಗಳ ಮಧ್ಯೆ ವರ್ಣಗಳು, ಶಬ್ದಕೋಶ ಹಾಗೂ ಸಾಹಿತ್ಯಿಕ ಪರಿಕರಗಳ ಕೊಡುಕೊಳೆಯನ್ನು ಸಾಧ್ಯಮಾಡಿತಲ್ಲದೆ ಆ ಮೂಲಕ ಅವುಗಳ ನಡುವೆ ಅನುವಾದದ ಸಾಧ್ಯತೆಗಳನ್ನೂ ಸೃಷ್ಟಿಸಿತು. ಆದರೆ ಈ ಬೆಳವಣಿಗೆಯನ್ನು ಏಕಮುಖಿಯಾದ ಪ್ರಭಾವ ಎಂದು ನೋಡುವುದು ತಪ್ಪಾಗುತ್ತದೆ. ಯಾವ ರೀತಿ ಬಾದಾಮಿ-ಐಹೊಳೆಯ ಗುಹಾಂತರ

ದೇವಾಲಯಗಳು ಕರ್ನಾಟಕ, ತಮಿಳುನಾಡು ಹಾಗೂ ಮಥುರಾದಿಂದ ಬಂದ ಶಿಲ್ಪಿಗಳಿಂದ ರಚನೆಗೊಂಡು ತಮ್ಮ ಶೈಲಿಯನ್ನು ರೂಪಿಸಿಕೊಂಡಿವೆಯೋ, ಯಾವ ರೀತಿ ಎಲ್ಲೋರದ ಗುಹಾಂತರ ದೇವಾಲಯಗಳು ಬೌದ್ಧ, ಬ್ರಾಹ್ಮಣ ಮತ್ತು ಜೈನ ಧರ್ಮಗಳ ಸಹಜೀವಿಕೆಯ ಕುರುಹಾಗಿದೆಯೋ, ಯಾವ ರೀತಿ ಪಟ್ಟದಕಲ್ಲಿನಲ್ಲಿ ನಾಗರ ಹಾಗೂ ದ್ರಾವಿಡ ಶೈಲಿಯ ವಾಸ್ತುಶಿಲ್ಪ ಶೈಲಿಗಳು ವಿಕಾಸಗೊಂಡವೋ ಅದೇ ರೀತಿ ಕನ್ನಡ ಲಿಪಿ, ಶಾಸನಗಳು ಹಾಗೂ ಸಾಹಿತ್ಯವನ್ನು ಒಂದತ್ತ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳ ಸಹಸಂಬಂಧ ಮತ್ತು ಇನ್ನೊಂದತ್ತ ಬೌದ್ಧ, ಬ್ರಾಹ್ಮಣ, ಜೈನ ಮತ್ತು ವೀರಶೈವ ಧರ್ಮಗಳು ಮಾಡಿದ ಸಂವಾದಗಳು ಎಂದು ಕರೆಯಬಹುದು. ಇದಲ್ಲದೆ ಕದಂಬ–ಕನ್ನಡ ಲಿಪಿ ಕರ್ನಾಟಕದ ವಾಣಿಜ್ಯ ಸಂಬಂಧಗಳ ಮೂಲಕ ದಕ್ಷಿಣ ಏಷ್ಯಾದ ಭಾಗಗಳಿಗೆ ತಲುಪಿ ಅಲ್ಲಿನ ಅನೇಕ ಭಾಷೆಗಳಿಗೆ ಮಾತೃಕಾಲಿಪಿಯ ಮಾದರಿಯನ್ನೂ ಒದಗಿಸಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಈಗ ಸಾಹಿತ್ಯ ಚರಿತ್ರೆಯ ರಚನೆಯಲ್ಲಿ ಉಪಯೋಗವಾಗುವ ಅವಧೀಕರಣ ಅಥವಾ ಕಾಲ ವಿಭಜನೆಯ ಕ್ರಮ (ಪೀರಿಯೊಡೈಜೇಷನ್) ಎಂಬ ಪರಿಕಲ್ಪನೆಯತ್ತ ನೋಡೋಣ. ಸ್ಥೂಲವಾಗಿ ಅದನ್ನು ಭೂತಕಾಲವನ್ನು ವರ್ಗೀಕರಿಸುವ ವಿಧಾನ ಎನ್ನಬಹುದು. ಸಾಹಿತ್ಯ ಚರಿತ್ರೆಯ ರಚನೆಯಲ್ಲಿ ಸರಳರೇಖಾತ್ಮಕ ಕಾಲದಲ್ಲಿ ರಚನೆಯಾಗಿರುವ ಕೃತಿಗಳನ್ನು ಅವಧೀಕರಣದ ಮೂಲಕ ಅರ್ಥೈಸಲು ಸಾಧ್ಯವಿರುವ ಘಟಕಗಳನ್ನಾಗಿ ಪರಿವರ್ತಿಸಲಾಗುತ್ತದೆ. ಒಂದು ಸಾಹಿತ್ಯ ಸಾವಿರಾರು ಕೃತಿಗಳನ್ನು ಹೊಂದಿರುವುದರಿಂದ ಅವೆಲ್ಲವನ್ನೂ ಒಂದೊಂದಾಗಿ ಪರಿಶೀಲಿಸುವುದು ಸಾಹಿತ್ಯ ಚರಿತ್ರೆಗೆ ಅಸಾಧ್ಯ. ಆದ್ದರಿಂದ ಭಿನ್ನ ಭಿನ್ನ ಕಾಲಘಟ್ಟಗಳನ್ನು ರೂಪಿಸಿಕೊಂಡು, ಅವು ಸಾಂಸ್ಕೃತಿಕವಾಗಿ ಏಕರೂಪವನ್ನು ಹೊಂದಿರುತ್ತವೆ ಎಂದು ಒಪ್ಪಿಕೊಂಡು, ಕೃತಿಗಳನ್ನು ಒಟ್ಟಾಗಿ ಪರಿಗಣನೆ ಮಾಡಿ ವಿಶ್ಲೇಷಣೆ ಮಾಡಲು ಕಾಲಘಟ್ಟಗಳು ಸಹಾಯಮಾಡುತ್ತದೆ. ಈ ಬಗೆಯ ಅವಧೀಕರಣ ವಿಧಾನ ನೂರಾರು ಕೃತಿಗಳನ್ನು ಒಟ್ಟುಗೂಡಿಸಿ ಗಣಕಾತ್ಮಕವಾಗಿ ಪರಿಶೀಲಿಸಬಹುದಾದ ಸೂಕ್ತ ಘಟಕಗಳನ್ನಾಗಿ ಪರಿವರ್ತಿಸುವ ಮೂಲಕ ವಿಶ್ಲೇಷಣೆ ಮಾಡಲು ಅನುಕೂಲ ಮಾಡಿಕೊಡುತ್ತದೆಯಾದರೂ ಅದು ಅತ್ಯಂತ ಸಮಸ್ಯಾತ್ಮಕ ವಿಧಾನವೂ ಹೌದು. ಮೊದಲಿಗೆ ಸಾಹಿತ್ಯ ಸಂಸ್ಕೃತಿಯಲ್ಲಿ ಆಗುವ ಬದಲಾವಣೆ ನಿರಂತರವಾಗಿ ನಡೆಯುವ ಪ್ರಕ್ರಿಯೆಯೇ ಅಥವಾ ಕಾಲಘಟ್ಟಗಳಲ್ಲಿ ಆಗುತ್ತಾ ಹೋಗುವ ಪ್ರಕ್ರಿಯೆಯೇ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ವಾಸ್ತವವಾಗಿ ಈ ಬದಲಾವಣೆ ನಿರಂತರವಾಗಿ ನಡೆಯುವ ಪ್ರಕ್ರಿಯೆಯೇ ಆದರೂ ಈ ನಿರಂತರತೆಯನ್ನು ಸಮರ್ಪಕವಾಗಿ ಗ್ರಹಿಸಲು ಕಾಲಘಟ್ಟಗಳ ಮಾದರಿಗೆ ಸಾಧ್ಯವಿಲ್ಲ. ಹೀಗಾಗಿ ಕಾಲಾನುಕ್ರಮಣಿಕೆಯನ್ನು ಉಪಯೋಗಿಸಿ ಚಿಕ್ಕಚಿಕ್ಕ ಕಾಲಘಟ್ಟಗಳ ಮೂಲಕ ಸಾಹಿತ್ಯ ಚರಿತ್ರೆಯನ್ನು ವಿಶ್ಲೇಷಿಸಲು ಸಾಧ್ಯವಿದ್ದು ಅದನ್ನು ಒಂದು ಅಥವಾ ಎರಡು ಶತಮಾನಗಳ ಘಟಕಗಳಲ್ಲಿ ರಚಿಸಿರುವುದನ್ನು ನಾವು ನೋಡಬಹುದು. 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ'ಯ ಸಂಪುಟಗಳಲ್ಲಿ ಪ್ರತಿ ಶತಮಾನದ ಆಧಾರದ ಮೇಲೆ ಸಾಹಿತ್ಯ ಚರಿತ್ರೆಯ ರಚನೆಯನ್ನು ಮಾಡಲು ಪ್ರಯತ್ನಿಸಿರುವುದನ್ನು ನಾವು ನೋಡಬಹುದು.

ಇದಲ್ಲದೆ ಭಾಷೆಯ ರಾಚನಿಕ ಸ್ವರೂಪವನ್ನು ಗಮನಿಸಿ ಅದರಲ್ಲಿ ಆಗಿರುವ ಬದಲಾವಣೆಗಳಿಗೆ ಅನುಗುಣವಾಗಿ ಕೂಡ ಕಾಲ ಘಟ್ಟಗಳನ್ನು ರೂಪಿಸಿಕೊಳ್ಳಬಹುದು. ಈ ಮಾದರಿಯ ಪ್ರೇರಣೆ ಭಾಷಾವಿಜ್ಞಾನ, ಭಾಷೆಯ ಬೆಳವಣಿಗೆ ಮತ್ತು ಬದಲಾವಣೆಯಲ್ಲಿ ಆಗಿರುವ

ಧ್ವನಿಮಾ, ಆಕೃತಿಮಾ ಹಾಗೂ ವಾಕ್ಯರಚನೆಗಳ ಚರಿತ್ರೆಯನ್ನು ಗಮನದಲ್ಲಿಟ್ಟು ಕೊಂಡು ಸೂಕ್ತ ಕಾಲಘಟ್ಟಗಳನ್ನು ಪಡೆಯಬಹುದು. ಅಂತಹ ಸಂದರ್ಭದಲ್ಲಿ ಭಾಷೆಯ ಕಾಲಘಟ್ಟಗಳು ಸಾಹಿತ್ಯಿಕ ಕಾಲಘಟ್ಟಗಳನ್ನೂ ಒಳಗೊಳ್ಳುತ್ತವೆ ಎಂಬ ಪೂರ್ವಗ್ರಹಿಕೆ ಇರಬೇಕಾಗುತ್ತದೆ. ಕನ್ನಡದಲ್ಲಿ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಮುಂತಾದ ಕಾಲಘಟ್ಟಗಳು ಇಂತಹ ಘಟಕಗಳು. ಆದರೆ ಇಂತಹ ಭಾಷೆಯನ್ನು ಆಧರಿಸಿದ ಕಾಲಘಟ್ಟಗಳು ಸಾಹಿತ್ಯದ ಶೈಲಿಯ ದೃಷ್ಟಿಯಿಂದ ಸಮರ್ಪಕವಾಗದೆ ಹೋಗಬಹುದು. ಸಾಮಾನ್ಯವಾಗಿ ಶಾಸನಗಳನ್ನು ಭಾಷಿಕ ಕಾಲಘಟ್ಟಗಳನ್ನು ನಿರ್ಧರಿಸಲು ಉಪಯೋಗಿಸುವುದರಿಂದ ಶಾಶನಗಳ ಭಾಷೆಯ ಶೈಲಿಯನ್ನು ಸಾಹಿತ್ಯಿಕ ಶೈಲಿಯ ಮೇಲೆ ಆರೋಪಿಸಿದಂತಾಗುತ್ತದೆ. ಅಲ್ಲದೆ ಸಾಹಿತ್ಯಿಕ ಶೈಲಿ ಪದ್ಯ ಹಾಗೂ ಅಲಂಕಾರಗಳಿಂದ ಕೂಡಿದ್ದು ಗಮನಾರ್ಹವಾಗಿ ಭಿನ್ನವಾಗಿರುತ್ತದೆ.

ಸಾಹಿತ್ಯರೂಪಗಳನ್ನು ಆಧರಿಸಿ ಕಾಲ ಘಟಕಗಳನ್ನು ರಚಿಸುವ ಪದ್ಧತಿ ಕೂಡ ಇದೆ. ಸಾಹಿತ್ಯರೂಪ ಒಂದು ಕಾಲಘಟ್ಟದ ಮನೋಧರ್ಮವನ್ನು ಸಮರ್ಪಕವಾಗಿ ಪ್ರತಿಬಿಂಬಿಸುತ್ತದೆ ಎಂಬ ಮೂಲಭೂತ ತಿಳುವಳಿಕೆಯೊಂದಿಗೆ ಸಾಹಿತ್ಯರೂಪಗಳನ್ನು ಆಧರಿಸಿದ ಅವಧೀಕರಣ ವನ್ನು ಮಾಡಲಾಗುತ್ತದೆ. ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಚಂಪೂ ಯುಗ, ವಚನ ಯುಗ, ರಗಳೆ–ಷಟ್ಪದಿ ಯುಗ, ಕೀರ್ತನೆಗಳ ಯುಗ, ಸಾಂಗತ್ಯ ಯುಗ ಮುಂತಾದ ಸಾಹಿತ್ಯರೂಪಗಳನ್ನು ಆಧರಿಸಿದ ಕಾಲಘಟ್ಟಗಳನ್ನು ನಾವು ನೋಡಬಹುದು.

ಸಾಹಿತ್ಯರಚನೆಯ ಕಾಲಘಟ್ಟಗಳನ್ನು ಕವಿಕೇಂದ್ರಿತವಾಗಿ ರೂಪಿಸುವ ಪ್ರಯತ್ನವನ್ನೂ ನಾವು ನೋಡಬಹುದು. ಒಬ್ಬ ಪ್ರಮುಖ ಕವಿ ಪ್ರಧಾನವಾದ ಸಾಹಿತ್ಯ ಮಾರ್ಗವೊಂದನ್ನು ಆರಂಭಿಸುತ್ತಾನೆಂದೂ ಅವನ ಪ್ರಭಾವ ಅವನ ನಂತರ ಬಂದ ಕವಿಗಳ ಮೇಲೆ ಗಾಢವಾಗಿ ಆಗುತ್ತದೆಂದೂ ಇಲ್ಲಿ ಭಾವಿಸಲಾಗುತ್ತದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪಂಪ ಯುಗ, ಬಸವ ಯುಗ, ಕುಮಾರವ್ಯಾಸ ಯುಗ ಮುಂತಾದ ಕಾಲಘಟ್ಟಗಳನ್ನು ಗುರುತಿಸಿರುವುದನ್ನು ನಾವು ನೋಡಬಹುದು. ಆದರೆ ವಾಸ್ತವದಲ್ಲಿ ಕೇವಲ ಹಸ್ತಪ್ರತಿಗಳ ರೂಪದಲ್ಲಿ ಉಳಿದು ಬರುತ್ತಿದ್ದ ಮಧ್ಯಕಾಲೀನ ಕನ್ನಡ ಕಾವ್ಯಗಳ ಕರ್ತೃಗಳು ಒಂದು ಯುಗವನ್ನು ಪ್ರಭಾವಿಸ ಬಲ್ಲಷ್ಟು ಪ್ರಾಮುಖ್ಯತೆಯನ್ನು ಪಡೆದಿರುತ್ತಿದ್ದರೇ ಎಂಬ ಸಂದೇಹ ಇದ್ದೇ ಇರುತ್ತದೆ.

ಧಾರ್ಮಿಕತೆಯನ್ನು ಆಧಾರವಾಗಿಟ್ಟುಕೊಂಡು ಸಾಹಿತ್ಯಕ ಕಾಲಘಟ್ಟಗಳನ್ನು ಗುರುತಿಸುವ ಪ್ರಯತ್ನಗಳೂ ನಡೆದಿವೆ. ಇ.ಪಿ. ರೈಸ್ ಅವರು ೧೯೧೫ರಲ್ಲಿ ಇಂಗ್ಲಿಷಿನಲ್ಲಿ ಬರೆದಿರುವ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಧಾರ್ಮಿಕತೆಯ ಆಧಾರದ ಮೇಲೆ ಕಾಲಘಟ್ಟಗಳನ್ನು ರೂಪಿಸಿದ್ದಾರೆ. ಒಂದು ನದಿಯೊಡನೆ ಉಪನದಿಗಳು ಬೆರೆಯುವ ಸಾಮಿತಿಯನ್ನು ಉಪಯೋಗಿಸುತ್ತಾ ರೈಸ್ ಅವರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೂರು ಪ್ರಮುಖ ಪ್ರವಾಹಗಳನ್ನು ಗುರುತಿಸುತ್ತಾರೆ. ಅವುಗಳನ್ನು ಜೈನ, ಲಿಂಗಾಯತ, ವೀರಶೈವದ ಪುನರುತ್ಥಾನ ಹಾಗೂ ಆಧುನಿಕ ಯುಗಗಳು ಎಂದು ಹೆಸರಿಸುತ್ತಾರೆ. ಕನ್ನಡ ಆರಂಭಿಕ ಹಂತದ ಜೈನ ಕವಿಗಳು, ತಮ್ಮ ಕಾವ್ಯಗಳನ್ನು ಲೌಕಿಕ ಹಾಗೂ ಆಗಮಿಕ (ಧಾರ್ಮಿಕ) ಎಂದು ಸ್ಪಷ್ಟವಾಗಿ ಹೇಳುತ್ತಿರುವಾಗ ಕವಿಯ ಧರ್ಮವನ್ನು ಆಧರಿಸಿ ಸಾಹಿತ್ಯವನ್ನು ಧಾರ್ಮಿಕವಾದ ಕಾಲಘಟ್ಟಕ್ಕೆ ಒಳಪಡಿಸುವುದು ಕವಿ, ಸಾಹಿತ್ಯ ಹಾಗೂ ಅದನ್ನು ಸವಿಯುವ ಸಾರ್ವಜನಿಕ ವಲಯಗಳ ಸಂವೇದನೆಗಳನ್ನು ನಿರ್ಲಕ್ಷಿಸಿ ಮಾಡುವ ಕಾಲಘಟ್ಟಗಳಾಗುತ್ತವೆ. ಆದರೆ ನದಿಗಳ ಬೆರೆಯುವಿಕೆಯ ಮಾದರಿಯಲ್ಲಿ ಒಂದು ಪ್ರಯೋಜನವಿದೆ. ಅದೆಂದರೆ

ನದಿಗಳ ಸೇರುವಿಕೆ ಒಂದು ಮಿಶ್ರಣದ ಅಂದರೆ ಹೈಬ್ರಿಡಿಟಿಯ ಸೃಷ್ಟಿಯ ಸಾಧ್ಯತೆಯನ್ನು ಕೊಡುತ್ತದೆ. ರೈಸ್ ಅವರು ಜೈನ ಮತ್ತು ಲಿಂಗಾಯತ ಸಾಹಿತ್ಯಗಳು ಪರಸ್ಪರ ಬೆರೆಯದೆ ಅಕ್ಕ ಪಕ್ಕದಲ್ಲಿ ಪ್ರವಹಿಸಿದವು ಎಂದು ಹೇಳಿದರೂ ವಾಸ್ತವತೆ ಅದಕ್ಕೆ ದೂರವಾಗಿದೆ. ಹೀಗಾಗಿ ಧಾರ್ಮಿಕ ಕಾಲಘಟ್ಟಗಳಲ್ಲಿ ಸಾಹಿತ್ಯ ಚರಿತ್ರೆಯನ್ನು ಪರಿಭಾವಿಸುವುದು ಸಾಹಿತ್ಯದ ಸೆಕ್ಯುಲರ್ ಮತ್ತು ವಿಶ್ವಾತ್ಮಕತೆಗಳನ್ನು ಅಲ್ಲಗಳೆದಂತಾಗುತ್ತದೆ. ಪಟ್ಟಿಕೆ ೧ರಲ್ಲಿ ಮೇಲೆ ಚರ್ಚಿಸಿದ ಕನ್ನಡ ಸಾಹಿತ್ಯದ ವಿವಿಧ ಅವಧೀಕರಣ ಪ್ರಯತ್ನಗಳ ಒಟ್ಟುನೋಟವನ್ನು ಕೊಡಲಾಗಿದೆ.

| ಕಾಲಘಟ್ಟ | ಕಾಲ | ಭಾಷೆ | ಸಾಹಿತ್ಯರೂಪ | ಕವಿ | ಧರ್ಮ |
|---|---|---|---|---|---|
| ೧ | ೮–೯ ಶ. | ಪೂರ್ವದ | ಶಾಸನ | – | – |
| ೨ | ೧೦–೧೨ ಶ. | ಹಳಗನ್ನಡ<br>ಹಳಗನ್ನಡ | ಚಂಪೂ ಯುಗ | ಪಂಪಯುಗ | ಜೈನ |
| ೩ | ೧೩–೧೬ ಶ. | ನಡುಗನ್ನಡ | ರಗಳೆ–ಷಟ್ಪದಿ | ಬಸವ ಯುಗ | ಜೈನ |
| ೪ | – | – | – | ಕುಮಾರವ್ಯಾಸ | ಲಿಂಗಾಯತ<br>ಬ್ರಾಹ್ಮಣ |
| ೫ | ೧೭–೧೮ ಶ. | – | ಷಟ್ಪದಿ–ಸಾಂಗತ್ಯ | – | – |
| ೬ | ೧೯–೨೦ ಶ. | ಹೊಸಗನ್ನಡ | ಕವಿತೆ–ಕಾದಂಬರಿ | ಆಧುನಿಕ ಯುಗ | – |

ಪಟ್ಟಿಕೆ ೧: ಕನ್ನಡ ಸಾಹಿತ್ಯದ ಅವಧೀಕರಣಗಳ ಒಟ್ಟುನೋಟ

ಪಟ್ಟಿಕೆಯಲ್ಲಿ ಎದ್ದು ಕಾಣುವ ಅಂಶಗಳೆಂದರೆ ಕಾಲಘಟ್ಟಗಳು ಒಂದರೊಡನೊಂದು ಬೆರೆಯುವುದು ಹಾಗೂ ಯಾವುದೇ ಎರಡು ಅವಧೀಕರಣಗಳ ನಡುವೆ ಸಮರ್ಪಕವಾದ ತಾಳೆ ಇಲ್ಲದಿರುವುದು. ಸರಳರೇಖಾತ್ಮಕವಾಗಿ ಪರಿಭಾವಿಸಿರುವ ಈ ಎಲ್ಲ ಕಾಲಘಟ್ಟಗಳು ಪರಸ್ಪರ ಒಂದರೊಳಗೊಂದು ಚಾಚಿಕೊಂಡು ಬೆರೆಯುವ ಮೂಲಕ ಗೊಂದಲ ಹಾಗೂ ವಿರೋಧಾಭಾಸಗಳನ್ನು ಸೃಷ್ಟಿಸುತ್ತವೆ. ಯಾವುದೇ ಕಾಲಘಟ್ಟದ ಆರಂಭ ಮತ್ತು ಅಂತ್ಯಗಳನ್ನು ಕರಾರುವಾಕ್ಕಾಗಿ ಗೆರೆ ಎಳೆದು ನಿರ್ಧರಿಸಲು ಬರುವುದಿಲ್ಲ. ಒಂದು ಯುಗದ ಕಾಲಘಟ್ಟಕ್ಕೆ ಮೊದಲು ಹಾಗೂ ಅದು ತೀರಿದ ನಂತರವೂ ನಿರ್ದಿಷ್ಟ ಸಾಹಿತ್ಯಿಕ ಚಟುವಟಿಕೆ ನಡೆದಿರುವುದನ್ನು ನಾವು ಕಾಣುತ್ತೇವೆ. ಮೂಲಭೂತವಾಗಿ ಬಹುಳತೆ ಹಾಗೂ ವೈವಿಧ್ಯತೆಗಳಿಂದ ತುಂಬಿರುವ ಸಾಹಿತ್ಯ ಚರಿತ್ರೆಯನ್ನು ಕಾಲಘಟಕಗಳನ್ನು ಉಪಯೋಗಿಸಿ ರಚಿಸಿದಾಗ ಈ ಘಟಕಗಳು ಬಹುಳತೆ ಮತ್ತು ವೈವಿಧ್ಯತೆಗಳನ್ನು ಗ್ರಹಿಸಲು ಅಸಮರ್ಥವಾಗುತ್ತವೆ ಹಾಗೂ ಏಕರೂಪೀಕರಣ ಕ್ಕೊಳಗಾಗುತ್ತವೆ. ಇದಕ್ಕೆ ಪರ್ಯಾಯವಾಗಿ ಹಲವಾರು ವಿದ್ವಾಂಸರ ಸಹಯೋಗದಿಂದ ರಚಿತವಾಗುವ ಸಾಹಿತ್ಯ ಚರಿತ್ರೆಗಳು ಭಿನ್ನ ದೃಷ್ಟಿಕೋಣ ಗಳಿಂದ ಕೂಡಿರುತ್ತವಲ್ಲದೆ ಒಂದೇ ಘಟಕವನ್ನು ಬೇರೆಬೇರೆ ವಿದ್ವಾಂಸರು ಭಿನ್ನವಾದ ಕಾರಣಗಳಿಗಾಗಿ ನೋಡುವ ಸಾಧ್ಯತೆ ಇರುವುದರಿಂದ ಬಹುಳತೆ ಹಾಗೂ ವೈವಿಧ್ಯತೆಗಳ ಅಳಿಸಿಹೋಗುವಿಕೆ ಸ್ವಲ್ಪಮಟ್ಟಿಗೆ ಕಡಿಮೆ ಯಾಗಬಹುದು. ಸಾಹಿತ್ಯ ಚರಿತ್ರೆಯ ರಚನೆಯಲ್ಲಿ ಅದರ ಬಹುಮುಖೀ ಜ್ಞಾನ ವ್ಯವಸ್ಥೆಯನ್ನು (ಪ್ಲೂರಲಿಸ್ಟಿಕ್ ಎಪಿಸ್ಟೆಮಾಲಜಿ) ಉಳಿಸಿಕೊಳ್ಳುವುದು ಹೇಗೆ ಎಂಬ ಸವಾಲಿಗೆ ಉತ್ತರ ಸಾಹಿತ್ಯ ಚರಿತ್ರೆಯನ್ನು ಮತ್ತೆ ಮತ್ತೆ ರಚಿಸುವ ಪ್ರಯತ್ನಗಳಿಂದಲೇ ಬರುತ್ತದೆ. ಇದನ್ನು

ನಾವು ಈಗಾಗಲೇ ೩.೪ರಲ್ಲಿ ಸಾಹಿತ್ಯ ಸಂಸ್ಕೃತಿಯ ರಚನೆಯ ಇತಿಹಾಸದಲ್ಲಿ ನೋಡಿದ್ದೇವೆ. ಅಂದರೆ ಸಮರ್ಪಕವಾದ ಸಾಹಿತ್ಯ ಚರಿತ್ರೆಯ ರಚನೆ ಎಂದೆಂದಿಗೂ ಮುಗಿಯದ ಯೋಜನೆಯಾಗಿರುತ್ತದೆ ಎಂಬುದು ನಮ್ಮ ಗಮನದಲ್ಲಿರಬೇಕು.

## ೩.೬. ಕನ್ನಡ ಸಾಹಿತ್ಯ ಚರಿತ್ರೆ: ಬಹುಮುಖೀ ಜ್ಞಾನ ವ್ಯವಸ್ಥೆ

ಸುಮಾರು ೧೬೦೦ ವರ್ಷಗಳ ಕನ್ನಡದ ಬರಹ ಸಂಸ್ಕೃತಿ ಹಾಗೂ ೧೨೦೦ ವರ್ಷಗಳ ಕನ್ನಡ ಸಾಹಿತ್ಯ ಸಂಸ್ಕೃತಿಯ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಡಲು ಅವಧೀಕರಣದ ಕಾಲಘಟ್ಟಗಳು ಸಹಾಯಕಾರಿ ಆಗಲಾರವು. ಆದ್ದರಿಂದ ಪರ್ಯಾಯವಾಗಿ ಕನ್ನಡ ಸಾಹಿತ್ಯ ಚರಿತ್ರೆಯ ಒಂದು 'ದೂರದ ಓದು' ಹಾಗೂ ಸಾಹಿತ್ಯ ಸಂಸ್ಕೃತಿಯ ಒಟ್ಟು ನೋಟವನ್ನು ಇಲ್ಲಿ ಪ್ರಯತ್ನಿಸಲಾಗಿದೆ. ಮೊದಲಿಗೆ ದೂರದ ಓದು ಎಂಬ ಪರಿಕಲ್ಪನೆಯನ್ನು ಪರಿಚಯ ಮಾಡಿಕೊಳ್ಳೋಣ. ಈಗಾಗಲೇ ಅಂತರ್ಮುಖಿ ವಿಮರ್ಶಾ ವಿಧಾನದ ಬಗ್ಗೆ ಪ್ರಸ್ತಾಪಿಸಲಾಗಿದೆ. ಯಾವುದೇ ಬಾಹ್ಯ ಜ್ಞಾನದ ಸಹಾಯವಿಲ್ಲದೆ ಸಾಹಿತ್ಯಕೃತಿಯೇ ಅದನ್ನು ಅರ್ಥ ಮಾಡಿಕೊಳ್ಳಲು ಅಗತ್ಯವಾದ ಎಲ್ಲ ಮಾಹಿತಿಯನ್ನೂ ಒದಗಿಸಬಲ್ಲದು ಎಂಬ ವಾದವನ್ನು ಫ್ರಾಂಕೋ ಮೊರೆಟ್ಟಿಯಂತಹ ವಿದ್ವಾಂಸರು ಸಮೀಪದ ಓದು ಎಂದು ಕರೆಯುತ್ತಾರೆ. ಮೊದಲಿಗೆ ಮೊರೆಟ್ಟಿ ಸಮೀಪದ ಓದನ್ನು ಕ್ವಚಿತ್ತಾದ ಕೆಲವೇ ಕೆಲವು ಪಠ್ಯಗಳ ಓದಿನಿಂದ ಇಡೀ ಸಾಹಿತ್ಯದ ಮೇಲೆ ಮಾಡಿದ ಏಕರೂಪೀಕರಣದ ನಿರ್ಧಾರಗಳು ಎಂದು ಟೀಕಿಸುತ್ತಾನೆ. ಸಮೀಪದ ಓದು ಪಠ್ಯಕೇಂದ್ರಿತ ಓದುವಿಕೆಯಾಗಿದ್ದು ಅಂತರ್ಮುಖಿ ವಿಮರ್ಶಾ ವಿಧಾನದ ಪ್ರಧಾನ ವಿಮರ್ಶಾ ಪಂಥವಾಗಿತ್ತು. ಎರಡನೆಯದಾಗಿ ಒಂದು ಸಾಹಿತ್ಯ ಪರಂಪರೆಯ ಎಲ್ಲ ಕೃತಿಗಳನ್ನೂ ಸಮೀಪದ ಓದಿನ ಅವಗಾಹನೆಗೆ ತರುವುದು ವಾಸ್ತವವಾಗಿ ಸಾಧ್ಯವಿಲ್ಲ ಎಂದು ವಾದಿಸುತ್ತಾನೆ. ಹೀಗಾಗಿ ಪಠ್ಯಗಳನ್ನು ಓದುವುದರ ಬದಲಿಗೆ ಸಾವಿರಾರು ಪಠ್ಯಗಳನ್ನು ಹಾಗೂ ಅವುಗಳ ಮಾಹಿತಿಯನ್ನು ಪಠ್ಯಗಳಿಂದ ದೂರವಾಗಿ ನಿಂತು ಒಟ್ಟಾಗಿ ಸಮೀಕ್ಷೆ ಮಾಡುವ ಅಧ್ಯಯನಕ್ರಮದ ಅಗತ್ಯವನ್ನು ಒತ್ತಿ ಹೇಳುತ್ತಾ ಅದನ್ನು ಗಣಕಾತ್ಮಕವಾಗಿ ಹಾಗೂ ಮಾಹಿತಿಕಣಜಗಳ ಆಧಾರದ ಮೇಲೆ ಮಾಡಬೇಕು ಎಂದು ವಿವರಿಸುತ್ತಾನೆ. ಹೀಗಾಗಿ ಸಾಹಿತ್ಯ ರಚನೆಗಳಲ್ಲಿ ತಮ್ಮದೇ ಆದ ಮಾದರಿಗಳಿರುತ್ತವೆ ಹಾಗೂ ಅವು ಪುನರಾವೃತ್ತಿಗೊಳ್ಳುತ್ತಿರುತ್ತವಾದ್ದರಿಂದ ಅವುಗಳನ್ನು ವಸ್ತುನಿಷ್ಠವಾಗಿ ಅಭ್ಯಾಸ ಮಾಡಬಹುದಾಗಿದೆ. ಮಾಹಿತಿಯನ್ನು ಗಣಕಾತ್ಮಕವಾಗಿ ನಕ್ಷೆಗಳು, ಪಟ್ಟಿಕೆಗಳು ಹಾಗೂ ಗ್ರಾಫುಗಳ ಮೂಲಕ ವ್ಯಕ್ತಪಡಿಸಿ ಸಾಹಿತ್ಯ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳುವ ಹೊಸ ಮಾದರಿಯತ್ತ ನಾವು ಸಾಗಬೇಕು ಎಂದು ಮೊರೆಟ್ಟಿ ವಾದಿಸುತ್ತಾನೆ.

ಈ ವರೆಗೆ ಕನ್ನಡದ ಮೊದಲ ಕೃತಿ ಎಂದು ಪರಿಗಣಿತವಾಗಿರುವ 'ಕವಿರಾಜಮಾರ್ಗ' ಕ್ರಿ.ಶ. ೯ನೆಯ ಶತಮಾನದ್ದು. ಇದರ ಕರ್ತೃ ಜೈನಧರ್ಮಿಯಾದ ಶ್ರೀವಿಜಯ ರಾಷ್ಟ್ರಕೂಟ ಅರಸನಾದ ನೃಪತುಂಗನ ಆಸ್ಥಾನದಲ್ಲಿದ್ದವನು. ಇದೊಂದು ಚಂಪೂ ಶೈಲಿಯಲ್ಲಿ ರಚನೆಯಾಗಿರುವ ಲಕ್ಷಣ ಗ್ರಂಥ. ಇಲ್ಲಿಂದ ಮುಂದೆ ಸುಮಾರು ಕ್ರಿ.ಶ. ೧೧೫೦ರ ವರೆಗೆ ಬಂದ ಕನ್ನಡದ ಕೃತಿಗಳು ಲಿಪಿಕೇಂದ್ರಿತವಾಗಿದ್ದು, ರಾಜಾಶ್ರಯ, ಸಂಸ್ಕೃತದಿಂದ ಪ್ರಭಾವಿತವಾದ ಭಾಷೆ, ಛಂದಸ್ಸು ಮತ್ತು ಕಾವ್ಯಶೈಲಿ ಹಾಗೂ ಕ್ವಚಿತ್ತಾಗಿ ಆಶ್ರಯದಾತನನ್ನು

ಕಾವ್ಯದ ನಾಯಕನೊಂದಿಗೆ ಸಮೀಕರಿಸುವ ಚಾರಿತ್ರಿಕತೆ ಮುಂತಾದ ಲಕ್ಷಣಗಳಿಂದ ಕೂಡಿದ್ದವು. ಇದನ್ನು ನಾವು ಲಿಪಿಬದ್ಧ ಸಾಹಿತ್ಯ ಪರಂಪರೆ ಎಂದು ಕರೆಯಬಹುದು. ಲಿಪಿಕೇಂದ್ರಿತ ಸಾಹಿತ್ಯಕ್ಕೆ ಪೂರಕವಾದ ಅನೇಕ ಅಂಶಗಳನ್ನು ನಾವು ಗಮನಿಸಬಹುದು. ಕನ್ನಡ ಶಾಸನಗಳಲ್ಲಿ ಜೈನ ಆಚಾರ್ಯರ ಬಳಿಗಳನ್ನು ಹೇಳುವಾಗ ಅವರ ಅನ್ವಯ, ಸಂಘ, ಗಣ, ಗಚ್ಛ ಮುಂತಾದ ವಿವರಗಳನ್ನು ನಮೂದಿಸುವ ಪರಂಪರೆ ಇದೆ. ಇಲ್ಲಿ ವಿಶೇಷವಾಗಿ ಅವರಿಗೆ ಸರಸ್ವತೀ ಗಣ, ಪುಸ್ತಕಗಚ್ಛ ಮುಂತಾದ ಲಿಪಿ ಸಂಬಂಧಿತ ಗುರುತಿನ ವಿಶೇಷಣಗಳನ್ನು ಉಪಯೋಗಿಸಿರುವುದನ್ನು ಕಾಣಬಹುದು. ಪೊನ್ನನ (ಕ್ರಿ.ಶ. ೯೫೫) 'ಶಾಂತಿಪುರಾಣ'ವನ್ನು ೧,೦೦೦ ಹಸ್ತಪ್ರತಿಗಳಲ್ಲಿ ಬರೆಸಿ ಅದನ್ನು ದಾನಮಾಡಿದ ಅತ್ತಿಮಬ್ಬೆಯ ಧಾರ್ಮಿಕ ಶ್ರದ್ಧೆಯೂ ಲಿಪಿಕೇಂದ್ರಿತ ವ್ಯವಸ್ಥೆಯನ್ನು ಪುಷ್ಟೀಕರಿಸುವ ವಿಧಾನವೂ ಹೌದು. ಇದಲ್ಲದೆ ಲಿಪಿಯ ಉಗಮದ ಬಗ್ಗೆ ಜೈನ ಕಾವ್ಯಗಳಲ್ಲಿ ಪೌರಾಣಿಕ ವಿವರಣೆಗಳನ್ನು ನಾವು ನೋಡಬಹುದು. ಪಂಪನ (ಕ್ರಿ.ಶ. ೯೪೧) 'ಆದಿಪುರಾಣ'ದಲ್ಲಿ ಜೈನರ ಮೊದಲನೆಯ ತೀರ್ಥಂಕರನಾದ ವೃಷಭದೇವ (ಪುರು) ತನ್ನ ಇಬ್ಬರು ಪುತ್ರಿಯರಾದ ಬ್ರಾಹ್ಮಿ ಮತ್ತು ಸುಂದರಿಯರನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಬ್ರಾಹ್ಮಿಗೆ ವರ್ಣಮಾಲೆಯನ್ನೂ ಸುಂದರಿಗೆ ಅಂಕಿಗಳನ್ನೂ ಕಲಿಸಿಕೊಡುತ್ತಾನೆ. ಲಿಪಿಯ ಎರಡು ಆಯಾಮಗಳಾದ ಅಕ್ಷರ ಮತ್ತು ಅಂಕಿಗಳ ಸಂಬಂಧವನ್ನು ಮೊದಲನೆಯ ತೀರ್ಥಂಕರನ ಹೆಣ್ಣು ಮಕ್ಕಳಿಂದ ಆರಂಭಗೊಳಿಸುವುದು ಗಮನಾರ್ಹವಾದ ಸಂಗತಿಯಾಗಿದೆ. ಅದೇ ರೀತಿ 'ಸರ್ವಶುಕ್ಲಾಂ ಸರಸ್ವತಿ' ಎಂದು ವಿದ್ಯಾದೇವತೆಯನ್ನು ಕರೆದುದಲ್ಲದೆ ಶಬ್ದವನ್ನು ಶ್ವೇತ ವರ್ಣದ 'ಪುದ್ಗಲ' ಎಂದು ಕರೆದವರು ಜೈನ ವೈಯಾಕರಣಿಗಳು. ಓಲೆಗರಿಗಳ ಲಿಪಿಬದ್ಧತೆ, ರಾಜಾಸ್ಥಾನ, ಮೇಲು ವರ್ಗ ಮತ್ತು ಮಠಗಳ ಆಶ್ರಯ, ಸಂಸ್ಕೃತದಿಂದ ಪ್ರಭಾವಿತವಾದ ಛಂದಸ್ಸು ಮತ್ತು ಕಾವ್ಯಶೈಲಿ, ಸ್ಥಳೀಯವಲ್ಲದ ಅಖಿಲ ಭಾರತೀಯ ಮಟ್ಟದ ಕಾವ್ಯ ವಸ್ತು, ಕಾವ್ಯದ ನಾಯಕ ಕಡ್ಡಾಯವಾಗಿ ಕ್ಷತ್ರಿಯನಾಗಿರುವುದು ಹಾಗೂ ಸಮಾಜದ ಸುಸಂಸ್ಕೃತ ವರ್ಗದ ಸಾರ್ವಜನಿಕ ವಲಯ, ಈ ಅಂಶಗಳನ್ನು ಒಳಗೊಂಡು ಈ ಲಿಪಿಕೇಂದ್ರಿತ ಸಾಹಿತ್ಯ ಬೆಳೆಯಿತು. ವಡ್ಡಾರಾಧನೆ (ಕ್ರಿ.ಶ. ೯೦೦), ಪಂಪನ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ', ರನ್ನನ (ಕ್ರಿ.ಶ. ೯೯೦) 'ಅಜಿತನಾಥ ಪುರಾಣ' ಮತ್ತು 'ಗದಾಯುದ್ಧ', ಪೊನ್ನನ 'ಶಾಂತಿ ಪುರಾಣ', ೧ನೆಯ ನಾಗವರ್ಮನ (ಕ್ರಿ.ಶ. ೯೯೦) 'ಕರ್ನಾಟಕ ಕಾದಂಬರಿ' ಹಾಗೂ ದುರ್ಗಸಿಂಹನ (ಕ್ರಿ.ಶ. ೧೦೩೧) 'ಕರ್ನಾಟಕ ಪಂಚತಂತ್ರಂ ಮುಂತಾದವು ಈ ಲಿಪಿಕೇಂದ್ರಿತ ಸಾಹಿತ್ಯದ ಪ್ರಮುಖ ಕೃತಿಗಳು. ಇದಲ್ಲದೆ ನಂತರದ ಕನ್ನಡ ಸಾಹಿತ್ಯದ ರಚನೆಗೆ ಮಾರ್ಗದರ್ಶಿಯಾದ ಹಲವಾರು ಶಾಸ್ತ್ರಗ್ರಂಥಗಳೂ ಈ ಬಗೆಯ ಸಾಹಿತ್ಯಕ್ಕೆ ಸೇರುತ್ತವೆ.

ಸುಮಾರು ಕ್ರಿ.ಶ. ೧೧೫೦ರ ವೇಳೆಗೆ ವೀರಶೈವ ವಚನಕಾರರು ಲಿಪಿಕೇಂದ್ರಿತ ಸಾಹಿತ್ಯದಿಂದ ಧ್ವನಿಕೇಂದ್ರಿತ (ಮೌಖಿಕ) ಸಾಹಿತ್ಯಕ್ಕೆ ವಚನಗಳ ಮೂಲಕ ಹೊಸ ತಿರುವೊಂದನ್ನು ತಂದರು. ಮುಂದೆ ಕ್ರಿ.ಶ. ೧೫ನೆಯ ಶತಮಾನದಲ್ಲಿ 'ಶೂನ್ಯಸಂಪಾದನೆ'ಗಳಲ್ಲಿ ಕ್ರೋಢೀಕರಣಗೊಂಡು ಬರಹ ರೂಪಕ್ಕೆ ತಲುಪುವ ತನಕ ಈ ವಚನಗಳು ಧ್ವನಿಕೇಂದ್ರಿತ ವ್ಯವಸ್ಥೆಯಲ್ಲೇ ಉಳಿಯಿತು. ಸುಮಾರು ೩೩ ವಚನಕಾರ್ತಿಯರೂ ಸೇರಿದಂತೆ ನೂರಾರು ವಚನಕಾರರ ರಚನೆಗಳು ವಚನಸಾಹಿತ್ಯವನ್ನು ಸಮೃದ್ಧಗೊಳಿಸಿದವು. ಛಂದೋಮುಕ್ತವಾದ ಈ ರಚನೆಗಳು ವಚನ, ಮಾತು ('ಮಾತೆಂಬುದು ಜ್ಯೋತಿರ್ಲಿಂಗ'), ನುಡಿ ('ನುಡಿದರೆ ಸ್ಫಟಿಕದ

ಸಲಾಕೆಯಂತಿರಬೇಕು') ಮುಂತಾದ ನುಡಿಗಟ್ಟುಗಳಲ್ಲಿ ಸ್ಪಷ್ಟವಾಗುವಂತೆ ಮೌಖಿಕತೆಗೆ ಪ್ರಾಧಾನ್ಯತೆ ನೀಡಿದ ಪ್ರತಿನಿಧೀಕರಣಗಳು. ದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದವರು ಈ ಸಾಹಿತ್ಯರೂಪದ ಗಮನಾರ್ಹ ರಚನೆಕಾರರು.

ಸುಮಾರು ಕ್ರಿ.ಶ. ೧೩ನೆಯ ಶತಮಾನದ ಆರಂಭದಿಂದ ರಗಳೆಯ ರೂಪದಲ್ಲಿ ಹಾಗೂ ೧೪ನೆಯ ಶತಮಾನದಿಂದ ಷಟ್ಪದಿ ಕಾವ್ಯದ ರೂಪದಲ್ಲಿ ವೀರಶೈವ ಶರಣರ ಪುರಾಣಗಳ ರಚನೆ ಆರಂಭವಾಗುತ್ತದೆ. ಹರಿಹರ ರಗಳೆಯ ಸಾಹಿತ್ಯರೂಪವನ್ನು ಉಪಯೋಗಿಸಿದರೆ ರಾಘವಾಂಕ ಷಟ್ಪದಿ ಸಾಹಿತ್ಯರೂಪವನ್ನು ಬಳಸುತ್ತಾನೆ. ಈ ಸಾಹಿತ್ಯ ರೂಪಗಳು ಲಿಪಿಬದ್ಧವಾದರೂ ಇವು ವಾಸ್ತವವಾಗಿ ಬದುಕಿದ್ದು ಗಮಕವಾಚನ ಪರಂಪರೆಯ ಹಾಡುಗಾರಿಕೆಯ ಮೂಲಕ. ಬ್ರಾಹ್ಮಣ, ವೀರಶೈವ ಹಾಗೂ ಜೈನ ಕವಿಗಳು ಅಭೇದವಾಗಿ ಈ ಸಾಹಿತ್ಯರೂಪವನ್ನು ಬಳಸಿದ್ದನ್ನು ನಾವು ನೋಡಬಹುದು. ರಾಘವಾಂಕನ (ಕ್ರಿ.ಶ. ೧೨೦೦) 'ಹರಿಶ್ಚಂದ್ರ ಕಾವ್ಯ', ಕುಮಾರವ್ಯಾಸನ (ಕ್ರಿ.ಶ. ೧೪೩೦) 'ಕರ್ನಾಟಕ ಭಾರತ ಕಥಾಮಂಜರಿ', ನರಹರಿಯ (ಕ್ರಿ.ಶ. ೧೫೦೦) 'ತೊರವೆ ರಾಮಾಯಣ, ಷಡಕ್ಷರದೇವನ' (ಕ್ರಿ.ಶ. ೧೬೬೫) 'ಶಬರಶಂಕರ ವಿಳಾಸ' ಈ ಗಮಕವಾಚನ ಪರಂಪರೆಯ ಪ್ರಸಿದ್ಧ ಕೃತಿಗಳು. ಗಮಕವಾಚನ ಸಾಮಾನ್ಯವಾಗಿ ನಡೆಯುತ್ತಿದ್ದ ಸ್ಥಳ ದೇವಾಲಯ ಹಾಗೂ ಮಠಗಳಲ್ಲಿ; ಹೀಗಾಗಿ ರಾಜಾಸ್ಥಾನದಲ್ಲಿದ್ದ ಕನ್ನಡ ಸಾಹಿತ್ಯ ಸಾಮಾನ್ಯ ಜನರ ಸಾರ್ವಜನಿಕ ವಲಯವಾದ ದೇವಾಲಯ ಹಾಗೂ ಮಠಗಳಲ್ಲಿ ಪ್ರವೇಶಿಸಿ ಜನಗಮ್ಯವಾದುದನ್ನು ನಾವು ನೋಡುತ್ತೇವೆ. ಮೌಖಿಕ ಸಂವಹನ, ದೇಸಿ ಛಂದಸ್ಸು ಮತ್ತು ಕಾವ್ಯಶೈಲಿ, ದೇವಾಲಯದ ಸಾರ್ವಜನಿಕ ವಲಯ, ಸ್ಥಳೀಯವಾದ ಕೆಳವರ್ಗಗಳಿಗೆ ಸೇರಿದ ಭಕ್ತ ನಾಯಕರು, ಅದರಲ್ಲೂ ವಿಶೇಷವಾಗಿ ಸ್ತ್ರೀ ನಾಯಕಿಯರು ಮುಂತಾದ ಸಾಂಸ್ಕೃತಿಕ ಅಂಶಗಳಿಂದ ಕೂಡಿದ ಈ ಧ್ವನಿಕೇಂದ್ರಿತ ಸಾಹಿತ್ಯ ಆಧುನಿಕ ಯುಗದ ತನಕ ಮುಂದುವರೆಯಿತು.

ಮೇಲೆ ವಿವರಿಸಿದ ಧ್ವನಿಕೇಂದ್ರಿತ ಸಾಹಿತ್ಯ ವ್ಯವಸ್ಥೆಯಲ್ಲಿ ಗಮಕದ ಮೂಲಕ ಸಂಗೀತವು ಸಾಹಿತ್ಯ ರೂಪವನ್ನು ಪ್ರವೇಶಿಸಿದ್ದನ್ನು ನಾವು ನೋಡಿದೆವು. ಕ್ರಿ.ಶ. ೧೫ನೆಯ ಶತಮಾನದಲ್ಲಿ ಸಂಗೀತವನ್ನು ಆಧರಿಸಿದ ಕೀರ್ತನೆಗಳ ಪರಂಪರೆ ಆರಂಭವಾಯಿತು. ಗಮಕ ಪರಂಪರೆಗಿಂತ ಇದು ಸ್ವಲ್ಪ ಭಿನ್ನವಾದುದು. ವೈಷ್ಣವ ಅಥವಾ ಹರಿದಾಸ ಭಕ್ತಿ ಈ ಕೀರ್ತನಾ ಪರಂಪರೆಯ ಪ್ರಧಾನ ನೆಲೆ ಹಾಗೂ ಪುರಂದರದಾಸ (ಕ್ರಿ.ಶ. ೧೫೨೦) ಮತ್ತು ಕನಕದಾಸ (ಕ್ರಿ.ಶ. ೧೫೭೦) ಈ ಕೀರ್ತನಾ ಪರಂಪರೆಯ ಪ್ರಧಾನ ಕವಿಗಳು. ಮಠದ ಆಶ್ರಯದಲ್ಲಿ ಹಾಗೂ ಹಸ್ತಪ್ರತಿಗಳ ಮೂಲಕ ಈ ಪರಂಪರೆಯನ್ನು ಗುರುತಿಸಲಾಗುತ್ತದೆಯಾದರೂ ಬಹುತೇಕ ಕೀರ್ತನೆಗಳಿಗೆ ಹಸ್ತಪ್ರತಿಗಳು ಉಪಲಬ್ಧವಿಲ್ಲ. ಅವೆಲ್ಲವೂ ಉಳಿದು ಬಂದಿರುವುದು ಕೆಳವರ್ಗದ ವೃತ್ತಿಗಾಯಕರ ಹಾಡುಗಾರಿಕೆಯ ಮೂಲಕ. ಆದರೆ ಕನಕದಾಸ ಬರೆದಿರುವ ಕಾವ್ಯಗಳು ಹಸ್ತಪ್ರತಿ ಪರಂಪರೆಯಲ್ಲಿ ಮಠಗಳಲ್ಲಿ ಉಳಿದುಬಂದವು ಎಂಬುದನ್ನು ನಾವು ಗಮನಿಸಬೇಕು. ಇದೊಂದು ಕುತೂಹಲಕಾರಿಯಾದ ಸಾಂಸ್ಕೃತಿಕ ಬೆಳವಣಿಗೆ. ಅವರ ಕೀರ್ತನೆಯ ರೂಪದ ಹಾಡುಗಳು ಕೆಳವರ್ಗದ ವೃತ್ತಿಗಾಯಕರ ಕಂಠಗಳ ಮೂಲಕ ಉಳಿದು ಬಂದರೆ ಕಾವ್ಯಗಳು ಮಠಗಳಲ್ಲಿ ಹಸ್ತಪ್ರತಿಗಳ ಮೂಲಕ ಉಳಿದು ಬಂದಿವೆ. ಕ್ರಿ.ಶ. ೧೯ನೆಯ ಶತಮಾನದಲ್ಲಿ ಹಾಡುಗಳ ರೂಪದಲ್ಲಿದ್ದ ಈ ಕೀರ್ತನೆಗಳನ್ನು ಮುದ್ರಣ ಮಾಧ್ಯಮಕ್ಕೆ ಒಳಪಡಿಸಿದಾಗಲೇ ಅವುಗಳು ಮೊದಲ ಬಾರಿಗೆ ಲಿಪಿಬದ್ಧತೆಗೆ ಒಳಗಾದವು. ವಾಸ್ತವವಾಗಿ ಹೀಗಾಗಿ ಒಂದರ್ಥದಲ್ಲಿ ಕೀರ್ತನಾ ಸಾಹಿತ್ಯ ದೇವಾಲಯ

ಮತ್ತು ಮಠಗಳ ಆವರಣದಿಂದ ಬೀದಿ / ಬಯಲು ಸಾರ್ವಜನಿಕ ವಲಯಕ್ಕೂ ಬಂದು ಸಮಾಜದ ಎಲ್ಲ ಶ್ರೇಣಿಗಳಿಗೂ ತಲುಪುವಂತಾಯಿತು. ಕೀರ್ತನೆಯ ಹಾಡುವಿಕೆಯ ಜೊತೆಗೆ ಕುಣಿತ ಸೇರಿಕೊಂಡು ಅದು ಪ್ರದರ್ಶನದ ರೂಪವನ್ನು ತಳೆಯಿತು. ಕ್ರಿ.ಶ. ೧೭ನೆಯ ಶತಮಾನದ ವೇಳೆಗೆ ಕನ್ನಡ ಸಾಹಿತ್ಯ ಸಾಂಗತ್ಯದಂತಹ ಸಾಹಿತ್ಯರೂಪ ಹಾಗೂ ಯಕ್ಷಗಾನದಂತಹ ದೃಶ್ಯರೂಪಗಳಿಗೆ ರೂಪಾಂತರಗೊಂಡಾಗ ಸಾಹಿತ್ಯ ದೇಹಕೇಂದ್ರಿತವಾಗಿ ಪರಿಣಮಿಸಿತು. ಅಭಿನಯ, ವೇಷ, ಸಂಗೀತ ಹಾಗೂ ಸಾಹಿತ್ಯಗಳು ಮೇಳೈಸಿದ ಯಕ್ಷಗಾನದಂತಹ ಈ ಸಾಹಿತ್ಯ ರೂಪಗಳು ಸಮಾಜದ ಎಲ್ಲ ಜಾತಿಗಳಿಗೂ ಪ್ರವೇಶ ಸಾಧ್ಯವಿರುವ ಬಯಲು ಸಾರ್ವಜನಿಕ ವಲಯದ ರೂಪಗಳು. ಬೇಡ–ಗೊಲ್ಲ ಮುಂತಾದ ಬುಡಕಟ್ಟು ಜನಾಂಗದ ನಾಯಕರನ್ನು ಕಾವ್ಯದ ನಾಯಕರನ್ನಾಗಿ ಪಡೆದಿರುವ ನಂಜುಂಡನ (ಕ್ರಿ.ಶ. ೧೫೨೫) 'ಕುಮಾರರಾಮನ ಸಾಂಗತ್ಯ'ದಂತಹ ಕಾವ್ಯಗಳು ಹಾಗೂ ನೂರಾರು ಜನಪದ ಮಹಾಕಾವ್ಯಗಳು ಈ ವ್ಯವಸ್ಥೆಯಲ್ಲಿ ಬರುತ್ತವೆ. ಈವರೆಗೆ ಮಾಡಿದ ಚರ್ಚೆಯನ್ನು ಚಿತ್ರ ೧ ದೃಶ್ಯಾತ್ಮಕವಾಗಿ ವಿವರಿಸುತ್ತದೆ. ಚಿತ್ರ ಲಂಬರೇಖಾತ್ಮಕವಾಗಿ ಚಾರಿತ್ರಿಕತೆಯನ್ನೂ ಸಾಮಾಜಿಕ ಜ್ಞಾನವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ತ್ರಿಕೋಣದ ತುದಿಯಲ್ಲಿ ಲಿಪಿಬದ್ಧ ಜೈನ ಚಂಪೂ ಶೈಲಿಯನ್ನೂ ತದನಂತರದಲ್ಲಿ ಕಾಲಾನುಕ್ರಮಣಿಕೆಯಲ್ಲಿ ಧ್ವನಿಬದ್ಧ ವೀರಶೈವ ವಚನ–ರಗಳೆ, ಗಮಕಶೈಲಿಯಲ್ಲಿ ಪ್ರಚುರಗೊಂಡ ಜೈನ, ಬ್ರಾಹ್ಮಣ ಹಾಗೂ ವೀರಶೈವ ಷಟ್ಪದಿ ಕಾವ್ಯಶೈಲಿಯನ್ನೂ, ದೇಹಕೇಂದ್ರಿತವಾದ ಹಾಡು–ಅಭಿನಯ ಸಂಮಿಳಿತವಾದ ಕೀರ್ತನಾ ಪರಂಪರೆಯನ್ನೂ ಕೊನೆಗೆ ಪ್ರದರ್ಶನ ಪರಂಪರೆಯ ಸಾಂಗತ್ಯ, ಯಕ್ಷಗಾನ ಹಾಗೂ ಜನಪದ ರೂಪಗಳನ್ನೂ ನಾವು ನೋಡಬಹುದು.

ಸರಳರೇಖಾತ್ಮಕ ಕಾಲಘಟ್ಟಗಳ ಅವಧೀಕರಣಕ್ಕೂ ಮೇಲೆ ವಿವರಿಸಿರುವ ಬಹುಮುಖೀ ಜ್ಞಾನವ್ಯವಸ್ಥೆಯ ವಿವರಣೆಗೂ ಗಮನಾರ್ಹ ವ್ಯತ್ಯಾಸಗಳಿವೆ. ಸರಳರೇಖಾತ್ಮಕ ಕಾಲಘಟ್ಟಗಳ




ಚಿತ್ರ ೧: ಕನ್ನಡ ಸಾಹಿತ್ಯ ಚರಿತ್ರೆಯನ್ನು ಬಹುಮುಖಿ ಜ್ಞಾನವ್ಯವಸ್ಥೆಯಾಗಿ ತೋರಿಸುವ ದೃಶ್ಯಾತ್ಮಕ ವಿವರಣೆ

ಮಾದರಿಯಲ್ಲಿ ಕಾಲಘಟ್ಟಗಳ ಅವಧಿ ಸಮಾಪ್ತವಾದ ನಂತರ ಅವುಗಳ ಉಳಿದುಕೊಳ್ಳುವಿಕೆಯನ್ನು ಪರಿಭಾವಿಸಲು ಸಾಧ್ಯವಿಲ್ಲ. ಆದರೆ ವಾಸ್ತವದಲ್ಲಿ ಅವುಗಳ ಪ್ರಭಾವ ಮುಂದುವರೆಯುತ್ತಲೇ ಇರುತ್ತವೆ. ಉದಾಹರಣೆಗೆ ಚಂಪೂಯುಗ ಮುಗಿದು ರಗಳೆ–ಷಟ್ಪದಿಗಳ ಯುಗ ಆರಂಭವಾಯಿತೆಂದರೆ ಚಂಪೂ ಕಾವ್ಯದ ರಚನೆ ಮುಗಿದು ಹೋಯಿತು ಎಂದರ್ಥವಲ್ಲ. ವಾಸ್ತವದಲ್ಲಿ ಚಂಪೂ ಕಾವ್ಯರಚನೆ ಸಾಹಿತ್ಯ ಚರಿತ್ರೆಯ ಅವಧಿಯ ಉದ್ದಕ್ಕೂ ಮುಂದುವರೆಯುತ್ತದೆ. ಕ್ರಿ.ಶ. ೧೬ನೇ ಶತಮಾನದ ವೇಳೆಗೆ ಜೈನ ಕವಿಗಳು ಷಟ್ಪದಿಯಲ್ಲಿ ಕಾವ್ಯ ರಚನೆ ಕೈಗೊಂಡರೆ ವೀರಶೈವ ಕವಿಗಳು ಚಂಪೂ ಕಾವ್ಯರಚನೆಯಲ್ಲಿ ತೊಡಗಿಕೊಂಡು ತಾವು ಆರಂಭಿಸಿದ ಸಾಹಿತ್ಯ ರೂಪಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡಂತೆ ಬರೆಯುತ್ತಾರೆ. ಚಿತ್ರದಲ್ಲಿ ನಿಧಾನವಾಗಿ ವಿಸ್ತರಿಸುತ್ತಾ ಈ ಬೆರೆಯುವಿಕೆಯನ್ನು ನಿರ್ದೇಶಿಸುತ್ತದೆ. ಇದಲ್ಲದೆ ಸರಳರೇಖಾತ್ಮಕ ಕಾಲಘಟ್ಟಗಳ ಮಾದರಿ ಕೇವಲ ಲಿಪಿಕೇಂದ್ರಿತ ಸಾಹಿತ್ಯವನ್ನು ಮಾತ್ರ ಗಮನಿಸಿದರೆ ಬಹುಮುಖಿ ಜ್ಞಾನವ್ಯವಸ್ಥೆಯ ಮಾದರಿ ಕನ್ನಡ ಸಾಹಿತ್ಯದ ಅವಿಭಾಜ್ಯ ಅಂಗಗಳಾದ ಸಂಗೀತ ಮತ್ತು ಪ್ರದರ್ಶನಗಳನ್ನು ಸಾಹಿತ್ಯ ಚರಿತ್ರೆಯ ಕಕ್ಷೆಗೆ ತರಲು ಸಾಧ್ಯಮಾಡುತ್ತದೆ.

ವಿಜಯನಗರ ಸಾಮ್ರಾಜ್ಯದ ಪತನದ ನಂತರ ಆರಂಭವಾಗುವ ದಕ್ಖನಿ ಸುಲ್ತಾನರ ಆಡಳಿತದಿಂದಾಗಿ ಬಹುತೇಕ ಪದ್ಯವೇ ಪ್ರಧಾನವಾಗಿದ್ದ ಸಾಹಿತ್ಯ ರಚನೆ ಸುಮಾರು ಕ್ರಿ.ಶ. ೧೮ನೆಯ ಶತಮಾನದ ವೇಳೆಗೆ ಗದ್ಯದತ್ತ ತಿರುಗುವುದನ್ನೂ ನಾವು ಕಾಣಬಹುದು. ಇದಲ್ಲದೆ ಮೂಲತಃ ಪರ್ಷಿಯದ ಸಾಹಿತ್ಯರೂಪವಾದ 'ನಾಮ' ಕನ್ನಡ ಸಾಹಿತ್ಯಕ್ಕೆ ಪ್ರವೇಶ ಮಾಡುವುದನ್ನು ೧೮೦೭ರಲ್ಲಿ ರಚನೆಯಾದ 'ರಾಜೇಂದ್ರನಾಮೆ'ಯಂತಹ ಕೃತಿಯಲ್ಲಿ ನಾವು ಕಾಣಬಹುದು. ಕೇವಲ ಪರ್ಷಿಯದ ಸಾಹಿತ್ಯರೂಪವಲ್ಲದೆ ಅದರ ಶಬ್ದಕೋಶದ ಪದಗಳೂ ಈ ಕೃತಿಯಲ್ಲಿ ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಬಿಜಾಪುರದ ಆದಿಲ್ ಶಾಹಿ ಸುಲ್ತಾನ ಎರಡನೆಯ ಇಬ್ರಾಹಿಂ ಆದಿಲ್‌ಶಾ ರಚಿಸಿದ ದಕ್ಖನಿ ಭಾಷೆಯಲ್ಲಿರುವ ಹಾಗೂ ಹಿಂದೂ–ಮುಸ್ಲಿಂ ಮಿಶ್ರ ಸಂಸ್ಕೃತಿಯ ಪ್ರತೀಕ ಎಂದು ಹೇಳಲಾಗುವ 'ಕಿತಾಬ್ ಎ ನೌರಸ್' ಕ್ರಿ.ಶ. ೧೬ನೆಯ ಶತಮಾನದ ಕೊನೆಯಲ್ಲಿ ಬಂದ ಕೃತಿ. ಇದಲ್ಲದೆ ದಕ್ಖನಿ, ಕನ್ನಡ, ತೆಲುಗು ಹಾಗೂ ಮರಾಠಿಯಲ್ಲಿ ರಚನೆಯಾಗಿರುವ ಮಿಶ್ರ ಭಾಷೆಯ ಬಿಜಾಪುರದ ಮಹೀಪತಿದಾಸನ ಕೀರ್ತನೆಯಂತಹ ಅನೇಕ ಭಕ್ತಿ ರಚನೆಗಳನ್ನು ಈ ಅವಧಿಯಲ್ಲಿ ನಾವು ಕಾಣುತ್ತೇವೆ. ಬಹುಭಾಷಿಕ ಹಾಗೂ ಬಹುಧಾರ್ಮಿಕ ಸಮುದಾಯಗಳನ್ನು ಉದ್ದೇಶಿಸಿ ರಚನೆಯಾದ ಈ ಬಗೆಯ ಕೀರ್ತನೆಗಳು ಸಾಹಿತ್ಯ ಸಂಸ್ಕೃತಿಯಲ್ಲಿ ಬದಲಾಗುತ್ತಿದ್ದ ಸಂವೇದನೆಗಳಿಗೆ ಒಂದು ಒಳ್ಳೆಯ ನಿದರ್ಶನ.

## ೩.೭. ವಸಾಹತುಶಾಹಿ ಆಗಮನ ಹಾಗೂ ಆಧುನಿಕ ಸಾಹಿತ್ಯ ಸಂಸ್ಕೃತಿ

ಕ್ರಿ.ಶ. ೧೬ನೆಯ ಶತಮಾನದ ಆರಂಭದಲ್ಲಿ ಆಧುನಿಕತೆಯ ಕೇಂದ್ರ ಎಂದು ಪರಿಗಣಿಸಲಾಗುವ ಯೂರೋಪಿನ ವಾಣಿಜ್ಯ ವ್ಯವಸ್ಥೆ ಭಾರತವನ್ನು ಪ್ರವೇಶ ಮಾಡುವುದರ ಮೂಲಕ ಹೊಸದಾದ ಸಾಂಸ್ಕೃತಿಕ ವ್ಯವಸ್ಥೆಯೊಂದು ಆರಂಭವಾಯಿತು. ಕ್ರಿ.ಶ. ೧೪೯೮ರಲ್ಲಿ ಕಲ್ಲಿಕೋಟೆಯನ್ನು ವಾಸ್ಕೋ ಡ ಗಾಮನು ಪ್ರವೇಶಿಸುವುದರ ಮೂಲಕ ಈ ವ್ಯವಸ್ಥೆಯ ಆರಂಭವಾಯಿತಾದರೂ ಪೋರ್ಚುಗೀಸ್, ಡಚ್, ಫ್ರೆಂಚ್ ಹಾಗೂ ಆಂಗ್ಲ ಮುಂತಾದ

ಹಲವಾರು ವಸಾಹತುಶಾಹಿ ಶಕ್ತಿಗಳು ಕಣವನ್ನು ಪ್ರವೇಶ ಮಾಡಿದ್ದರಿಂದ ಅದರ ಪರಿಣಾಮ ತಲೆದೋರಲು ಸಾಕಷ್ಟು ಸಮಯ ಹಿಡಿಯಿತು. ಕರ್ನಾಟಕದಲ್ಲಿ ಕ್ರಿ.ಶ. ೧೭೯೯ರಲ್ಲಿ ಆಂಗ್ಲರು ಟಿಪ್ಪು ಸುಲ್ತಾನನನ್ನು ಸೋಲಿಸಿದ ನಂತರವೇ ಈ ಹೊಸ ಸಾಂಸ್ಕೃತಿಕ ವ್ಯವಸ್ಥೆಯ ಲಕ್ಷಣಗಳು ಸ್ಪಷ್ಟವಾಗಿ ತಲೆದೋರಲು ಆರಂಭವಾಯಿತು. ಗದ್ಯ ಹಾಗೂ ಆಡುನುಡಿಗೆ ಪ್ರಾಧಾನ್ಯ, ಮುದ್ರಣ ಸಂಸ್ಕೃತಿ, ೭೮ ಆರ್.ಪಿ.ಎಂ. ಡಿಸ್ಕುಗಳು, ಗ್ರಾಮೊಫ಼ೋನ್ ಹಾಗೂ ಕ್ಯಾಸೆಟ್ ಸಂಸ್ಕೃತಿ, ಹಾಗೂ ಸುಶಿಕ್ಷಿತ ಸಮುದಾಯಕ್ಕೆ ಪ್ರಾಧಾನ್ಯವಿದ್ದ ಈ ವ್ಯವಸ್ಥೆ ಹೊಸ ಬಗೆಯ ಸಾಕ್ಷರತೆ, ಓದುವ ವರ್ಗ ಹಾಗೂ ಅನುವಾದಗಳ ಪರಿಕಲ್ಪನೆಗಳನ್ನು ಮೊದಲ ಬಾರಿಗೆ ಕನ್ನಡ ಸಾಂಸ್ಕೃತಿಕ ವಲಯದೊಳಕ್ಕೆ ತಂದಿತು. ಚರಿತ್ರೆ, ಭೂಗೋಳ ಹಾಗೂ ನೀತಿಗಳು ಶಿಕ್ಷಣದ ಪಠ್ಯಕ್ರಮದ ಭಾಗವಾಗುವುದರ ಮೂಲಕ ಹೊಸ ಬಗೆಯ ಅರಿಯುವ ವಿಧಾನ ರೂಪುಗೊಂಡಿತು. ಸಾಹಿತ್ಯ ಸಂಸ್ಕೃತಿಯ ಚರಿತ್ರೆಯ ರಚನೆ ಕೂಡ ಈ ಬಗೆಯ ಚಾರಿತ್ರಿಕ ಚಿಂತನೆಯ ಪರಿಣಾಮವಾಗಿ ಹುಟ್ಟಿದ ಯೋಚನಾ ಕ್ರಮವಾಗಿದೆ. ತಲೆತಲಾಂತರಗಳಿಂದ ಪಾರಂಪರಿಕವಾಗಿ ಉಳಿದುಕೊಂಡು ಬಂದಿದ್ದ ಜಾತಿವ್ಯವಸ್ಥೆಯನ್ನು ಒಂದತ್ತ ಮತಾಂತರದ ಮೂಲಕ ಇನ್ನೊಂದತ್ತ ಶಿಕ್ಷಣ ವ್ಯವಸ್ಥೆಯ ಮೂಲಕ ಬದಲಿಸಿ ಹೊಸ ಸಾಮಾಜಿಕ ವ್ಯವಸ್ಥೆಯೊಂದನ್ನು ತರಲು ಪ್ರಯತ್ನ ಮಾಡಲಾಯಿತು. ಇಂತಹ ಮೂಲಭೂತ ಬದಲಾವಣೆಗಳನ್ನು ಉದ್ದೇಶಿಸಿದ ಯೋಜನೆ ಗಳಿಂದಾಗಿ ತಾತ್ಕಾಲಿಕವಾದ ಸಾಂಸ್ಕೃತಿಕ ವಿಘಟನೆ ಹಾಗೂ ವಿಪ್ಲವಗಳನ್ನು ಉಂಟು ಮಾಡಿತಾದರೂ ಅದರ ದೀರ್ಘಕಾಲಿಕ ಪರಿಣಾಮಗಳು ಹೊಸಗನ್ನಡ ಸಾಹಿತ್ಯ ಸಂಸ್ಕೃತಿಯ ಉಗಮಕ್ಕೆ ಕಾರಣವಾಯಿತು. ಹೊಸ ಕವಿತೆ, ಕಾದಂಬರಿ, ನಾಟಕ ಮುಂತಾದ ಸಾಹಿತ್ಯರೂಪಗಳೂ ಪ್ರಬಂಧ, ಆತ್ಮಚರಿತ್ರೆ ಹಾಗೂ ಪ್ರವಾಸ ಕಥನ ಮುಂತಾದ ಸಾಹಿತ್ಯೇತರ ರೂಪಗಳೂ ಆಧುನಿಕ ಕನ್ನಡ ಸಾಹಿತ್ಯ ಸಂಸ್ಕೃತಿಯ ಪ್ರಮುಖ ಅಭಿವ್ಯಕ್ತಿ ರೂಪಗಳಾಗಿವೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಹಾಗೂ ಸ್ತ್ರೀವಾದಿ ಸಂಕಥನಗಳ ಮೂಲಕ ಇದರ ಭಿನ್ನ ನೆಲೆಗಳು ಹಾಗೂ ಬೆಳವಣಿಗೆಗಳನ್ನು ಅರ್ಥಮಾಡಿಕೊಳ್ಳಲಾಗುತ್ತದೆ.

## ೩.೮. ಸಾರಾಂಶ

ಸಾಹಿತ್ಯ ಚರಿತ್ರೆಯ ರಚನೆ ರಾಷ್ಟ್ರೀಯ ಸಂಕಥನದ ಭಾಗವಾಗಿ ಆದ ಬೆಳವಣಿಗೆ. ರಾಷ್ಟ್ರಗಳ ಸಾಂಸ್ಕೃತಿಕ ಸಂಪತ್ತಿನ ಒಂದು ಭಾಗವಾಗಿ ಸಾಹಿತ್ಯ ಹಾಗೂ ಕಲೆಗಳನ್ನು ಪರಿಗಣಿಸಿದ ಪರಿಣಾಮವಾಗಿ ಹಾಗೂ ಸಾಹಿತ್ಯ ಒಂದು ಶೈಕ್ಷಣಿಕ ಶಿಸ್ತಾಗಿ ಬೆಳವಣಿಗೆ ಪಡೆದುದರ ಪರಿಣಾಮವಾಗಿ ಸಾಹಿತ್ಯ ಚರಿತ್ರೆ ರೂಪುಗೊಂಡಿತು. ಅವಧೀಕರಣ ಸಾಹಿತ್ಯ ಚರಿತ್ರೆಯ ಅವಿಭಾಜ್ಯ ಅಂಗವಾದರೂ ಅದು ತುಂಬಾ ಸಮಸ್ಯಾತ್ಮಕವಾದ ಪರಿಕಲ್ಪನೆ. ಏಕಭಾಷಿಕ ಸಾಹಿತ್ಯ ಚರಿತ್ರೆಯ ರಚನೆ ಮಾದರಿಯೇ ಪ್ರಧಾನ ಮಾದರಿಯಾದರೂ ಬಹುಭಾಷಿಕ ಹಾಗೂ ವಸಾಹತು ಮಾದರಿಯ ಸಾಹಿತ್ಯ ಚರಿತ್ರೆಗಳ ರಚನೆಯ ಪ್ರಯತ್ನ ಒಂದು ದೊಡ್ಡ ಬೆಳವಣಿಗೆ. ಅದೇ ರೀತಿ ತೌಲನಿಕ ಹಾಗೂ ಬಹುಮಾಧ್ಯಮ ಆಧಾರಿತ ಸಾಹಿತ್ಯ ಚರಿತ್ರೆಗಳೂ ಅಪೇಕ್ಷಣಿಯವಾದುದು. ಕನ್ನಡ ಸಾಹಿತ್ಯ ಚರಿತ್ರೆಯನ್ನು ಪಾರಂಪರಿಕವಾದ ಅವಧೀಕರಣ ಮಾದರಿಗಿಂತ ಭಿನ್ನವಾಗಿ ಅವುಗಳನ್ನು ಲಿಪಿಕೇಂದ್ರಿತ, ಧ್ವನಿಕೇಂದ್ರಿತ ಹಾಗೂ ದೇಹಕೇಂದ್ರಿತ ಪ್ರತಿನಿಧೀಕರಣ ವ್ಯವಸ್ಥೆಗಳೆಂದು ಇಲ್ಲಿ ನೋಡಲಾಗಿದೆ. ದೂರದ

ಓದಿನ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕನ್ನಡ ಸಾಹಿತ್ಯ ಸಂಸ್ಕೃತಿಯ ಚರಿತ್ರೆಯಾಗಿ ಓದಲು ಪ್ರಯತ್ನ ಮಾಡಲಾಗಿದೆ.

**ಅಭ್ಯಾಸ**

ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಸಾಹಿತ್ಯ ಚರಿತ್ರೆ ಯಾವ ಕಾರಣಕ್ಕೆ ರಚನೆಯಾಯಿತು?

೨. ಸಾಹಿತ್ಯ ಚರಿತ್ರೆ ಮತ್ತು ಸಾಹಿತ್ಯ ಸಂಸ್ಕೃತಿಯ ಚರಿತ್ರೆಗಳಿಗಿರುವ ಭಿನ್ನತೆಯನ್ನು ಚರ್ಚಿಸಿ?

೩. ಸಾಹಿತ್ಯ ಚರಿತ್ರೆಯ ಆರಂಭಿಕ ಬೆಳವಣಿಗೆಯನ್ನು ವಿವರಿಸಿ.

೪. ಭಾರತೀಯ ಸಾಹಿತ್ಯ ಚರಿತ್ರೆಯ ಬೆಳವಣಿಗೆಯನ್ನು ಪರಿಚಯ ಮಾಡಿಕೊಡಿ.

೫. ಕನ್ನಡ ಸಾಹಿತ್ಯ ಚರಿತ್ರೆಯ ಬೆಳವಣಿಗೆಯನ್ನು ಕುರಿತು ಬರೆಯಿರಿ.

೬. ೧೯೭೦ರ ದಶಕ ಕನ್ನಡ ಸಾಹಿತ್ಯ ಚರಿತ್ರೆಯ ಸುಗ್ಗಿಯ ಕಾಲ? ಚರ್ಚಿಸಿ.

೭. ಸಾಹಿತ್ಯ ಸಂಸ್ಕೃತಿಯ ಚರಿತ್ರೆ ಎಂದರೇನು? ಅದು ಸಾಹಿತ್ಯ ಚರಿತ್ರೆಗಿಂತ ಹೇಗೆ ಭಿನ್ನ? ಚರ್ಚಿಸಿ.

೮. ಭಾಷಿಕ ಹಾಗೂ ಸಾಂಸ್ಕೃತಿಕ ತಿರುವುಗಳು ಸಾಹಿತ್ಯ ಚರಿತ್ರೆಯ ಮೇಲೆ ತಂದ ಪರಿಣಾಮಗಳಾವುವು?

೯. ಸ್ಥಳದ ತಿರುವು ಸಾಹಿತ್ಯ ಚರಿತ್ರೆಯ ಮೇಲೆ ಮಾಡಿದ ಪರಿಣಾಮಗಳೇನು?

೧೦. ಸಾಹಿತ್ಯ ಚರಿತ್ರೆಯಲ್ಲಿ ಅವಧೀಕರಣದ ಸಮಸ್ಯೆಗಳನ್ನು ಕುರಿತು ಬರೆಯಿರಿ.

೧೧. ದೂರದ ಓದು ಎಂದರೇನು?

೧೨. ತೌಲನಿಕ ಸಾಹಿತ್ಯ ಚರಿತ್ರೆಗಳ ಮೌಲಿಕತೆಯನ್ನು ವಿವರಿಸಿ.

೧೩. ಕನ್ನಡ ಸಾಹಿತ್ಯ ಚರಿತ್ರೆಯ ವಿವಿಧ ಅವಧೀಕರಣದ ವಿನ್ಯಾಸಗಳಾವುವು?

೧೪. ಪಟ್ಟಿಕೆ ೧ರಲ್ಲಿ ಕೊಟ್ಟಿರುವ ಕನ್ನಡ ಸಾಹಿತ್ಯದ ಅವಧೀಕರಣಗಳ ಒಟ್ಟು ನೋಟವನ್ನು ನೋಡಿ, ಅದನ್ನು ಅರ್ಥೈಸುವ ಪ್ರಯತ್ನ ಮಾಡಿ.

೧೫. ಚಿತ್ರ ೧ನ್ನು ಆಧರಿಸಿ ಕನ್ನಡ ಸಾಹಿತ್ಯದ ಒಟ್ಟುನೋಟವನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡಿ.

೧೬. ಲಿಪಿಕೇಂದ್ರಿತ, ಧ್ವನಿಕೇಂದ್ರಿತ ಹಾಗೂ ದೇಹಕೇಂದ್ರಿತ ಪರಿಕಲ್ಪನೆಗಳನ್ನು ಕನ್ನಡ ಸಾಹಿತ್ಯಕ್ಕೆ ಅನ್ವಯಿಸಿ ವಿವರಿಸಿ.

೧೭. ಹಿಂದೂ–ಮುಸ್ಲಿಮ್ ಸಂಪರ್ಕದಿಂದ ಕನ್ನಡ ಸಾಹಿತ್ಯದ ಮೇಲೆ ಆಗಿರುವ ಪರಿಣಾಮ ವೇನು?

೧೮. ಆಧುನಿಕ ಸಾಹಿತ್ಯದ ಪ್ರೇರಣೆ ವಸಾಹತುಶಾಹಿಯಿಂದ ಆಯಿತು? ಚರ್ಚಿಸಿ.

ಪಠ್ಯವನ್ನು ಸಿದ್ಧಪಡಿಸಿದವರು: **ಪ್ರೊ. ಟಿ.ಎಸ್. ಸತ್ಯನಾಥ್**

## ಘಟಕ ೪

## ಕರ್ನಾಟಕದ ಸಾಂಸ್ಕೃತಿಕ ಹಿನ್ನೆಲೆ

### ಹಿನ್ನೆಲೆ

ಸಂಸ್ಕೃತಿ ಎಂಬ ಪದ ಇಂದು ಇಂಗ್ಲಿಷಿನ 'ಕಲ್ಚರ್' ಎಂಬ ಪದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತಿದೆ ಹಾಗೂ ಸಾಹಿತ್ಯ ಮತ್ತು ಕಲೆಗಳಿಗೆ ಸಂಬಂಧಿಸಿದ ಸಾಮುದಾಯಿಕ ಹಿರಿಮೆ ಎಂಬ ಅರ್ಥವನ್ನು ಹೊಂದಿದೆ. ಆದರೆ ಕೇವಲ ಹದಿನೆಂಟನೆಯ ಶತಮಾನದಿಂದ ಈಚೆಗಷ್ಟೇ ಈ ಅರ್ಥ ಬಂದಿದೆ. ಭಾರತೀಯ ಪರಂಪರೆಯಲ್ಲಿ ೬೪ ಕಲೆಗಳ ಪ್ರಸ್ತಾಪ ಬರುತ್ತದೆ. ಆದರೆ ಅವುಗಳಲ್ಲಿ ಅನೇಕ ಕಲೆಗಳನ್ನು ಇಂದು ಕಲಾತ್ಮಕವಾದವು ಎಂದು ಪರಿಗಣಿಸಲಾಗುವುದಿಲ್ಲ. ಕಳೆದ ೧೫೦ ವರ್ಷಗಳ ಕಲಾತ್ಮಕ ಅಧ್ಯಯನಗಳ ಹಿನ್ನೆಲೆಯಲ್ಲಿ ವಾಸ್ತುಶಿಲ್ಪ ಕಲೆ, ಚಿತ್ರಕಲೆ, ಸಂಗೀತ ಕಲೆ, ನಾಟ್ಯಕಲೆ, ಶಿಲ್ಪಕಲೆಗಳನ್ನು ಲಲಿತಕಲೆಗಳು ಎಂದು ಪರಿಗಣಿಸುವ ಪದ್ಧತಿ ಬೆಳೆದಿದೆ. ಅವುಗಳಲ್ಲಿ ಮೂರು ಪ್ರಮುಖ ರೂಪಗಳನ್ನು ಇಲ್ಲಿ ಪರಿಚಯ ಮಾಡಿಕೊಡಲಾಗಿದೆ. ವಾಸ್ತುಶಿಲ್ಪ ಕಲೆ, ಚಿತ್ರಕಲೆ ಹಾಗೂ ಸಂಗೀತ ಕಲೆಗಳನ್ನು ಕುರಿತಂತೆ ಮೂರು ಭಾಗಗಳಲ್ಲಿ ಈ ಘಟಕವನ್ನು ರೂಪಿಸಲಾಗಿದೆ. ಒಂದರ್ಥದಲ್ಲಿ ಅವುಗಳ ಬೆಳವಣಿಗೆ ಹಾಗೂ ಬದಲಾವಣೆಗಳಲ್ಲಿ ಸಾವಯವ ನಿರಂತರತೆಯನ್ನೂ ನೋಡುತ್ತೇವಾದರೆ ಇನ್ನೊಂದರ್ಥದಲ್ಲಿ ಅವುಗಳ ಪರಸ್ಪರ ಸಂಬಂಧಗಳನ್ನು ಮನಗಾಣುತ್ತೇವೆ. ಈ ಹಿನ್ನೆಲೆಯಲ್ಲಿ ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ, ಇಂಡೋ–ಮುಸ್ಲಿಮ್ ಹಾಗೂ ಆಧುನಿಕ ಕಾಲಗಳು ಒಂದರಿಂದ ಒಂದಕ್ಕೆ ಸಲಿಲವಾಗಿ ಹರಿಯುತ್ತವೆ. ಅದೇ ಸಂದರ್ಭದಲ್ಲಿ ವಾಸ್ತುಶಿಲ್ಪ ಕಲೆ, ಚಿತ್ರಕಲೆ ಹಾಗೂ ಸಂಗೀತ ಕಲೆಗಳು ಪರಸ್ಪರ ಪೋಷಕವಾಗಿ ಬೆಳೆದಿವೆ. ಪಾರಂಪರಿಕವಾಗಲಿ ಅಥವಾ ಆಧುನಿಕವಾಗಲಿ, ಶಾಸ್ತ್ರೀಯವಾಗಲಿ ಅಥವಾ ಜನಪ್ರಿಯವಾಗಲಿ, ಅಥವಾ ಜಾನಪದವಾಗಲಿ, ಅವುಗಳ ನಡುವೆ ಗೋಡೆಗಳಿಲ್ಲ; ಭಾರತೀಯ ಸಾಂಸ್ಕೃತಿಕ ಅಂಶಗಳು ಒಂದತ್ತ ಶಿಸ್ತುಗಳ ನಡುವೆ ಇನ್ನೊಂದತ್ತ ಮಾಧ್ಯಮಗಳ ನಡುವೆ ಯಾವ ಅಡೆತಡೆ ಇಲ್ಲದಂತೆ ಪ್ರವಹಿಸುತ್ತಿರುತ್ತವೆ. ಹೀಗಾಗಿ ಕರ್ನಾಟಕದ ಸಾಂಸ್ಕೃತಿಕ ಹಿನ್ನೆಲೆಯನ್ನು ನಾವು ಒಂದು ಒಟ್ಟುನೋಟವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಈ ಘಟಕದ ವಿವರಣೆಯನ್ನು ಚಿತ್ರಗಳೊಂದಿಗೆ ಪರಿಚಯಿಸುವ ಮೂಲಕ ಕರ್ನಾಟಕದ ಸಂಸ್ಕೃತಿ ನಿಮ್ಮ ಕಣ್ಣಮುಂದೆ ನಿಲ್ಲುವಂತೆ ಮಾಡಲು ಪ್ರಯತ್ನಿಸಲಾಗಿದೆ.

**ವಿಷಯಾನುಕ್ರಮಣಿಕೆ**


೪.೦. ಉದ್ದೇಶ

೪.೧. ಪೀಠಿಕೆ

೪.೨. ವಾಸ್ತುಶಿಲ್ಪ

೪.೨.೧. ಕರ್ನಾಟಕದಲ್ಲಿ ವಾಸ್ತುರಚನೆಯ ಉಗಮ

೪.೨.೨. ದೇವಾಲಯ ವಾಸ್ತುರಚನೆಯ ಕಲೆ

೪.೨.೩. ವಾಸ್ತುಶೈಲಿಯ ಪ್ರಕಾರಗಳು

೪.೨.೪. ಪ್ರಾಚೀನ ವಾಸ್ತುಶಾಸ್ತ್ರ ಕೃತಿಗಳು

೪.೨.೫. ಕರ್ನಾಟಕದ ದೇವಾಲಯಗಳ ವಾಸ್ತುಕಲೆ

೪.೩. ಚಿತ್ರಕಲೆ

೪.೩.೧. ಭಿತ್ತಿ ಚಿತ್ರಕಲೆ

೪.೩.೨. ಚಿಕಣಿ ಚಿತ್ರಕಲೆ

೪.೩.೩. ಮೈಸೂರು ಶೈಲಿಯ ಚಿತ್ರಕಲೆ

೪.೩.೪. ನವೋದಯ ಚಿತ್ರಕಲೆ

೪.೪. ಸಂಗೀತ

೪.೫. ಸಾರಾಂಶ


## ೪.೦. ಉದ್ದೇಶ

೧. ಈ ಘಟಕದ ಅಧ್ಯಯನದಿಂದ ಕರ್ನಾಟಕದ ವಾಸ್ತುಶಿಲ್ಪಕಲೆ, ಚಿತ್ರಕಲೆ ಹಾಗೂ ಸಂಗೀತ ಕಲೆಗಳ ಪರಂಪರೆಯನ್ನು ತಿಳಿಯಬಹುದಾಗಿದೆ.

೨. ಭಾರತೀಯ ಪರಂಪರೆಯಲ್ಲಿ ಉಗಮಗೊಂಡ ವಿವಿಧ ವಾಸ್ತುಶೈಲಿಗಳ ಕಲಾ ವೈಶಿಷ್ಟ್ಯತೆಗಳನ್ನು ಅರಿಯಬಹುದಾಗಿದೆ.

೩. ಕರ್ನಾಟಕದ ಅತ್ಯಂತ ಮಹತ್ವದ ಪ್ರಾಚೀನ ದೇವಾಲಯಗಳ ರಚನಾಶೈಲಿ ಮತ್ತು ಅವುಗಳ ವಿಕಾಸಗಳ ಚರಿತ್ರೆಯನ್ನು ಗುರುತಿಸುವುದಾಗಿದೆ.

೪. ವಾಸ್ತುಶಿಲ್ಪ ಇತಿಹಾಸದ ಕಲಿಕೆಯಿಂದ ನಾಡಿನ ಅಮೂರ್ತ ಮತ್ತು ಮೂರ್ತ ಸ್ವರೂಪದ ಪರಂಪರೆಯ ವಿವಿಧ ಆಯಾಮಗಳನ್ನು ಅರಿಯಬಹುದಾಗಿದೆ.

೫. ನಾಡಿನ ಚಿತ್ರಕಲೆಯ ಚರಿತ್ರೆಯ ಅವಲೋಕನ ಮತ್ತು ಮಹತ್ವದ ಕಲಾಶೈಲಿಗಳ ಮಾಹಿತಿಗಳನ್ನು ತಿಳಿಯಬಹುದಾಗಿದೆ.

೬. ಸಂಗೀತ ಕಲೆ ಮತ್ತು ಅದರ ಪರಂಪರೆಯ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ತಿಳಿಯ ಬಹುದು.

## ೪.೧. ಪೀಠಿಕೆ

ಕರ್ನಾಟಕ ರಾಜ್ಯ ಭೌಗೋಳಿಕವಾಗಿ ಬಹುವಿಸ್ತಾರದ ನಾಡು. ಇದನ್ನು ಕರಾವಳಿ, ಮಲೆನಾಡು, ಬಯಲುಸೀಮೆ ಎಂದು ವಿಂಗಡಿಸಬಹುದು. ತುಂಗಭದ್ರಾ, ಕಾವೇರಿ, ಕೃಷ್ಣಾ, ಭೀಮಾ ಇತ್ಯಾದಿ ದೊಡ್ಡ ನದಿಗಳಿಂದ ಕೂಡಿದ ರಾಜ್ಯವು ಪ್ರಾಚೀನದಿಂದಲೂ ವಿಭಿನ್ನ ವಾಸ್ತುಶಿಲ್ಪಕಲೆಗಳಿಗೆ ಹೆಸರುವಾಸಿಯಾಗಿದೆ. ಶಾತವಾಹನರ ಆಳ್ವಿಕೆಯೊಂದಿಗೆ ಕರ್ನಾಟಕದಲ್ಲಿ ವಾಸ್ತುಕಲೆ ಪ್ರಾರಂಭಗೊಂಡರೂ ಕದಂಬ ಮತ್ತು ಚಾಲುಕ್ಯರ ಆಳ್ವಿಕೆಯಲ್ಲಿ ವಿವಿಧ ಪ್ರಕಾರಗಳನ್ನು ಮೈಗೂಡಿಸಿಕೊಂಡು ವಿಶಿಷ್ಟ ಶೈಲಿಯಾಗಿ ಮೂಡಿಬಂದಿತು. ಕರ್ನಾಟಕದಲ್ಲಿ ವಾಸ್ತುಕಲೆಯ ಬೆಳವಣಿಗೆಯು ತನ್ನ ವಿಶಿಷ್ಟ ಭೌಗೋಳಿಕ ಕಾರಣದಿಂದ ಹಾಗೂ ರಾಜ್ಯದ ವಿವಿಧ ಭಾಗಗಳಲ್ಲಿ ಕಂಡುಬರುವ ವಿಭಿನ್ನ ಶಿಲಾಸಂಪತ್ತಿನಿಂದ ಹಂತ ಹಂತವಾಗಿ ಬೆಳೆದುಬಂದಿತು. ಶಾತವಾಹನರಿಂದ ಆರಂಭಗೊಂಡ ಈ ಪ್ರಕ್ರಿಯೆಯು ಬನವಾಸಿಯ ಕದಂಬರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಗಂಗರು, ಹೊಯ್ಸಳರು, ಸೇವುಣರು, ವಿಜಯನಗರ, ನಂತರದ ಪಾಳೆಯಗಾರರು ಹಾಗೂ ಬ್ರಿಟಿಷ್ ಅಧೀನದಲ್ಲಿ ಯೂರೋಪಿಯನ್ ಶೈಲಿಯ ವಾಸ್ತುಕಲೆಯ ಪ್ರಯೋಗಗಳ ಪರಿಣಾಮವಾಗಿ ವಿಭಿನ್ನವೂ ಹಾಗೂ ವಿಶಿಷ್ಟವೂ ಆಗಿ ಕಂಡುಬರುತ್ತದೆ. ಸ್ಥಳೀಯ ವಾಸ್ತುಶೈಲಿಯ ಜೊತೆಗೆ ಕ್ರಿ.ಶ. ೧೫ನೆಯ ಶತಮಾನದಲ್ಲಿ ಇಂಡೋ-ಇಸ್ಲಾಮಿಕ್ ಶೈಲಿಯ ವಾಸ್ತುಕಲೆಯೂ ಬಹಮನಿ, ಆದಿಲಶಾಹಿಗಳು, ಸವಣೂರಿನ ನವಾಬರು ಮತ್ತು ಟಿಪ್ಪು ಸುಲ್ತಾನರ ಅವಧಿಯಲ್ಲಿ ವಿಕಸನಗೊಂಡವು. ಇದರ ಜೊತೆಗೆ ಲಲಿತಕಲೆಗಳಲ್ಲಿ ಒಂದಾದ ಚಿತ್ರಕಲೆಯನ್ನು ಕುರಿತು ಮತ್ತು ಅದರ ವಿಭಿನ್ನ ಶೈಲಿಗಳು ನಾಡಿನಲ್ಲಿ ಬೆಳೆದು ಬಂದ ಬಗೆಯನ್ನು ಸ್ಥೂಲವಾಗಿ ಅವಲೋಕನ ಮಾಡಲಾಗಿದೆ. ಅದರಂತೆ ಭಾರತದ ಸಂಗೀತ ಕಲೆಗೆ ಕರ್ನಾಟಕದ ಕೊಡುಗೆಗಳು ಹಾಗೂ ಸಂಗೀತ ಪ್ರಕಾರಗಳ ಕುರಿತು ಚರ್ಚಿಸಲಾಗಿದೆ.

## ೪.೨. ವಾಸ್ತುಶಿಲ್ಪ

ಭಾರತದಲ್ಲಿ ಅರವತ್ತನಾಲ್ಕು ಕಲೆಗಳಿವೆ ಎಂದು ಪ್ರಾಚೀನ ಶಾಸ್ತ್ರಗಳು ವಿವರಿಸುತ್ತವೆ. ಅವುಗಳಲ್ಲಿ ವಾಸ್ತುಶಿಲ್ಪ ಕಲೆ, ಚಿತ್ರಕಲೆ, ಸಂಗೀತ ಕಲೆ, ನಾಟ್ಯಕಲೆ, ಶಿಲ್ಪಕಲೆಗಳನ್ನು ಲಲಿತಕಲೆಗಳು ಎಂದು ವಿಂಗಡಿಸಲಾಗುತ್ತದೆ. ಈ ಲಲಿತಕಲೆಗಳು ಮಾನವನ ಕಲಾಭಿವ್ಯಕ್ತಿಗಳ ರೂಪಕಗಳೆಂದು ಕರೆಯಲಾಗುತ್ತದೆ. ಕರ್ನಾಟಕದಲ್ಲಿ ಲಲಿತಕಲೆಗಳು ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ಪ್ರಾದೇಶಿಕ ಶೈಲಿಗಳನ್ನು ಮೈಗೂಡಿಸಿಕೊಂಡು ಬೆಳೆದುಬಂದ ವಾಸ್ತುಶಿಲ್ಪಕಲೆ, ಚಿತ್ರಕಲೆ ಮತ್ತು ಸಂಗೀತಕಲೆಗಳ ಸ್ಥೂಲ ಅವಲೋಕನ ಇಲ್ಲಿ ಮಾಡಲಾಗಿದೆ.

### ೪.೨.೧. ಕರ್ನಾಟಕದಲ್ಲಿ ವಾಸ್ತುರಚನೆಯ ಉಗಮ

ಕರ್ನಾಟಕದಲ್ಲಿ ಹರಪ್ಪಾ ಸಂಸ್ಕೃತಿಯಷ್ಟು ಪುರಾತನ ನಗರಗಳ ಅವಶೇಷಗಳು ದೊರಕಿಲ್ಲ. ಆದರೆ ಪ್ರಾಗೈತಿಹಾಸಿಕ ಕಾಲವಾದ ನೂತನ ಶಿಲಾಯುಗ ಕಾಲದ (ಸುಮಾರು ೫೦೦೦ ವರ್ಷಗಳಷ್ಟು ಪುರಾತನ) ನೆಲೆಗಳಲ್ಲಿ ವಾಸಕ್ಕಾಗಿ ಗುಡಿಸಲುಗಳನ್ನು ಮರದ

ಕೋಲು ಮತ್ತು ಮಣ್ಣಿನಿಂದ ನಿರ್ಮಿಸಿದ ಉದಾಹರಣೆಗಳನ್ನು ಕಾಣಬಹುದು. ಕರ್ನಾಟಕದಲ್ಲಿ ಟಿ. ನರಸೀಪುರ, ಬೂದಿಹಾಳ, ಸಂಗನಕಲ್ಲು, ಕುಪ್ಪಗಲ್ಲು, ಕೊಡೆಕಲ್ಲು ಇತ್ಯಾದಿ ಸ್ಥಳಗಳಲ್ಲಿ ವಾಸದ ಗುಡಿಸಲುಗಳ ಅವಶೇಷಗಳನ್ನು ಶೋಧಿಸಲಾಗಿದೆ. ಇವು ನಾಡಿನ ವಾಸ್ತುಶಿಲ್ಪದ ಆರಂಭಿಕ ಹಂತವೆಂದು ಗುರುತಿಸಬಹುದು. ಕ್ರಿ.ಪೂ. ೩ನೆಯ ಶತಮಾನದಲ್ಲಿ ಆಳಿದ ಮೌರ್ಯ ಚಕ್ರವರ್ತಿ ಅಶೋಕನ ಶಿಲಾಶಾಸನಗಳು ಕರ್ನಾಟಕದಲ್ಲಿ ದೊರೆತಿದ್ದರೂ ಆ ಕಾಲಾವಧಿಯ ವಾಸ್ತು ರಚನೆಯ ಅವಶೇಷಗಳು ಕರ್ನಾಟಕದಲ್ಲಿ ದೊರೆತಿಲ್ಲ. ಆದರೆ ಮೌರ್ಯರ ನಂತರ ಆಳ್ವಿಕೆಗೆ ಬಂದ ಶಾತವಾಹನರ ಕಾಲದಲ್ಲಿ ಬೌದ್ಧ ಮತದ ಧಾರ್ಮಿಕ ವಾಸ್ತುಕಲೆಯೆಂದು ಗುರುತಿಸಲ್ಪಡುವ ಬೌದ್ಧ ಸ್ತೂಪಗಳು ಮತ್ತು ವಿಹಾರಗಳನ್ನು ಕನ್ನಡ ನಾಡಿನ ಪ್ರಾಚೀನ ನೆಲೆಗಳಾದ ಸನ್ನತಿ, ಬನವಾಸಿ, ಗುಡ್ನಾಪುರ, ವಡಗಾಂವ–ಮಾಧವಪುರ, ಚಂದ್ರವಳ್ಳಿ, ಕುರುಗೋಡು, ಐಹೊಳೆ ಮುಂತಾದ ಸ್ಥಳಗಳಲ್ಲಿ ಶೋಧಿಸಲಾಗಿದೆ. ಕ್ರಿ.ಪೂ. ೧ನೆಯ ಶತಮಾನದಿಂದ ಕ್ರಿ.ಶ. ೩ನೆಯ ಶತಮಾನದವರೆಗೆ ಆಳ್ವಿಕೆ ನಡೆಸಿದ ಶಾತವಾಹನರ ಕಾಲದ ಬೌದ್ಧ ವಾಸ್ತುಶಿಲ್ಪ ಕಲೆಯು ದಕ್ಷಿಣ ಭಾರತದ ವಾಸ್ತುಶಿಲ್ಪಕಲೆಯ ಆರಂಭದ ಹಂತವೆಂದು ವಿದ್ವಾಂಸರು ಗುರುತಿಸುತ್ತಾರೆ. ಇವರ ಕಲೆಯು ಬೌದ್ಧ ಧರ್ಮದ ಹಿನ್ನಲೆಯಲ್ಲಿ ಮೂಡಿಬಂದಿದ್ದು, ಇದು ದಾಕ್ಷಿಣಾತ್ಯ ಕಲೆಯ ಶೈಲಿಯ ಆರಂಭಿಕ ಹಂತವೆಂದು ಗುರುತಿಸಲಾಗಿದೆ. ಶಾತವಾಹನರ ಶಿಲ್ಪಕಲೆಯ ನಿದರ್ಶನವಾಗಿ ಚಿತ್ರ ೧ರಲ್ಲಿ ಕೊಟ್ಟಿರುವ ಕನಗನಹಳ್ಳಿಯ ಬೌದ್ಧ ಅವಶೇಷಗಳಲ್ಲಿ ದೊರೆತ ಧರ್ಮಚಕ್ರದ ಲಾಂಛನವನ್ನು ನೋಡಬಹುದು.



ಚಿತ್ರ ೧: ಬೌದ್ಧ ಧರ್ಮಚಕ್ರದ ಲಾಂಛನ, ಕನಗನಹಳ್ಳಿ

ಶಾತವಾಹನರ ಆಳ್ವಿಕೆಯೊಂದಿಗೆ ಕರ್ನಾಟಕದಲ್ಲಿ ವಾಸ್ತುಕಲೆ ಪ್ರಾರಂಭಗೊಂಡರೂ ಕದಂಬ ಮತ್ತು ಚಾಲುಕ್ಯರ ಆಳ್ವಿಕೆಯಲ್ಲಿ ವಿವಿಧ ಅಂಶಗಳನ್ನು ಮೈಗೂಡಿಸಿಕೊಂಡು ವಿಶಿಷ್ಟ ಶೈಲಿಯಾಗಿ ಮೂಡಿಬಂದಿತು. ಕರ್ನಾಟಕದಲ್ಲಿ ವಾಸ್ತುಕಲೆಯ ಬೆಳವಣಿಗೆಯು ತನ್ನ ವಿಶಿಷ್ಠ ಭೌಗೋಳಿಕ ಕಾರಣದಿಂದ ಹಾಗೂ ರಾಜ್ಯದ ವಿವಿಧ ಭಾಗಗಳಲ್ಲಿ ಕಂಡುಬರುವ

ವಿಭಿನ್ನ ಶಿಲಾಸಂಪತ್ತಿನ ಕಾರಣದಿಂದಾಗಿ ಹಂತ ಹಂತವಾಗಿ ಬೆಳೆದುಬಂದಿತು. ಶಾತವಾಹನರಿಂದ ಆರಂಭಗೊಂಡ ಈ ಪ್ರಕ್ರಿಯೆಯು ಬನವಾಸಿಯ ಕದಂಬರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಗಂಗರು, ಹೊಯ್ಸಳರು, ಸೇವುಣರು, ವಿಜಯನಗರದ ಅರಸರು, ನಂತರದ ಪಾಳೆಯಗಾರರು ಹಾಗೂ ಬ್ರಿಟಿಷ್ ಅಧೀನದಲ್ಲಿ ಯೂರೋಪಿಯನ್ ಶೈಲಿಯ ವಾಸ್ತುಕಲೆಯ ಪ್ರಯೋಗಗಳಿಂದಾಗಿ ಕರ್ನಾಟಕ ವಾಸ್ತುಶಿಲ್ಪವು ವಿಭಿನ್ನವೂ ಹಾಗೂ ವಿಶಿಷ್ಟವೂ ಆಗಿ ಬೆಳೆದಿದೆ. ಸ್ಥಳೀಯ ವಾಸ್ತುಶೈಲಿಯ ಜೊತೆಗೆ ಕ್ರಿ. ಶ. ೧೫ನೆಯ ಶತಮಾನದಲ್ಲಿ ಇಂಡೋ–ಇಸ್ಲಾಮಿಕ್ ಶೈಲಿಯ ವಾಸ್ತುಕಲೆಯು ಬಹಮನಿ, ಆದಿಲಶಾಹಿಗಳು, ಸವಣೂರಿನ ನವಾಬರು ಮತ್ತು ಟಿಪ್ಪು ಸುಲ್ತಾನರ ಅವಧಿಯಲ್ಲಿ ವಿಕಸನಗೊಂಡವು.

ಒಟ್ಟಿನಲ್ಲಿ ಹೇಳಬೇಕೆಂದರೆ ಭಾರತೀಯ ಪರಂಪರೆಯ ಹಿನ್ನೆಲೆಯ ಪಾರಂಪರಿಕ ದೇವಾಲಯ ವಾಸ್ತುಶಿಲ್ಪಕಲೆಯು ಕರ್ನಾಟಕದಲ್ಲಿ ವಿಜಯನಗರದ ಕಾಲದವರೆಗೂ ನಿರಂತರವಾಗಿ ನಡೆದು ಬಂದಿತು. ಬಹಮನಿ ಮತ್ತು ಆದಿಲಶಾಹಿ ಸುಲ್ತಾನರ ಆಳ್ವಿಕೆಯ ಪ್ರದೇಶಗಳಲ್ಲಿ ಇಂಡೋ–ಇಸ್ಲಾಮಿಕ್ ವಾಸ್ತುಕಲೆ ಬೆಳೆಯಿತು. ವಸಾಹತು ಕಾಲಾವಧಿಯಲ್ಲಿ ಐರೋಪ್ಯ ವಾಸ್ತುಶಿಲ್ಪ ಕಲೆಯ ಅಂಗವಾಗಿ ಅನೇಕ ಇಗರ್ಜಿಗಳು ಮತ್ತು ಬೆಂಗಳೂರಿನ ಮೇಯೋಹಾಲ್‌ನಂತಹ ಅನೇಕ ಸಾರ್ವಜನಿಕ ಭವನಗಳು ನಿರ್ಮಾಣಗೊಂಡವು.

## ೪.೨.೨. ದೇವಾಲಯ ವಾಸ್ತುರಚನೆಯ ಕಲೆ

ಕರ್ನಾಟಕದಲ್ಲಿ ಶಾತವಾಹನರ ನಂತರ ಆಳ್ವಿಕೆಗೆ ಬಂದ ಬನವಾಸಿಯ ಕದಂಬರು ದೇವಾಲಯಗಳನ್ನು ರಚನೆ ಮಾಡುವ ಪರಂಪರೆಯನ್ನು ಆರಂಭಿಸಿದರು. ತಾಳಗುಂದದ ಪ್ರಣವೇಶ್ವರ ದೇಗುಲದ ಮುಂಭಾಗದ ಕಂಬದ ಮೇಲಿನ ಕದಂಬ ಅರಸ ಶಾಂತಿವರ್ಮನ ಶಿಲಾಶಾಸನವು ಇಲ್ಲಿಯ ಪ್ರಣವೇಶ್ವರ ದೇಗುಲಕ್ಕೆ ದಾನ ನೀಡಿದ ಬಗ್ಗೆ ಹೇಳುತ್ತದೆ. ಅದರಂತೆ ಇದೇ ಮನೆತನದ ಮೃಗೇಶವರ್ಮನು (ಕ್ರಿ.ಶ. ೪೫೫–೮೦) ಪಲಾಶಿಕಾ ಎಂಬ ಸ್ಥಳದಲ್ಲಿ ಜಿನಾಲಯವನ್ನು ನಿರ್ಮಿಸಿದ ಬಗ್ಗೆ ಹಲಸಿಯ ತಾಮ್ರಪತ್ರ ಶಾಸನವು ಉಲ್ಲೇಖಿಸುತ್ತದೆ. ಕನ್ನಡ ನಾಡನ್ನು ಆಳಿದ ಮೊದಲ ರಾಜಮನೆತನವಾದ ಕದಂಬರು ದೇವಾಲಯ ವಾಸ್ತುಕಲೆಯ ರಚನೆಗೆ ನಾಂದಿ ಹಾಡಿದರು. ನಂತರದಲ್ಲಿ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ, ಪಾಳೆಗಾರ ಮತ್ತು ಮೈಸೂರು ಅರಸರು ದೇವಾಲಯ ವಾಸ್ತುಶಿಲ್ಪ ಕಲೆಯನ್ನು ಪೋಷಿಸಿ ಅದನ್ನು ನಾಡಿನ ಕಲೆಯಾಗಿ ಬೆಳೆಸಿದರು.

## ೪.೨.೩. ವಾಸ್ತುಶೈಲಿಯ ಪ್ರಕಾರಗಳು

ಭಾರತೀಯ ದೇವಾಲಯ ವಾಸ್ತು ಪ್ರಕಾರಗಳನ್ನು ಸಂಪ್ರದಾಯಿಕವಾಗಿ (೧) ದ್ರಾವಿಡ (೨) ನಾಗರ ಮತ್ತು (೩) ವೇಸರ ಎಂದು ಸ್ಥೂಲವಾಗಿ ವಿಂಗಡಿಸಲಾಗಿದೆ.

### ೧. ದ್ರಾವಿಡ

ಈ ಶೈಲಿ ದಕ್ಷಿಣ ಭಾರತದ ಪ್ರಮುಖ ವಾಸ್ತು ಶೈಲಿಯಾಗಿದೆ. ಈ ಶೈಲಿಯನ್ನು 'ದಾಕ್ಷಿಣಾತ್ಯ ಶೈಲಿ' ಎಂದೂ ಕರೆಯಲಾಗುತ್ತದೆ. ಕರ್ನಾಟಕ ಒಳಗೊಂಡಂತೆ ದಕ್ಷಿಣ

ಭಾರತದ ಬಹುತೇಕ ದೇವಾಲಯಗಳು ದ್ರಾವಿಡ ಶೈಲಿಯಲ್ಲಿ ನಿರ್ಮಾಣವಾಗಿವೆ. ದ್ರಾವಿಡ ಶೈಲಿಯ ದೇವಾಲಯಗಳು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ ಮತ್ತು ಸ್ಥೂಪಿ ಎಂಬ ಆರು ಅಂಗಗಳಿಂದ ನಿರ್ಮಿತವಾಗಿರುತ್ತವೆ. ಈ ಆರು ಅಂಗಗಳನ್ನು ಷಡ್ವರ್ಗ ಎಂದು ಕರೆಯಲಾಗುತ್ತದೆ.

## ೨. ನಾಗರ

ಈ ಶೈಲಿಯು ಉತ್ತರ ಭಾರತದ ದೇವಾಲಯಗಳ ನಿರ್ಮಾಣದಲ್ಲಿ ಕಂಡುಬರುವ ಶೈಲಿಯಾಗಿದೆ. ಇದನ್ನು ಔತ್ತರೇಯ ಹಾಗೂ ರೇಖಾನಾಗರ ಶೈಲಿ ಎಂದೂ ಕರೆಯುತ್ತಾರೆ. ಈ ಶೈಲಿಯ ದೇವಾಲಯಗಳ ಶಿಖರವು ಹೊರಮೈಯಲ್ಲಿ ಸಮಾನಾಂತರವಾಗಿ, ವಿವಿಧ ನೇರ ಮತ್ತು ಲಂಬ ರೇಖಾಕೃತಿಗಳಿಗೆ ಒಳಪಟ್ಟು ಮೇಲ್ಭಾಗದವರೆಗೆ ಸಾಗುತ್ತದೆ. ತಳಭಾಗದಿಂದ ದೇವಾಲಯದ ಕುಂಭಿಯವರೆಗೆ ಗರ್ಭಗೃಹದ ಭಿತ್ತಿಯು ಸಮಾನಾಂತರವಾಗಿದ್ದು ಮೇಲಕ್ಕೆ ಸಾಗಿದಂತೆ ಕೊನೆಗೆ ಎಲ್ಲವೂ ಒಂದು ಮಧ್ಯಬಿಂದುವಿನಲ್ಲಿ ಲೀನವಾದಂತೆ ರೂಪಿಸ ಲಾಗಿರುತ್ತದೆ. ಶಿಖರವು ಮೇಲ್ನೋಟಕ್ಕೆ ಈ ರೀತಿ ಕಾಣುವುದೇ ನಾಗರ ಶೈಲಿಯ ಶಿಖರ. ಶಿಖರದ ಮೇಲ್ಭಾಗದಲ್ಲಿ ಅಮಲಕ ಮತ್ತು ಸುಕನಾಸ ಹೊಂದಿರಬೇಕು; ಹಿಂಚಾಚು ಮತ್ತು ಮುಂಚಾಚುಗಳು ಅದಕ್ಕೆ ಅನುಗುಣವಾಗಿರಬೇಕು. ಸುಕನಾಸವು ಶಿಖರಕ್ಕೆ ಹೊಂದಿಕೊಂಡಂತೆ ಮುಂಚಾಚಿಕೊಂಡು ಕಟ್ಟಲಾಗಿರುತ್ತದೆ. ಗರ್ಭಗುಡಿಯ ಗೋಡೆಯು ವಿವಿಧ ಶಿಲ್ಪಗಳಿಂದ ಅಲಂಕಾರಗೊಳಿಸಲಾಗಿರುತ್ತದೆ. ಸಾಮಾನ್ಯವಾಗಿ ನಾಗರ ಶೈಲಿಯ ದೇವಾಲಯಗಳು ಪ್ರದಕ್ಷಿಣಾಪಥರಹಿತ ಅಥವಾ ನಿರಂಧಾರ ವಿನ್ಯಾಸದಲ್ಲಿ ರಚನೆಯಾಗಿರುತ್ತವೆ. ಮೂಲತಃ ಗುಪ್ತರ ಕಾಲದಲ್ಲಿ ಆರಂಭಗೊಂಡ ನಾಗರ ವಾಸ್ತು ಶೈಲಿಯು ವಿವಿಧ ಎಡೆಗಳಲ್ಲಿ ಪ್ರಸಾರಗೊಂಡಿತು. ಕರ್ನಾಟಕದಲ್ಲಿಯೂ ಹಲವು ನಾಗರ ಶೈಲಿಯ ದೇವಾಲಯಗಳು ನಿರ್ಮಾಣಗೊಂಡಿವೆ. ಕರ್ನಾಟಕದಲ್ಲಿ ಕದಂಬ–ನಾಗರ ಶೈಲಿ ಎಂಬ ಪ್ರಾದೇಶಿಕ ದೇವಾಲಯ ವಾಸ್ತು ಪ್ರಕಾರವನ್ನು ವಿದ್ವಾಂಸರು ಗುರುತಿಸಿದ್ದಾರೆ. ಇದು ದ್ರಾವಿಡ ಮಾದರಿಯಲ್ಲಿ ಕಂಡುಬಂದರೂ ಇದರ ಶಿಖರವು ಚತುರಸ್ರಾಕಾರವಾಗಿರುತ್ತದೆ. ಶಿಖರವು



ಚಿತ್ರ ೨: ನಾಗರ ಶೈಲಿಯ ಗಳಗನಾಥ ದೇವಾಲಯ ಹಾಗೂ ದ್ರಾವಿಡ ಶೈಲಿಯ ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು

ಯಾವಾಗಲೂ ಚೌಕಾಕಾರವಾಗಿರುತ್ತದೆ. ಶಿಖರದ ನಾಲ್ಕು ತುದಿಗಳಲ್ಲಿ ಮುಂಚಾಚಿದ ಮಹಾನಾಸಿಕ ಕಂಡುಬರುತ್ತವೆ. ಶಿಖರದ ಮುಂಭಾಗದಲ್ಲಿರುವ ಸುಕನಾಸಿಯು ಸಾಮಾನ್ಯವಾಗಿ ಗ್ರೀವದ ತನಕ ಮುಂದುವರೆದಿರುತ್ತದೆ. ಪಿರಾಮಿಡ್ ಮಾದರಿಯ ಆಕೃತಿ, ಭೂಸಮಾನಾಂತರ ವಾಗಿರುವ ಕಾರ್ನಿಸಗಳು, ವೇದಿಗ್ರೀವ, ಸ್ತೂಪಿ ಇವುಗಳಿಂದ ಕೂಡಿದ ಶಿಖರವು ಕದಂಬ–ನಾಗರ ಶೈಲಿ ಮುಖ್ಯ ಲಕ್ಷಣಗಳಾಗಿ ಗುರುತಿಸಲ್ಪಡುತ್ತವೆ. ಇದು ಕರ್ನಾಟಕದ ಮಲೆನಾಡು ಭಾಗದ ದೇವಾಲಯಗಳಲ್ಲಿ ಪ್ರಚಲಿತವಾಗಿದ್ದ ವಾಸ್ತುಶೈಲಿಯಾಗಿ ಕಂಡುಬರುತ್ತದೆ. ಚಿತ್ರ ೨ರಲ್ಲಿ ಪಟ್ಟದಕಲ್ಲಿನ ನಾಗರ ಶೈಲಿಯ ಗಳಗನಾಥ ದೇವಾಲಯ (ಸುಮಾರು ಕ್ರಿ.ಶ. ೭೫೦) ಹಾಗೂ ದ್ರಾವಿಡ ಶೈಲಿಯ ಸಂಗಮೇಶ್ವರ (ಕ್ರಿ.ಶ. ೭೩೩) ದೇವಾಲಯಗಳನ್ನು ಒಟ್ಟಿಗೆ ನೋಡಬಹುದು.

### ೩. ವೇಸರ

ದ್ರಾವಿಡ ಮತ್ತು ನಾಗರ ಶೈಲಿಗಳ ಸಮ್ಮಿಶ್ರಣದ ಫಲವಾಗಿ ರೂಪಗೊಂಡ ಹೊಸ ವಾಸ್ತುಶೈಲಿಯೇ ವೇಸರ ಶೈಲಿ. ವೇಸರ ಎಂದರೆ ಸಂಸ್ಕೃತದಲ್ಲಿ ಹೇಸರಗತ್ತೆ ಎಂಬ ಅರ್ಥ. ಇದು ಮಿಶ್ರತಳಿಯ ಪ್ರಾಣಿ, ಹೀಗಾಗಿ ವಾಸ್ತುಶೈಲಿಗೂ ಕೂಡ ಈ ಹೆಸರೇ ರೂಢಿಗೆ ಬಂದಿತು. ವೇಸರ ಶೈಲಿಯ ಶಿಖರಗಳು ಸಾಮಾನ್ಯವಾಗಿ ವೃತ್ತಾಯತ ವಿನ್ಯಾಸದಲ್ಲಿ ನಿರ್ಮಾಣವಾಗಿರುತ್ತವೆ. ಇವು ದ್ರಾವಿಡ ಮತ್ತು ನಾಗರ ಶೈಲಿಗಳ ಅಲಂಕಾರಗಳನ್ನು



ಚಿತ್ರ ೩: ವೇಸರ ಶೈಲಿಯ ಚನ್ನಕೇಶವ ದೇವಾಲಯ, ಸೋಮನಾಥಪುರ

ಸಮ್ಮಿಶ್ರಣಗೊಳಿಸಿ ನಿರ್ಮಿಸಲಾಗುತ್ತವೆ. ನಾಗರ ಶೈಲಿಯಂತೆ ಗರ್ಭಗೃಹದ ಮೇಲೆ ಲಂಬವಾದ ಶಿಖರದ ಮೇಲ್ಮೈಯಲ್ಲಿ ಲಂಬ ಪಟ್ಟಿಕೆಗಳು, ಶಿಖರದ ಮೂಲೆಗಳಲ್ಲಿ ಚಿಕ್ಕ ಅಮಲಕಗಳಿರುತ್ತವೆ. ಶಿಖರದ ಮೇಲ್ಭಾಗದಲ್ಲಿ ಅಮಲಕದ ಬದಲಾಗಿ ಅರಳಿದ ಕಮಲದಂತೆ ಇರುವ ಶಿಖರವಿರುತ್ತದೆ. ದ್ರಾವಿಡ ಶೈಲಿ ವಿವಿಧ ತಲಗಳು, ನಾಗರ ಶೈಲಿಯ ಪ್ರಧಾನ ಲಂಬ ಹಿಂಚಾಚು–ಮುಂಚಾಚುಗಳು, ನಕ್ಷತ್ರಾಕಾರದ ವಿನ್ಯಾಸ, ವೃತ್ತಾಕಾರದ ಅಧೋಪದ್ಮ, ಶಿಖರಗಳ ಹದವಾದ ಮಿಶ್ರಣದಿಂದ ವಿಮಾನದ ಹೊರ ಆಕೃತಿಯು ಬಾಗಿದ ರೇಖಾಕೃತಿಗಿಂತ ಕೂಟದ ಆಕೃತಿಯೇ ಪ್ರಧಾನವಾಗಿ ಕಾಣುತ್ತದೆ. ಕರ್ನಾಟಕದಲ್ಲಿ ಹೊಯ್ಸಳರ ದೇವಾಲಯಗಳು ವೇಸರ ಶೈಲಿಯಲ್ಲಿ ನಿರ್ಮಾಣವಾಗಿವೆ. ವೇಸರ ಶೈಲಿಗೆ ನಿದರ್ಶನವಾಗಿ ಸುಮಾರು ಕ್ರಿ.ಶ. ೧೨೫೮ರಲ್ಲಿ ರಚನೆಯಾದ ಹೊಯ್ಸಳ ಶೈಲಿಯ ಸೋಮನಾಥಪುರದ ಚನ್ನಕೇಶವ ದೇವಾಲಯವನ್ನು ಚಿತ್ರ ೩ರಲ್ಲಿ ಗಮನಿಸಬಹುದು.

### ಭೂಮಿಜ

ಮಹಾರಾಷ್ಟ್ರವನ್ನು ಒಳಗೊಂಡಂತೆ ಮಧ್ಯ–ಭಾರತದಲ್ಲಿ ಕ್ರಿ.ಶ. ೧೧ನೆಯ ಶತಮಾನದಿಂದ ೧೪ನೆಯ ಶತಮಾನದವರೆಗೆ ಪ್ರಚಲಿತಕ್ಕೆ ಬಂದ ಮತ್ತೊಂದು ದೇವಾಲಯ ವಾಸ್ತು ಪ್ರಕಾರವೆಂದರೆ ಭೂಮಿಜ ಶೈಲಿ. ಮಹಾರಾಷ್ಟ್ರದ ಶಿಲಾಹಾರರ ಆಳ್ವಿಕೆಯಲ್ಲಿ ಕಂಡುಬಂದ ಈ ಶೈಲಿಯು ದೇವಗಿರಿ ಯಾದವರ ಕಾಲದಲ್ಲಿ ಪ್ರಮುಖ ದೇವಾಲಯ ವಾಸ್ತುಶೈಲಿಯಾಗಿ ಮೂಡಿಬಂದಿತು. ಕರ್ನಾಟಕದಲ್ಲಿಯೂ ಭೂಮಿಜ ಶೈಲಿಯ ದೇವಾಲಯಗಳು ಯಾದವರು ಮತ್ತು ಹೊಯ್ಸಳರು ನಿರ್ಮಿಸಿದ ದೇವಾಲಯಗಳಲ್ಲಿ ಕಂಡುಬರುತ್ತದೆ. ಭೂಮಿಜ ಶೈಲಿಯು ನಾಗರ ಶೈಲಿಯ ಪ್ರಭೇದವಾಗಿದ್ದು ನಕ್ಷತ್ರಾಕಾರದ ತಲವಿನ್ಯಾಸದಲ್ಲಿ ನಿರ್ಮಾಣ ಗೊಂಡಿರುವ ಈ ದೇವಾಲಯಗಳ ಅಧಿಷ್ಠಾನ, ಭಿತ್ತಿ ಮತ್ತು ಶಿಖರಗಳು ಏಕರೂಪವಾಗಿ ನಿರ್ಮಿಸಲ್ಪಟ್ಟಿರುತ್ತವೆ. ಶಿಖರಗಳು ಮೇಲ್ಮೈಯಲ್ಲಿ ನಾಗರ ಶೈಲಿಯ ಕಿರು ಗಾತ್ರದ ಶಿಖರಗಳಿಂದ ಅಲಂಕರಿಸಲಾಗಿರುತ್ತದೆ. ಹೊಯ್ಸಳ ಶೈಲಿಯಲ್ಲಿ ಸುಮಾರು ಕ್ರಿ.ಶ. ೧೩ನೆಯ ಶತಮಾನದಲ್ಲಿ



ಚಿತ್ರ ೪: ಹೊಯ್ಸಳ ಶೈಲಿಯಲ್ಲಿ ರಚನೆಯಾಗಿರುವ ಆದರೆ ಭೂಮಿಜ ಶೈಲಿಯ ಶಿಖರವಿರುವ ಮೂಲೆ ಶಂಕರೇಶ್ವರ ದೇವಾಲಯ, ತುರುವೇಕೆರೆ (ಚಿತ್ರ ಕೃಪೆ: ವಿಕಿಪೀಡಿಯಾ)

ರಚನೆಯಾಗಿರುವ ಆದರೆ ಭೂಮಿಜ ಶೈಲಿಯ ಶಿಖರವನ್ನು ಹೊಂದಿರುವ ತುರುವೆಕೆರೆಯ ಮೂಲೆ ಶಂಕರೇಶ್ವರ ದೇವಾಲಯವನ್ನು ಚಿತ್ರ ೪ರಲ್ಲಿ ನೋಡಬಹುದು.

## ೪.೨.೪. ಪ್ರಾಚೀನ ವಾಸ್ತುಶಾಸ್ತ್ರ ಕೃತಿಗಳು

ಮಧ್ಯಕಾಲೀನ ದೇವಾಲಯಗಳ ರಚನೆ ವಾಸ್ತುಶಾಸ್ತ್ರದ ನಿಯಮಗಳಿಗೆ ಅನುಗುಣ ವಾಗಿರುತ್ತದೆ. ವಾಸ್ತುಶಿಲ್ಪ ಶಾಸ್ತ್ರವು ಅರವತ್ನಾಲ್ಕು ಕಲೆಗಳಲ್ಲಿ ಒಂದಾಗಿದೆ. ಇದು ಶಿಲ್ಪಶಾಸ್ತ್ರದ ಒಂದು ಭಾಗವೂ ಹೌದು. ಭಾರತದಲ್ಲಿ ಪ್ರಾಚೀನ ದೇವಾಲಯಗಳ ವಾಸ್ತು ನಿರ್ಮಾಣಕ್ಕೆ ಸಂಬಂಧಿಸಿದಂತೆ ಹಲವಾರು ಮಹತ್ವದ ಗ್ರಂಥಗಳು ರಚನೆಗೊಂಡಿದ್ದು ಅವುಗಳನ್ನು ಅನುಸರಿಸಿ ದಕ್ಷಿಣ ಭಾರತ ಮತ್ತು ಉತ್ತರ ಭಾರತದಲ್ಲಿ ದೇವಾಲಯಗಳ ರಚನೆ ಆರಂಭಗೊಂಡಿತು. 'ಮಯಮತ', 'ದೀಪ್ತಾಗಮ', 'ಕಾರಣಾಗಮ', 'ಮಾನಸಾರ' ಮುಂತಾದ ಸಂಸ್ಕೃತ ವಾಸ್ತುಶಾಸ್ತ್ರದ ಗ್ರಂಥಗಳು ದೇವಾಲಯ ರಚನಾ ವಿನ್ಯಾಸ, ವರ್ಗಿಕರಣ ಮೊದಲಾದ ಮಾಹಿತಿಯನ್ನು ನೀಡುತ್ತವೆ. ದೇವಾಲಯಗಳ ಪರಿಕಲ್ಪನೆ ಶುರುವಾದಂತೆ ಕ್ರಮೇಣ ಮಾದರಿಗಳು ಹಾಗೂ ಹೊಸ ವಾಸ್ತು ಸಿದ್ಧಾಂತಗಳನ್ನು ಕುರಿತ ಕೃತಿಗಳು ರಚನೆಗೊಂಡವು ಅವುಗಳಲ್ಲಿ 'ಸಮರಾಂಗಣ ಸೂತ್ರಧಾರ', 'ಮಾನಸಾರ', 'ಮಯಮತ' ಮುಂತಾದವು ಪ್ರಮುಖವಾದವುಗಳು. ಇವು ಶೈವ ಮತ್ತು ವೈಷ್ಣವ ಸಂಪ್ರದಾಯಗಳಿಗೆ ಸೇರಿದ ದೇವಾಲಯ ವಾಸ್ತುವಿನ ವಿವರಣೆಯನ್ನು ನೀಡುತ್ತವೆ. ಇದೇ ರೀತಿ ಜೈನ ಮತ್ತು ಬೌದ್ಧಧರ್ಮದ ಅನುಯಾಯಿಗಳೂ ತಮ್ಮ ಮತಗಳ ಧಾರ್ಮಿಕ ವಾಸ್ತುವಿವರಗಳನ್ನು ಕುರಿತು ಕೃತಿಗಳನ್ನು ರಚಿಸಿದರು. ಮುಂದೆ ಇದೇ ದೇವಾಲಯಗಳ ಶೈಲಿಗಳ ಉಗಮಕ್ಕೆ ಕಾರಣವಾಯಿತು. 'ಸಮರಾಂಗಣ ಸೂತ್ರಧಾರ'ವು ಭೃಗು, ಅತ್ರಿ, ವಶಿಷ್ಠ ಮೊದಲಾದ ೧೮ ವಾಸ್ತುಕಾರರ ಹೆಸರನ್ನು ನೀಡುತ್ತದೆ. ದೇವಾಲಯವನ್ನು ಪ್ರಾಸಾದ ಎಂದು ಕರೆಯ ಲಾಯಿತು. 'ಸಮರಾಂಗಣ ಸೂತ್ರಧಾರ'ವು ವಾಸ್ತುವಿನ ಎಂಟು ಭಾಗಗಳನ್ನು ವಿವರಿಸಿದೆ: ಪುರ, ದುರ್ಗ, ಭವನ, ಪ್ರಾಸಾದ, ಪ್ರತಿಮಾ, ಚಿತ್ರ, ಯಂತ್ರ ಮತ್ತು ಶಯನಾಶನಗಳು. ಇವು ದೇವಾಲಯ ಮತ್ತು ಅದರ ತಾರ್ಕಿಕ ವಾಸ್ತುಗಳ ಬಗ್ಗೆ ಮಾಹಿತಿ ನೀಡುತ್ತದೆ. ದಕ್ಷಿಣ ಭಾರತದಲ್ಲಿ ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ 'ಕಾಮಿಕ ಆಗಮ' ಕೃತಿ ಮಹತ್ವದ್ದಾಗಿದೆ ಇದು ದ್ರಾವಿಡ ಶೈಲಿಯ ದೇವಾಲಯಗಳ ವಾಸ್ತು ರಚನೆ, ಶಿಖರ, ಗೋಪುರ, ಗರ್ಭಗೃಹ, ಆವರಣದ ಕಟ್ಟಡಗಳ ಬಗ್ಗೆ ಮಾಹಿತಿ ನೀಡುತ್ತದೆ. ದ್ರಾವಿಡ ಶೈಲಿಯ ದೇವಾಲಯಗಳು ಈ ವಾಸ್ತು ಗ್ರಂಥದ ಆಧಾರದ ಮೇಲೆಯೇ ರಚಿತಗೊಂಡಿವೆ. ದ್ರಾವಿಡ ಶೈಲಿಯನ್ನು ಕರಿತು 'ಕಾಶ್ಯಪಶಿಲ್ಪಮ್' ಮತ್ತು 'ಶಿಲ್ಪರತ್ನ'ದಂತಹ ಕೃತಿಗಳು ದೇವಾಲಯಗಳನ್ನು ಭೌಗೋಳಿಕವಾಗಿ ವರ್ಗೀಕರಿಸಿ ವಿವರ ನೀಡುತ್ತವೆ.

## ೪.೨.೫. ಕರ್ನಾಟಕದ ದೇವಾಲಯಗಳ ವಾಸ್ತುಕಲೆ

### ೧. ಕದಂಬರ ವಾಸ್ತುಶಿಲ್ಪ

ಶಾತವಾಹನರ ನಂತರ ಕರ್ನಾಟಕವನ್ನಾಳಿದ ರಾಜ ಮನೆತನ ಕದಂಬರು. ಇವರು ಕ್ರಿ.ಶ. ೪ನೆಯ ಶತಮಾನದ ಆರಂಭದಿಂದ ಸುಮಾರು ಮೂರು ಶತಮಾನಗಳ ಕಾಲ ವಾಯುವ್ಯ ಕರ್ನಾಟಕದಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ್ದರು. ಇವರ ಮೊದಲ

ಅರಸ ಮಯೂರವರ್ಮನು ಕ್ರಿ.ಶ. ೩೨೫–೪೫ರ ವರೆಗೆ ಆಳಿದ ನಂತರ ಅನೇಕ ಅರಸರು ಆಳ್ವಿಕೆ ನಡೆಸಿದರು. ಇವರಲ್ಲಿ ನಾಗವರ್ಮ (ಕ್ರಿ.ಶ. ೩೪೫– ೬೫), ಕಾಕುತ್ಸವರ್ಮ (ಕ್ರಿ.ಶ. ೪೦೫–೩೦), ಮೃಗೇಶವರ್ಮ (ಕ್ರಿ.ಶ. ೪೫೫–೮೦), ಇಮ್ಮಡಿ ಕೃಷ್ಣವರ್ಮ (ಕ್ರಿ.ಶ. ೫೧೬–೪೦) ಪ್ರಮುಖರು. ಇವರ ರಾಜಧಾನಿ ಬನವಾಸಿ ಆಗಿತ್ತು. ಕರ್ನಾಟಕದ ದೇವಾಲಯಗಳ ವಾಸ್ತುಶಿಲ್ಪ ಶೈಲಿಗೆ ಆರಂಭಿಕ ಅಡಿಪಾಯ ಹಾಕಿದವರು ಕದಂಬರು. ಇವರ ದೇವಾಲಯಗಳು ದಾಕ್ಷಿಣಾತ್ಯ ಶೈಲಿಯೆನಿಸಿಕೊಳ್ಳುವ ದ್ರಾವಿಡ ಶೈಲಿಯ ಆರಂಭಿಕ ಹಂತವೆಂದು ಗುರುತಿಸಲ್ಪಡತ್ತವೆ. ಕದಂಬರ ದೇವಾಲಯಗಳು ವಿಸ್ತಾರವಲ್ಲದ ಸರಳ ರಚನೆಯಿಂದ ಕೂಡಿದ್ದು ಒಂದು ಗರ್ಭಗೃಹ, ತೆರೆದ ಮೊಗಸಾಲೆಗಳಿಂದ ರಚನೆಯಾಗಿದ್ದವು. ಗರ್ಭಗೃಹದ ಮೇಲೆ ಪಿರಮಿಡ್ ಆಕಾರದ ಮೆಟ್ಟಿಲುಗಳ ರೂಪದ ಶಿಖರಗಳನ್ನು ನಿರ್ಮಿಸಲಾಗಿವೆ. ಕದಂಬ ದೇವಾಲಯಗಳು ಅಷ್ಟು ನಯ ನಾಜೂಕುಗಳಿಂದ ಕೂಡಿರುವುದಿಲ್ಲ. ಕದಂಬರ ದೇವಾಲಯಗಳಲ್ಲಿ ಲಿಂಗಗಳು ಹೆಚ್ಚಾಗಿ ಕಂಡುಬರುತ್ತದೆ. ಕದಂಬರ ಕಾಲದಲ್ಲಿ ನಿರ್ಮಾಣಗೊಂಡ ಪ್ರಮುಖ ದೇವಾಲಯಗಳೆಂದರೆ ಹಲಸಿಯ ಕಲ್ಲೇಶ್ವರ, ಹಾಟಕೀಶ್ವರ, ಸುವರ್ಣೇಶ್ವರ, ರಾಮೇಶ್ವರ, ವರಾಹ ನರಸಿಂಹ ದೇವಾಲಯಗಳು ಹಾಗೂ ಜೈನ ಬಸದಿ / ಜಿನಾಲಯ, ಬನವಾಸಿಯ ಮಧುಕೇಶ್ವರ ಮತ್ತು ವರಾಹ ನರಸಿಂಹ ದೇವಾಲಯಗಳು, ಗುಡ್ನಾಪುರದ ಜೈನ ಬಸದಿ, ಯಲವಟ್ಟಿಯ ಶಿವ ದೇವಾಲಯ, ಕಾದರೋಳಿಯ (ಬೆಳಗಾವಿ) ಶಂಕರದೇವ ಮಂದಿರ, ದೊಡ್ಡಗದ್ದವಳ್ಳಿಯ ಲಕ್ಷ್ಮಿನಾರಾಯಣ ದೇವಾಲಯ ಹಾಗೂ ದೇವಗಾಂವೆಯ ಕಮಲ ನಾರಾಯಣ ದೇವಾಲಯಗಳು. ಚಿತ್ರ ೫ರಲ್ಲಿ ಕದಂಬ ಶೈಲಿಯಲ್ಲಿ ಸುಮಾರು ಕ್ರಿ.ಶ. ೫ನೆಯ ಶತಮಾನದಲ್ಲಿ ರಚಿತವಾಗಿರುವ ಬನವಾಸಿಯ ಮಧುಕೇಶ್ವರ ದೇವಾಲಯವನ್ನು ನೋಡಬಹುದು.



ಚಿತ್ರ ೫: ಕದಂಬ ಶೈಲಿಯ ಮಧುಕೇಶ್ವರ ದೇವಾಲಯ, ಬನವಾಸಿ
(ಚಿತ್ರ ಕೃಪೆ: ಬಾಲು ಸ್ಟೈಲ್ಸ್)

## ೨. ತಲಕಾಡಿನ ಗಂಗರ ವಾಸ್ತುಶಿಲ್ಪ

ಮೈಸೂರು ಭಾಗದಲ್ಲಿ ಕ್ರಿ.ಶ. ೩೫೦ರಿಂದ ೧೦೦೪ರ ವರೆಗೆ ತಲಕಾಡಿನ ಗಂಗರು ಆಳ್ವಿಕೆ ನಡೆಸಿದರು. ಇವರ ಆಳ್ವಿಕೆಯ ಅವಧಿಯಲ್ಲಿ ಕಟ್ಟಿದ ದೇವಾಲಯ ವಾಸ್ತುಶಿಲ್ಪಕಲೆಯು ದ್ರಾವಿಡ ಶೈಲಿಯಲ್ಲಿದೆ. ಗಂಗರ ಕಾಲದ ದೇವಾಲಯಗಳು ಗಾತ್ರದಲ್ಲಿ ಚಿಕ್ಕದಾಗಿದ್ದು ಚಿಕ್ಕ ಗರ್ಭಗೃಹ, ಅಂತರಾಳ ಮತ್ತು ನವರಂಗ ಮಂಟಪಗಳಿಂದ ನಿರ್ಮಿತವಾಗಿರುತ್ತವೆ. ಹೆಚ್ಚು ಅಲಂಕಾರಿಕ ವಿನ್ಯಾಸಗಳಿರದೆ ಸರಳವಾದ ಭಿತ್ತಿ ಮತ್ತು ಕಂಬಗಳು ಇವರ ಕಲೆಯ ವೈಶಿಷ್ಟ್ಯ. ಪಲ್ಲವರ ಕಲಾಶೈಲಿಯ ಪ್ರಭಾವದಿಂದ ಕೂಡಿದ ಗಂಗರ ವಾಸ್ತುಶೈಲಿಯು ಸ್ವತಂತ್ರವಾದ ಶೈಲಿಯಿಂದಲೂ ಗುರುತಿಸಲ್ಪಡುತ್ತದೆ. ಗಂಗರ ದೇವಾಲಯಗಳು ಗಾತ್ರದಲ್ಲಿ ಕಿರಿದಾಗಿರುತ್ತವೆ. ಕುಬ್ಜ ಕಂಬಗಳು, ಕಂಭಗಳ ಕಾಂಡ ಭಾಗವು ದುಂಡಗೆ ಉರುಳೆಯಾಕಾರದ ರಚನೆ, ಬಾಗಿಲವಾಡದಲ್ಲಿ ಗಂಗೆ, ಯಮುನೆಯರ ಉಬ್ಬುಶಿಲ್ಪಗಳು, ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರ ಶಿಲ್ಪಗಳು ಇತ್ಯಾದಿಗಳು ಇವರ ಶೈಲಿಯ ಮುಖ್ಯ ಲಕ್ಷಣಗಳಾಗಿವೆ. ತಲಕಾಡು, ಶ್ರವಣಬೆಳಗೊಳ, ನಂದಿಬೆಟ್ಟ, ಬೇಗೂರು (ಬೆಂಗಳೂರು), ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಗಂಗರ ದೇವಾಲಯಗಳು ಕಾಣಬಹುದು. ಶೈವ ಹಾಗೂ ವೈಷ್ಣವ ದೇವಾಲಯ, ಬಸದಿ, ಬ್ರಹ್ಮಸ್ತಂಭ, ಮಾನಸ್ತಂಭ ಇತ್ಯಾದಿಗಳು ಇವರ ಕಾಲದಲ್ಲಿ ನಿರ್ಮಾಣವಾಗಿವೆ. ಶ್ರವಣಬೆಳಗೊಳದಲ್ಲಿರುವ ಚಾವುಂಡರಾಯ ಬಸದಿಯು ಗಂಗರ ಚಾವುಂಡರಾಯನು ಕ್ರಿ.ಶ. ೯೮೨–೯೩ರ ಅವಧಿಯಲ್ಲಿ ನಿರ್ಮಿಸಿದನು. ಜೈನ ಬಸದಿಯಾಗಿರುವ ಇದು ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿದೆ (ಚಿತ್ರ ೬ನ್ನು ನೋಡಿ). ಅದರಂತೆ ಶ್ರವಣಬೆಳಗೊಳದ ಪ್ರಸಿದ್ಧ ಏಕಶಿಲಾ ಶಿಲ್ಪವಾದ ಗೊಮ್ಮಟೇಶ್ವರನ ಶಿಲ್ಪ ಕೂಡ ಗಂಗರ ಕೊಡುಗೆ ಆಗಿದೆ.



ಚಿತ್ರ ೬: ಚಾವುಂಡರಾಯ ಬಸದಿ, ಶ್ರವಣಬೆಳಗೊಳ

(ಚಿತ್ರ ಕೃಪೆ: ವಿಕಿವಾಂಡ್)

## ೩. ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪ

ಕ್ರಿ.ಶ. ೫೪೩ರಿಂದ ೭೫೭ರವರೆಗೆ ಮಲಪ್ರಭಾ ನದಿಯ ದಂಡೆಯಲ್ಲಿರುವ ವಾತಾಪಿಯಿಂದ ಆಳಿದ ಬಾದಾಮಿ ಚಾಲುಕ್ಯರು ದಕ್ಷಿಣ ಭಾರತದ ವಾಸ್ತುಶಿಲ್ಪಕ್ಕೆ ಅಪೂರ್ವ ಕೊಡುಗೆಯನ್ನು ನೀಡಿದ್ದಾರೆ. ಇವರು ಕಲಾ ಪೋಷಕರಾಗಿದ್ದು ಕಲೆ, ವಾಸ್ತುಶಿಲ್ಪ ಮತ್ತು ಶಿಲ್ಪಕಲಾ ಕ್ಷೇತ್ರಕ್ಕೆ ಮಹತ್ತರವಾದ ಕೊಡುಗೆ ನೀಡಿರುತ್ತಾರೆ. ಭಾರತೀಯ ಕಲಾ ಪರಂಪರೆಯ ದೃಷ್ಟಿಯಿಂದ ಬಾದಾಮಿ ಚಾಲುಕ್ಯರ ಸಾಧನೆ ಚಿರಂತನವಾದುದಾಗಿದೆ. ದ್ರಾವಿಡ ಶೈಲಿಯ ದೇವಾಲಯಗಳ ನಿರ್ಮಾಣ ಇವರ ಆಳ್ವಿಕೆಯಲ್ಲಿ ಕರ್ನಾಟಕದಲ್ಲಿ ಆರಂಭವಾಯಿತು. ದ್ರಾವಿಡ ಮತ್ತು ನಾಗರ ಶೈಲಿಯ ಸಮ್ಮಿಶ್ರಣದ ಶೈಲಿ ಎಂದು ಕರೆಯಲ್ಪಡುವ ವೇಸರ ಶೈಲಿಯನ್ನು ಪರಿಚಯಿಸಿದ ಖ್ಯಾತಿ ಇವರಿಗೆ ಇದೆ. ಇದನ್ನು 'ಚಾಲುಕ್ಯ ಶೈಲಿ' ಎಂದು ಕೂಡ ಕರೆಯುವರು. ಚಾಲುಕ್ಯರ ಕಾಲದಲ್ಲಿ ಅನೇಕ ಸುಂದರವಾದ ದೇವಾಲಯಗಳು ನಿರ್ಮಾಣವಾಗಿದೆ. ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ನಾಗರಾಳ, ಇವರ ಪ್ರಸಿದ್ಧ ಕಲಾಕೇಂದ್ರಗಳಾಗಿವೆ. ಶಿವರಾಮ ಕಾರಂತರು ಕರ್ನಾಟಕ ಕಲಾಕ್ಷೇತ್ರದಲ್ಲಿ ಬಾದಾಮಿ ಚಾಲುಕ್ಯರ ಆಳ್ವಿಕೆಯು ಸುವರ್ಣಯುಗವಾಗಿದ್ದಿತು ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಇವರ ಕಾಲದಲ್ಲಿ ನಿರ್ಮಾಣಗೊಂಡ ಕಲಾ ಸ್ಮಾರಕಗಳನ್ನು ಪ್ರಮುಖವಾಗಿ ಎರಡು ವಿಧವಾಗಿ ವಿಂಗಡಿಸಬಹುದಾಗಿದೆ. ಅವುಗಳೆಂದರೆ ೧. ಗುಹಾಂತರ ದೇವಾಲಯಗಳು; ೨. ರಾಚನಿಕ ದೇವಾಲಯಗಳು. ಬಾದಾಮಿ ಚಾಲುಕ್ಯ ದೇವಾಲಯ ವಾಸ್ತುಶಿಲ್ಪದ ಮುಖ್ಯ ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಚಾಲುಕ್ಯ ದೇವಾಲಯಗಳು ಪೂರ್ವಾಭಿಮುಖವಾಗಿವೆ. ಈ ದೇವಾಲಯಗಳು ಸುಮಾರು ೩–೪ ಅಡಿಗಳಷ್ಟು ಎತ್ತರದ ಜಗತಿ / ಪೀಠದ ಮೇಲೆ ನಿರ್ಮಾಣಗೊಂಡಿದೆ.

೨. ದೇವಾಲಯಗಳ ತಳವಿನ್ಯಾಸವು ಚಿಕ್ಕದಾಗಿರುತ್ತದೆ. ಗಜಪೃಷ್ಠಾಕಾರದ ತಳವಿನ್ಯಾಸವನ್ನು ಹೊಂದಿರುವ ದೇವಾಲಯಗಳನ್ನೂ ನಾವು ನೋಡಬಹುದು (ಉದಾ., ಕ್ರಿ.ಶ. ೭೪೭ರಲ್ಲಿ ರಚನೆಯಾದ ಐಹೊಳೆಯ ದುರ್ಗಾ ದೇವಾಲಯ).

೩. ದೇವಾಲಯವು ಗರ್ಭಗುಡಿ, ಸಭಾಮಂಟಪ, ಮುಖಮಂಟಪ ಹಾಗೂ ಸುಖನಾಸಿಯನ್ನು ಹೊಂದಿರುತ್ತದೆ.

೪. ಗರ್ಭಗುಡಿಯು ಚಿಕ್ಕದಾಗಿದ್ದು, ಚೌಕಾಕಾರದ ರಚನೆಯಿಂದ ಕೂಡಿರುತ್ತದೆ. ಗರ್ಭಗೃಹದ ಸುತ್ತ ಒಳಭಾಗದಲ್ಲಿ ಪ್ರದಕ್ಷಿಣಾಪಥ ಇರುತ್ತದೆ.

೫. ಕೆಲವು ದೇವಾಲಯಗಳ ಮೇಲ್ಛಾವಣಿಯು ಸಮತಟ್ಟಾಗಿರಬಹುದು.

೬. ದೇವಾಲಯದ ಗರ್ಭಗುಡಿ ಮೇಲೆ ಪಿರಮಿಡ್ ಆಕೃತಿಯ ಶಿಖರಗಳ ರಚನೆಯನ್ನು ನಂತರದ ಹಂತದಲ್ಲಿ ಕಾಣಬಹುದು. ಇವುಗಳ ಜೊತೆಗೆ ಕಂಭಗಳಿಂದ ಕೂಡಿದ ಸಭಾಮಂಟಪವನ್ನು ಸೇರ್ಪಡೆ ಮಾಡಿರಬಹುದು.

೭. ದೇವಾಲಯಗಳ ಹೊರಗೋಡೆಗಳು ಕಲಾತ್ಮಕ ಕೆತ್ತನೆಯಿಂದ ಕೂಡಿವೆ.

೮. ಏಕಕೂಟ, ದ್ವಿಕೂಟ ಹಾಗೂ ತ್ರಿಕೂಟ ದೇವಾಲಯಗಳ ರಚನೆ ಕಂಡುಬರುತ್ತದೆ.

೯. ದೇವಾಲಯಗಳ ನಿರ್ಮಾಣಕ್ಕೆ ಕೆಂಪು ಮರಳುಗಲ್ಲುಗಳನ್ನು ಬಳಕೆ ಮಾಡಲಾಗಿದೆ.

ಬಾದಾಮಿ ಚಾಲುಕ್ಯರು ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆ ಅಸಾಧಾರಣವಾದುದಾಗಿದೆ. ಇವರ ಕಲಾಶೈಲಿಯು ನಂತರದಲ್ಲಿ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ ಸಾಮ್ರಾಜ್ಯದ ಕಲೆಗಳ ಮೇಲೆ ಪ್ರೇರಣೆ ಹಾಗೂ ಪ್ರಭಾವವನ್ನು ಬೀರಿದೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ದೇವಾಲಯ ನಿರ್ಮಾಣ ಕಾರ್ಯ ಆರಂಭಗೊಂಡಿತು. ಉತ್ತರ ಭಾರತದಲ್ಲಿ ಗುಪ್ತರು ಹಾಗೂ ಅವರ ನಂತರದ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಆರಂಭಗೊಂಡಿತು. ಈ ಅವಧಿಯಲ್ಲಿ ಕರ್ನಾಟಕದಲ್ಲಿ ಚಾಲುಕ್ಯರು ದೇವಾಲಯಗಳ ನಿರ್ಮಾಣದಲ್ಲಿ ಅಪಾರ ಪ್ರಗತಿ ಸಾಧಿಸಿದರು. ಗುಪ್ತರಂತೆ ಸ್ವತಂತ್ರವಾಗಿ ದೇವಾಲಯಗಳನ್ನು ನಿರ್ಮಿಸಿ ಕರ್ನಾಟಕದಲ್ಲಿ ಯಶಸ್ವಿಯಾದವರು ಚಾಲುಕ್ಯರು. ವೈದಿಕ ಧರ್ಮೀಯರಾದ್ದರಿಂದ ಅವರು ಅನೇಕ ಶಿವದೇವಾಲಯಗಳನ್ನು ಹಾಗೂ ವಿಷ್ಣು ದೇವಾಲಯಗಳನ್ನು ನಿರ್ಮಿಸಿದರು.

**ಬಾದಾಮಿ ಚಾಲುಕ್ಯರ ಗುಹಾಂತರ ದೇವಾಲಯಗಳು**

ಬಾದಾಮಿ ಚಾಲುಕ್ಯರ ದೇವಾಲಯ ವಾಸ್ತುಗಳನ್ನು ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಆಲಂಪೂರ ಇತ್ಯಾದಿ ಸ್ಥಳಗಳಲ್ಲಿ ಕಾಣುತ್ತೇವೆ. ಮೇಣಬಸ್ತಿಗಳೆಂದು ಕರೆಯಲ್ಪಡುವ ಬಾದಾಮಿಯ ನಾಲ್ಕು ಗುಹಾಲಯಗಳು, ಐಹೊಳೆಯ ರಾವಳಫಡಿ ಮತ್ತು ಎರಡು ಶೈವ ಹಾಗೂ ಒಂದು ಬೌದ್ಧ ಗುಹಾಲಯಗಳು ಚಾಲುಕ್ಯರ ಗುಹಾಂತರ ದೇವಾಲಯ ವಾಸ್ತುಶಿಲ್ಪದ ರಚನೆಗಳಾಗಿವೆ. ಐಹೊಳೆಯ ರಾವಳಫಡಿಯು ಸ್ವಲ್ಪ ಎತ್ತರದಲ್ಲಿ ಕೊರೆದು ಮಾಡಲಾಗಿರುವ ಗುಹೆ. ಶೈವ ಪರವಾದ ಈ ಗುಹೆಯು ಸಾಕಷ್ಟು ಪೂರ್ವ ಸಿದ್ಧತೆಯೊಂದಿಗೆ ನಿರ್ಮಾಣವಾಗಿದೆ. ಗರ್ಭಗೃಹ, ಸುಕನಾಸಿ, ಮಧ್ಯದಲ್ಲಿ ಮಂಟಪ ಇದರ ಎಡ ಬಲಗಳಲ್ಲಿ ತಲಾ ಒಂದೊಂದು ಕೋಷ್ಠಗಳಿರುವ ಹಜಾರಗಳಿವೆ. ಇದರ ರಚನಾ ವಿನ್ಯಾಸವು ಬೌದ್ಧ ಸ್ತೂಪದ ಮಾದರಿಯಿಂದ ಪ್ರೇರಣೆ ಕೂಡಿದೆ ಎಂದು ಬಾ.ರಾ. ಗೋಪಾಲ್ ಅಭಿಪ್ರಾಯ ಪಟ್ಟಿದ್ದಾರೆ. ಸುಮಾರು ೩೦ ಅಡಿ ಉದ್ದ, ೨೦ ಅಡಿ ಅಗಲ ಮತ್ತು ೧೦ ಅಡಿ ಎತ್ತರ ಇರುವ ಈ ಗುಹೆಯಲ್ಲಿ ಪರಿಪೂರ್ಣತೆಯನ್ನು ಕಾಣಲು ಸಾಧ್ಯವಾಗಿದೆ. ಚಿತ್ರ ೭ರಲ್ಲಿ ರಾವಳಫಡಿ ಗುಹಾಂತರ ದೇವಾಲಯದ ಮುಂಭಾಗವನ್ನು ನೋಡಬಹುದು. ಅದರಂತೆ ಬಾದಾಮಿಯ ಬೆಟ್ಟದಲ್ಲಿ ಕೊರೆಯಲಾದ ಗುಹಾಂತರ



ಚಿತ್ರ ೭: ಐಹೊಳೆಯ ರಾವಳಫಡಿ ಗುಹಾಂತರ ದೇವಾಲಯ

ದೇವಾಲಯಗಳು ಕೂಡ ಚಾಲುಕ್ಯರ ವಾಸ್ತುಶಿಲ್ಪಕಲೆಯ ಪ್ರತೀಕಗಳು. ನಾಲ್ಕು ಗುಹಾಲಯಗಳಿದ್ದು ಇವುಗಳಲ್ಲಿ ಒಂದು ಜೈನ, ಎರಡು ಶೈವ ಮತ್ತು ಒಂದು ವೈಷ್ಣವ ಪಂಥಕ್ಕೆ ಸೇರಿದ ಗುಹಾಲಯಗಳಾಗಿವೆ. ಇವುಗಳಲ್ಲಿ ಮೂರನೇ ಗುಹಾಲಯ ವೈಷ್ಣವ ದೇವಾಲಯವಾಗಿದ್ದು, ಇದನ್ನು ಚಾಲುಕ್ಯ ಅರಸ ಮಂಗಳೇಶನು ಕ್ರಿ.ಶ. ೫೭೮ರಲ್ಲಿ ನಿರ್ಮಿಸಿದನು ಎಂದು ಇಲ್ಲಿಯ ಶಾಸನ ಹೇಳುತ್ತದೆ. ಬಾದಾಮಿಯ ಗುಹಾಲಯಗಳ ರಚನೆ ಅಜಂತಾ, ಕನ್ಹೇರಿ ಮತ್ತು ಕಾರ್ಲಾ ಗುಹಾಂತರ ದೇವಾಲಯಗಳಿಗಿಂತಲೂ ಭಿನ್ನವಾಗಿವೆ. ಮರಳು ಕಲ್ಲಿನಲ್ಲಿ ಕೊರೆದು ನಿರ್ಮಿಸಿದ ಚಾಲುಕ್ಯರ ಗುಹಾಲಯ ದೇವಾಲಯಗಳು ಕಂಬಗಳ ಉದ್ದನೆಯ ಮುಖಮಂಟಪ, ಮಧ್ಯಮಂಟಪ ಹಾಗೂ ಗರ್ಭಗುಡಿಗಳಿಂದ ಕೂಡಿವೆ. ವಿವಿಧ ಶೈಲಿಯ ಎತ್ತರದ ಕಂಬಗಳು, ಮೊಗಸಾಲೆಗಳು ಹಾಗೂ ಭವ್ಯ ಶಿಲ್ಪಗಳಿಂದ ಕೂಡಿದ ಚಾಲುಕ್ಯರ ಗುಹಾಲಯಗಳು ವಾಸ್ತುಕಲೆಯ ಉತ್ತಮ ಉದಾಹರಣೆಗಳಾಗಿವೆ.

**ಬಾದಾಮಿ ಚಾಲುಕ್ಯರ ರಾಚನಿಕ ದೇವಾಲಯಗಳು**

ಚಾಲುಕ್ಯರ ರಾಚನಿಕ ದೇವಾಲಯಗಳು ಬಾದಾಮಿಯ ಭೂತನಾಥ ದೇವಾಲಯ, ಮಾಲೆಗಿತ್ತಿ ಶಿವಾಲಯ, ಕೆಳಗಣ ಶಿವಾಲಯ ಮತ್ತು ಜಂಬುಲಿಂಗೇಶ್ವರ ದೇವಾಲಯಗಳು. ಕ್ರಿ.ಶ. ೬೯೯ರಲ್ಲಿ ಚಾಲುಕ್ಯ ಅರಸ ವಿನಯಾದಿತ್ಯನ ತಾಯಿ ಜಂಬುಲಿಂಗೇಶ್ವರ ದೇವಾಲಯವನ್ನು ನಿರ್ಮಿಸಿದ್ದು ಈ ದೇವಾಲಯ ತ್ರಿಕೂಟ ವಿನ್ಯಾಸದಲ್ಲಿ ನಿರ್ಮಿಸಲಾಗಿದೆ. ಮೂರು ಗರ್ಭಗೃಹಗಳು, ಇವುಗಳ ಮಧ್ಯದಲ್ಲಿ ಚೌಕಾಕಾರದ ನವರಂಗ ಇದೆ. ಇದು ಬಾದಾಮಿಯಲ್ಲಿ ಕಟ್ಟಲಾದ ಮೊದಲನೆಯ ತ್ರಿಕೂಟ ದೇವಾಲಯ. ಬಾದಾಮಿಯಲ್ಲಿ ಅತ್ಯಂತ ಪ್ರಾಚೀನ ಎಂದು ಪರಿಗಣಿತವಾಗಿರುವುದು ಮೇಗಣ ಶಿವಾಲಯ. ಎರಡನೆಯ ಪುಲಕೇಶಿಯ ಕಾಲದಲ್ಲಿ ನಿರ್ಮಾಣವಾಗಿರುವ ಈ ವಿಷ್ಣು ದೇವಾಲಯವು ಪ್ರದಕ್ಷಿಣಾ ಪಥವುಳ್ಳ ಗಾಂಧಾರ ಶೈಲಿಯಲ್ಲಿ ರಚಿತವಾಗಿದ್ದು ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ.

ಐಹೊಳೆಯು ಚಾಲುಕ್ಯರ ವಾಣಿಜ್ಯ ಕೇಂದ್ರವಾಗಿತ್ತು. ಅದು ಅಯ್ಯಾವೊಳೆ ಐನೂರು ಎಂಬ ವರ್ತಕ ಶ್ರೇಣಿಯ ಕೇಂದ್ರಸ್ಥಾನ. ವ್ಯಾಪಾರಿಗಳು ಹೆಚ್ಚಾಗಿ ನೆಲೆಸಿದ್ದ ಐಹೊಳೆಯಲ್ಲಿ ಸಹಜವಾಗಿಯೇ ದೇವಾಲಯಗಳ ಸಂಖ್ಯೆ ಹೆಚ್ಚು. ಐಹೊಳೆಯಲ್ಲಿ ಸುಮಾರು ೧೨೦ಕ್ಕೂ ಅಧಿಕ ದೇವಾಲಯಗಳಿವೆ. ಮುಖ್ಯವಾಗಿ ದುರ್ಗಾ ದೇವಾಲಯ, ಲಾಡಖಾನ್, ಸೂರ್ಯನಾರಾಯಣ, ಹುಚ್ಚಪ್ಪಯ್ಯ ಮಠ, ಕುಂತಿಗುಡಿ, ಜೈನರ ಗುಡಿ, ಮಲ್ಲಿಕಾರ್ಜುನ ಗುಡಿ, ಮೇಗುತಿ ಗುಡಿ, ಗಳಗನಾಥ, ರಾಮಲಿಂಗ, ಹುಚ್ಚಿಮಲ್ಲಿಗುಡಿ, ಗೌಡರಗುಡಿ, ಯಣಿಯಾರ್ ಗುಡಿ, ತಾರಬಸಪ್ಪನ ಗುಡಿ ಮುಂತಾದ ದೇವಾಲಯಗಳು ಚಾಲುಕ್ಯರ ಕಾಲದಲ್ಲಿ ಕಟ್ಟಲಾಗಿವೆ. ಇವುಗಳಲ್ಲಿ ದುರ್ಗಾ ದೇವಾಲಯವು ಗಜಪೃಷ್ಠಾಕಾರದ ತಳವಿನ್ಯಾಸದಲ್ಲಿ  ನಿರ್ಮಿಸಲಾಗಿದ್ದು, ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಗಾಂಧಾರ ರಚನೆಯ ಈ ದೇವಾಲಯದಲ್ಲಿ ಗರ್ಭಗೃಹ, ಪ್ರದಕ್ಷಿಣಾಪಥ, ಸಭಾಮಂಟಪ ಮತ್ತು ತೆರೆದ ಮುಖಮಂಟಪಗಳಿಂದ ರಚಿಸಲಾಗಿದೆ. ತೆರೆದ ಮುಖಮಂಟಪದಲ್ಲಿನ ಕಂಬಗಳ ಮೇಲೆ ಬೋಧಿಗೆಗೆ ಆನಿಸಿಕೊಂಡಂತೆ ಕೆತ್ತಲಾಗಿರುವ ದಂಪತಿಗಳ ಶಿಲ್ಪಗಳು ಇಡೀ ದೇವಾಲಯಕ್ಕೆ ವಿಶೇಷ ಆಕರ್ಷಣೆ ತಂದಿವೆ. ಐಹೊಳೆಯ ಲಾಡಖಾನ್ ಗುಡಿಯು ಒಂದು ವಿಶಿಷ್ಟ ರಚನೆಯ ದೇವಾಲಯ. ಕ್ರಿ.ಶ. ೪೫೦ರ ಅವಧಿಯಲ್ಲಿ ನಿರ್ಮಿಸಲಾದ

ಇದು ಚಚ್ಚೌಕವಾದ ಹಜಾರದಿಂದ ಕೂಡಿದ್ದು ಇದರ ಒಳ ಗೋಡೆಗೆ ಹೊಂದಿಕೊಂಡಂತೆ ಗರ್ಭಗೃಹ ನಿರ್ಮಿಸಿ ರಚಿಸಲಾಗಿದೆ. ಪ್ರವೇಶಕ್ಕಾಗಿ ಮುಖಮಂಟಪ ನಿರ್ಮಿಸಲಾಗಿದೆ. ಮೇಲ್ಭಾಗದಲ್ಲಿ ಚೌಕಾಕಾರದ ದ್ರಾವಿಡ ಶೈಲಿ ಶಿಖರದ ರಚನೆಯಿದೆ. ಮಲಪ್ರಭಾ ನದಿಯ ದಂಡೆಯ ಮೇಲಿರುವ ಪಟ್ಟದಕಲ್ಲಿನಲ್ಲಿ ಚಾಲುಕ್ಯರ ಹತ್ತು ದೇವಾಲಯಗಳಿವೆ. ಇವುಗಳಲ್ಲಿ ಒಂಬತ್ತು ದೇಗುಲಗಳು ಶೈವ ಪಂಥಕ್ಕೆ ಸೇರಿವೆ ಮತ್ತು ಒಂದು ಮಾತ್ರ ಜೈನ ದೇವಾಲಯವಾಗಿದೆ. ಪ್ರಾಚೀನದಲ್ಲಿ ಇದನ್ನು ಕಿಸುವೊಳಲ್ ಎಂದು ಕರೆಯಲಾಗುತ್ತಿತ್ತು. ದ್ರಾವಿಡ, ನಾಗರ ಮತ್ತು ವೇಸರ ಶೈಲಿ ಎಂದು ಗುರುತಿಸಲಾಗುವ ಶೈಲಿಯ ಎಲ್ಲ ದೇವಾಲಯಗಳ ಮಾದರಿಗಳು ಇಲ್ಲಿವೆ. ಆದ್ದರಿಂದಲೇ ಪಟ್ಟದಕಲ್ಲಿಗೆ 'ದೇವಾಲಯ ತೊಟ್ಟಿಲು' ಎಂದು ಕರೆಯಲಾಗುತ್ತದೆ. ಕ್ರಿ.ಶ. ೬೫೦ರಿಂದ ೭೫೦ರ ವರೆಗೆ ಕಾಲಾನುಕ್ರಮದಲ್ಲಿ ಪಾಪನಾಥ, ಸಂಗಮೇಶ್ವರ ಅಥವಾ ವಿಜಯೇಶ್ವರ, ವಿರೂಪಾಕ್ಷ ಅಥವಾ ಲೋಕೇಶ್ವರ, ಮಲ್ಲಿಕಾರ್ಜುನ ಅಥವಾ ತ್ರೈಲೋಕೇಶ್ವರ, ಗಳಗನಾಥ, ಜಂಬುಲಿಂಗ, ಕಾಡಸಿದ್ದೇಶ್ವರ ಮತ್ತು ಕಾಶಿವಿಶ್ವೇಶ್ವರ ದೇವಾಲಯಗಳು ನಿರ್ಮಿಸಿದ್ದನ್ನು ಇಲ್ಲಿ ಗುರುತಿಸಬಹುದು. ಪಾಪನಾಥ ದೇವಾಲಯವು ಗರ್ಭಗೃಹ ಮತ್ತು ಅಂತರಾಳ, ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದೆ. ಇದು ನಾಗರಶೈಲಿಯ ದೇವಾಲಯವಾಗಿದೆ. ಸಂಗಮೇಶ್ವರ ದೇವಾಲಯ ದ್ರಾವಿಡ ಶೈಲಿಗೆ ಸೇರಿದೆ. ಇಮ್ಮಡಿ ವಿಜಯಾದಿತ್ಯನ ಕಾಲದಲ್ಲಿ (ಕ್ರಿ.ಶ. ೬೯೬–೭೩೩) ನಿರ್ಮಿಸಲಾದ ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿಂದ ರಚನೆಯಾಗಿದೆ. ಕಾಡಸಿದ್ಧೇಶ್ವರ ದೇವಾಲಯವು ರೇಖಾನಾಗರ ಶೈಲಿಯ ಶಿಖರಕ್ಕೆ ಉದಾಹರಣೆಯಾಗಿದೆ. ಜಂಬುಲಿಂಗನ ಗುಡಿಯ ಶಿಖರವೂ ರೇಖಾನಾಗರ ಶೈಲಿಗೇ ಸೇರುತ್ತದೆ. ಅದರಂತೆ ಇಲ್ಲಿಯ ಗಳಗನಾಥ ದೇವಾಲಯ ಗಾಂಧಾರ ವಿನ್ಯಾಸದಲ್ಲಿ ಕೂಡಿದ್ದು ಗರ್ಭಗೃಹ ಮತ್ತು ಅಂತರಾಳಗಳು ಮಾತ್ರ ಉಳಿದುಕೊಂಡಿವೆ. ಇದರ ರೇಖಾನಾಗರ ಶಿಖರ ಆಕರ್ಷಕವಾಗಿದೆ. ಪಟ್ಟದಕಲ್ಲಿನ ಮಲ್ಲಿಕಾರ್ಜುನ, ವಿರೂಪಾಕ್ಷ ಮತ್ತು ಕಾಶಿ ವಿಶ್ವೇಶ್ವರ ದೇವಾಲಯಗಳು ಪ್ರೌಢ ಹಂತದ ಕಲಾಶೈಲಿಗಳೆಂದು ಗುರುತಿಸಬಹುದು. ವಿರೂಪಾಕ್ಷ ದೇವಾಲಯವು ಪರಿಪೂರ್ಣ ಮಾತ್ರವಲ್ಲದೆ ವಿಸ್ತಾರವಾಗಿಯೂ ಇದೆ. ವಿರೂಪಾಕ್ಷ ಮತ್ತು



ಚಿತ್ರ ೮.೧: ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ (ಚಿತ್ರ ಕೃಪೆ: ವಿಕಿಮಿಡಿಯಾ)



ಚಿತ್ರ ೮.೨: ಕಿರಾತಾರ್ಜುನೀಯ ಪ್ರಸಂಗ, ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು
(ಚಿತ್ರ ಕೃಪೆ: ಟಿ.ಎಸ್. ಸತ್ಯನಾಥ್)

ತ್ರೈಲೋಕೇಶ್ವರ ದೇವಾಲಯಗಳೆರಡೂ ಸಮಕಾಲೀನ ನಿರ್ಮಿತಿಗಳು. ಗರ್ಭಗೃಹ, ಅಂತರಾಳ, ನವರಂಗ ಅಥವಾ ಸಭಾಮಂಟಪವಲ್ಲದೆ ಮುಖಮಂಟಪಗಳ ಸೇರ್ಪಡೆ, ಎತ್ತರದ ಅಧಿಷ್ಠಾನ, ಅದರ ಪಟ್ಟಿಕೆಗಳಲ್ಲಿ ರಾಮಾಯಣ ಮತ್ತು ಮಹಾಭಾರತದ ಕಥನಗಳ ಚಿತ್ರಣ, ಹೊರಭಿತ್ತಿಗಳಲ್ಲಿ ವಿವಿಧ ದೇವಮೂರ್ತಿಗಳ ಕೆತ್ತನೆ, ಒಳ ಕಂಬಗಳ ಮೇಲೆ ಪಟ್ಟಿಕೆಗಳಲ್ಲಿ ಕಥಾನಕಗಳ ಕೆತ್ತನೆ, ಅಲಂಕರಣ ಇತ್ಯಾದಿಗಳು ಕ್ರಿ.ಶ. ೮ನೆಯ ಶತಮಾನದ ಪೂರ್ವಾರ್ಧದ ಹೊತ್ತಿಗೇ ಬಾದಾಮಿ ಚಾಲುಕ್ಯರ ಕುಶಲಕರ್ಮಿಗಳು ದೇವಾಲಯ ನಿರ್ಮಾಣದಲ್ಲಿ ಸಾಧಿಸಿದ್ದ ಪ್ರೌಢಿಮೆಯನ್ನು ಸೂಚಿಸುತ್ತದೆ. ಚಿತ್ರ ೮.೧ರಲ್ಲಿ ವಿರೂಪಾಕ್ಷ ದೇವಾಲಯದ ನೋಟವನ್ನು ಚಿತ್ರ ೮.೨ರಲ್ಲಿ ಅದರ ಕಂಭದಮೇಲೆ ನಿರೂಪಿತವಾಗಿರುವ ಕಿರಾತಾರ್ಜುನೀಯ ಪ್ರಸಂಗವನ್ನೂ ನೋಡಬಹುದು. ಬಾದಾಮಿಗೆ ಹತ್ತಿರವಿರುವ ಮಹಾಕೂಟದಲ್ಲಿಯೂ ಚಾಲುಕ್ಯರ ಹಲವು ದೇವಾಲಯಗಳಿವೆ. ಮಹಾಕೂಟೇಶ್ವರ ದೇಗುಲ ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯದ ಸಂಕೀರ್ಣದಲ್ಲಿ ರೇಖಾನಾಗರ ಶೈಲಿಯ ದೇಗುಲಗಳಿವೆ.

### ೪. ರಾಷ್ಟ್ರಕೂಟರ ವಾಸ್ತುಶಿಲ್ಪ

ರಾಷ್ಟ್ರಕೂಟರು ಕ್ರಿ.ಶ. ೭೫೭ರಿಂದ ಸುಮಾರು ಎರಡು ಶತಮಾನಗಳ ಕಾಲ ಆಳ್ವಿಕೆ ನಡೆಸಿದರು. ಇವರು ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ, ಗುಜರಾತು ಮತ್ತು ಮಧ್ಯಪ್ರದೇಶಗಳ ಕೆಲಭಾಗಗಳನ್ನು ಒಳಗೊಂಡ ವಿಶಾಲ ಭೂಪ್ರದೇಶವನ್ನು ಆಳ್ವಿಕೆ ನಡೆಸಿ ಕನ್ನಡ ನಾಡು ನುಡಿ ಸಂಸ್ಕೃತಿಗೆ ಅಪಾರವಾದ ಕೊಡುಗೆಯನ್ನು ನೀಡಿದರು. ದಂತಿದುರ್ಗ ನಿಂದ ಆರಂಭಗೊಂಡ ರಾಷ್ಟ್ರಕೂಟರ ಆಳ್ವಿಕೆ ಮುಂದೆ ಮೂರನೇ ಕೃಷ್ಣ, ಗೋವಿಂದ ಮತ್ತು ಅಮೋಘವರ್ಷ ನೃಪತುಂಗ ಮುಂತಾದ ಅರಸರ ಸಾಂಸ್ಕೃತಿಕ

ಕೊಡುಗೆಗಳಿಂದ ಖ್ಯಾತಿಯನ್ನು ಪಡೆಯಿತು. ಕನ್ನಡದ ಮೊದಲ ಕೃತಿ 'ಕವಿರಾಜಮಾರ್ಗ'ದ ರಚನೆಯಾಗಿದ್ದು ನೃಪತುಂಗನ ಆಳ್ವಿಕೆಯಲ್ಲಿ. ರಾಷ್ಟ್ರಕೂಟರು ಒಳ್ಳೆಯ ಕಲಾಭಿರುಚಿ ಉಳ್ಳವರಾಗಿದ್ದು ಭಾರತೀಯ ಕಲಾಪರಂಪರೆಗೆ ಅತ್ಯದ್ಭುತವಾದ ಕೊಡುಗೆ ನೀಡಿರುವರು ಎಂದರೆ ತಪ್ಪಾಗಲಾರದು. ಇವರ ಕಲೆಯಲ್ಲಿ ಚಾಲುಕ್ಯರ ವಾಸ್ತುಶಿಲ್ಪದ ಪ್ರಭಾವವಿದ್ದು ಅದರಲ್ಲಿ ಕೆಲವು ಮಾರ್ಪಾಡುಗಳೊಂದಿಗೆ ತಮ್ಮ ದೇವಾಲಯಗಳನ್ನು ನಿರ್ಮಾಣ ಮಾಡಿರುವರು. ಎಲ್ಲೋರ, ಎಲಿಫೆಂಟಾ, ಅಜಂತಾ, ಜೋಗೇಶ್ವರಿ, ಶಿರವಾಳ ಮುಂತಾದೆಡೆ ಇವರ ಕಲಾ ಸ್ಮಾರಕಗಳನ್ನು ಕಾಣಬಹು ದಾಗಿದೆ. ಪ್ರಾರಂಭಿಕವಾಗಿ ರಾಷ್ಟ್ರಕೂಟರ ವಾಸ್ತುಶಿಲ್ಪವು ಗುಹಾಂತರ ದೇವಾಲಯಗಳಿಗೆ ಸೀಮಿತವಾಗಿತ್ತು. ಎಲ್ಲೋರದ ಕೈಲಾಸ ದೇವಾಲಯ, ಎಲಿಫಂಟಾದ ಶೈವ ಗುಹಾಲಯ ಮತ್ತು ಪುಣೆಯ ಪಾತಾಳೇಶ್ವರ, ಧಾರೇಶ್ವರ, ಜೋಗೇಶ್ವರ ಗುಹಾಲಯಗಳು ಇವರ ಕಾಲಾವಧಿಯಲ್ಲಿ ರಚನೆಯಾಗಿವೆ. ರಾಷ್ಟ್ರಕೂಟರ ದೇವಾಲಯಗಳ ಪ್ರಮುಖ ಲಕ್ಷಣಗಳನ್ನು ಕೆಳಕಂಡಂತೆ ಗುರುತಿಸಬಹುದು:

೧. ದೇವಾಲಯಗಳು ಗರ್ಭಗುಡಿ, ಅಂತರಾಳ, ನವರಂಗ, ಮುಖಮಂಟಪ ಹಾಗೂ ನಂದಿ ಮಂಟಪಗಳನ್ನು ಒಳಗೊಂಡಿವೆ.

೨. ದೇವಾಲಯದ ಗರ್ಭಗುಡಿ ಕೆಲವೊಮ್ಮೆ ದ್ವಿಕೂಟ ಮತ್ತು ತ್ರಿಕೂಟ ರಚನೆಗಳಿಂದ ಕೂಡಿದ್ದು, ಇದರಿಂದ ದೇವಾಲಯಗಳ ಸೌಂದರ್ಯ ಹೆಚ್ಚುತ್ತಿತ್ತು. ಉದಾಹರಣೆಗೆ, ರೋಣದ ಸೋಮೇಶ್ವರ ದೇವಾಲಯ ದ್ವಿಕೂಟ ದೇವಾಲಯವಾಗಿದೆ.

೩. ದೇವಾಲಯಗಳ ರಚನೆಗೆ ಕೆಂಪು ಮರಳು ಕಲ್ಲಿನ ಪದರುಗಲ್ಲುಗಳನ್ನು ಬಳಕೆ ಮಾಡುತ್ತಿದ್ದರು.

೪. ದೇವಾಲಯದ ಕಂಭಗಳ ರಚನೆ ವಿಶಿಷ್ಟವಾಗಿದ್ದು ಚಚ್ಚೌಕಾಕಾರದ ಕಂಭಗಳು ಸುಂದರವಾದ ಅಲಂಕಾರದ ಕೆತ್ತನೆಗಳಿಂದ ಕೂಡಿವೆ.

೫. ದೇವಾಲಯದ ಮೇಲ್ಛಾವಣಿ ಭಾಗಗಳಲ್ಲಿ ಅತ್ಯಂತ ಕಲಾತ್ಮಕತೆಯಿಂದ ಕೂಡಿದ ಉಬ್ಬು ಶಿಲ್ಪಗಳು ಕಂಡುಬರುತ್ತವೆ.

೬. ದೇವಾಲಯದ ಗೋಡೆಗಳ ಮೇಲೂ ಉಬ್ಬುಶಿಲ್ಪಗಳ ರಚನೆ ಕಂಡುಬರುತ್ತವೆ.

೭. ದೇವಾಲಯಗಳ ತಳ ವಿನ್ಯಾಸದಲ್ಲಿ ಸಾಕಷ್ಟು ಮಾರ್ಪಾಟು ಹಾಗೂ ಸುಧಾರಣೆಗಳು ಕಂಡುಬರುತ್ತವೆ. ನಕ್ಷತ್ರಾಕಾರದ ತಳವಿನ್ಯಾಸ ಹೊಂದಿರುವ ಕಣ್ಣೂರಿನ ಪರಮೇಶ್ವರ ದೇವಾಲಯವು ಮೂಲತಃ ಜೈನ ಬಸದಿಯಾಗಿದ್ದು ಇದನ್ನು ಸೇನಾನಿ ಬಂಕೆಯನು ರಚಿಸಿರುವನು. ಇದು ನಕ್ಷತ್ರಾಕಾರದ ವಿನ್ಯಾಸದ ದೇವಾಲಯವಾಗಿದೆ.

೮. ದೇವಾಲಯಗಳ ವಿಮಾನ ರಚನೆಯು ವಿಶಿಷ್ಟವಾಗಿದೆ. ನಾಗರ ಶೈಲಿ ಹಾಗೂ ದ್ರಾವಿಡ ಶೈಲಿಯ ಶಿಖರಗಳ ನಿರ್ಮಾಣ ಕಂಡುಬರುತ್ತದೆ. ಉದಾಹರಣೆಗೆ, ಎಲ್ಲೋರದ ಕೈಲಾಸನಾಥ ದೇವಾಲಯದ ವಿಮಾನವು ದ್ರಾವಿಡ ಶೈಲಿಯಲ್ಲಿದೆ.

೯. ದೇವಾಲಯಗಳ ಹೊರಗೋಡೆಗಳ ಭಿತ್ತಿಯ ಮೇಲೆ ರಾಮಾಯಣ, ಮಹಾಭಾರತ, ಪಂಚತಂತ್ರದ ಕಥೆಗಳ ನಿರೂಪಣೆಯ ಶಿಲ್ಪಗಳನ್ನು ಅತ್ಯಂತ ಮನೋಹರವಾಗಿ ಕೆತ್ತನೆ ಮಾಡಿರುವುದು ಕಂಡುಬರುತ್ತದೆ. ಉದಾಹರಣೆಗೆ, ಗುಲ್ಬರ್ಗಾ ಜಿಲ್ಲೆಯ ಶಿರವಾಳದಲ್ಲಿ ದೇವಾಲಯಗಳು ೩ನೆಯ ಕೃಷ್ಣನ ಕಾಲದ್ದಾಗಿದ್ದು ಅಲ್ಲಿ ನಿರೂಪಣಾ ಶಿಲ್ಪಗಳನ್ನು ನೋಡಬಹುದು.

೧೦. ಗರ್ಭಗುಡಿಯ ಇಕ್ಕೆಲಗಳಲ್ಲೂ ಬೃಹತ್ ಗಾತ್ರದ ದ್ವಾರಪಾಲಕರುಗಳ ಶಿಲ್ಪಗಳು ಕಂಡುಬರುತ್ತದೆ.

೧೧. ದೇವಾಲಯಗಳ ನಿರ್ಮಾಣದಲ್ಲಿ ಅಂತಸ್ತುಗಳ ರಚನೆ ವಿಶಿಷ್ಟವಾಗಿದೆ. ಉದಾಹರಣೆಗೆ, ಐಹೊಳೆ ಪಟ್ಟದಕಲ್ಲುಗಳಲ್ಲಿನ ಬಸದಿಗಳು.

ಎಲ್ಲೋರದ ೧೫ನೆಯ ಗುಹೆ ದಶಾವತಾರ ಗುಹೆ ಎಂದು ಪ್ರಸಿದ್ಧಿ ಪಡೆದಿದೆ. ರಾಷ್ಟ್ರಕೂಟ ದಂತಿದುರ್ಗನ ಕಾಲದಲ್ಲಿ (ಕ್ರಿ.ಶ. ೭೩೫–೫೬) ನಿರ್ಮಾಣವಾಗಿರುವ ಇದು ಎರಡು ಅಂತಸ್ತಿನ ವಿಶಾಲವಾದ ಗುಹಾಲಯ. ಇಲ್ಲಿರುವ ನಂದಿಮಂಟಪ ಪ್ರತ್ಯೇಕವಾಗಿದೆ. ಮೇಲಿನ ಅಂತಸ್ತಿನ ಸಭಾಮಂಟಪದಲ್ಲಿ ಆರು ಸಾಲು ಕಂಭಗಳಿವೆ. ಪ್ರತಿಯೊಂದು ಸಾಲಿನಲ್ಲೂ ಒಂಬತ್ತು ಕಂಭಗಳಿದ್ದು, ಒಟ್ಟು ೫೪ ಕಂಭಗಳಿದ್ದು, ಪ್ರತಿ ಕಂಭದಲ್ಲೂ ವೈವಿಧ್ಯ ಇದೆ. ಗರ್ಭಗೃಹದ ಮುಂದಿನ ಅಂತರಾಳದಲ್ಲೂ ಎರಡು ಅಲಂಕೃತ ಕಂಭಗಳಿರುವುದು ವಿಶೇಷ ಎಂದೇ ಭಾವಿಸಲಾಗಿದೆ. ದೇವಾಲಯದ ಹೊರಭಿತ್ತಿಯಲ್ಲಿ ದೊಡ್ಡ ಪ್ರಮಾಣದ ಶಿವ ಮತ್ತು ವಿಷ್ಣುಪರವಾದ ಶಿಲ್ಪಗಳಿವೆ. ಎಲ್ಲೋರಾದ ಕೈಲಾಸ ಗುಹಾಂತರ ದೇವಾಲಯ ಏಕಶಿಲೆಯಲ್ಲಿ ಕೊರೆದು ರಚಿಸಿದ ದೇವಾಲಯವಾಗಿದೆ. ಇದು ೩೧.೧೨ ಮೀ. ಉದ್ದ, ೪೬.೯೨ ಮೀ. ಅಗಲ ಮತ್ತು ೩೧.೬೧ ಮೀ. ಎತ್ತರವಾಗಿದೆ. ಎರಡು ಅಂತಸ್ತಿನಲ್ಲಿ ರಚಿಸಲಾಗಿರುವ ಈ ದೇವಾಲಯ ದ್ರಾವಿಡ ಶೈಲಿಯಲ್ಲಿದೆ. ಪಟ್ಟದಕಲ್ಲಿನ ವಿರುಪಾಕ್ಷ ದೇವಾಲಯದ ರಚನಾವಿನ್ಯಾಸವನ್ನು ಹೋಲುವ ಈ ಕೈಲಾಸ ದೇವಾಲಯ ಭಾರತೀಯ ವಾಸ್ತುರಚನೆಯ ಅದ್ಭುತ ಎಂದು ಕರೆಯಲಾಗುತ್ತದೆ. ರಾಷ್ಟ್ರಕೂಟರ ಅರಸ ೩ನೆಯ ಕೃಷ್ಣನ ಕಾಲದಲ್ಲಿ ರಚಿಸಲಾದ ಈ ದೇವಾಲಯ ಪ್ರವೇಶ ದ್ವಾರ, ವಿಶಾಲವಾದ ಪ್ರಾಂಗಣ, ಧ್ವಜಸ್ತಂಭ, ನಂದಿಮಂಟಪ, ಮುಖಮಂಟಪ, ನವರಂಗ, ಅಂತರಾಳ, ಗರ್ಭಗೃಹಗಳಿಂದ ಕೂಡಿದೆ. ಇದರ ಅಧಿಷ್ಠಾನದ ಗೋಡೆಯಲ್ಲಿ ರಾಮಾಯಣದ ಕಥನ ಶಿಲ್ಪಗಳನ್ನು ಬಿಡಿಸಲಾಗಿದೆ. ಕೈಲಾಸ ಪರ್ವತವನ್ನು ರಾವಣನು ತನ್ನ ಕೈಗಳಿಂದ ಎತ್ತುತ್ತಿರುವ ಶಿಲ್ಪವು ಅತ್ಯಂತ ಕಲಾತ್ಮಕವಾಗಿದೆ. ಚಿತ್ರ ೯.೧ರಲ್ಲಿ ಕೈಲಾಸನಾಥ ದೇವಾಲಯದ ನೋಟವನ್ನೂ



ಚಿತ್ರ ೯.೧: ಎಲ್ಲೋರದ ಕೈಲಾಸನಾಥ ದೇವಾಲಯದ ನೋಟ



ಚಿತ್ರ ೯.೨: ಜೈನ ಯಕ್ಷಿ ಅಂಬಿಕಾ, ಗುಹಾಲಯ ೩೪, ಎಲ್ಲೋರ
(ಚಿತ್ರ ಕೃಪೆ: ಟಿ.ಎಸ್. ಸತ್ಯನಾಥ್)

ಚಿತ್ರ ೯.೨ರಲ್ಲಿ ಎಲ್ಲೋರದ ಗುಹಾಲಯ ೩೪ರಲ್ಲಿರುವ ಜೈನ ಅಂಬಿಕಾ ಯಕ್ಷಿಯ ಶಿಲ್ಪವನ್ನು ನೀಡಲಾಗಿದೆ. ರಾಷ್ಟ್ರಕೂಟರ ಅನೇಕ ದೇವಾಲಯಗಳು ಯಾದಗೀರ ಜಿಲ್ಲೆಯ ಸಿರಿವಾಳ ಗ್ರಾಮದಲ್ಲಿ ಕಂಡುಬರುತ್ತವೆ. ದ್ರಾವಿಡ ಶೈಲಿಯಲ್ಲಿ ರಚಿತವಾಗಿರುವ ಇಲ್ಲಿ ದೇವಾಲಯಗಳು ರಾಷ್ಟ್ರಕೂಟರ ದೇವಾಲಯಗಳ ವಾಸ್ತುಶಿಲ್ಪಕಲೆಗೆ ಉತ್ತಮ ಉದಾಹರಣೆಯಾಗಿವೆ. ಅದರಂತೆ, ಧಾರವಾಡ ಪರಿಸರದ ಕೊಣ್ಣೂರಿನಲ್ಲಿರುವ ಜೈನ ಬಸದಿಯು ಕ್ರಿ.ಶ. ೮೬೦ರ ಅವಧಿಯಲ್ಲಿ ಅಮೋಘವರ್ಷ ನೃಪತುಂಗನ ಆಳ್ವಿಕೆಯಲ್ಲಿ ನಿರ್ಮಿಸಲಾಗಿದೆ. ನಕ್ಷತ್ರಾಕಾರದ ವಿನ್ಯಾಸದಲ್ಲಿ ನಿರ್ಮಿಸಲಾದ ಇದು ಮುಂದೆ ಕಲ್ಯಾಣ ಚಾಲುಕ್ಯರ ಮತ್ತು ಹೊಯ್ಸಳರ ದೇವಾಲಯಗಳ ನಿರ್ಮಾಣಕ್ಕೆ ಪ್ರೇರಣೆಯಾಗಿದೆ ಎಂದು ವಿದ್ವಾಂಸರ ಅಭಿಪ್ರಾಯ.

## ೫. ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪ

ರಾಷ್ಟ್ರಕೂಟರ ಅವನತಿಯ ನಂತರ ಕ್ರಿ.ಶ. ೯೭೩ರಲ್ಲಿ ಕಲ್ಯಾಣ ಚಾಲುಕ್ಯರು ಆಡಳಿತಕ್ಕೆ ಬಂದರು. ಇವರು ಸುಮಾರು ೧೨ನೆಯ ಶತಮಾನದ ಅಂತ್ಯದ ದಶಕದವರೆಗೂ ಕರ್ನಾಟಕ ಒಳಗೊಂಡಂತೆ ಮಹಾರಾಷ್ಟ್ರ ಹಾಗೂ ತೆಲಂಗಾಣದ ಕೆಲವು ಪ್ರದೇಶಗಳವರೆಗೆ ರಾಜ್ಯವನ್ನು ವಿಸ್ತರಿಸಿದ್ದರು. ಕಲ್ಯಾಣ ಚಾಲುಕ್ಯರು ತಮ್ಮ ಪೂರ್ವಿಕರಂತೆ ಕಲಾ ಪೋಷಕರಾಗಿದ್ದು, ಕಲೆ, ವಾಸ್ತುಶಿಲ್ಪ ಮತ್ತು ಶಿಲ್ಪಕಲಾ ಕ್ಷೇತ್ರಕ್ಕೆ ಮಹತ್ತರವಾದ ಕೊಡುಗೆಗಳನ್ನು ನೀಡಿದ್ದಾರೆ. ಅವರು ಬಾದಾಮಿ ಚಾಲುಕ್ಯರ ವಾಸ್ತು ಶೈಲಿಯನ್ನೇ ಮುಂದುವರೆಸಿದರು. ಈ ಶೈಲಿಯು ಬಾದಾಮಿ ಚಾಲುಕ್ಯರ ಉತ್ತರಾರ್ಧದ ಶೈಲಿಗೂ ಹೊಯ್ಸಳರ ಶೈಲಿಗೂ ಮಧ್ಯದ ಕೊಂಡಿಯಾಗಿವೆ. ೧೨ನೆಯ ಶತಮಾನದಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ವಾಸ್ತುಶಿಲ್ಪ ತನ್ನ ಉತ್ತುಂಗ ಸ್ಥಿತಿಯನ್ನು ಮುಟ್ಟಿತ್ತು. ಬಾದಾಮಿ ಚಾಲುಕ್ಯರ ಕಾಲದಲ್ಲಿ



ಚಿತ್ರ ೧೦.೧: ಲಕ್ಕುಂಡಿಯ ಕಾಶಿ ವಿಶ್ವೇಶ್ವರ ದೇವಾಲಯ (ಚಿತ್ರ ಕೃಪೆ: ವಿಶ್ವವಾಣಿ)



೧೦.೨: ಒಳಮಂಟಪ, ಲಕ್ಕುಂಡಿಯ ಕಾಶಿ ವಿಶ್ವೇಶ್ವರ ದೇವಾಲಯ

ಬಳಸುತ್ತಿದ್ದ ಮರಳುಗಲ್ಲನ್ನು ಬಿಟ್ಟು ಮೃದುವಾದ ಕ್ಲೋರೈಟಿಕ್ ಷಿಸ್ಟ್ ಎಂಬ ಹಸಿರುಗಪ್ಪು ಅಥವಾ ಬೂದು ಬಣ್ಣದ ಕಲ್ಲನ್ನು ಶಿಲ್ಪಕಲೆಗೆ ಉಪಯೋಗಿಸಿದರು. ಮೃದು ಕಲ್ಲಿನ ಬಳಕೆಯಿಂದ ಸೂಕ್ಷ್ಮವಾದ ಕೆತ್ತನೆಯ ಕುಸುರಿ ಕೆಲಸವನ್ನು ಇವರ ಕಾಲದ ದೇವಾಲಯಗಳಲ್ಲಿ ಕಾಣಬಹುದಾಗಿದೆ. ಲಕ್ಕುಂಡಿಯ ಕಾಶಿ ವಿಶ್ವೇಶ್ವರ, ಕುರುವತ್ತಿಯ ಮಲ್ಲಿಕಾರ್ಜುನ, ಕುಕ್ಕನೂರಿನ ಕಲ್ಲೇಶ್ವರ ಮತ್ತು ನವಲಿಂಗ ಮುಂತಾದ ದೇವಾಲಯಗಳು ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪ ಶೈಲಿಯ ಉತ್ಕೃಷ್ಟ ಉದಾಹರಣೆಗಳಾಗಿವೆ. ಚಿತ್ರ ೧೦.೧ರಲ್ಲಿ ಕ್ರಿ.ಶ. ೧೦೮೭ರಲ್ಲಿ ರಚಿತವಾದ ಲಕ್ಕುಂಡಿಯ ಕಾಶಿ ವಿಶ್ವೇಶ್ವರ ದೇವಾಲಯದ ನೋಟವನ್ನೂ ಚಿತ್ರ ೧೦.೨ರಲ್ಲಿ ಅದರ ಒಳಮಂಟಪದ ಚಿತ್ರವನ್ನೂ ನೋಡಬಹುದು. ಕಲ್ಯಾಣ ಚಾಲುಕ್ಯ

ಶೈಲಿಯ ದೇವಾಲಯಗಳನ್ನು ಆರಂಭಿಕ ಹಂತದ ರಚನೆಗಳು ಮತ್ತು ಪ್ರೌಢ ಹಂತದ ರಚನೆಗಳು ಎಂದು ಎರಡು ಹಂತಗಳಲ್ಲಿ ವಿಂಗಡಿಸಬಹುದಾಗಿದೆ. ಆರಂಭಿಕ ಹಂತದ ದೇವಾಲಯಗಳು ಕ್ರಿ.ಶ. ೧೧ನೆಯ ಶತಮಾನದ ಆರಂಭದಲ್ಲಿ ನಿರ್ಮಾಣಗೊಂಡಿವೆ. ಈ ಹಂತದ ರಚನೆಯಲ್ಲಿ ಬಹುಪಾಲು ಬಾದಾಮಿ ಚಾಲುಕ್ಯರ ರಚನೆಗಳನ್ನು ಹೋಲುತ್ತವೆ. ಎರಡನೆಯ ಹಂತಗಳಲ್ಲಿ ನಿರ್ಮಾಣಗೊಂಡ ರಚನೆಗಳನ್ನು ಕಲ್ಯಾಣ ಚಾಲುಕ್ಯರ ಪ್ರೌಢ ಹಂತದ ರಚನೆ ಎಂದು ಕರೆಯಲಾಗಿದೆ. ಕ್ರಿ.ಶ. ೧೧ನೆಯ ಶತಮಾನದ ಮಧ್ಯಭಾಗದಿಂದ ೧೨ನೆಯ ಶತಮಾನದ ಅಂತ್ಯದವರೆಗೂ ಈ ಹಂತದ ರಚನೆಗಳನ್ನು ಕಾಣಬಹುದಾಗಿದೆ. ಈ ಹಂತದಲ್ಲಿ ಕ್ಲೋರೈಟಿಕ ಷಿಸ್ಟ್ ಅಥವಾ ಬಳಪದ ಕಲ್ಲಿನ ಬಳಕೆ ಕಾಣಬಹುದಾಗಿದೆ. ಈ ಹಂತದಲ್ಲಿ ನಿರ್ಮಾಣಗೊಂಡ ಕಲಾಕೃತಿ ಹೊಯ್ಸಳ, ಕಾಕತೀಯ ಮತ್ತು ವಿಜಯನಗರ ಸಾಮ್ರಾಜ್ಯಗಳ ಕಲೆಯ ಮೇಲೆ ಪ್ರೇರಣೆ ಹಾಗೂ ಪ್ರಭಾವವನ್ನು ಬೀರಿದೆ.

**೬. ಹೊಯ್ಸಳ ವಾಸ್ತುಶಿಲ್ಪ**

ಹೊಯ್ಸಳರು ಕ್ರಿ.ಶ. ೧೦ನೆಯ ಶತಮಾನದ ಮಧ್ಯಭಾಗದಿಂದ ೧೪ನೆಯ ಶತಮಾನದ ಮಧ್ಯಭಾಗದವರೆಗೆ ವಿಶೇಷವಾಗಿ ದಕ್ಷಿಣ ಕರ್ನಾಟಕ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ಆಳಿದರು. ಇವರ ರಾಜಧಾನಿಯಾಗಿ ಹಳೆಬೀಡು ಹೆಚ್ಚು ಪ್ರಸಿದ್ಧಿ ಪಡೆದಿದೆ. ಸಳ ಅರಸನಿಂದ ಆರಂಭವಾದ ಹೊಯ್ಸಳ ರಾಜ್ಯವು ಎರೆಯಂಗ, ಒಂದನೆಯ ಬಲ್ಲಾಳ, ವಿಷ್ಣುವರ್ಧನ, ಇಮ್ಮಡಿ ಬಲ್ಲಾಳ ಮುಂತಾದವರಿಂದ ರಾಜ್ಯ ವಿಸ್ತರಣೆಯನ್ನು ಹೊಂದಿ ನಾಡಿನ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಅಪೂರ್ವ ಕೊಡುಗೆಗಳನ್ನು ನೀಡಿದೆ. ಹೊಯ್ಸಳರ ಶಿಲ್ಪಿಗಳು ಶುದ್ಧವಾದ ಕನ್ನಡ ಪ್ರದೇಶಕ್ಕೆ ಸೇರಿದವರಾಗಿದ್ದು ಅನೇಕ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಹೊಯ್ಸಳ ವಾಸ್ತುಶೈಲಿಯನ್ನು ವೇಸರ ವಾಸ್ತುಶೈಲಿಯೆಂದು ಕರೆಯಲಾಗುತ್ತದೆ. ಶೈವ, ವೈಷ್ಣವ, ಶಾಕ್ತ, ಜೈನ ಪಂಥದ ದೇವಾಲಯಗಳು ನಿರ್ಮಾಣವಾಗಿವೆ. ಏಕಕೂಟದಿಂದ ಪಂಚಕೂಟದವರೆಗೆ ಹೊಯ್ಸಳ ಶೈಲಿಯಲ್ಲಿ ದೇಗುಲಗಳು ನಿರ್ಮಿತವಾಗಿವೆ. ಏಕಕೂಟದ ದೇಗುಲಕ್ಕೆ ಅತಿ ಉತ್ತಮ ಉದಾಹರಣೆಯೆಂದರೆ, ಬೇಲೂರಿನ ಚನ್ನಕೇಶವ ದೇವಾಲಯ, ಶ್ರವಣಬೆಳಗೊಳದಲ್ಲಿನ ಅಕ್ಕನ ಬಸದಿಗಳು ಹಾಗೂ ದ್ವಿಕೂಟಕ್ಕೆ ಹಳೇಬೀಡಿನ ಹೊಯ್ಸಳೇಶ್ವರ ಮತ್ತು ಶಾಂತಲೇಶ್ವರ (ಚಿತ್ರ ೧೧.೧ ನೋಡಿ), ಮೊಸಳೆಯ ಜೋಡಿ ದೇವಾಲಯಗಳು ಉದಾಹರಣೆಗಳಾಗಿವೆ. ತ್ರಿಕೂಟಕ್ಕೆ ಸೋಮನಾಥಪುರದ ಚನ್ನಕೇಶವ ದೇವಾಲಯ, ಹೊಸಹೊಳಲಿನ ಲಕ್ಷ್ಮೀನರಸಿಂಹ ದೇವಾಲಯಗಳು ಉದಾಹರಣೆಗಳಾಗಿವೆ. ಚತುಷ್ಕೂಟದ ಉತ್ತಮ ಉದಾಹರಣೆಯೆಂದರೆ ದೊಡ್ಡಗದ್ದವಳ್ಳಿಯ ಲಕ್ಷ್ಮೀ ದೇವಾಲಯ ಹಾಗೂ ಪಂಚಕೂಟಕ್ಕೆ ಸೋಮನಾಥಪುರ ಹಾಗೂ ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯಗಳು ಉತ್ತಮ ಉದಾಹರಣೆಗಳಾಗಿವೆ. ಸಮಕಾಲೀನ ದಕ್ಷಿಣ ಭಾರತದ ವಿವಿಧ ವಾಸ್ತು ವಿಶೇಷತೆಗಳಿಂದ ಪ್ರಭಾವಿತವಾಗಿರುವ ಹೊಯ್ಸಳ ಶೈಲಿಯ ದೇವಾಲಯಗಳು ಸಾಮಾನ್ಯವಾಗಿ ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿರುತ್ತವೆ. ಹೊಯ್ಸಳ ಶೈಲಿಯ ಪ್ರಮುಖ ಲಕ್ಷಣಗಳನ್ನು ಕೆಳಗೆ ನೀಡಲಾಗಿದೆ:

೧. ನಕ್ಷತ್ರಾಕಾರದ ಜಗತಿಯ ಮೇಲೆ ನಿರ್ಮಿತವಾದುದು.

೨. ಹೊರಗೋಡೆಯ ಮೇಲೆ ವೈವಿಧ್ಯಮಯವಾದ ಮೂರ್ತಿಶಿಲ್ಪಗಳ ಕೆತ್ತನೆ.

೩. ಪ್ರದಕ್ಷಿಣಾ ಪಥ ಹೊರಭಾಗದಲ್ಲಿರುವುದು.

೪. ಗರ್ಭಗುಡಿಯ ಮೇಲೆ ನಕ್ಷತ್ರಾಕಾರದಲ್ಲಿ ಮೇಲೇರುವ ಗೋಪುರ.

೫. ಶಿಲ್ಪಜಾಲಂಧ್ರಗಳು.

೬. ವಿಶಾಲವಾದ ನವರಂಗ.

೭. ಗಂಟೆಯಾಕಾರದ ಕಂಬಗಳು ಅತ್ಯಂತ ಸೂಕ್ಷ್ಮ ಕೆತ್ತನೆಗಳಿಂದ ಕೂಡಿರುತ್ತವೆ.

೮. ಸಾಮಾನ್ಯವಾಗಿ ಹೊಯ್ಸಳ ದೇವಾಲಯಗಳು ಏಕಕೂಟ, ದ್ವಿಕೂಟ ಮತ್ತು ತ್ರಿಕೂಟ ರಚನೆಯಲ್ಲಿರುತ್ತವೆ. ಕೆಲವು ಬಾರಿ ಚತುಷ್ಕೂಟ ಮತ್ತು ಪಂಚಕೂಟ ರಚನೆಯ ಉದಾಹರಣೆಗಳೂ ಕಂಡುಬರುತ್ತವೆ.

೯. ನಿರ್ಮಾಣದಲ್ಲಿ ಗಾರೆಯ ಬಳಕೆ ಇಲ್ಲದೆ ಕೆತ್ತಿಸಿದ್ದ ಕಲ್ಲುಗಳನ್ನು ಒಂದರ ಮೇಲೊಂದು ರಂಧ್ರಗಳಲ್ಲಿ ಜೋಡಿಸುವುದು.

೧೦. ಬಳಪದ ಕಲ್ಲಿನ ಬಳಕೆ ಇವರ ದೇವಾಲಯಗಳ ನಿರ್ಮಾಣದಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ.



ಚಿತ್ರ ೧೧.೧: ಹಳೆಬೀಡಿನ ಹೊಯ್ಸಳೇಶ್ವರ–ಶಾಂತಲೇಶ್ವರ ದ್ವಿಕೂಟ ದೇವಾಲಯ



೧೧.೨: ಹೊಯ್ಸಳ ಶಿಲ್ಪಕಲೆಯ ಹೊರಗೋಡೆಯ ಮೇಲಿರುವ ಪಟ್ಟಿಕೆಗಳು, ಸೋಮನಾಥಪುರ



ಚಿತ್ರ ೧೨: ದೊಡ್ಡಗದ್ದವಳ್ಳಿಯ ಲಕ್ಷ್ಮೀ ದೇವಾಲಯ
(ಚಿತ್ರ ಕೃಪೆ: ಸೆಂಟರ್ ಫಾರ್ ಇಂಡಿಕ್ ಸ್ಟಡೀಸ್)

ಹೊಯ್ಸಳರ ಕಾಲದ ಬೇಲೂರಿನ ಚೆನ್ನಕೇಶವ ದೇವಾಲಯವು ನಕ್ಷತ್ರಾಕಾರದ ವಿನ್ಯಾಸದಲ್ಲಿ ನಿರ್ಮಿಸಲಾಗಿದೆ. ಗರ್ಭಗುಡಿ, ಅಂತರಾಳ, ನವರಂಗ, ವೇದಿಕೆಯ ಆಕಾರದ ಎತ್ತರವಾದ ಅಧಿಷ್ಠಾನಗಳಿಂದ ಕೂಡಿದೆ. ಇಲ್ಲಿಯ ನವರಂಗದ ಕಂಬಗಳ ಮೇಲಿನ ಶಿಲಾಬಾಲಿಕೆಯ ಶಿಲ್ಪಗಳು ಗಮನ ಸೆಳೆಯುತ್ತವೆ. ಅದರಂತೆ ಸೋಮನಾಥಪುರದ ಚನ್ನಕೇಶವ ದೇವಾಲಯದ ಹೊರಗೋಡೆಯ ಮೇಲಿರುವ ಪಟ್ಟಿಕೆಗಳ ಸೂಕ್ಷ್ಮ ಕುಸುರಿ ಕೆತ್ತನೆ ಹೊಯ್ಸಳರ ಕಲಾಶೈಲಿಯನ್ನು ಬಿಂಬಿಸುತ್ತವೆ (ನೋಡಿ ಚಿತ್ರ ೧೧.೨). ಹಳೇಬೀಡಿನ ಕೇದಾರೇಶ್ವರ, ಹೊಯ್ಸಳೇಶ್ವರ ಮತ್ತು ಜೈನ ಬಸದಿಗಳು, ಸೋಮನಾಥಪುರದ ಸೋಮೇಶ್ವರ ದೇವಾಲಯ ಹಾಗೂ ದೊಡ್ಡಗದ್ದವಳ್ಳಿಯ ಲಕ್ಷ್ಮೀ ದೇವಾಲಯಗಳು ಹೊಯ್ಸಳರ ವಾಸ್ತುಶಿಲ್ಪ ಪರಂಪರೆಯ ಉತ್ತಮ ಉದಾಹರಣೆಗಳಾಗಿವೆ. ಚಿತ್ರ ೧೨ರಲ್ಲಿ ದೊಡ್ಡಗದ್ದವಳ್ಳಿಯ ಲಕ್ಷ್ಮೀ ದೇವಾಲಯದ ಹೊರ ನೋಟವನ್ನು ಕೊಡಲಾಗಿದೆ.

## ೭. ವಿಜಯನಗರದ ವಾಸ್ತುಶಿಲ್ಪ

ಮಧ್ಯಕಾಲೀನ ಇತಿಹಾಸದಲ್ಲಿ ದಕ್ಷನ್ ಪ್ರದೇಶದಲ್ಲಿ ತಮ್ಮ ಆಳ್ವಿಕೆಯ ಮೂಲಕ ಸುವರ್ಣಯುಗವನ್ನು ಸೃಷ್ಟಿಸಿದವರು ವಿಜಯನಗರದ ಅರಸರು. ಕ್ರಿ.ಶ. ೧೩೩೬ರಿಂದ ೧೭ನೆಯ ಶತಮಾನದ ಅಂತ್ಯದವರೆಗೂ ದೀರ್ಘ ಕಾಲ ತಮ್ಮ ಆಳ್ವಿಕೆಯನ್ನು ನಡೆಸಿದರು. ಸಂಗಮ, ಸಾಳುವ, ತುಳುವ ಮತ್ತು ಅರವೀಡು ಮನೆತನಗಳು ವಿಜಯನಗರ ರಾಜ್ಯವನ್ನು ಆಳಿದ ಅರಸು ಮನೆತನಗಳು. ಹುಕ್ಕ ಮತ್ತು ಬುಕ್ಕ ಅರಸರಿಂದ ಆರಂಭಗೊಂಡ ವಿಜಯನಗರ ಆಳ್ವಿಕೆಯು ಮೊದಲು ಹಂಪಿಯನ್ನು, ನಂತರ ಪೆನುಗೊಂಡವನ್ನು, ನಂತರ ಚಂದ್ರಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರು. ಇವರ ಕಾಲದಲ್ಲಿ ಹಂಪಿಯು ಅತ್ಯಂತ ಬೃಹತ್ತಾದ ಪಟ್ಟಣವಾಗಿತ್ತು. ವಿಜಯನಗರ ಅರಸರು ವಾಸ್ತುಕಲಾ ಪ್ರಕಾರಕ್ಕೆ ಹೊಸ ರೂಪುರೇಷೆ ನೀಡಿದರು. ಇವರು ಪಾಂಡ್ಯ ಅರಸರ

ವಾಸ್ತುಶೈಲಿಯನ್ನು ಅನುಕರಣೆ ಮಾಡಿ ದ್ರಾವಿಡ ಶೈಲಿಯ ದೇವಾಲಯಕ್ಕೆ ಪ್ರಾಶಸ್ತ್ಯವನ್ನು ನೀಡಿದರು. ವಿಜಯನಗರ ದೇವಾಲಯಗಳು ಬಹು ವಿಸ್ತಾರದ ರಚನೆಯಾಗಿವೆ. ವಿಶಾಲವಾದ ಪ್ರಾಕಾರಗಳಿಂದ ಕೂಡಿರುವ ಈ ದೇವಾಲಯಗಳು ಗರ್ಭಗುಡಿ, ಅಂತರಾಳ, ಅರ್ಧಮಂಟಪ, ನವರಂಗ, ತೆರೆದ ಮಹಾಮುಖ ಮಂಟಪ, ವಾಹನ ಮಂಟಪ, ಬಲಿಪೀಠ, ಧ್ವಜಸ್ತಂಭ ಇತ್ಯಾದಿಗಳಿಂದ ಕೂಡಿರುತ್ತಿದ್ದವು. ಮುಖ್ಯ ದೇವಾಲಯದ ಎಡಭಾಗದಲ್ಲಿ ಅಮ್ಮನವರ ದೇಗುಲವನ್ನು ನಿರ್ಮಿಸುವ ಸಂಪ್ರದಾಯವನ್ನು ವಿಜಯನಗರ ಕಾಲದಲ್ಲಿ ಕಾಣುತ್ತೇವೆ. ವಿಶಾಲವಾದ ದೇವಾಲಯದ ಒಳಾಂಗಣದಲ್ಲಿ ವಿವಿಧ ಆಚರಣೆಗಳಿಗಾಗಿ ಕಲ್ಯಾಣ ಮಂಟಪ, ಉತ್ಸವ ಮಂಟಪ, ಉಯ್ಯಾಲೆ ಮಂಟಪ, ಕನ್ನಡಿ ಮಂಟಪ, ಕಲ್ಯಾಣಿ ಅಥವಾ ಪುಷ್ಕರಣಿ, ಪಾಕಶಾಲೆ ಇತ್ಯಾದಿಗಳನ್ನು ನಿರ್ಮಿಸುವ ಸಂಪ್ರದಾಯ ವಿಜಯನಗರದ ಕಾಲದಲ್ಲಿ ಕಂಡುಬರುತ್ತದೆ. ಅದರಂತೆ ವಿಶಾಲವಾದ ದೇವಾಲಯಗಳ ಸಮುಚ್ಚಯಕ್ಕೆ ಪ್ರವೇಶಕ್ಕಾಗಿ ಎತ್ತರದ ಗೋಪುರಗಳುಳ್ಳ ಗೋಪುರ ದ್ವಾರಗಳನ್ನು ನಿರ್ಮಿಸುವ ಕ್ರಮವೂ ಇವರ ಕಾಲದಲ್ಲಿ ಪ್ರಾರಂಭವಾಯಿತು. ದೇವಾಲಯಗಳಿಗೆ ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ಪ್ರವೇಶಕ್ಕಾಗಿ ಗೋಪುರದ್ವಾರಗಳನ್ನು ನಿರ್ಮಿಸುವುದು ಸಾಮಾನ್ಯವಾಗಿತ್ತು. ಈ ಗೋಪುರಗಳನ್ನು ರಾಯಗೋಪುರಗಳೆಂದು ಕರೆಯುವ ವಾಡಿಕೆ ಇದೆ. ಇವುಗಳನ್ನು ವಿಜಯನಗರ ಅರಸರು ನಿರ್ಮಿಸಿದ್ದರಿಂದ ಇವುಗಳನ್ನು ರಾಯಗೋಪುರಗಳೆಂದು ಕರೆಯುವುದುಂಟು.

ವಿಜಯನಗರದ ಸಾಮ್ರಾಟರು ಮಹಾ ನಿರ್ಮಾಪಕರುಗಳಾಗಿ ರಾಜಧಾನಿಯಾದ ಹಂಪೆ ಹಾಗೂ ಸುತ್ತಮುತ್ತಲಿನ ಸುಂದರವಾದ ಅರಮನೆಗಳು, ಗೋಪುರಗಳು, ಕೋಟೆಕೊತ್ತಲುಗಳು, ಸಾರ್ವಜನಿಕ ಕಟ್ಟಡಗಳು, ಕಲ್ಯಾಣ ಮಂಟಪಗಳು, ವಸಂತ ಮಂಟಪಗಳು ಅನೇಕ ಮೂರ್ತಿ ಶಿಲ್ಪಗಳು, ಹಲವಾರು ಹೊಸ ನಗರಗಳು, ಕೆರೆ ಕಟ್ಟೆಗಳು, ಕಾಲುವೆಗಳು, ಇತ್ಯಾದಿ ಸ್ಮಾರಕಗಳನ್ನು ನಿರ್ಮಿಸಿರುವರು. ಅಲ್ಲದೇ ಹಳೆಯ ದೇವಾಲಯಗಳನ್ನು ವಿಸ್ತರಣೆ ಹಾಗೂ ಜೀರ್ಣೋದ್ಧಾರ ಕಾರ್ಯವನ್ನು ಸಹ ಕೈಗೊಂಡಿರುವರು. ಹಂಪೆಯಲ್ಲಿ ಕಂಡುಬರುವ ಕಲಾ ಸ್ಮಾರಕಗಳು, ಅವಶೇಷಗಳನ್ನು ಗಮನಿಸಿ, ಸುಪ್ರಸಿದ್ಧ ಕಲಾವಿಮರ್ಶಕರಾದ ಪರ್ಸಿ ಬ್ರೌನ್ ಅವರು 'ವಿಜಯನಗರದ ವಾಸ್ತುಶಿಲ್ಪವು ದ್ರಾವಿಡ ಶೈಲಿಯ ಶ್ರೇಷ್ಠ ವಿಕಸಿತ ರೂಪ' ಎಂದಿರುವರು. ವಿಜಯನಗರ ವಾಸ್ತುಶಿಲ್ಪ ಲಕ್ಷಣಗಳನ್ನು ಕೆಳಕಂಡಂತೆ ಗುರುತಿಸಬಹುದು:

೧. ದೇವಾಲಯಗಳನ್ನು ಎತ್ತರವಾದ ಅಧಿಷ್ಠಾನ ಮತ್ತು ಉಪಪೀಠಗಳ ಮೇಲೆ ನಿರ್ಮಿಸಲಾಗಿದೆ ಹಾಗೂ ಪಟ್ಟಿಕೆಗಳು ಸುಂದರವಾದ ಕೆತ್ತನೆಗಳಿಂದ ಕೂಡಿರುತ್ತದೆ.

೨. ದೇವಾಲಯವು ಗರ್ಭಗೃಹ, ಸುಕನಾಸಿ, ಅಂತರಾಳ, ರಂಗಮಂಟಪ, ಮಹಾ ರಂಗಮಂಟಪ, ರಾಯಗೋಪುರಗಳಿಂದ ಕೂಡಿರುತ್ತದೆ. ನಂತರದ ಕಾಲದಲ್ಲಿ ಕಲ್ಯಾಣ ಮಂಟಪ, ಉಯ್ಯಾಲೆ ಮಂಟಪ, ರಥೋತ್ಸವ ಮಂಟಪಗಳೂ ದೇವಾಲಯ ಸಂಕೀರ್ಣದಲ್ಲಿ ಸೇರ್ಪಡೆಯಾದವು.

೩. ಕಂಭಗಳಿಂದ ಕೂಡಿದ ಮಂಟಪಗಳು ಹೆಚ್ಚು ಆಕರ್ಷಕವಾಗಿರುತ್ತವೆ.

೪. ದೇವಾಲಯಗಳ ನಿರ್ಮಾಣಕ್ಕೆ ಗ್ರಾನೈಟ್ ಶಿಲೆಯನ್ನು (ಬೆಣಚುಕಲ್ಲು) ಬಳಸಿರುವರು. ಇದರ ಉದ್ದೇಶ ದೀರ್ಘಕಾಲದ ಬಾಳಿಕೆಯಾಗಿತ್ತು ಹಾಗೂ ಗೋಪುರಗಳ ನಿರ್ಮಾಣಕ್ಕೆ ಇಟ್ಟಿಗೆ ಮತ್ತು ಗ್ರಾನೈಟ್ ಶಿಲೆಯನ್ನು ಬಳಕೆ ಮಾಡಿರುವರು.

೫. ರಂಗಮಂಟಪ ಹಾಗೂ ಮಹಾರಂಗಮಂಟಪಗಳ ಸ್ತಂಭಗಳು ಅಲಂಕಾರಿಕ ಶಿಲ್ಪ ಕೆತ್ತನೆಗಳಿಂದ ಕೂಡಿರುತ್ತವೆ. ರಂಗಮಂಟಪವೆಂದರೆ ೪ ಅಥವಾ ೧೬ ಕಂಭಗಳ ಹಜಾರವಾಗಿದ್ದು ಇದು ಸಭೆಗಳನ್ನು ನಡೆಸಲು ಮೀಸಲಿರಿಸಲಾಗಿತ್ತು. ರಂಗಮಂಟಪವು ಅಂತರಾಳ ಮತ್ತು ಮಹಾಮಂಟಪಗಳ ಮಧ್ಯಭಾಗ. ಇದರ ವೈವಿಧ್ಯಮಯವಾದ ಮತ್ತು ಸಂಕೀರ್ಣವಾದ ಕಂಭಗಳು ವಿಜಯನಗರ ಕಲಾಶೈಲಿಯ ವೈಶಿಷ್ಟ್ಯವೆಂದು ಕೆ.ಎ. ನೀಲಕಂಠ ಶಾಸ್ತ್ರಿಯವರು ಅಭಿಪ್ರಾಯಪಟ್ಟಿದ್ದಾರೆ.

೬. ದೇವಾಲಯಗಳ ಪ್ರಾಕಾರ ಭಿತ್ತಿಯ ಹೊರಭಾಗವನ್ನು ಸಾಮಾನ್ಯವಾಗಿ ಗೋಡೆ, ಕಂಭಗಳು ಹಾಗೂ ಕುಂಭಪಂಜರಗಳ ದೇವಕೋಷ್ಠಗಳಿಂದ ಅಲಂಕೃತಗೊಳಿಸ ಲಾಗಿದೆ. ದೇವಕೋಷ್ಠ ಎಂದರೆ ದೇವಾಲಯದ ಗೋಡೆಯಲ್ಲಿನ ಗೂಡು ಎಂದರ್ಥ. ಕುಂಭಪಂಜರ ಎಂದರೆ ಮಡಕೆಯಂತಹ ಆಕಾರದ ಅಲಂಕಾರಿಕ ಕೆತ್ತನೆಯಾಗಿರುತ್ತಿತ್ತು.

೭. ದೇವಾಲಯಗಳ ಕಂಭಗಳು ದೊಡ್ಡದಾಗಿದ್ದು ಎತ್ತರವಾದ ಶಿಲೆಗಳಿಂದ ಮಾಡಿದ್ದು ಇವು ಹೆಚ್ಚಿನ ತೂಕವನ್ನು ಹೊರುವಂತಿದ್ದವು. ಕಂಭಗಳ ಒಂದು ಭಾಗದಲ್ಲಿ ದೇವ ದೇವತೆಗಳನ್ನು ಚಿತ್ರಿಸಲಾಗಿರುತ್ತದೆ. ಕಂಭಗಳ ಮೇಲ್ಭಾಗದಲ್ಲಿ ಕುದುರೆಗಳು ಮತ್ತು ಹುಲಿಗಳ ಶಿಲ್ಪಗಳಿದ್ದು ಅವು ಅಪೂರ್ವವಾದ ಕೆತ್ತನೆಯಿಂದ ಕೂಡಿವೆ.

೮. ಕಲ್ಯಾಣ ಮಂಟಪವು ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದ್ದು ಅದು ಕಲ್ಲಿನ ಕಂಭಗಳಿಂದ ಕೂಡಿರುತ್ತಿದ್ದವು. ಈ ಕಲ್ಯಾಣ ಮಂಟಪಗಳನ್ನು ಸಾಮಾನ್ಯವಾಗಿ ದೇವಾಲಯದ ಪ್ರವೇಶದ್ವಾರದ ಪೂರ್ವ ದಿಕ್ಕಿನಲ್ಲಿ ನಿರ್ಮಿಸಿರುವುದು ಕಂಡು ಬರುತ್ತದೆ. ಇಲ್ಲಿ ವಿವಾಹ ಮಹೋತ್ಸವ ಸಮಾರಂಭ, ಧಾರ್ಮಿಕ ಉತ್ಸವಗಳನ್ನು ನಡೆಸಲಾಗುತ್ತಿತ್ತು. ಕಂಭಗಳುಳ್ಳ ತೆರೆದ ಕಲ್ಯಾಣ ಮಂಟಪಗಳ ರಚನೆ ವಿಜಯನಗರದ ಕಲಾಶೈಲಿಯ ವೈಶಿಷ್ಟ್ಯತೆಯಾಗಿದೆ.

೯. ವಿಜಯನಗರ ವಾಸ್ತುಶಿಲ್ಪಗಳಲ್ಲಿ ಹಿಂದೂ–ಮುಸ್ಲಿಂ ಕಲಾಶೈಲಿಗಳ ಸಮಾಗಮ ಹಾಗೂ ಸಮೀಕರಣವನ್ನು ಕಾಣಬಹುದಾಗಿದೆ. ಉದಾಹರಣೆಗೆ, ಹಂಪೆಯ ಕಮಲಮಹಲ್, ಗಜಶಾಲೆ, ಇತ್ಯಾದಿ.



ಚಿತ್ರ ೧೩.೧ ಅ: ಹಂಪಿಯ ವಿರೂಪಾಕ್ಷ ದೇವಾಲಯದ ಒಳಾಂಗಣ (ಚಿತ್ರ ಕೃಪೆ: ಹಂಪಿ ಯಾಜಿ)



ಚಿತ್ರ ೧೩.೧ ಆ: ಹಂಪಿಯ ವಿರೂಪಾಕ್ಷ ದೇವಾಲಯದ ಸಂಕೀರ್ಣ (ಚಿತ್ರ ಕೃಪೆ: ಹಂಪಿ ಯಾಜಿ)



ಚಿತ್ರ ೧೩.೨: ಇಸ್ಲಾಮಿಕ್ ವಾಸ್ತುಶಿಲ್ಪದ ಪ್ರಭಾವ ಇರುವ ಹಂಪಿಯ ಕಮಲದ ಅರಮನೆ
(ಚಿತ್ರ ಕೃಪೆ: ಹಂಪಿ ಯಾಜಿ)

THE PEOPLE'S UNIVERSITY



ಚಿತ್ರ ೧೪.೧: ವಿಜಯನಗರದ ದ್ರಾವಿಡ ಶೈಲಿಯ ದೇವಾಲಯದ ಮಾದರಿಯ ರೇಖಾಚಿತ್ರ



ಚಿತ್ರ ೧೪.೨: ವಿಜಯನಗರ ದೇವಾಲಯದ ಅಧಿಷ್ಠಾನದ ಮಾದರಿಯ ರೇಖಾಚಿತ್ರ

೧೦. ವಿಜಯನಗರದ ವಾಸ್ತುಶಿಲ್ಪದಲ್ಲಿ ದೇವಾಲಯಗಳಂತಹ ಧಾರ್ಮಿಕ ಕಟ್ಟಡಗಳೇ ಹೆಚ್ಚಾಗಿವೆ.

೧೧. ಗರ್ಭಗುಡಿಯ ಮೇಲ್ಭಾಗ ಶಿಖರವನ್ನು ಇಟ್ಟಿಗೆ ಹಾಗೂ ಗಾರೆಯಿಂದ ನಿರ್ಮಿಸಿರುವರು. ದೊಡ್ಡ ದೇವಾಲಯಗಳ ಗರ್ಭಗುಡಿಯು ಪ್ರದಕ್ಷಿಣಾ ಪಥವನ್ನು ಹೊಂದಿರುತ್ತವೆ.

೧೨. ರಾಯಗೋಪುರಗಳ ರಚನೆ ವಿಜಯನಗರ ಕಾಲದ ಒಂದು ಕಲಾ ವೈಶಿಷ್ಟ್ಯವಾಗಿದೆ. ರಾಯಗೋಪುರಗಳೆಂದರೆ ಮಹಾದ್ವಾರಗಳ ಮೇಲೆ ಕಟ್ಟಲ್ಪಡುತ್ತಿದ್ದ ಗೋಪುರಗಳು. ವಿಜಯನಗರ ದೊರೆ ೨ನೆಯ ಪ್ರೌಢದೇವರಾಯನ ಕಾಲದಲ್ಲಿ ಈ ರಾಯಗೋಪುರಗಳ ನಿರ್ಮಾಣ ಆರಂಭವಾಗಿದ್ದು ಚಿತ್ರ ೧೩.೧ (ಅ, ಆ)ಗಳಲ್ಲಿ ಹಂಪಿಯ ವಿರೂಪಾಕ್ಷ ದೇವಾಲಯವನ್ನು ಒಳನೋಟ ಮತ್ತು ಗೋಪುರಗಳನ್ನು ನೋಡಬಹುದು. ನಂತರ ಕೃಷ್ಣದೇವರಾಯನ ಕಾಲದಲ್ಲಿ ಈ ರಾಯಗೋಪುರಗಳ ನಿರ್ಮಾಣವು ಉತ್ಕೃಷ್ಟ ಮಟ್ಟವನ್ನು ತಲುಪಿದವು. ವಿಜಯನಗರದ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದವು. ವಿಜಯನಗರ ವಾಸ್ತುಶೈಲಿಯು ಕೇವಲ ವಿಜಯನಗರಕ್ಕೆ ಮಾತ್ರ ಸೀಮಿತವಾಗಿರದೆ ಕರ್ನಾಟಕದ ಇತರೆ ಭಾಗಗಳಲ್ಲಿ ಹಾಗೂ ದಕ್ಷಿಣ ಭಾರತದ ಕೆಲವು ಪ್ರದೇಶಗಳಲ್ಲಿ ವ್ಯಾಪಿಸಿರುವುದು ಕಂಡು ಬರುತ್ತದೆ. ವಿಜಯನಗರ ಕಾಲದಲ್ಲಿ ಅನೇಕ ಸಾರ್ವಜನಿಕ ಕಟ್ಟಡಗಳನ್ನು ನಿರ್ಮಿಸಿರುವುದೂ ಕಂಡುಬರುತ್ತವೆ. ಅವುಗಳೆಂದರೆ ಭವ್ಯ ಅರಮನೆಗಳು, ರಾಜನ ಸಭಾಭವನ, ಮಹಾನವಮಿ ದಿಬ್ಬ, ಕಾವಲು ಗೋಪುರಗಳು (ವೀಕ್ಷಕ ಗೋಪುರಗಳು), ರಾಣಿಯರ ಸ್ನಾನಗೃಹ, ಆನೆಯ ಲಾಯ, ಮೇಲುಚಾವಣಿ ಇರುವ ಬಾವಿ, ನೀರಿನ ಕೊಳಗಳು, ಹೂದೋಟಗಳು, ಕಾಲುವೆಗಳು, ಅಣೆಕಟ್ಟುಗಳು ಮುಂತಾದವು. ಇವುಗಳನ್ನು ಕಲ್ಲು, ಇಟ್ಟಿಗೆ ಹಾಗೂ ಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ವಿಜಯನಗರದ ಕಾಲದ ಅರಮನೆಗಳನ್ನು ಹಂಪಿ (ಕಮಲ್ ಮಹಲ್), ಆನೆಗುಂದಿ, ಪೆನುಗೊಂಡ

ಮತ್ತು ಚಂದ್ರಗಿರಿಯಲ್ಲಿ ಕಾಣಬಹುದಾಗಿದೆ. ಕೆಲವು ಪೌರ ವಾಸ್ತುಶಿಲ್ಪಗಳ ಮೇಲೆ ಇಸ್ಲಾಮಿಕ್ ವಾಸ್ತುಶಿಲ್ಪವು ಪ್ರಭಾವ ಬೀರಿರುವುದು ಕಂಡು ಬರುತ್ತದೆ. ಚಿತ್ರ ೧೩.೨ರಲ್ಲಿ ಇಸ್ಲಾಮಿಕ್ ವಾಸ್ತುಶಿಲ್ಪದ ಪ್ರಭಾವ ಇರುವ ಹಂಪಿಯ ಕಮಲದ ಅರಮನೆಯ ನೋಟವನ್ನು ಕೊಡಲಾಗಿದೆ. ಚಿತ್ರ ೧೪.೧ ಮತ್ತು ೧೪.೨ ವಿಜಯನಗರದ ವಾಸ್ತುಶೈಲಿಯ ವಿವರಗಳನ್ನು ರೇಖಾಚಿತ್ರದಲ್ಲಿ ನೀಡುತ್ತವೆ.

## ೪.೩. ಚಿತ್ರಕಲಾ ಪರಂಪರೆ

ಕರ್ನಾಟಕದಲ್ಲಿ ಚಿತ್ರಕಲೆಯ ಇತಿಹಾಸವನ್ನು ಬಹಳ ಪ್ರಾಚೀನ ಕಾಲದಿಂದ ಗುರುತಿಸಬಹುದು. ಬಂಡೆಗಳ ಮೇಲಿನ ಗೀರು ಚಿತ್ರಗಳ ಆದಿಮಕಲೆಯು ಲಯಗಾರಿಕೆ ಮತ್ತು ಸಮುದಾಯ ಸಂದರ್ಭಗಳ ವೈವಿಧ್ಯಮಯ ಅಭಿವ್ಯಕ್ತಿಯನ್ನು ತೋರುತ್ತದೆ. ನೂತನಶಿಲಾಯುಗ ಕಾಲದಲ್ಲಿಯೇ ಬೆಟ್ಟಗಳ ಬಂಡೆಗಳ ಮೇಲೆ ಶ್ವೇತ ಮತ್ತು ಕೆಂಪು ವರ್ಣಗಳಿಂದ ಕಾಡಿನಲ್ಲಿ ಕಂಡುಬರುವ ವನ್ಯಪ್ರಾಣಿಗಳ ಚಿತ್ರಗಳನ್ನು ಹಾಗೂ ಬೇಟೆಯಾಡುವ ಸನ್ನಿವೇಶಗಳ ಚಿತ್ರಗಳನ್ನು ಬಿಡಿಸಿದ್ದನ್ನು ಕರ್ನಾಟಕದ ಬಾದಾಮಿಯ ಬೆಟ್ಟಗಳಲ್ಲಿ, ರಾಯಚೂರು ಸೀಮೆಯ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಕಣಿವೆಗಳ ಬೆಟ್ಟಗಳ ಬಂಡೆಗಳಲ್ಲಿ ಕಾಣಬಹುದು. ಈ ಘಟಕದಲ್ಲಿ ಚಿತ್ರಕಲೆಯನ್ನು ಭಿತ್ತಿ ಚಿತ್ರಕಲೆ, ಚಿಕಣಿ ಚಿತ್ರಕಲೆ, ಮೈಸೂರು ಶೈಲಿಯ ಚಿತ್ರಕಲೆ ಹಾಗೂ ನವೋದಯ ಚಿತ್ರಕಲೆ ಎಂದು ನಾಲ್ಕು ಭಾಗವಾಗಿ ಪರಿಶೀಲಿಸಲಾಗಿದೆ.

### ೪.೩.೧. ಭಿತ್ತಿ ಚಿತ್ರಕಲೆ

ಅಜಂತಾ ಗವಿಗಳ ಚಿತ್ರಕಲೆಯಂತೆ ಬಾದಾಮಿ ಚಾಲುಕ್ಯರ ಕಾಲದಲ್ಲಿಯೂ ಚಿತ್ರಗಳನ್ನು ಗುಹಾಂತರ ದೇವಾಲಯಗಳ ಗೋಡೆಗಳಲ್ಲಿ ರಚಿಸಲಾಗಿದೆ. ಬಾದಾಮಿ ಭಿತ್ತಿಚಿತ್ರಗಳಲ್ಲಿ ಅಜಂತಾ ಶೈಲಿಗಿಂತ ಭಿನ್ನವಾದ ನವಿರಾದ ವರ್ಣಲೇಪ, ರೇಖಾಪ್ರಾಧಾನ್ಯವಿರುವ ಶೈಲಿಯ ಪ್ರಯೋಗ ಮಾಡಿದ್ದಾರೆ. ಬಾದಾಮಿ ಚಾಲುಕ್ಯರ ನಂತರ ರಾಷ್ಟ್ರಕೂಟರ ಕಾಲದ ಎಲ್ಲೋರಾದ ಕೈಲಾಸನಾಥ ದೇವಾಲಯ ಮತ್ತು ಚೋಟಾ–ಕೈಲಾಸ ದೇವಾಲಯಗಳ ಭಿತ್ತಿಗಳ ಮೇಲೆ ಚಿತ್ರಕಲೆ ಮೂಡಿಬಂದಿರುವುದನ್ನು ಗುರುತಿಸಲಾಗಿದೆ. ಕ್ರಿ.ಶ. ೧೨ನೆಯ ಶತಮಾನದ ಜೈನ ಸಾಹಿತ್ಯ ಕೃತಿಗಳಾದ 'ಧವಳ' ಗ್ರಂಥಗಳಲ್ಲಿ ಕಿರು ಗಾತ್ರದ ಸಾಂದರ್ಭಿಕ ಚಿತ್ರಗಳನ್ನು ರಚಿಸಿರುವುದನ್ನು ನಾವು ಕಾಣುತ್ತೇವೆ. ಮೂಡುಬಿದಿರೆಯ ಜೈನ ಬಸದಿಯ ಸಂಗ್ರಹದಲ್ಲಿರುವ 'ಧವಳ' ಗ್ರಂಥಗಳಲ್ಲಿಯ ಚಿತ್ರ ರಚನೆ ಸಂಪ್ರದಾಯಿಕ ಭಿತ್ತಿಚಿತ್ರ ರಚನಾ ಶೈಲಿಗಿಂತಲೂ ಭಿನ್ನವಾಗಿದೆ. ಜೈನರ ಧಾರ್ಮಿಕ ಗ್ರಂಥವಾದ 'ಷಟ್ಖಂಡಾಗಮ'ದ ವ್ಯಾಖ್ಯಾನಗಳಾದ 'ಧವಳ', 'ಜಯಧವಳ' ಮತ್ತು 'ಮಹಾಧವಳ' ಗ್ರಂಥಗಳು ಜೈನ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಗ್ರಂಥಗಳ ಹಸ್ತಪ್ರತಿಗಳು. ಹಸ್ತಪ್ರತಿಗಳ ಸೀಮಿತ ಸ್ಥಳಾವಕಾಶದಲ್ಲಿ ಸಾಂದರ್ಭಿಕ ಚಿತ್ರಗಳನ್ನು ಅಲ್ಲಿ ರಚಿಸಲಾಗಿದೆ. ಇಲ್ಲಿಯ ಚಿತ್ರಗಳಲ್ಲಿ ರೇಖೆಗಳ ಮೇಲೆ ಒತ್ತುನೀಡಿರುವುದಲ್ಲದೆ, ಮುಕ್ಕಾಲು ಮುಖ, ಆಚೆಗೆ ಚಾಚಿದ ಕಣ್ಣುಗಳ ಚಿತ್ರಣ ಮುಂತಾದ ರಚನಾ ವೈಶಿಷ್ಟ್ಯಗಳನ್ನು ಕಾಣುತ್ತೇವೆ. ಅಲ್ಲದೆ ಚಿತ್ರಗಳ ರಚನೆಗೆ ಗಾಢವರ್ಣಗಳನ್ನು ಬಳಸಲಾಗಿದೆ. ಅದರಂತೆ ಹೊಯ್ಸಳ ಕಾಲದ



ಚಿತ್ರ ೧೫: ಹಂಪಿಯ ವಿರೂಪಾಕ್ಷ ದೇವಾಲಯದ ಗಿರಿಜಾಕಲ್ಯಾಣದ ಭಿತ್ತಿಚಿತ್ರ
(ಚಿತ್ರ ಕೃಪೆ: ಹಂಪಿ ಯಾಜಿ)

ಜೈನ ಆಗಮ ಗ್ರಂಥಗಳಲ್ಲಿಯೂ ಕಿರುಗಾತ್ರದ ಚಿತ್ರಗಳಿರುವುದನ್ನು ಇಲ್ಲಿ ಸ್ಮರಿಸಬಹುದು. ಈ ಮಾದರಿಯ ಕಿರುಚಿತ್ರಗಳು ಮುಂದೆ 'ಚಿಕಣಿ' ಚಿತ್ರಕಲೆಗೆ ವೇದಿಕೆ ನಿರ್ಮಿಸಿತು ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಹಂಪಿಯ ವಿರೂಪಾಕ್ಷ ದೇವಾಲಯದ ಮಹಾಮುಖಮಂಟಪದ ಚಾವಣಿ ಅಥವಾ ಭುವನೇಶ್ವರಿಯಲ್ಲಿ ಒಟ್ಟು ೬೭ ಸಣ್ಣ ಚಿತ್ರಪಟ್ಟಿಕೆಗಳಿವೆ. ತ್ರಿಪುರ ಸಂಹಾರ, ಮನ್ಮಥ ವಿಜಯ ಹಾಗೂ ಶೈವ ಪುರಾಣದ ಚಿತ್ರಗಳು ಇಲ್ಲಿವೆ. ಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆಯಲ್ಲಿ ಸಾಗುತ್ತಿರುವ ವಿದ್ಯಾರಣ್ಯರ ಚಿತ್ರವನ್ನು ಕೂಡ ನಾವು ಇಲ್ಲಿ ಕಾಣುತ್ತೇವೆ. ಈ ಎಲ್ಲಾ ಚಿತ್ರಗಳು ಮೂಲತಃ ವಿಜಯನಗರದ ಆಳ್ವಿಕೆಯಲ್ಲಿಯೇ ರಚನೆಗೊಂಡಿದ್ದು ತದನಂತರ ಕಾಲದಲ್ಲಿ ಈ ಚಿತ್ರಗಳನ್ನು ಸಂರಕ್ಷಿಸುವ ಅಥವಾ ಮರು ವರ್ಣಲೇಪನ ಮಾಡುವ ಕಾರ್ಯದಲ್ಲಿ ಮೂಲ ಚಿತ್ರಗಳನ್ನು ಅಲ್ಪಸ್ವಲ್ಪ ಬದಲಾಯಿಸಲಾಗಿದೆ ಎಂದು ವಿದ್ವಾಂಸರಾದ ಆನ್ನಾ ಡೆಲೋಪಿಕೊಲಾ ಅವರು ಗುರುತಿಸಿದ್ದಾರೆ. ಒಟ್ಟಿನಲ್ಲಿ ವಿಜಯನಗರದ ಭಿತ್ತಿ ಚಿತ್ರಕಲೆಯ ಸಂಪ್ರದಾಯವನ್ನು ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಕಾಣಬಹುದು. ಚಿತ್ರ ೧೫ರಲ್ಲಿ ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿರುವ ಗಿರಿಜಾಕಲ್ಯಾಣದ ದೃಶ್ಯವನ್ನು ನೋಡಬಹುದು. ಅದರಂತೆ ವಿಜಯನಗರದ ಭಿತ್ತಿ ಚಿತ್ರಕಲೆಯ ಮತ್ತೊಂದು ಕಲಾಕೇಂದ್ರವೆಂದರೆ ಆಂಧ್ರಪ್ರದೇಶದ ಲೇಪಾಕ್ಷಿಯ ವೀರಭದ್ರ ದೇವಾಲಯ. ಇಲ್ಲಿಯ ಮುಖಮಂಟಪದ ಭಿತ್ತಿಯ ಮೇಲೆ ಕಿರಾತಾರ್ಜುನೀಯ, ಲಿಂಗೋದ್ಭವ ಮೂರ್ತಿ, ಗಿರಿಜಾಕಲ್ಯಾಣ, ಹಾಗೂ ವೀರಭದ್ರನ ಬೃಹತ್ ಚಿತ್ರಗಳು ಗಮನ ಸೆಳೆಯುತ್ತವೆ. ಕಪ್ಪು, ಕೆಂಪು, ಹಸಿರು, ಹಳದಿ, ಬೂದು ಬಣ್ಣಗಳಿಂದ ರಚಿಸಲಾಗಿರುವ ಇಲ್ಲಿಯ ಚಿತ್ರಗಳು ವಿಜಯನಗರ ಕಾಲದ ಭಿತ್ತಿ ಚಿತ್ರಕಲೆ ಪರಂಪರೆಯ ಉದಾಹರಣೆಯಾಗಿವೆ.

## ೪.೩.೨. ಚಿಕಣಿ ಚಿತ್ರಕಲೆ

ಕರ್ನಾಟಕದಲ್ಲಿ ಕ್ರಿ.ಶ. ೧೨–೧೩ನೆಯ ಶತಮಾನದ ಜೈನ ಸಾಹಿತ್ಯದ 'ಧವಳ' ಹಸ್ತಪ್ರತಿಗಳಲ್ಲಿ ಇರುವ ಕಿರುಚಿತ್ರಗಳು ಚಿಕಣಿ (ಮಿನಿಯೇಚರ್) ಚಿತ್ರಕಲಾ ಪರಂಪರೆಗೆ ನಾಂದಿಯಾದಂತೆ ಕಂಡುಬರುತ್ತದೆ. ಕ್ರಿ.ಶ. ೧೬ನೆಯ ಶತಮಾನದ ಉತ್ತರಾರ್ಧದ ಅವಧಿಯಲ್ಲಿ ದಕ್ಖನಿ ಸುಲ್ತಾನರ ಆಶ್ರಯದಲ್ಲಿ ಪೂರ್ಣ ಪ್ರಮಾಣದ ಚಿಕಣಿ ಚಿತ್ರಕಲಾ ಶೈಲಿ ಮೂಡಿಬಂದಿತು. ಮುಖ್ಯವಾಗಿ ಅಹ್ಮದನಗರದ ನಿಜಾಮಶಾಹಿ ಸುಲ್ತಾನರ ಆಸ್ಥಾನದಲ್ಲಿ ರಚನೆಗೊಂಡ 'ಮಾಸಿರ–ಇ–ಹುಸೇನ್ ಷಾ' ಕೃತಿಯಲ್ಲಿ ತಾಳಿಕೋಟೆ ಯುದ್ಧದ ಸನ್ನಿವೇಶದ ಚಿತ್ರಗಳು ದೋಹಾ ಹಬ್ಬದ ಆಚರಣೆಯ ಚಿತ್ರಗಳು ಮತ್ತು ರಾಣಿಯ ಜೊತೆಗೆ ಸುಲ್ತಾನ ಹುಸೇನ್ ಷಾ ಕುಳಿತಿರುವ ಚಿತ್ರಗಳು ಚಿಕಣಿ ಚಿತ್ರಗಳ ಕಲಾ ಶೈಲಿಯ ಆರಂಭಿಕ ಚಿತ್ರಗಳೆಂದು ಗುರುತಿಸಬಹುದಾಗಿದೆ. ಕರ್ನಾಟಕದಲ್ಲಿ ಆಳಿದ ಬಿಜಾಪುರದ ಆದಿಲಶಾಹಿ ಸುಲ್ತಾನರ ಆಸ್ಥಾನವು ಹೆಸರಾಂತ ಕಲಾವಿದರಿಗೆ ಆಶ್ರಯ ನೀಡಿತ್ತು. ಬಿಜಾಪುರದ ಶೈಲಿಯೆಂದೇ ಹೆಸರುವಾಸಿಯಾದ ಬಿಜಾಪುರದ ಚಿಕಣಿ ಚಿತ್ರಗಳು ಮೊಘಲರ ಚಿತ್ರಕಲೆಗೆ ಸರಿಸಾಟಿಯಾಗಿ ರಚನೆಗೊಂಡಿವೆ. ಮುಖ್ಯವಾಗಿ ಎರಡನೆಯ ಇಬ್ರಾಹಿಮ್ ಆದಿಲಶಾಹಿ ಸುಲ್ತಾನರ ಕಾಲದ ವಿವಿಧ ಚಿತ್ರಗಳು, ನಂತರದಲ್ಲಿ ಮುಹ್ಮದ್ ಆದಿಲಶಾಹನ ಕಾಲದಲ್ಲಿ ರಚನೆಯಾದ ಚಿಕಣಿ ಚಿತ್ರಗಳು ಉತ್ಕೃಷ್ಟ ಕಲಾಕೃತಿಗಳೆನಿಸಿವೆ. ಪರ್ಶಿಯಾ, ಟರ್ಕಿಸ್ಥಾನ, ಮಧ್ಯ–ಏಶಿಯಾ ಜೊತೆಗೆ ಭಾರತೀಯ ಕಲಾಶೈಲಿಗಳ ಮಿಶ್ರಣಗಳಿಂದ ಮೂಡಿಬಂದ ದಕ್ಖನಿ ಚಿತ್ರಕಲಾ ಶೈಲಿಯು ಬಹು ವಿಶಿಷ್ಟವೂ ಹಾಗೂ ಆಕರ್ಷಕವಾಗಿ ಬೆಳೆದು ಬಂದಿತು. ಮೊಘಲ, ರಜಪೂತ ಮತ್ತು ಪಹಾಡಿ ಚಿತ್ರಕಲಾ ಶೈಲಿಗಳಿಗಿಂತಲೂ ಭಿನ್ನವಾದ ದಕ್ಖನಿ ಚಿತ್ರಕಲೆಯ ಮೂಲ ಕರ್ನಾಟಕದ ನೆಲವಾಗಿತ್ತು ಎಂಬುದು ಗಮನಾರ್ಹ. ಕ್ರಿ.ಶ. ೧೫೬೫ರ ಅನಂತರದಲ್ಲಿ ವಿಜಯನಗರ ಸಾಮ್ರಾಜ್ಯವು ನಶಿಸಿದ ಮೇಲೆ ಅಲ್ಲಿಯ ಕಲಾವಿದರು ದಕ್ಖನಿ ಸುಲ್ತಾರ ಆಸ್ಥಾನದಲ್ಲಿ ಆಶ್ರಯ ಪಡೆದರು. ಕಲಾಕೃತಿಗಳಲ್ಲಿ ಸ್ಥಳಿಯ



ಚಿತ್ರ ೧೬: ಬಿಜಾಪುರ ಶೈಲಿಯ ಚಿಕಣಿ ಚಿತ್ರಕಲೆ

ಸಂಪ್ರದಾಯಿಕ ಶೈಲಿಗಳ ತಂತ್ರಗಳು ಸೇರಿಕೊಂಡಾಗ ದಕ್ಖನಿ ಶಿಷ್ಟಪದ ಚಿತ್ರಗಳು ಇನ್ನಷ್ಟು ಮೆರಗು ಪಡೆದವು. ಚಿತ್ರ ೧೬ರಲ್ಲಿ ಬಿಜಾಪುರ ಶೈಲಿಯ ಚಿಕಣಿ ಚಿತ್ರಕಲೆಯ ಒಂದು ಸುಂದರ ನಿದರ್ಶನವನ್ನು ಕೊಡಲಾಗಿದೆ.

ಅನಂತರದ ಅವಧಿಯಲ್ಲಿ ಮೊಘಲ್ ಕಲೆ, ರಜಪೂತ ಕಲೆ ಹಾಗೂ ಪಾಶ್ಚಾತ್ಯ ಕಲೆಯ ಪ್ರಭಾವದಿಂದಾಗಿ ಸಮೃದ್ಧವಾಗಿ ಬೆಳೆದುಬಂದ ಈ ದಕ್ಖನಿ ಚಿಕಣಿ ಚಿತ್ರಗಳು ಚಿತ್ರ, ಸಂಗೀತ, ಕಾವ್ಯಗಳ ಸಂಗಮವಾಗಿ ರಚನೆಗೊಂಡ ದಕ್ಖನಿ ರಾಗಮಾಲಾ ಪರಂಪರೆಯ ಚಿತ್ರಗಳ ರೂಪದಲ್ಲಿ ಭಾರತೀಯ ಕಲಾ ಇತಿಹಾಸದಲ್ಲಿ ಹೊಸ ಸಂಪ್ರದಾಯವನ್ನು ಪ್ರಥಮ ಬಾರಿಗೆ ಹುಟ್ಟುಹಾಕಿದವು. ಚಿತ್ರ ೧೭ರಲ್ಲಿ ವನಪರ್ತಿಯ ಸ್ಥಳೀಯ ಅರಸರ ಆಶ್ರಯದಲ್ಲಿ ಸುಮಾರು ಕ್ರಿ.ಶ. ೧೭೫೫ರಲ್ಲಿ ರಚನೆಯಾದ ರಾಗ ಭೈರವಿಯ ರಾಗಮಾಲಾ ಚಿತ್ರವನ್ನು ಕೊಡಲಾಗಿದೆ. ಇದರ ವೈಶಿಷ್ಟ್ಯವೆಂದರೆ ಇದರಲ್ಲಿ ಕೊಟ್ಟಿರುವ ಸಂಸ್ಕೃತ ಧ್ಯಾನಶ್ಲೋಕವು ಕನ್ನಡ–ತೆಲುಗು ಲಿಪಿಯಲ್ಲಿದೆ. ಕುತೂಹಲಕಾರಿ ಅಂಶ ಎಂದರೆ ಕರ್ನಾಟಕ ಸಂಗೀತ ಶೈಲಿ ಪ್ರಧಾನವಾಗಿರುವ ದಕ್ಷಿಣ ಭಾರತದಲ್ಲಿ ರಾಗಮಾಲಾ ಚಿತ್ರ ಪರಂಪರೆ ಇಲ್ಲವಾದರೂ ಹಿಂದೂಸ್ಥಾನಿ ಸಂಗೀತ ಶೈಲಿಯನ್ನೇ ಆಧರಿಸುವ ರಾಗಮಾಲಾ ಚಿತ್ರ ವನಪರ್ತಿಯಲ್ಲಿ ರಚನೆಯಾಗಿದೆ ಎಂಬ ಅಂಶ.



ಚಿತ್ರ ೧೭: ವನಪರ್ತಿಯ ದಕ್ಖನಿ ಶೈಲಿಯಲ್ಲಿರುವ ರಾಗಿಣಿ ಭೈರವಿಯ ರಾಗಮಾಲಾ ಚಿತ್ರ

### ೪.೩.೩. ಮೈಸೂರು ಶೈಲಿಯ ಚಿತ್ರಕಲೆ

ಮೈಸೂರು ಶೈಲಿ ಹಾಗೂ ತಂಜಾವೂರು ಕಲಾಶೈಲಿಗಳು ಸಂಪೂರ್ಣವಾಗಿ ವಿಜಯನಗರ ಕಲಾವಿದರ ಮತ್ತು ಕಲಾಕೃತಿಗಳ ಮುಂದುವರೆದ ವಿಶಿಷ್ಟ ಪರಂಪರೆಗಳಾಗಿವೆ. ಟಿಪ್ಪುವಿನ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿರುವ ಟಿಪ್ಪುವಿನ ಬೇಸಿಗೆಯ ಅರಮನೆಯಾದ 'ದರಿಯಾ ದೌಲತ್' ವರ್ಣಚಿತ್ರಗಳ ಒಂದು ಆಗರವೇ ಆಗಿದೆ. ಇದರಲ್ಲಿ ನಿಂತು ಎತ್ತ ನೋಡಿದರೂ ಬರೀ ಚಿತ್ರಗಳೇ ಕಾಣಿಸುತ್ತವೆ. ಇಲ್ಲಿನ ಕಲಾಕೃತಿಗಳಲ್ಲಿ ಅನೇಕ ಸಮಕಾಲೀನ ಚಾರಿತ್ರಿಕ ಘಟನೆಗಳನ್ನು ಹಾಗೂ ವ್ಯಕ್ತಿಗಳನ್ನು ಕಾಣಬಹುದಾಗಿದೆ. ಭಿತ್ತಿ ಚಿತ್ರಕಲೆಗೆ ಅತ್ಯಂತ

ignou
THE PEOPLE'S
UNIVERSITY



ಚಿತ್ರ ೧೮: ಮೈಸೂರು ಶೈಲಿಯ ಚಿತ್ರಕಲೆಯ ಉದಾಹರಣೆ (ಚಿತ್ರ ಕೃಪೆ: ವಿಕಿವ್ಯಾಂಡ್)

ಉತ್ತಮ ಉದಾಹರಣೆ ಇಲ್ಲಿಯ ಚಿತ್ರಗಳಾಗಿವೆ. ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯದ ಕೈಸಾಲೆಯ ಚಾವಣಿ ತೊಲೆಗಳ ಮೇಲೆ ರಚಿತವಾದ ಚಿತ್ರಗಳು ಮೈಸೂರು ಚಿತ್ರಕಲೆಯ ಆರಂಭಿಕ ಚಿತ್ರಗಳೆಂದು ಗುರುತಿಸಲ್ಪಡುತ್ತವೆ. ಚಿಕ್ಕದೇವರಾಜ ಒಡೆಯರ ಅವರ ಕಾಲದಲ್ಲಿ ನಿರ್ಮಿತವಾದ ಹಿರಿಯೂರು ದೇವಾಲಯ ಮತ್ತು ಎಡೆಯೂರು ಸಿದ್ದಲಿಂಗೇಶ್ವರ ಮಠದ ಗೋಡೆಗಳ ಮೇಲೂ ಭಿತ್ತಿ ಚಿತ್ರಗಳನ್ನು ರಚಿಸಲಾಗಿದೆ. ತುಮಕೂರು ಜಿಲ್ಲೆಯ ಸಿಬಿ ಊರಿನ ನರಸಿಂಹ ದೇವಾಲಯದ ಮುಖಮಂಟಪದ ಭಿತ್ತಿಯಲ್ಲಿ ಕಂಡುಬರುವ ಚಿತ್ರಗಳು ಮೈಸೂರು ಭಿತ್ತಿ ಚಿತ್ರಕಲೆ ಶೈಲಿಯ ರಚನೆಯಾಗಿವೆ. ಚಿತ್ರ ೧೮ರಲ್ಲಿ ಮೈಸೂರು ಶೈಲಿಯ ಚಿತ್ರಕಲೆಯ ನಿದರ್ಶನವನ್ನು ಕೊಡಲಾಗಿದೆ.

ಕನ್ನಡದ ಭೋಜರಾಜರೆಂದೇ ಖ್ಯಾತರಾಗಿದ್ದ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಅವರ ಚಿತ್ರಕಲಾ ಪ್ರೇಮಕ್ಕೆ ಸಾಕ್ಷಿಯಾಗಿ ಇಂದಿಗೂ ಮೈಸೂರಿನ ಜಗನ್ಮೋಹನ ಅರಮನೆ, ಪ್ರಸನ್ನ ಕೃಷ್ಣಸ್ವಾಮಿ, ವೆಂಕಟರಮಣ ದೇವಾಲಯಗಳು, ಶ್ರವಣಬೆಳಗೊಳದ ಜೈನಮಠ, ಚಾಮರಾಜನಗರದ ಚಾಮರಾಜೇಶ್ವರ ದೇವಾಲಯಗಳ ಚಿತ್ರಗಳು ನಿದರ್ಶನಗಳಾಗಿವೆ. ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರ ಕಾಲದಲ್ಲಿ ಅನೇಕ ಚಿತ್ರಕಾರರು ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ. ಇವರಲ್ಲಿ ಕೆ. ವೆಂಕಟಪ್ಪನವರು ಕರ್ನಾಟಕ ಚಿತ್ರಕಲೆಯೊಂದಿಗೆ ಬಂಗಾಲಿ ಚಿತ್ರಕಲೆಯನ್ನು, ಐರೋಪ್ಯ ಶೈಲಿಯನ್ನು ಮೈಗೂಡಿಸಿಕೊಂಡು ಚಿತ್ರರಚನೆ ಮಾಡಿದ್ದಾರೆ. ವೆಂಕಟಪ್ಪನವರು ಅರಮನೆಯ ಗೋಡೆಗಳ ಮೇಲೆ ಚಿತ್ರಿಸಿರುವ ದೃಶ್ಯಗಳು ಮನೋಜ್ಞವಾಗಿವೆ. ಮೈಸೂರು ಸಾಂಪ್ರದಾಯಿಕ ಚಿತ್ರಕಲೆ ಎಂದು ಕರೆಯಲ್ಪಡುವ ಹಸ್ತಪ್ರತಿಗಳಲ್ಲಿಯ ಕಿರುಚಿತ್ರಗಳು, ಪೌರಾಣಿಕ ಕಥನದ ಚಿತ್ರಗಳು, ದೇವ ದೇವತೆಗಳ ವರ್ಣಚಿತ್ರಗಳ ಶೈಲಿ ಮೈಸೂರು ಒಡೆಯರ ಆಶ್ರಯದಲ್ಲಿ ರಚನೆಯಾದ ಚಿತ್ರಕಲೆಯಾಗಿದ್ದು ಅದು ವಿಜಯನಗರ ಹಾಗೂ ದಕ್ಷಿಣ ಭಾರತದ ತಂಜಾವೂರು ಚಿತ್ರಕಲೆಗಳ ಲಕ್ಷಣಗಳನ್ನೂ

ಮೈಗೂಡಿಸಿಕೊಂಡು ರೂಪಿತವಾಯಿತು. ಇದನ್ನು ಮೈಸೂರು ಚಿತ್ರಕಲಾ ಶೈಲಿಯೆಂದು ಗುರುತಿಸಲಾಗಿದೆ. ಮುಖ್ಯವಾಗಿ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಅವರು ತಮ್ಮ ಕಾಲದ ಗ್ರಂಥಗಳಾದ 'ಶ್ರೀತತ್ವನಿಧಿ', 'ಸ್ವರಚೂಡಾಮಣಿ' ಮತ್ತು 'ದೇವತಾನಾಮ ಕುಸುಮ ಮಂಜರಿ' ಹಸ್ತಪ್ರತಿಗಳಲ್ಲಿ ಸ್ವತಃ ಮುಮ್ಮಡಿಯವರೆ ರಚಿಸಿದ ದೇವತೆಗಳ ಸಾಂದರ್ಭಿಕ ಚಿತ್ರಗಳು ಗಮನಾರ್ಹ.

## ೪.೩.೪. ನವೋದಯ ಚಿತ್ರಕಲೆ

ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ, ಹಿಂದಿನ ಮೈಸೂರು ಸಂಸ್ಥಾನವೂ ಸೇರಿದಂತೆ ಕರ್ನಾಟಕದಲ್ಲಿ, ಚಿತ್ರಕಲೆಯ ಸ್ಥಗಿತ ಸ್ಥಿತಿಯಿಂದ ಹೊರಳು ಹಾದಿಯತ್ತ ತಿರುಗಿ, ಕಲೆಯ ಬಗ್ಗೆ ಆಸಕ್ತಿ, ಜಾಗೃತಿ, ಅಭಿರುಚಿ ಮೂಡಿಸಿ ಮುಂದೆ ಕರ್ನಾಟಕ ಕಲೆ ವೈವಿಧ್ಯಪೂರ್ಣವಾಗಿ ವಿಕಾಸ ಹೊಂದಲು ಕನ್ನೆ ನೆಲವನ್ನು ಹದಗೊಳಿಸಿದವರು ಹಿರಿಯ ಕಲಾವಿದರು. ಅದು ಸಾಹಿತ್ಯ, ಚಿತ್ರಕಲೆ, ರಂಗಭೂಮಿ ಮುಂತಾದ ಕಲೆಯ ವಲಯಗಳಲ್ಲಿ ಹೊಸ ದೃಷ್ಟಿ, ಹೊಸ ಪ್ರತಿಭೆಯನ್ನು ತಂದ ಕಾಲ. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕುವೆಂಪು ಅವರು ಆ ಸ್ವಾತಂತ್ರ್ಯಪೂರ್ವದ ಹೊಸ ಬೆಳೆಯ ಕಾಲವನ್ನು ಔಚಿತ್ಯಪೂರ್ಣ ವಾಗಿ 'ನವೋದಯ ಕಾಲ' ಎಂದು ಗುರುತಿಸಲಾಗುತ್ತದೆ. ೧೯ನೆಯ ಶತಮಾನದ ಪೂವಾರ್ಧದಲ್ಲಿ ರಚಿತವಾದ (೧೮೪೬) ಮಾಂಜಿ ಎಂಬ ಕಲಾವಿದರ ಮುಮ್ಮಡಿ ಕೃಷ್ಣರಾಜರ ಭಾವಚಿತ್ರ ವಾಸ್ತವ ಶೈಲಿಯಲ್ಲಿದೆ. ರಾಜಾ ರವಿವರ್ಮನ ಪ್ರಭಾವ ಹಾಗೂ ಮೈಸೂರು ಅರಮನೆಯ ಕಲಾ ಸಂಗ್ರಹಗಳಲ್ಲಿದ್ದ ಪಾಶ್ಚಾತ್ಯರ ಕಲಾಕೃತಿಗಳ ಪ್ರಭಾವದಿಂದಾಗಿ ಕಲಾವಿದರು ಸಹಜವಾಗಿ ಚಿತ್ರಕಲೆಯನ್ನು ಹೊಸ ದೃಷ್ಟಿಯಿಂದ ನೋಡಲು ಪ್ರೇರಣೆ ನೀಡಿದವು. ೧೯೧೩ರಲ್ಲಿ ಮೈಸೂರು ಚಾಮರಾಜೇಂದ್ರ ತಾಂತ್ರಿಕ ಶಾಲೆ ಪ್ರಾರಂಭವಾಯಿತು. ಮರಗೆಲಸ ಮುಂತಾದ ವಿವಿಧ ಕಸುಬು-ಕೌಶಲ್ಯಗಳಿಗಾಗಿ ಪ್ರಾರಂಭವಾದರೂ ಎಲ್ಲಕ್ಕೂ ಮೂಲವಾಗಿ ಡ್ರಾಯಿಂಗ್ ಪರಿಣತಿಯ ಅಗತ್ಯದ ಅರಿವಾದಾಗ ಚಿತ್ರ ಹಾಗೂ ಶಿಲ್ಪಗಳ ವಿಭಾಗಗಳೂ ಪ್ರಾರಂಭವಾದವು. ಮಹಾರಾಜರ ಸರ್ಕಾರ ಶಿಷ್ಯವೇತನ ನೀಡಿ ಕಲಾವಿದರನ್ನು ಮುಂಬಯಿಯ ಜೆ.ಜೆ. ಕಲಾಶಾಲೆ, ಮದ್ರಾಸಿನ ಕಲಾಶಾಲೆ, ಕಲ್ಕತ್ತಾದ ಕಲಾಶಾಲೆಗಳಿಗೆ ಹೆಚ್ಚಿನ ಅಧ್ಯಯನಕ್ಕೆ ಎಂದು ಕಳುಹಿಸಿತು. ಆ ಬಗೆಯ ಪ್ರೋತ್ಸಾಹದಿಂದಾಗಿ ಚಾಮರಾಜೇಂದ್ರ ಕಲಾಶಾಲೆಯು ಚಿಂತನೆ ಭಾರತೀಯತ್ವ ಪರಂಪರೆಯೆಡೆಗೆ ಹೊರಳುವಂತೆ ಆನಂದಕುಮಾರಸ್ವಾಮಿ ಮುಂತಾದವರು ಪ್ರಯತ್ನ ಮಾಡಿದರು. ನಿಧಾನವಾಗಿ ಕಲಾಶೈಲಿ ಹಾಗೂ ಕಲಾಭಿರುಚಿಗಳು ಬದಲಾವಣೆಗೊಂಡವು. ಸಾಹಿತ್ಯವೂ ಒಳಗೊಂಡಂತೆ ಚಿತ್ರಕಲೆಯಲ್ಲಿಯೂ ಹೊಸ ಅಲೆ ಬೀಸಲಾರಂಭಿಸಿತು. ಕೆ. ವೆಂಕಟಪ್ಪನವರು (೧೮೮೬-೧೯೬೫) ಕಲ್ಕತ್ತಾದ ಕಲಾಶಾಲೆಯಲ್ಲಿ ಅಬನೇಂದ್ರನಾಥ ಟಾಗೋರರ ಶಿಷ್ಯರಾಗಿ, ನಂದಲಾಲ್ ಬಸು ಅವರ ಸಹಪಾಠಿಯಾಗಿ, ತಮ್ಮದೇ ಆದ ವಿಶಿಷ್ಟ ರಚನಾಶೈಲಿಯನ್ನು ರೂಪಿಸಿಕೊಂಡರು. ಒಂದತ್ತ ತಾವು ತರಬೇತಿ ಪಡೆದ ಕಲ್ಕತ್ತದ ಪರಂಪರೆಯಿಂದ ದೂರವಾಗಲು ಪ್ರಯತ್ನಿಸುತ್ತ ಇನ್ನೊಂದತ್ತ ಸಂಬಳದ ಚಾಕರಿಯನ್ನು ನಿರಾಕರಿಸುತ್ತ ಯಾವುದೇ ಹಂಗಿಲ್ಲದೆ ತಮ್ಮದೇ ಆದ ಶೈಲಿ ಮತ್ತು ಬಾಳ್ವೆಯನ್ನು ನಿರೂಪಿಸಿಕೊಂಡ ವೆಂಕಟಪ್ಪನವರು ಕಲಾವಿದನ ಅಭಿವ್ಯಕ್ತಿ ಸ್ವಾತಂತ್ರದ ಮೂರ್ತರೂಪವಾಗಿದ್ದರು. ಅವರು ತಮ್ಮ ಚಿತ್ರಗಳನ್ನು ಮಾರಲು ನಿರಾಕರಿಸಿದರು. ಚಿತ್ರ ೧೯ರಲ್ಲಿ ವೆಂಕಟಪ್ಪನವರ 'ರಾವಣನೊಡನೆ ಹೋರಾಡುತ್ತಿರುವ



ಚಿತ್ರ ೧೯: ಕೆ. ವೆಂಕಟಪ್ಪನವರ ರಾವಣನೊಡನೆ ಹೋರಾಡುತ್ತಿರುವ ಜಟಾಯು ವರ್ಣಚಿತ್ರ
(ಕೃಪೆ: ವಿಕಿಪೀಡಿಯಾ)

ಜಟಾಯು' ವರ್ಣಚಿತ್ರವನ್ನು ಕೊಡಲಾಗಿದೆ. ಅದೇ ರೀತಿ ಪಾವಂಜೆಯವರು ಮದರಾಸಿನ ಕಲಾಶಾಲೆಯಲ್ಲಿ ರಾಯ್ ಚೌಧುರಿಯವರ ಶಿಷ್ಯರಾಗಿ ಕಲಿತು ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ಚಿತ್ರ ಕಲಾ ಶಿಕ್ಷಕರಾದರು. ಎಸ್.ಜಿ. ವಾಸುದೇವ ಮತ್ತು ಹಡಪದ್ ಅವರು ಅರವತ್ತರ ದಶಕದ ಕಲಾವಿದರು. ಎಂ. ವೀರಪ್ಪ, ಸುಬ್ಬುಕೃಷ್ಣ, ಟಂಕಸಾಲೆ, ಶುದ್ಧೋದನ, ಸೂಫಿ, ಸುಬ್ರಹ್ಮಣ್ಯ ರಾಜು, ಎಸ್.ಆರ್. ಅಯ್ಯಂಗಾರ್, ಎಸ್.ಎನ್. ಸ್ವಾಮಿ ಮತ್ತಿತರರು ಜೆ.ಜೆ. ಕಲಾಶಾಲೆಯಲ್ಲಿ ಕಲಿತು ಬಂದವರು. ಇವರು ವಿವಿಧ ರೀತಿಯ ಪರಿಣಿತಿಗಳನ್ನು ಪಡೆದು ಕರ್ನಾಟಕದ ಚಿತ್ರಕಲಾ ಪರಂಪರೆಗೆ ಹೊಸ ಮೆರಗನ್ನು ಕೊಟ್ಟರು. ಅದರಂತೆ ಚಾಮರಾಜೇಂದ್ರ ಕಲಾಶಾಲೆ, ಅನಂತರ ಜೆ.ಜೆ. ಕಲಾಶಾಲೆ ಮತ್ತು ವಿದೇಶಗಳಲ್ಲಿ ಅಧ್ಯಯನ ನಡೆಸಿದ ಕಲಾವಿದ ಕೆ.ಕೆ. ಹೆಬ್ಬಾರ ಅವರು ರೇಖಾಚಿತ್ರ ಮತ್ತು ಯಕ್ಷಗಾನ ರಂಗಗಳಲ್ಲಿ ಅಪೂರ್ವವಾದ ಕೊಡುಗೆ ನೀಡಿದ್ದಾರೆ. ಪಿ.ಆರ್. ತಿಪ್ಪೇಸ್ವಾಮಿ, ಹಾಲಭಾವಿ, ಎಂ.ಎ. ಚೆಟ್ಟಿ, ಎಂ.ಎಸ್. ಚಂದ್ರಶೇಖರ್, ಆರ್.ಎಂ. ಹಡಪದ್, ಜೆ.ಎಸ್. ಖಂಡೇರಾವ್, ಶುದ್ಧೋದನ, ಎಸ್.ಎಸ್. ಮನೋಳಿ ಮೊದಲಾದವರ ಕೊಡುಗೆಯೂ ವಿಶಿಷ್ಟವಾದುದು.

## ೪.೪. ಸಂಗೀತ ಕಲೆ

ಭಾರತೀಯ ಸಂಗೀತ ಕಲೆಯು ಸಾಕ್ಷಾತ್ಕಾರದ ಸಾಧನ. ವೇದ ಕಾಲದಿಂದಲೂ ಸಂಗೀತ ಕಲೆ ಭಾರತದಲ್ಲಿ ಬೆಳೆದುಬಂದಿದೆ. ದೇಸಿ ಮತ್ತು ಮಾರ್ಗ ಎಂಬ ಎರಡು ಪ್ರಭೇದಗಳಿಂದ ಗುರುತಿಸಲ್ಪಡುವ ಸಂಗೀತ ಕಲೆಯು ಭಾರತೀಯ ಸಮಾಜದಲ್ಲಿ ಮುಖ್ಯವಾಗಿ ಧಾರ್ಮಿಕ ಮತ್ತು ಭಕ್ತಿಯ ಆರಾಧನೆ ರೂಪದಲ್ಲಿ ಕಂಡುಬರುತ್ತದೆ. ಕ್ರಿ.ಶ. ೪ನೆಯ ಶತಮಾನದ ಭರತನ 'ನಾಟ್ಯಶಾಸ್ತ್ರ'ದಲ್ಲಿ, ಕ್ರಿ.ಶ. ೭ನೆಯ ಶತಮಾನದಲ್ಲಿ ಮಾತಂಗ ಮುನಿ ರಚಿಸಿದ 'ಬೃಹದ್ದೇಶಿ'ಯಲ್ಲಿ, ಕ್ರಿ.ಶ. ೧೩ನೆಯ ಶತಮಾನದ ಸಾರಂಗದೇವ ರಚಿಸಿದ 'ಸಂಗೀತರತ್ನಾಕರ'ದಲ್ಲಿ ಹಾಗೂ ಕ್ರಿ.ಶ. ೧೬ನೆಯ ಶತಮಾನದಲ್ಲಿ ರಾಮಾಮಾತ್ಯ ರಚಿಸಿದ 'ಸ್ವರಮೇಳ ಕಲಾನಿಧಿ'ಯಲ್ಲಿ ನಾವು ಸಂಗೀತದ ಕಲೆಯ ವಿವಿಧ ಆಯಾಮಗಳನ್ನು ಕಾಣುತ್ತೇವೆ. ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಮಾರ್ಗ ಮತ್ತು ದೇಸಿ ಪ್ರಕಾರದ ಸಂಗೀತ ರೂಪಗಳು ಪ್ರಚಲಿತವಾಗಿದ್ದವು. ಸಾಂಪ್ರದಾಯಿಕ ಸಂಗೀತ ಕಲಿಕೆಗಾಗಿ ಗುರುಕುಲಗಳನ್ನು ನಡೆಸಲಾಗುತ್ತಿತ್ತು. ಸಂಗೀತಶಾಸ್ತ್ರದ ಶಾಸ್ತ್ರಗ್ರಂಥಗಳನ್ನು ರಚಿಸಿದ ಹಲವಾರು ಶಾಸ್ತ್ರಕಾರರು, ಪುಂಡರೀಕ ವಿಠಲ, ರಾಮಾಮಾತ್ಯ, ವೆಂಕಟಮಖಿ ಮುಂತಾದವರು ಕರ್ನಾಟಕದವರು. ಕರ್ನಾಟಕದಲ್ಲಿ ಹಿಂದೂಸ್ತಾನಿ ಮತ್ತು ಕರ್ನಾಟಕ ಎಂಬ ಎರಡೂ ಪ್ರಕಾರದ ಸಂಗೀತಗಳು ಬೆಳೆದುಬಂದಿವೆ. ಸ್ಥೂಲವಾಗಿ ಕರ್ನಾಟಕ ಸಂಗೀತ ಎಂಬುದು ದಕ್ಷಿಣ ಭಾರತದ ಪಾರಂಪರಿಕ ಸಂಗೀತ ಶೈಲಿ ಎಂದೂ, ಹಿಂದೂಸ್ತಾನಿ ಸಂಗೀತವನ್ನು ಉತ್ತರ ಭಾರತದ ಪಾರಂಪರಿಕ ಸಂಗೀತ ಶೈಲಿ ಎಂದೂ ಗುರುತಿಸಲಾಗುತ್ತದೆ. ವಿಜಯನಗರ ಕಾಲದಲ್ಲಿ ಸಂಗೀತ ಕಲೆಯು ತನ್ನ ವೈಭವತೆಯನ್ನು ಮೆರೆದಿತ್ತು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಮುಖ್ಯವಾಗಿ ಕರ್ನಾಟಕ ಸಂಗೀತ ಕಲೆಯು ಉಗಮವಾಗಿದ್ದು ವಿಜಯನಗರ ಆಳ್ವಿಕೆಯ ಕ್ರಿ.ಶ. ೧೪ನೆಯ ಶತಮಾನದಲ್ಲಿ ಎಂದು ವಿದ್ವಾಂಸರ ಅಭಿಪ್ರಾಯ. ರಾಗ, ತಾಳ, ಪ್ರಬಂಧ ಮತ್ತು ವಾದ್ಯ ಎಂಬ ನಾಲ್ಕು ವಿಶಿಷ್ಟ ಲಕ್ಷಣಗಳಿಂದ ಕೂಡಿದ ಸಂಗೀತವು ಕರ್ನಾಟಕ ಸಂಗೀತದ ಮೂಲ. ಮುಖ್ಯವಾಗಿ ಗೀತೆ, ಆಲಾಪ, ತಾಳ ಮತ್ತು ಪ್ರಬಂಧ ಎಂಬ ಚತುರ್ದಂಡಿ ಎಂದು ಕರೆಯಲ್ಪಡುವ ಸಂಗೀತದ ಲಕ್ಷಣಗಳಾಗಿವೆ. ತಂಜಾವೂರು ಆಸ್ಥಾನದಲ್ಲಿ ವೆಂಕಟಮಖಿಯಿಂದ ಕ್ರಿ.ಶ. ೧೬೨೦ರಲ್ಲಿ ರಚಿತವಾದ **'ಚತುರ್ದಂಡಿ ಪ್ರಕಾಶಿಕಾ'** ಕರ್ನಾಟಕ ಸಂಗೀತದ ಆಧಾರಭೂತ ಕೃತಿ ಎಂದು ಪರಿಗಣಿಸಲಾಗಿದೆ.

ಸಂಗೀತಕ್ಕೆ ಸಂಬಂಧಿಸಿದಂತೆ ಸುಮಾರು ಕ್ರಿ.ಶ. ೧೪೭೫ರ ವೇಳೆಗೆ ಅಸ್ತಿತ್ವಕ್ಕೆ ಬಂದ ರಾಗಮಾಲಾ ಚಿತ್ರ ಪರಂಪರೆಯು ಸಾಹಿತ್ಯ, ಸಂಗೀತ ಹಾಗೂ ಚಿತ್ರಕಲೆಯ ಸಮಾಗಮದಲ್ಲಿ ಹುಟ್ಟಿದ ಕಲಾರೂಪ. ಪರ್ಷಿಯನ್ ಮಿನಿಯೇಚರ್ ಚಿತ್ರ ಪದ್ಧತಿ, ಕಾಗದದ ಹಾಗೂ ಕಲಂಗಳ ಉಪಯೋಗ, ಹಿಂದೂ ಹಾಗೂ ಮುಸಲ್ಮಾನ ಚಿತ್ರಕಾರರನ್ನು ಒಳಗೊಂಡಿದ್ದರೂ ಸಂಪೂರ್ಣವಾಗಿ ಹಿಂದೂ ದೇವದೇವತೆಗಳು ಮತ್ತು ಪ್ರಧಾನವಾಗಿ ಸ್ತ್ರೀ ರೂಪಗಳನ್ನು ಕೇಂದ್ರೀಕರಿಸಿದ ಈ ಪರಂಪರೆಯ ಒಂದು ಪ್ರಧಾನ ಶೈಲಿ ದಕ್ಖನ್ನಿನಲ್ಲಿ ರೂಪುಗೊಂಡಿತು (ಚಿತ್ರ ೧೭ನ್ನು ನೋಡಿ). ಅದೇ ಸುಮಾರಿಗೆ ಗೋಚರವಾಗುವ ಭಕ್ತಿ ಪಂಥ ಹಾಗೂ ಅದರ ಹಾಡುವ ವೃತ್ತಿ ಗಾಯಕ ಪರಂಪರೆ ಹಾಗೂ ಅದನ್ನು ದೃಷ್ಯ ರೂಪದಲ್ಲಿ ಅಭಿವ್ಯಕ್ತಿಸಿರುವ ರಾಗಮಾಲಾ ಚಿತ್ರ ಪರಂಪರೆಗಳು ಪರಸ್ಪರ ಪೂರಕವಾದ ಕಲಾರೂಪ

ignou
THE PEOPLE'S
UNIVERSITY


ದಾಸರಪದಗಳು.

ಚಿತ್ರ ೨೦: ಮೊಗ್ಲಿಂಗ್ ಅವರು 'ಬಿಬ್ಲಿಯೋಥಿಕ್ ಕರ್ನಾಟಕ' ಮಾಲೆಯಲ್ಲಿ ಮುದ್ರಿಸಿರುವ ಕಲ್ಲಚ್ಚಿನ ಪುರಂದರದಾಸರ ಕೀರ್ತನೆ
(ಕೃಪೆ: ಅಲ್ಬ್ರೆಕ್ಟ್ ಫ್ರೆಂಜ್ ಮತ್ತು ಸ್ಟಿಫನ್ ಫ್ರೆಂಜ್ ೨೦೦೭, ಪು. ೪೫)

ಗಳಾಗಿದ್ದು ಮಧ್ಯಕಾಲೀನ ಜನಪ್ರಿಯ ಮತ್ತು ಜನಪದ ಪ್ರದರ್ಶನ ಪರಂಪರೆಗಳ ಮೂಲಕ ಉಳಿದುಬಂದಂತೆ ಕಾಣುತ್ತದೆ.

ಹಿಂದೂಸ್ತಾನಿ ಸಂಗೀತವು ಉತ್ತರ ಭಾರತೀಯ ಸಂಗೀತ ಶೈಲಿಯೆಂದು ಗುರುತಿಸಲ್ಪಡುತ್ತದೆ. ಇದು ಪ್ರಬಂಧ, ದ್ರುಪದ, ಖಯಾಲ್, ಘರಾನಾ ಇತ್ಯಾದಿ ಶೈಲಿಗಳಿಂದ ಕೂಡಿರುತ್ತದೆ. ಹಿಂದೂಸ್ತಾನಿ ಸಂಗೀತವು ಕರ್ನಾಟಕದಲ್ಲಿ ಮೈಸೂರು ಸೇರಿದಂತೆ ಮುಂಬೈ ಕರ್ನಾಟಕದ ಧಾರವಾಡ ಹಾಗೂ ಮಹಾರಾಷ್ಟ್ರದ ಪುಣೆ ನಗರಗಳಲ್ಲಿ ೨೦ನೆಯ ಶತಮಾನದಲ್ಲಿ ಪ್ರಸಿದ್ಧಿಗೆ ಬಂದಿದೆ. ಮಹಾರಾಷ್ಟ್ರದ ದೇಸಿ ಸಂಗೀತ ಹಿನ್ನೆಲೆಯ 'ಅಭಂಗ' ಮಾದರಿಯ ಭಕ್ತಿ ಸಂಗೀತವೂ ಕರ್ನಾಟಕದಲ್ಲಿ ಪ್ರಸಿದ್ಧವಾಗಿದೆ. ವಿಜಯನಗರ ಕಾಲದಲ್ಲಿದ್ದ ಪುರಂದರ ದಾಸರನ್ನು ಕರ್ನಾಟಕ ಸಂಗೀತದ ಪಿತಾಮಹ ಎಂದು ಕರೆಯುತ್ತಾರೆ. ಪುರಂದರದಾಸರ ಕೀರ್ತನೆ, ಉಗಾಭೋಗ ಹಾಗೂ ಸುಳಾದಿಗಳು ಕರ್ನಾಟಕ ಸಂಗೀತದ ಮೂಲಕ

ಹೆಚ್ಚು ಪ್ರಸಿದ್ಧವಾಗಿದೆ. ಚಿತ್ರ ೨೦ರಲ್ಲಿ ಮೊಗ್ಲಿಂಗ್ ಅವರು 'ಬಿಬ್ಲಿಯೋಥಿಕ್ ಕರ್ನಾಟಕ' ಮಾಲೆಯಲ್ಲಿ ಮುದ್ರಿಸಿರುವ ಕಲ್ಲಚ್ಚಿನ ಪುರಂದರದಾಸರ ಕೀರ್ತನೆಯ ಪಡಿಯಚ್ಚನ್ನು ನೋಡಬಹುದು. ಅದರಂತೆ ಅಣ್ಣಮಾಚಾರ್ಯ, ತ್ಯಾಗರಾಜ ಮುಂತಾದವರು ಕರ್ನಾಟಕ ಸಂಗೀತದಲ್ಲಿ ಹೆಸರುವಾಸಿಯಾಗಿದ್ದಾರೆ. ತಮಿಳುನಾಡಿನ ತಂಜಾವೂರು ಕರ್ನಾಟಕ ಸಂಗೀತದ ಕೇಂದ್ರಸ್ಥಾನವಾಗಿತ್ತು. ಕರ್ನಾಟಕದಲ್ಲಿ ಅದು ಮೈಸೂರು ಅರಸರ ರಾಜಧಾನಿ ಯಾದ ಮೈಸೂರಿನಲ್ಲಿ ಆಶ್ರಯ ಪಡೆದಿತ್ತು.

ಕರ್ನಾಟಕದಲ್ಲಿ ಹಿಂದೂಸ್ತಾನಿ ಸಂಗೀತವು ಅನೇಕ ಸಂಗೀತಕಾರರನ್ನು ಬೆಳೆಸಿದೆ. ಅವರಲ್ಲಿ ಫಯಾಜ್ ಖಾನ್, ಅಬ್ದುಲ್ ಕರೀಂ ಖಾನ್, ವಿಲಾಯತ್ ಖಾನ್ ಮುಂತಾದವರು ಮೈಸೂರು ಮತ್ತು ಇತರ ಪ್ರದೇಶಗಳಲ್ಲಿ ಸಂಗೀತ ಕಛೇರಿಗಳನ್ನು ನಡೆಸುತ್ತಿದ್ದರು. ಪಂಡಿತ ಮಲ್ಲಿಕಾರ್ಜುನ ಮನ್ಸೂರ್, ಭಾರತರತ್ನ ಭೀಮಸೇನ ಜೋಶಿ, ಪಂಡಿತ ಸವಾಯಿ ಗಂಧರ್ವ, ಪಂಡಿತ ಬಸವರಾಜ ರಾಜಗುರು, ಪಂಡಿತ ಕುಮಾರ ಗಂಧರ್ವ ಹಾಗೂ ಗಂಗೂಬಾಯಿ ಹಾನಗಲ್ ಮುಂತಾದ ಕಲಾವಿದರು ಹಿಂದೂಸ್ತಾನಿ ಸಂಗೀತದ ಮಹಾನ್ ಕಲಾವಿದರೆಂದು ಗುರುತಿಸಲ್ಪಡುತ್ತಾರೆ. ವಚನಗಳನ್ನು ಹಾಡುವ ಪರಂಪರೆಯು ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಸಿದ್ಧರಾಮ ಜಂಬಲದಿನ್ನಿ ಮುಂತಾದ ಹಿಂದೂಸ್ತಾನಿ ಗಾಯಕರಿಂದ ಪ್ರಸಿದ್ಧಿಗೆ ಬಂದಿತು. ಇದಲ್ಲದೆ ವಿಜಯನಗರದ ಆಳ್ವಿಕೆ ಕೊನೆಗೊಂಡ ನಂತರದಲ್ಲಿ ಮಧುಗಿರಿ, ಕೆಳದಿ, ಮೈಸೂರು ಸಂಸ್ಥಾನಗಳ ಅರಸರು ಕರ್ನಾಟಕ ಸಂಗೀತ ಕಲೆಯನ್ನು ಪೋಷಿಸಿದ್ದಾರೆ. ಮಧುಗಿರಿಯ ಪಾಳೆಯಗಾರ ಮುಮ್ಮಡಿ ಚಿಕ್ಕಭೂಪಾಲನು ಕ್ರಿ.ಶ. ೧೬೫೦ರಲ್ಲಿ 'ಅಭಿನವಭಾರತ ಸಾರಸಂಗ್ರಹ' ಎಂಬ ಸಂಗೀತಗ್ರಂಥವನ್ನು ರಚಿಸಿದ್ದಾನೆ. ಮೈಸೂರಿನ ಒಡೆಯರ ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಸ್ವತಃ ಕವಿ ಹಾಗೂ ಸಂಗೀತಕಾರರಾಗಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಕರ್ನಾಟಕ ಸಂಗೀತಕ್ಕೆ ಆಸ್ಥಾನದಲ್ಲಿ ಪ್ರಾಶಸ್ತ್ಯವನ್ನು ನೀಡಲಾಯಿತು. ಅವರ ಆಳ್ವಿಕೆಯಲ್ಲಿ ಟಿ. ಚೌಡಯ್ಯ, ವೀಣೆ ಶೇಷಣ್ಣ, ಮುತ್ತಯ್ಯ ಭಾಗವತರ್, ಸುಬ್ಬಣ್ಣ, ಚಿಂತಲಪಲ್ಲಿ ವೆಂಕಟರಾವ್, ಚನ್ನಕೇಶವಯ್ಯ, ವಿ. ದೊರೆಸ್ವಾಮಿ ಅಯ್ಯಂಗಾರ್ ಮುಂತಾದ ಸಂಗೀತ ಕಲಾವಿದರು ತಮ್ಮ ಪ್ರತಿಭೆಗಳಿಂದ ಪ್ರಸಿದ್ಧಿಯಾಗಿದ್ದಾರೆ. ೭೮ ಆರ್.ಪಿ.ಎಮ್. ಗ್ರಾಮೊಫೋನ್ ಯುಗದ ಹೆಸರಾಂತ ಹಿದೂಸ್ತಾನಿ ಗಾಯಕಿ ಗೋಹರ್ ಜಾನ್ ತಮ್ಮ ಕೊನೆಯ ದಿನಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಸ್ಥಾನ ಗಾಯಕಿಯಾಗಿದ್ದರು. ಮೈಸೂರು ಒಡೆಯರ ಕೊನೆಯ ಅರಸರಾದ ಚಾಮರಾಜೇಂದ್ರ ಒಡೆಯರ್ ಅವರು ಕಲಾ ಉಪಾಸಕರೂ ಹಾಗೂ ಸಂಗೀತ ಕಲಾವಿದರೂ ಆಗಿದ್ದರು. ಇವರು ಕರ್ನಾಟಕ ಸಂಗೀತಕ್ಕೆ ಅಪರೂಪದ ರಾಗಗಳನ್ನು ಪರಿಚಯಿಸಿದ್ದಾರೆ. ಅಲ್ಲದೆ ಪಾಶ್ಚಿಮಾತ್ಯ ಅಭಿಜಾತ ಸಂಗೀತದಲ್ಲಿ ಕೂಡ ಪರಿಣಿತಿಯನ್ನು ಹೊಂದಿದ್ದವರು. ಅಲ್ಲದೆ 'ಮೈಸೂರು ಶೈಲಿ' ಎಂಬ ವಿಶಿಷ್ಟ ಸಂಗೀತ ಶೈಲಿಯನ್ನು ಸಂಗೀತ ಲೋಕಕ್ಕೆ ಪರಿಚಯಿಸಲಾಗಿದೆ. ಮೇಲೆ ಹೆಸರಿಸಿದ ಸಂಗೀತಶ್ರೇಷ್ಠರ ಗಾಯನಗಳು, ಅವರ ವಿಶಿಷ್ಟ ಸಂಗೀತ ಕಲೆ, ಪರಂಪರೆಯ ರೂಪಗಳಲ್ಲಿ ಬೆಳೆದುಬಂದಿದೆ. ಉದಾಹರಣೆಗೆ ಚಿಂತನಪಲ್ಲಿ ಪರಂಪರೆ, ರುದ್ರಪಟ್ಟಣಂ ಪರಂಪರೆ, ಬಳ್ಳಾರಿ ಪರಂಪರೆ ಎಂದು ಇಂದಿಗೂ ಪರಂಪರೆಗಳನ್ನು ಗುರುತಿಸುವ ವಾಡಿಕೆ ಇದೆ. ಹೆಸರಾಂತ ಕಲಾವಿದರಾದ ಎಂ.ಎಸ್. ಸುಬ್ಬಲಕ್ಷ್ಮಿಯವರು ಕರ್ನಾಟಕ ಸಂಗೀತದ ಮೇರು ಕಲಾವಿದರಾಗಿದ್ದರು. ದಕ್ಷಿಣ ಭಾರತದ ಕರ್ನಾಟಕ

ಸಂಗೀತವು ಕರ್ನಾಟಕದಲ್ಲಿ ತನ್ನ ಪ್ರಾಬಲ್ಯ ಮತ್ತು ಆಕರ್ಷಣೆಗಳನ್ನು ವೃದ್ಧಿಸಿಕೊಂಡಿದೆ. ಅನೇಕ ಕಲಾವಿದರು ಈ ಸಂಗೀತ ಕಲೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಪಾಶ್ಚಾತ್ಯ ಸಂಗೀತ ಕೂಡ ಕರ್ನಾಟಕದಲ್ಲಿ ಐರೋಪ್ಯರ ಸಂಪರ್ಕದಿಂದಾಗಿ ನೆಲೆಯೂರಲು ಕಾರಣವಾಗಿದೆ. ಟಿಪ್ಪು ಸುಲ್ತಾನ್ ಕಾಲದಿಂದಲೇ ವಯೋಲಿನ್ ಮತ್ತು ಪಿಯಾನೊದಂತಹ ಸಂಗೀತ ವಾದ್ಯಗಳ ಪರಿಚಯ ಮೈಸೂರು ಪ್ರಾಂತ್ಯದಲ್ಲಿ ಕಂಡುಬಂದಿವೆ ಯಲ್ಲದೆ ಪಿಟೀಲು ಕರ್ನಾಟಕ ಸಂಗೀತದ ಪಕ್ಕವಾದ್ಯವಾಗಿ ಉಳಿದುಕೊಂಡಿದೆ. ಉತ್ತರ ಕರ್ನಾಟಕ ಹಾಗೂ ಕೊಂಕಣಿ ಜನಪದ ಹಾಡುಗಳಲ್ಲಿ ಪಿಟೀಲಿನ ಬಳಕೆಯಾಗುವುದನ್ನು ನಾವು ನೋಡಬಹುದು. ಚಾಮರಾಜ ಒಡೆಯರ ಕಾಲದಲ್ಲಿ ಮೈಸೂರು ಅರಮನೆಯಲ್ಲಿ ಪಾಶ್ಚಾತ್ಯ ಸಂಗೀತಕ್ಕೆ ಮನ್ನಣೆ ದೊರೆಯಿತು. ಕಂಠೀರವ ನರಸಿಂಹರಾಜ ಒಡೆಯರ್ ಅವರು ಪಾಶ್ಚಾತ್ಯ ಸಂಗೀತದ ಕಲಾವಿದರಾಗಿದ್ದರು. ಈ ಅವಧಿಯಲ್ಲಿ ಬ್ರಿಟಿಷ್ ಸಂಗೀತಕಾರ ಡಿ. ಫ಼ೆನ್ ಅವರನ್ನು ಪಾಶ್ಚಾತ್ಯ ಸಂಗೀತದ ಶಿಕ್ಷಣಕ್ಕೆ ನೇಮಕ ಮಾಡಿಕೊಳ್ಳಲಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನಂತರ ಚಾಮರಾಜ ಒಡೆಯರ್ ಅವರು ಪಾಶ್ಚಾತ್ಯ ಸಂಗೀತಕ್ಕೆ ಹೆಚ್ಚು ಮನ್ನಣೆ ನೀಡಿದ್ದರು. ಮೈಸೂರು ದಸರಾ ಆಚರಣೆಯ ಸಂದರ್ಭದಲ್ಲಿ ಪಾಶ್ಚಾತ್ಯ ಸಂಗೀತದ ಗೋಷ್ಠಿಗಳನ್ನು ನಡೆಸುವ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ಅದರಂತೆ ಬೆಂಗಳೂರಿನಲ್ಲಿ ಬ್ರಿಟಿಷ್ ಕಮೀಷನರ್ ಮತ್ತು ರೆಸಿಡೆಂಟ್ ಅವರ ಆಶ್ರಯದಲ್ಲೂ ಪಾಶ್ಚಾತ್ಯ ಸಂಗೀತಕ್ಕೆ ಮನ್ನಣೆ ನೀಡಲಾಗಿತ್ತು. ಜಯಚಾಮರಾಜೇಂದ್ರ ಒಡೆಯರ್ ಅವರು ಪಾಶ್ಚಾತ್ಯ ಸಂಗೀತಕ್ಕೆ ಹೆಚ್ಚು ಒತ್ತು ನೀಡಿದ್ದರು ಅಲ್ಲದೇ ಆ ಸಂಗೀತ ಕಲೆಯಲ್ಲಿ ಪಾಂಡಿತ್ಯವನ್ನೂ ಪಡೆದಿದ್ದರು. ಐರೋಪ್ಯ ಕಲಾವಿದರನ್ನು ಬೆಂಗಳೂರು ಮತ್ತು ಮೈಸೂರಿಗೆ ಬರಮಾಡಿಕೊಂಡು ಸಂಗೀತ ಗೋಷ್ಠಿಗಳನ್ನು ನಡೆಸಿಕೊಡಲಾಗುತ್ತಿತ್ತು. ಕರ್ನಾಟಕ ರಾಜ್ಯದಲ್ಲಿ ಸಂಗೀತದ ವಿವಿಧ ಪರಂಪರೆಗಳು, ಶೈಲಿಗಳು, ವ್ಯಾಪಕವಾಗಿ ಬೆಳೆದು ಬಂದಿದೆ. ಜನಪ್ರಿಯ ರೂಪವಾಗಿ ಬೆಳೆದ ಸುಗಮ ಸಂಗೀತ ಶೈಲಿಯೂ ಕೂಡ ಹೆಚ್ಚು ಪ್ರಸಿದ್ಧವಾಗಿದೆ. ಪಿ. ಕಾಳಿಂಗರಾವ್, ಮೈಸೂರು ಅನಂತಸ್ವಾಮಿ, ಶ್ಯಾಮಲಾ ಜಾಗೀರದಾರ್, ರತ್ನಮಾಲ ಪ್ರಕಾಶ್, ಇಬ್ರಾಹಿಂ ಸುತಾರ್, ಶಿವಮೊಗ್ಗ ಸುಬ್ಬಣ್ಣ, ಸಿ. ಅಶ್ವತ್ಥ್ ಮುಂತಾದ ಹಲವಾರು ಕಲಾವಿದರು ಸುಗಮ ಸಂಗೀತ ಕಲೆಗೆ ಅಪೂರ್ವವಾದ ಕೊಡುಗೆ ನೀಡಿದ್ದಾರೆ. ಅದರಂತೆ ಕನ್ನಡ ಜನಪದ ಸಂಗೀತ ಕೂಡಾ ದೇಸಿ ಸಂಗೀತದ ಕಲೆಯಾಗಿ ಹರಡಿಕೊಂಡಿದೆ. ಕಿನ್ನರಿಜೋಗಿ ಹಾಡು, ಗೀಗಿ ಪದ, ಲಾವಣಿ, ತತ್ವಪದ, ಇತ್ಯಾದಿ ರೂಪಗಳಲ್ಲಿ ಜನಪದ ಸಂಗೀತ ಈ ನಾಡಿನಲ್ಲಿ ವ್ಯಾಪಕವಾಗಿ ಬೆಳೆದಿದೆ. ಬಾಳಪ್ಪ ಹುಕ್ಕೇರಿ, ಕರೀಂಖಾನ್, ದರೋಜಿ ಈರಮ್ಮ, ಅಪ್ಪಗೆರೆ ತಿಮ್ಮರಾಜು, ಮುಂತಾದವರು ಜನಪದ ಸಂಗೀತಕ್ಕೆ ಹೆಸರುವಾಸಿಯಾಗಿದ್ದಾರೆ. ಗಮಕ ಕಲೆ, ಚಲನಚಿತ್ರ ಸಂಗೀತ ಇತ್ಯಾದಿ ಪ್ರಕಾರಗಳು ಕೂಡ ಕರ್ನಾಟಕ ಸಂಗೀತ ಕಲೆಯ ವಿವಿಧ ಪ್ರಕಾರಗಳಾಗಿವೆ.

## ೪.೫. ಸಾರಾಂಶ



ಭಾರತೀಯ ಪರಂಪರೆಯಲ್ಲಿ ೬೪ ಕಲೆಗಳ ಪ್ರಸ್ತಾಪ ಬರುತ್ತದೆ. ಆದರೆ ಇಂದು ಅವೆಲ್ಲವನ್ನೂ ಸಂಸ್ಕೃತಿ ಎಂದು ಅಧ್ಯಯನ ಮಾಡುವುದು ಸಾಧ್ಯವಿಲ್ಲ. ಕಳೆದ ೧೫೦ ವರ್ಷಗಳ ಶೈಕ್ಷಣಿಕ ಶಿಸ್ತುಗಳಲ್ಲಿ ಲಲಿತ ಕಲೆಗಳು ಎಂಬ ಶೀರ್ಷಿಕೆಯ ಅಡಿಯಲ್ಲಿ ಐದು ಕಲಾರೂಪಗಳನ್ನು, ವಾಸ್ತುಶಿಲ್ಪ ಕಲೆ, ಚಿತ್ರ ಕಲೆ, ಸಂಗೀತ ಕಲೆ, ನಾಟ್ಯ ಕಲೆ, ಹಾಗೂ ಶಿಲ್ಪ ಕಲೆಗಳನ್ನು, ಒಟ್ಟಾಗಿ ಲಲಿತಕಲೆಗಳು ಎಂದು ಪರಿಗಣಿಸುವ ಪದ್ಧತಿ ಬೆಳೆದಿದೆ. ಅದಕ್ಕೆ ದೀರ್ಘವಾದ ಯೂರೋಪಿನ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಪರಂಪರೆ ಇದ್ದು ಭಾರತೀಯ ವಿಶ್ವವಿದ್ಯಾಲಯಗಳಲ್ಲೂ ಅದನ್ನು ಅನುಸರಿಸಲಾಗಿದೆ. ಪ್ರಸ್ತುತ ಘಟಕ ವಾಸ್ತುಶಿಲ್ಪ ಕಲೆ, ಚಿತ್ರಕಲೆ ಹಾಗೂ ಸಂಗೀತ ಕಲೆಗಳನ್ನು ಪರಿಚಯ ಮಾಡಿ ಕೊಡುತ್ತದೆ. ವಾಸ್ತುಶಿಲ್ಪ ಕಲೆಯಲ್ಲಿ ನೂತನ ಶಿಲಾಯುಗ, ಶಾತವಾಹನ, ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗೂ ಇಂಡೋ–ಮುಸ್ಲಿಮ್ ವಾಸ್ತುಶಿಲ್ಪ ಶೈಲಿಗಳ ಪರಿಚಯವನ್ನು ಮಾಡಿ ಕೊಡಲಾಗಿದೆ. ವಾಸ್ತುಶಿಲ್ಪದ ಭಿನ್ನ ಮಾದರಿಗಳು ಹಾಗೂ ಪಾರಂಪರಿಕ ವಾಸ್ತುಶಾಸ್ತ್ರದ ಗ್ರಂಥಗಳ ಬಗ್ಗೆಯೂ ಚರ್ಚಿಸಲಾಗಿದೆ. ಚಿತ್ರಕಲೆಗೆ ಸಂಬಂಧಿಸಿದಂತೆ ಭಿತ್ತಿ ಚಿತ್ರಕಲೆ, ಚಿಕಣಿ ಚಿತ್ರಕಲೆ, ಮೈಸೂರು ಶೈಲಿಯ ಚಿತ್ರಕಲೆ ಹಾಗೂ ನವೋದಯ ಚಿತ್ರಕಲೆಗಳನ್ನು ಕುರಿತು ವಿವರಣೆ ನೀಡಲಾಗಿದೆ. ಸಂಗೀತ ಕಲೆಯ ಬಗ್ಗೆ ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತ ಪರಂಪರೆಗಳು, ಸಂಗೀತ ಶಾಸ್ತ್ರದ ಗ್ರಂಥಗಳು ಹಾಗೂ ಆಧುನಿಕತೆಯ ಪರಿಣಾಮವಾಗಿ ರೂಪಾಂತರ ಗೊಳ್ಳುತ್ತಿರುವ ಆಧುನಿಕ ಸಂಗೀತದ ಬಗ್ಗೆ ಚರ್ಚಿಸಲಾಗಿದೆ. ವಿಫುಲವಾಗಿ ದೃಶ್ಯ ನಿದರ್ಶನಗಳನ್ನು ಕೊಡುವ ಮೂಲಕ ಕರ್ನಾಟಕ ಸಂಸ್ಕೃತಿಯ ಬೆಳವಣಿಗೆಯನ್ನು ಈ ಘಟಕ ನಿಮ್ಮ ಕಣ್ಣಮುಂದೆ ತರಲು ಪ್ರಯತ್ನಿಸುತ್ತದೆ.

**ಅಭ್ಯಾಸ**

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಲಲಿತಕಲೆಗಳು ಎಂದರೇನು? ಅವುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

೨. ಕರ್ನಾಟಕದಲ್ಲಿ ನೂತನ ಶಿಲಾಯುಗದ ವಾಸ್ತು ಹಾಗೂ ಚಿತ್ರಕಲೆಗಳನ್ನು ಕುರಿತು ಬರೆಯಿರಿ.

೩. ದ್ರಾವಿಡ ವಾಸ್ತುಶಿಲ್ಪ ಶೈಲಿಯ ಪರಿಚಯ ಮಾಡಿಕೊಡಿ.

೪. ನಾಗರ ವಾಸ್ತುಶಿಲ್ಪ ಶೈಲಿಯ ವಿವರಗಳಾವುವು?

೫. ವೇಸರ ವಾಸ್ತುಶಿಲ್ಪ ಶೈಲಿಯನ್ನು ಕುರಿತು ಟಿಪ್ಪಣಿ ಬರೆಯಿರಿ.

೬. ಭೂಮಿಜ ವಾಸ್ತುಶಿಲ್ಪ ಶೈಲಿಯ ಬಗ್ಗೆ ಬರೆಯಿರಿ.

೭. ಪ್ರಾಚೀನ ಭಾರತದ ವಾಸ್ತುಶಿಲ್ಪದ ಶಾಸ್ತ್ರ ಗ್ರಂಥಗಳ ಪರಿಚಯ ಮಾಡಿಕೊಡಿ.

೮. ಕದಂಬರ ವಾಸ್ತುಶಿಲ್ಪದ ವಿವರಗಳನ್ನು ಕೊಡಿ.

೯. ಗಂಗರ ವಾಸ್ತುಶಿಲ್ಪದ ಪರಿಚಯ ಮಾಡಿ.

೧೦. ಬಾದಾಮಿ ಚಾಲುಕ್ಯರ ಗುಹಾಂತರ ದೇವಾಲಯಗಳನ್ನು ಕುರಿತು ಚರ್ಚಿಸಿ.

೧೧. ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪ ಶೈಲಿಯ ಲಕ್ಷಣಗಳಾವುವು?

ignou THE PEOPLE'S UNIVERSITY

೧೨. ಬಾದಾಮಿ ಚಾಲುಕ್ಯರ ರಾಚನಿಕ ದೇವಾಲಯಗಳ ಬಗ್ಗೆ ಬರೆಯಿರಿ.

೧೩. ರಾಷ್ಟ್ರಕೂಟ ವಾಸ್ತುಶಿಲ್ಪ ಶೈಲಿಯ ಲಕ್ಷಣಗಳನ್ನು ಕುರಿತು ವಿವರಿಸಿ.

೧೪. ಎಲ್ಲೋರ ಗುಹಾಂತರ ದೇವಾಲಯಗಳಲ್ಲಿ ರಾಷ್ಟ್ರಕೂಟರ ಪಾತ್ರ ಏನು?

೧೫. ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪ ಶೈಲಿಯನ್ನು ಪರಿಚಯ ಮಾಡಿಕೊಡಿ.

೧೬. ಹೊಯ್ಸಳ ವಾಸ್ತುಶಿಲ್ಪ ಶೈಲಿ ಲಕ್ಷಣಗಳಾವುವು?

೧೭. ವಿಜಯನಗರದ ವಾಸ್ತುಶಿಲ್ಪ ಶೈಲಿಯ ಲಕ್ಷಣಗಳನ್ನು ವಿವರಿಸಿ.

೧೮. ವಿಜಯನಗರದ ವಾಸ್ತುಶಿಲ್ಪ ಶೈಲಿಯು ಹಲವಾರು ಭಿನ್ನ ಕಟ್ಟಡಗಳ ಒಂದು ಸಂಕೀರ್ಣ? ಚರ್ಚಿಸಿ.

೧೯. ಇಂಡೋ–ಮುಸ್ಲಿಂ ವಾಸ್ತುಶಿಲ್ಪ ಶೈಲಿಯನ್ನು ಕುರಿತು ಬರೆಯಿರಿ.

೨೦. ಭಿತ್ತಿ ಚಿತ್ರಕಲೆಯನ್ನು ಉದಾಹರಣೆಯೊಂದಿಗೆ ಪರಿಚಯಿಸಿ.

೨೧. ಚಿಕಣಿ ಚಿತ್ರಕಲೆಯ ಪರಿಚಯ ಮಾಡಿಕೊಡಿ.

೨೨. ಮೈಸೂರು ಶೈಲಿಯ ಚಿತ್ರಕಲೆಯನ್ನು ವಿವರಿಸಿ.

೨೩. ನವೋದಯ ಶೈಲಿಯ ಚಿತ್ರಕಲೆಯನ್ನು ಕುರಿತು ಬರೆಯಿರಿ.

೨೩. ಕರ್ನಾಟಕ ಶೈಲಿಯ ಸಂಗೀತದ ಬಗ್ಗೆ ಟಿಪ್ಪಣಿ ಬರೆಯಿರಿ.

೨೪. ಹಿಂದೂಸ್ತಾನಿ ಸಂಗೀತ ಶೈಲಿಯನ್ನು ವಿವರಿಸಿ.

೨೫. ಸಂಗೀತದ ಶಾಸ್ತ್ರಗಂಥಗಳನ್ನು ಪರಿಚಯಿಸಿ.

೨೬. ಸಂಗೀತದ ಆಧುನಿಕ ತಿರುವುಗಳನ್ನು ಕುರಿತು ಚರ್ಚಿಸಿ.

೨೭. ಪಾಶ್ಚಾತ್ಯ ಸಂಗೀತ ಪರಂಪರೆಯು ಕರ್ನಾಟಕದಲ್ಲಿ ಬೇರೂರಿರುವ ಬಗ್ಗೆ ಬರೆಯಿರಿ.

ಪಠ್ಯವನ್ನು ಸಿದ್ಧಪಡಿಸಿದವರು: **ಡಾ. ಎಸ್.ಕೆ. ಅರುಣಿ**

## ಘಟಕ ೫

# ಪರಿಸರ

**ಹಿನ್ನೆಲೆ**

ಮಾನವ ತನ್ನ ಸಂಪನ್ಮೂಲಗಳ ವೃದ್ಧಿಯಲ್ಲಿ ತೊಡಗಿದ್ದಾನೆ. ಆದರೆ ಪ್ರಕೃತಿಯ ಸಂಪನ್ಮೂಲಗಳ ವಿನಾಶ ಪ್ರತಿ ನಿತ್ಯ ಇವನಿಂದಾಗುತ್ತಿದೆ. ನಾವು ಇದರ ಕಡೆ ಎಷ್ಟು ಗಮನ ಕೊಡಬೇಕೋ ಅಷ್ಟು ಕೊಟ್ಟಿಲ್ಲ. ಇತ್ತೀಚಿನ ವರ್ಷಗಳಲ್ಲಿ ಪರ್ಯಾವರಣದ ರಕ್ಷಣೆ, ಪರಿಸರದ ಶುದ್ಧತೆಯ ಕಡೆ ನಮ್ಮ ಗಮನ ಹೋಗುತ್ತಿದೆ. ಗಗನಚುಂಬಿ ಕಟ್ಟಡಗಳ ನಿರ್ಮಾಣದಲ್ಲಿ ನಾವು ತೊಡಗಿದ್ದೇವೆ. ಇದರ ಹಿಂದೆ ಎಲ್ಲ ಬೆಟ್ಟಗುಡ್ಡಗಳು ನುಚ್ಚುನೂರಾಗಿವೆ, ಎಷ್ಟು ಹೆಮ್ಮರಗಳನ್ನು ನಾವು ಕಡಿದಿದ್ದೇವೆ. ಇದನ್ನು ಯೋಚಿಸಬೇಕು. ನಗರಗಳ ಅಭಿವೃದ್ಧಿಯ ಹೆಸರಿನಲ್ಲಿ ಜೀವಂತ ಕೆರೆಗಳನ್ನು ಮುಚ್ಚಿ ನಿವೇಶನಗಳನ್ನು ನಿರ್ಮಿಸಿದ್ದೇವೆ. ಹೆದ್ದಾರಿಯ ನಿರ್ಮಾಣದಲ್ಲಿ ತೊಡಗಿ ನೂರಾರು ವರ್ಷಗಳಿಂದ ಮನುಷ್ಯ ಮತ್ತು ಪ್ರಾಣಿಗಳಿಗೆ ನೆರಳು ಕೊಡುವ, ಪಕ್ಷಿಗಳಿಗೆ ಗೂಡು ಕಟ್ಟಲು ಅನುಕೂಲಕರವಾದ, ಹಣ್ಣುಹಂಪಲು ಬಿಡುವ ಎಷ್ಟೋ ಮರಗಳನ್ನು ಅನಿವಾರ್ಯವಾಗಿ ಕಡಿಯುತ್ತಿದ್ದೇವೆ. ವೈಜ್ಞಾನಿಕ ಪ್ರಗತಿಯ ಹಿನ್ನೆಲೆಯಲ್ಲಿ ಎಷ್ಟೋ ಕಾರ್ಖಾನೆಗಳನ್ನು ಕಟ್ಟಿದ್ದೇವೆ. ಅದರಿಂದ ಹೊರ ಬರುವ ರಾಸಾಯನಿಕ ಅನಿಲಗಳಿಂದ ಪರ್ಯಾವರಣ ಪ್ರದೂಷಿತಗೊಂಡಿದೆ ಹಾಗೂ ಎಷ್ಟೋ ಕಡೆ ನದಿಗಳಿಗೆ ಸೇರಿ ಜಲ–ಜೀವಿಗಳು ವಿನಾಶಗೊಳ್ಳುತ್ತಿವೆ ಹಾಗೂ ನೀರು ಅಶುದ್ಧವಾಗುತ್ತಿದೆ. ಪ್ರಾಚೀನ ಕಾಲದಲ್ಲಿ ಪ್ರಕೃತಿಯ ಸಂಪನ್ಮೂಲಗಳಲ್ಲಿ ಪ್ರಮುಖವಾದ ಪರ್ವತ, ನದಿ, ಮರ, ಗಿಡಗಳು ಹಾಗೂ ಕೆಲವು ಪ್ರಾಣಿಗಳಿಗೆ ಪೂಜನೀಯ ಸ್ಥಾನ ಕೊಟ್ಟಿದ್ದರು. ಹೀಗಾಗಿ ಅವುಗಳ ರಕ್ಷಣೆ ಹಾಗೂ ಸಂರಕ್ಷಣೆಯ ಕಾರ್ಯ ನಡೆಯುತ್ತಿತ್ತು. ಅವರಿಗೆ ವಿಶ್ವವಿದ್ಯಾನಿಲಯಗಳ ವಿದ್ಯೆ ಇರಲಿಲ್ಲ. ಅದಕ್ಕೆ ಮೀರಿಸುವಷ್ಟು ವಿವೇಕವಿತ್ತು. ಅವರು ಪ್ರಕೃತಿದತ್ತ ಗಿಡಮರಗಳನ್ನು ಉಳಿಸಿ, ಬೆಳೆಸುತ್ತಿದ್ದರು. ಇಂದು ಪರಿಸರ ಅಧ್ಯಯನದ ಪ್ರಾಮುಖ್ಯತೆಯನ್ನು ಅರಿತ ಜನರು ಅಲ್ಲಲ್ಲಿ ಕಂಡುಬರುತ್ತಿದ್ದಾರೆ ಎಂಬುದು ಸಮಾಧಾನದ ಸಂಗತಿಯಾಗಿದೆ.

**ವಿಷಯಾನುಕ್ರಮಣಿಕೆ**

೫.೦. ಉದ್ದೇಶ

೫.೦.೧. ಪರಿಸರ

೫.೧. ಪೂರ್ವ ಪೀಠಿಕೆ
೫.೨. ಪಠ್ಯಗಳು
೫.೨.೧. ಪಠ್ಯ ೧: ಪರಿಸರ ಮತ್ತು ಮನುಷ್ಯನ ಕುರಿತ ನಮ್ಮ ಹಿರಿಯರ ಭಾವನೆಗಳು.
೫.೨.೨. ಪಠ್ಯ ೨: ಕರ್ನಾಟಕದ ಪರಿಸರ ಚಳುವಳಿಗಳು.
೫.೨.೩. ಪಠ್ಯ ೩: ಮಾನವ ನಿರ್ಮಿತ ಮಹಾಸಮಸ್ಯೆಗಳು.
೫.೨.೪. ಪಠ್ಯ ೪: ಮಿಲ್ಲು ಮತ್ತು ಹಕ್ಕಿ.
೫.೨.೫. ಪಠ್ಯ ೫: ಸಹಜ ಕೃಷಿಯ ನಾಲ್ಕು ತತ್ವಗಳು.
೫.೨.೬. ಪಠ್ಯ ೬: ಜೇಮ್ಸ್ ರಾಬರ್ಟ್‌ಸನ್ ಲೇಖನ.
ಅಭ್ಯಾಸಗಳು

## ೫.೦. ಉದ್ದೇಶ

ಈ ಘಟಕವನ್ನು ಓದುವುದರಿಂದ ನೀವು ಕೆಳಕಂಡ ವಿಷಯಗಳನ್ನು ಅರಿಯುತ್ತೀರಿ.
೧. ಪರಿಸರ ಮತ್ತು ಮನುಷ್ಯನ ಕುರಿತ ನಮ್ಮ ಹಿರಿಯರ ಭಾವನೆಗಳು.
೨. ಭಾರತ ಮತ್ತು ಕರ್ನಾಟಕದಲ್ಲಿ ಪರಿಸರ ಉಳಿಸುವಿಕೆಯ ಚಳುವಳಿಗಳ ಸಣ್ಣ ನೋಟ.
೩. ನಮ್ಮ ಸುತ್ತಲ ಪ್ರಕೃತಿ ಪರಿಸರ ನಾಶವಾಗುತ್ತಿರುವ ಸ್ವರೂಪಗಳು.
೪. ಇಂತಹ ಪರಿಸರ ನಾಶವನ್ನು ಮಾಡದೆ ಇರಲಿಕ್ಕೆ ಸಾಧ್ಯವೇ ಎನ್ನುವ ಆಲೋಚನೆಗಳು.
೫. ಪರಿಸರ ಉಳಿಸಲು ಪರ್ಯಾಯ ಆಲೋಚನೆಗಳು.

### ೫.೦.೧. ಪರಿಸರ

'ಅಣೆಕಟ್ಟುಗಳು ಆಧುನಿಕ ಭಾರತದ ದೇವಾಲಯಗಳು'
– ಜವಾಹರಲಾಲ್ ನೆಹರು

'ಮನುಷ್ಯನ ಆಸೆಯನ್ನು ಪೂರೈಸುವಷ್ಟು ಶಕ್ತಿ ಪ್ರಕೃತಿಗೆ ಇದೆ, ದುರಾಸೆಯನ್ನಲ್ಲ'
– ಮಹಾತ್ಮ ಗಾಂಧಿ

ಪರಿಸರವನ್ನು ಕುರಿತಾದ ಚಿಂತನೆಗಳು ಇತ್ತೀಚಿಗೆ ಹೆಚ್ಚಾಗುತ್ತಿವೆ. ಎರಡು ದಶಕಗಳಲ್ಲಿ ಜಗತ್ತು ಪರಿಸರ ವಿನಾಶವನ್ನು ಅಭಿವೃದ್ಧಿಯ ಭಾಗವಾಗಿ ಮಾಡುತ್ತಿರುವುದನ್ನು ನಾವು ಕಂಡಿದ್ದೇವೆ. ಪರಿಸರ ರಕ್ಷಣೆ ಅನ್ನುವುದು ನಮ್ಮ ಅಳಿವು ಉಳಿವಿನ ಪ್ರಶ್ನೆಯೂ ಈಗ ಆಗಿದೆ.

ಹೀಗಾಗಿ ವಿದ್ಯಾರ್ಥಿಯು ಈ ಬಗ್ಗೆ ಕೆಲವು ಪ್ರಶ್ನೆಗಳನ್ನು, ಚಿಂತನೆಯನ್ನು ಹಾಗೂ ಅರಿವನ್ನು ಮಾಡಿಕೊಳ್ಳುವ ದೃಷ್ಟಿಯಿಂದ ಈ ಘಟಕವನ್ನು ಅವರ ಓದು ಮತ್ತು ಅಭ್ಯಾಸಕ್ಕಾಗಿ ಕೊಡಲಾಗಿದೆ.

**ಪರಿಸರವನ್ನು ಎರಡು ಬಗೆಯಲ್ಲಿ ಗಮನಿಸಬಹುದು**

೧. ಮನುಷ್ಯ ಪರಿಸರ.
೨. ಮನುಷ್ಯ ಮತ್ತು ಪರಿಸರವನ್ನು ಕುರಿತ ಅವನ ಸಂಬಂಧ.

### ೧. ಮನುಷ್ಯ ಪರಿಸರ

ಮನುಷ್ಯ ಪರಿಸರ ಎಂದರೆ ಮನುಷ್ಯನಲ್ಲಿ ಉಂಟಾಗಬೇಕಾದ ತೀವ್ರವಾದ ಬದಲಾವಣೆ. ಮನುಷ್ಯ ತನ್ನೊಳಗಿನ ಸುಳ್ಳು, ಕಪಟ, ಮೋಸ, ವಂಚನೆ ಹಾಗೂ ಅರಿಷಡ್ವರ್ಗಗಳ ಎಲ್ಲಾ ಅಂಶಗಳನ್ನು ನಿರ್ಮೂಲನ ಮಾಡಿ ಹೊಸ ಪರಿಸರವನ್ನು ತನ್ನೊಳಗೆ ಕಟ್ಟಿಕೊಳ್ಳುವ ರೀತಿಯನ್ನು ಮನುಷ್ಯ ಪರಿಸರ ಎನ್ನಬಹುದು. ಇದು ಉಂಟಾಗದಿದ್ದರೆ ತನ್ನ ಬದುಕಿನಲ್ಲಿ ಹಾಗೂ ತನ್ನ ಸುತ್ತಲ ಬದುಕಿನಲ್ಲಿ ಪರಿವರ್ತನೆಯನ್ನು ಅವನು ತರಲಾರ.

ಬಸವಣ್ಣನ ಈ ವಚನವನ್ನು ಗಮನಿಸಿ,

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ!
ತನುವಿನಲಿ ಹುಸಿ ತುಂಬಿ, ಮನದಲ್ಲಿ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ!
ಕೂಡಲಸಂಗಮದೇವ.

ಬಸವಣ್ಣನ ಈ ವಚನದಲ್ಲಿ ಮನೆಯನ್ನು ದೇಹಕ್ಕೆ ಹೋಲಿಸಿ 'ಮನೆಯೊಳಗೆ ಮನೆಯೊಡೆಯನು' ಯಾವ ಸಂದರ್ಭದಲ್ಲಿ ಇರುವುದಿಲ್ಲ ಎಂದು ಹೇಳುತ್ತಾನೆ. ಇಲ್ಲಿ ಮನೆಯ ಒಡೆಯ ಎಂದರೆ ಮನೆಯೊಳಗೆ ಇರಬೇಕಾದಂಥ ಯಜಮಾನ. ಅಂದರೆ ಮನೆಯನ್ನು ಕಟ್ಟಬೇಕಾದ ವ್ಯಕ್ತಿತ್ವ. ಹೊಸ್ತಿಲಲ್ಲಿ ಹುಲ್ಲು, ಮನೆಯೊಳಗೆ ಧೂಳು ಇದ್ದರೆ, ಮನೆಯಲ್ಲಿ ಯಾರು ಇಲ್ಲವೆಂದೇ ಅರ್ಥ. ಮನಸ್ಸಿನಲ್ಲಿ ಸುಳ್ಳು ತುಂಬಿಕೊಂಡು, ಸಕಲ ಭೋಗಗಳಿಗೆ ನಮ್ಮನ್ನು ನಾವು ಬಲಿಕೊಟ್ಟುಕೊಂಡರೆ ಮನೆಯನ್ನು ಶುದ್ಧವಾಗಿ ಇಟ್ಟು ಕೊಳ್ಳಲಾರೆವು ಎಂದು ಈ ವಚನ ಹೇಳುತ್ತಿದೆ.

ಆದ್ದರಿಂದಲೇ 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ.....' ಎಂದು ಬಸವಣ್ಣನ ಇನ್ನೊಂದು ವಚನವು ಮನುಷ್ಯನು ತನ್ನ ವ್ಯಕ್ತಿತ್ವದ ಪರಿಸರವನ್ನು ಹೇಗೆ ಶುದ್ಧವಾಗಿಟ್ಟುಕೊಳ್ಳಬೇಕು ಎಂದು ಹೇಳುತ್ತಿದೆ. ಇದು ಮನುಷ್ಯನ ಒಳಗಿನ ಪರಿಸರವನ್ನು ಕುರಿತ ಮಾತು.

### ೨. ಮನುಷ್ಯ ಮತ್ತು ಪರಿಸರ

ಇದು ಮೊದಲಿನದರಷ್ಟೇ ಗಂಭೀರವಾದದ್ದು. ಮನುಷ್ಯ ತನ್ನ ಒಳಗಿನ ವಿವೇಕವನ್ನು ಜಾಗೃತವಾಗಿ ಇಟ್ಟುಕೊಳ್ಳದಿದ್ದರೆ ತನ್ನ ಸುತ್ತಲ ಪರಿಸರವನ್ನು ಹೇಗೆ ಬದಲಾಯಿಸುತ್ತಾನೆ ಎನ್ನುವ ಆಲೋಚನೆಗೆ ಸಂಬಂಧಿಸಿದ್ದು.

ಇಲ್ಲಿ ಓದಲು ಕೊಡಲಾಗಿರುವ ಪಠ್ಯಭಾಗಗಳಲ್ಲಿ ಭಿನ್ನ ಭಿನ್ನ ಅಭಿಪ್ರಾಯಗಳು ಮೂಡಿರುವುದನ್ನು ನೀವು ಗಮನಿಸಬಹುದು. ನಮ್ಮ ಪರಂಪರೆಯಲ್ಲಿ ಪರಿಸರದ ಬಗ್ಗೆ ಇದ್ದ ತಾದಾತ್ಮ್ಯತೆ ಈಗ ಒಂದು ಸಂಕಟಕ್ಕೆ ಸಿಕ್ಕಿರುವುದನ್ನು ಗಮನಿಸಬಹುದು. ನಾಗೇಶ ಹೆಗಡೆಯವರು ಈ ಸಂಕಷ್ಟದ ವಿವಿಧ ಸ್ವರೂಪವನ್ನು ತಮ್ಮ ಲೇಖನದಲ್ಲಿ ಇಡುತ್ತಾರೆ. ಯಾವ ವಲಯದಲ್ಲಿ ಪರಿಹಾರ ಸಾಧ್ಯ ಇದೆ ಎನ್ನುವುದನ್ನು ಚರ್ಚೆಗೆ ಬಿಡುತ್ತಾರೆ. ವೈದೇಹಿಯವರ ಕಥೆ ಇನ್ನೊಂದು ಮುಖವನ್ನು ಕೊಡುತ್ತದೆ. ಜಪಾನಿನ ಫುಕುವೊಕಾ

ರೈತಾಪಿ ಭೂಮಿಯಲ್ಲಿ ಆಗಬಹುದಾದ ಪರ್ಯಾಯ ಕೃಷಿಯ ಕ್ರಿಯೆಯ ಬಗ್ಗೆ ಹೇಳುತ್ತಾರೆ. ಜೇಮ್ಸ ರಾಬರ್ಟಸನ್ ಎನ್ನುವ ಯುರೋಪಿನ ಚಿಂತಕ ತಾಂತ್ರಿಕತೆ ಮತ್ತು ಆಧುನಿಕತೆಯ ಅನಿವಾರ್ಯತೆ ಮತ್ತು ಅದಕ್ಕೆ ಹೊಂದಿಕೊಳ್ಳುವ ಸಲಹೆಗೆ ಮುಂದಾಗಿದ್ದಾನೆ. ಈ ಎಲ್ಲವೂ ನಿಮಗೆ ಗೊತ್ತಾದರೆ ಎಲ್ಲಿ ಬದಲಾವಣೆ ಸಾಧ್ಯ, ಎಲ್ಲಿ ಅಪರಿಹಾರ್ಯ ಎನ್ನುವುದನ್ನು ಯೋಚಿಸಬಹುದು. ಹೀಗೆ ಯೋಚನೆಗೆ ಹಚ್ಚಿಸುವುದೇ ಈ ಪಠ್ಯಭಾಗಗಳ ಪ್ರಮುಖ ಉದ್ದೇಶವಾಗಿದೆ.

## ೫.೧. ಪೂರ್ವ ಪೀಠಿಕೆ

'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಸಂಸ್ಕೃತದ ಮಾತೊಂದು ಜನ್ಮಭೂಮಿಯ ಹಿರಿಮೆ, ಗೌರವಗಳನ್ನು ಕುರಿತು ಹೇಳುತ್ತದೆ. ನೆಲಮೂಲದ ಭಾವನಾತ್ಮಕ ಸಂಬಂಧದ ಮಹತ್ವ ಇದರಲ್ಲಿ ಅಡಕವಾಗಿದೆ. ಜನ್ಮಭೂಮಿ ಎಂಬುದು ಕೇವಲ ಮಣ್ಣಲ್ಲ. ಮಣ್ಣೂ ಸೇರಿದಂತೆ ಅಲ್ಲಿನ ಬೆಟ್ಟ, ಗುಡ್ಡ, ಕಾಡು, ಕಣಿವೆ, ಪಕ್ಷಿ, ಪ್ರಾಣಿ, ಮರಗಿಡಬಳ್ಳಿ ಮತ್ತು ಮನುಷ್ಯ ಎಲ್ಲವನ್ನೂ ಒಳಗೊಂಡ ಒಂದು ಜೀವಂತ ಪರಿಸರ. ಅಂಥ ನಿಸರ್ಗಕ್ಕೆ ಇಂದು ಏನಾಗಿದೆ? ವಿಜ್ಞಾನ ಮತ್ತು ತಂತ್ರಜ್ಞಾನದ ಧಾಳಿಗೆ ಸಿಕ್ಕಿ ನಿಟ್ಟುಸಿರು ಬಿಡುತ್ತಿದೆಯೇ? ಅಭಿವೃದ್ಧಿಯ ಹೆಸರಿನಲ್ಲಿ ಮನುಷ್ಯರು ಪರಿಸರದ ಮೇಲೆ ಆಕ್ರಮಣ ಮಾಡುತ್ತಿದ್ದಾರೆಯೇ? ಮನುಷ್ಯ ಮತ್ತು ಪರಿಸರದ ನೆಲಮೂಲ ಸಂಬಂಧದಲ್ಲಿ ಬಿರುಕು ಕಾಣಿಸಿಕೊಂಡಿದೆಯೇ? ಕ್ಷಣಿಕವಾದ ಸುಖಲೋಲುಪತೆಗೆ ಮನುಷ್ಯ ಪಕ್ಕಾಗಿರುವುದರಿಂದ ಜೀವಜಾಲದ ಕೊಂಡಿ ಕಳಚುವಂತಾಗಿದೆಯೇ? ಮನುಷ್ಯ ದಿನೇ ದಿನೇ ತನ್ನ ಸುತ್ತಲಿನ ಪರಿಸರದಿಂದ ದೂರ ಸರಿಯತೊಡಗಿದ್ದಾನೆಯೇ? 'ಭೂಮಿ ಮನುಷ್ಯನ ಆಸೆಗಳನ್ನು ಪೂರೈಸಬಹುದೇ ಹೊರತು ದುರಾಸೆಗಳನ್ನಲ್ಲ' ಎಂದು ಗಾಂಧೀಜಿ ಹೇಳುತ್ತಾರೆ. ಮನುಷ್ಯ ಪ್ರಕೃತಿಯಲ್ಲಿ ಒಂದು ಭಾಗವೇ ಹೊರತು ಅದನ್ನು ಮೀರಿದವನಲ್ಲ. ಪಶು, ಪಕ್ಷಿ, ಕೀಟ, ಮರ, ಗಿಡ, ಬಳ್ಳಿ, ಬೆಟ್ಟ, ಗುಡ್ಡ, ನದಿ, ತೊರೆಗಳ ಜೀವ ಸರಪಳಿಯಲ್ಲಿ ಅವನೂ ಒಂದು ಕೊಂಡಿ ಎಂಬುದನ್ನು ಮರೆತು, ಈ ಎಲ್ಲದರ ಮೇಲೂ ಯಜಮಾನಿಕೆ ಸ್ಥಾಪಿಸಲು ಹೆಣಗುತ್ತಿದ್ದಾನೆ. ತತ್ಪರಿಣಾಮ ವಾಗಿ ತಾನು ಭಿನ್ನ ಎಂದು ತೋರಿಸಿಕೊಳ್ಳಲು ಪರಿಸರದ ಹೊಕ್ಕುಳಬಳ್ಳಿ ಸಂಬಂಧವನ್ನು ಕಡಿದುಕೊಳ್ಳುತ್ತಿದ್ದಾನೆ. ಹೆಚ್ಚು ನಾಗರಿಕನಾಗಲು ಬಯಸುತ್ತ ನೆಲಮೂಲದಿಂದ ದೂರ ವಾಗುತ್ತಿದ್ದಾನೆ. ನಮ್ಮ ಹಿರಿಯರ ಭಾವನೆಗಳಿಂದ ನಾವು ದೂರವಾಗುತ್ತಿದ್ದೇವೆಯೇ? ಸಮಸ್ಯೆಗಳು ಹೆಚ್ಚು ಸಂಕೀರ್ಣವಾಗುತ್ತಿದೆಯೇ?

## ೫.೨. ಪಠ್ಯಗಳು

### ೫.೨.೧. ಪಠ್ಯ ೧: ಪರಿಸರ ಮತ್ತು ಮನುಷ್ಯನ ಕುರಿತ ನಮ್ಮ ಹಿರಿಯರ ಭಾವನೆಗಳು

೧. ಈ ಜಾನಪದ ತ್ರಿಪದಿಯನ್ನು ಗಮನಿಸಿ:

'ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ ।
ಭೂಮ್ತಾಯ ಎದ್ದೊಂದು ಗಳಿಗೆ
ನೆನದೇನಾ?'

ಭೂಮಿಯನ್ನು ತಾಯಿಯೆಂದು ಪೂಜಿಸುವ ಪದ್ಧತಿಗಳು ಇಂದಿಗೂ ಹಳ್ಳಿಗಳಲ್ಲಿ ರೂಢಿಯಲ್ಲಿವೆ. ಹೊನ್ನೇರು ಎಂಬ ಆಚರಣೆ ಉಳುಮೆಗೆ ಮುನ್ನ ಭೂಮಿಯನ್ನು ಪೂಜಿಸುವ ಆಶಯವಾಗಿದೆ. ಬಿತ್ತನೆ, ಕೊಯ್ಲು, ಸುಗ್ಗಿ ಹೀಗೆ ಕೃಷಿ ಸಂಬಂಧಿತವಾಗಿ ಭೂಮಿಯನ್ನು ದೇವರೆಂದು ನಂಬಿ ಜನ ನಡೆದುಕೊಳ್ಳುವುದನ್ನು ಕಾಣಬಹುದು. ಹೊಲ ತೋಟಗಳಿಗೆ ಚಪ್ಪಲಿ ಮೆಟ್ಟಿ ಪ್ರವೇಶಿಸುವುದಕ್ಕೆ ಹಲವು ಕಡೆ ಇನ್ನೂ ನಿಷೇಧ ಇರುವುದು ಸುಳ್ಳಲ್ಲ. ಆದರೆ ಕಾಲ ಕಳೆದಂತೆ ವ್ಯವಸಾಯದ ರೀತಿ ಬದಲಾಗುತ್ತಿವೆ. ಹಳ್ಳಿಗಳಲ್ಲಿ ಉಳುಮೆಗೆ ಎತ್ತು-ನೇಗಿಲಿಗೆ ಬದಲು ಟ್ರ್ಯಾಕ್ಟರ್ ಬಂದಿದೆ. ವ್ಯವಸಾಯ ಕಾರ್ಯಗಳನ್ನು ಮಾಡುವ ಯಂತ್ರಗಳು ಬಂದಿವೆ. ಇದರಿಂದಾಗಿ ಬೆಳೆ ಪದ್ಧತಿಗಳು ಬದಲಾಗಿವೆ. ಇನ್ನು ನಗರಗಳ ಸುತ್ತ ಇದ್ದ ಹಳ್ಳಿಗಳು ಪುಟ್ಟ ನಗರಗಳಾಗಿ ಪರಿವರ್ತನೆ ಯಾಗುವ ದಾರಿಯಲ್ಲಿವೆ. ವ್ಯವಸಾಯ ಭೂಮಿ ಕೈಗಾರಿಕೆಗಳಿಗೆ, ವಾಣಿಜ್ಯ ಉಪಯೋಗಗಳಿಗೆ ಬಳಕೆಯಾಗುವುದು ಅನಿವಾರ್ಯ ವಾಗಿದೆ. ಈ ಪ್ರಕ್ರಿಯೆಯಿಂದಾಗಿ ಭೂಮಿ ಮತ್ತು ಮನುಷ್ಯರ ನಡುವೆ ಇದ್ದ ಸಂಬಂಧ ಹೊಸ ರೂಪವನ್ನು ಪಡೆಯುತ್ತಿದೆ. ಆಧುನಿಕ ಜೀವನ ಕ್ರಮಗಳು ಸುಖವನ್ನು ತಂದುಕೊಡುವ ಭರವಸೆ ಕೊಡುತ್ತಿರುವುದರಿಂದ ಅನ್ನದಾತೆಯಾಗಿದ್ದ ಪ್ರಕೃತಿ ಇಂದು ಹಣದಾತೆಯಾಗಿ ರೂಪಾಂತರಗೊಂಡಿದ್ದಾಳೆ.

ಕಾಡು, ಬೆಟ್ಟ, ಗುಡ್ಡ, ನದಿ, ಸಮುದ್ರ, ಪ್ರಾಣಿ ಸಂಕುಲ, ಸಸ್ಯ ಜಗತ್ತು, ಹೀಗೆ ಕಣ್ಣಿಗೆ ಕಾಣುವ, ಕಣ್ಣಿಗೆ ಕಾಣದಿರುವ ಅನೇಕ ಜೀವವೈವಿಧ್ಯಗಳು ನಮ್ಮ ಪ್ರಕೃತಿಯಲ್ಲಿ ಇವೆ. ಈ ಎಲ್ಲವುಗಳಂತೆ ಮನುಷ್ಯನು ಕೂಡ ಈ ಪರಿಸರದ ಭಾಗ. ಆದರೆ ನಾಗರಿಕತೆಗಳು ಬೆಳೆದಂತೆ ಮನುಷ್ಯ ಮತ್ತು ನಿಸರ್ಗದ ನಡುವೆ ಇದ್ದ ಹೊಕ್ಕುಳ ಬಳ್ಳಿಯ ಸಂಬಂಧ ಬದಲಾಗುತ್ತಾ ಬಂದಿದೆ, ಜೀವವುಳ್ಳ ಲೋಕವಾಗಿ ಕಾಣುತ್ತಿದ್ದ ಭೂಮಿ ಪದಾರ್ಥವಾಗಿ, ಖನಿಜವಾಗಿ, ಸಂಪತ್ತಿನ ಮೂಲ ಎಂದು ವ್ಯವಹರಿಸಲು ಶುರುವಾದ ನಂತರ, ಭೂಮಿಯೊಡನೆ ಇದ್ದ ತಾಯಿ, ದೇವರು ಎನ್ನುವ ಭಾವನಾತ್ಮಕ ಸಂಬಂಧಗಳು ಬದಲಾಗಿವೆ. ಪ್ರಕೃತಿಯ ಜೊತೆಗಿನ ಮನುಷ್ಯ ಸಂಬಂಧವು ಪ್ರಕೃತಿಯನ್ನು ಆಸ್ವಾದಿಸುವುದೇ? ಇಲ್ಲವೇ ಬೇಟೆಯಾಡುವುದೇ? ಅಥವಾ ತನ್ನ ಅನುಕೂಲಕ್ಕಾಗಿ ಪ್ರಕೃತಿಯ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದೇ? ಹೀಗೆ ಬಳಸಿಕೊಳ್ಳಲು ಪ್ರಕೃತಿಯ ಮೇಲೆ ಪ್ರಭುತ್ವ ಸ್ಥಾಪಿಸುವುದೇ? ಅಥವಾ ಇವೆಲ್ಲಕ್ಕಿಂತ ಹೊರತಾಗಿ ಪ್ರಕೃತಿಯಲ್ಲಿಯೂ ಜೀವಸೃಷ್ಟಿಯಿದೆ, ರಹಸ್ಯವಿದೆ, ವಿಸ್ಮಯವಿದೆ, ಮನುಷ್ಯನ ಚಟುವಟಿಕೆಗಳನ್ನು ಮೀರಿದ ವ್ಯವಸ್ಥಿತವಾದ ಚಟುವಟಿಕೆಯೊಂದಿದೆ ಎಂಬ ರೀತಿಯ ಸಂಬಂಧವನ್ನು ಪ್ರಕೃತಿಯ ಜೊತೆ ಇಟ್ಟುಕೊಳ್ಳಬೇಕಾದರೆ...

'ಮೌನಿಗಳಾದ, ತೆರೆದ ಕಣ್ಣುಗಳುಳ್ಳ, ಪ್ರೀತಿಯಿಂದ ನೋಡುವ, ಕೇಳುವ, ಪರಿಸರ ಪ್ರೇಮಿಗಳಿಗೆ ಬೇರೆ ಜೀವಿಗಳು ಕಾಣಿಸುತ್ತವೆ. ಅವರ ಬಳಿ ಪ್ರಾಣಿಗಳು ಸಂತೋಷದಿಂದ ಬರುತ್ತವೆ'.

೨. ಅವ್ವ ಮತ್ತು ನೆಲ, ಇವುಗಳ ಗಾಢ ಸಂಬಂಧವನ್ನು ಹೇಳುವ ಲಂಕೇಶರ ಈ ಕವನವನ್ನು ಓದಿ.

**ಅವ್ವ**

– ಪಿ. ಲಂಕೇಶ್

ನನ್ನವ್ವ ಫಲವತ್ತಾದ ಕಪ್ಪು ನೆಲ
ಅಲ್ಲಿ ಹಸಿರು ಪತ್ರದ ಹರವು, ಬಿಳಿಯ ಹೂ ಹಬ್ಬ,
ಸುಟ್ಟಷ್ಟು ಕಸುವು, ನೊಂದಷ್ಟು ಹೂ ಹಣ್ಣು
ಮಕ್ಕಳೊದ್ದರೆ ಅವಳ ಅಂಗಾಂಗ ಪುಲಕ;
ಹೊತ್ತ ಬುಟ್ಟಿಯ ಇಟ್ಟು ನರಳಿ ಎವೆ ಮುಚ್ಚಿದಳು ತೆರೆಯದಂತೆ.
ಪಲ್ಲ ಜೋಳವ ಎತ್ತಿ ಅಪ್ಪನ್ನ ಮೆಚ್ಚಿಸಿ ತೋಳಬಂದಿಯ ಗೆದ್ದು,
ಹೆಂಟೆಗೊಂದು ಮೊಗೆ ನೀರು ಹಿಗ್ಗಿ:
ಮೆಣಸು, ಅವರೆ, ಜೋಳ, ತೊಗರಿಯ ಹೊಲವ ಕೈಯಲ್ಲಿ ಉತ್ತು,
ಹೂವಲ್ಲಿ ಹೂವಾಗಿ ಕಾಯಲ್ಲಿ ಕಾಯಾಗಿ
ಹೆಸರು ಗದ್ದೆಯ ನೋಡಿಕೊಂಡು,
ಯೌವನವ ಕಳೆದವಳು ಚಿಂದಿಯ ಸೀರೆ ಉಟ್ಟುಕೊಂಡು.
ಸತ್ತಳು ಈಕೆ
ಬಾಗು ಬೆನ್ನಿನ ಮುದುಕಿಗೆಷ್ಟು ಪ್ರಾಯ?
ಎಷ್ಟು ಗಾದಿಯ ಚಂದ, ಒಲೆಯೆದುರು ಹೋಳಿಗೆಯ ಸಂಭ್ರಮ?
ಎಷ್ಟು ಸಲ ಈ ಮುದುಕಿ ಅತ್ತಳು
ಕಾಸಿಗೆ, ಕೆಟ್ಟ ಪೈರಿಗೆ, ಸತ್ತ ಕರುವಿಗೆ;
ಎಷ್ಟು ಸಲ ಹುಡುಕುತ್ತ ಊರೂರು ಅಲೆದಳು
ತಪ್ಪಿಸಿಕೊಂಡ ಮುದಿಯ ಎಮ್ಮೆಗೆ?
ಸತಿ ಸಾವಿತ್ರಿ, ಜಾನಕಿ, ಊರ್ಮಿಳೆಯಲ್ಲ;
ಚರಿತ್ರೆ ಪುಸ್ತಕದ ಶಾಂತ, ಶ್ವೇತ, ಗಂಭೀರೆಯಲ್ಲ;
ಗಾಂಧೀಜಿ, ರಾಮಕೃಷ್ಣರ ಸತಿಯರಂತಲ್ಲ;
ದೇವರ ಪೂಜಿಸಲಿಲ್ಲ; ಹರಿಕತೆ ಕೇಳಲಿಲ್ಲ;
ಮುತ್ತೈದೆಯಾಗಿ ಕುಂಕುಮ ಕೂಡ ಇಡಲಿಲ್ಲ.
ಬನದ ಕರಡಿಯ ಹಾಗೆ
ಚಿಕ್ಕಮಕ್ಕಳ ಹೊತ್ತು
ಗಂಡನ್ನ ಸಾಕಿದಳು ಕಾಸು ಗಂಟಿಕ್ಕಿದಳು
ನೊಂದ ನಾಯಿಯ ಹಾಗೆ ಬೈದು, ಗೊಣಗಿ, ಗುದ್ದಾಡಿದಳು;
ಸಣ್ಣತನ, ಕೊಂಕು, ಕೆರೆದಾಟ ಕೋತಿಯ ಹಾಗೆ:

ಎಲ್ಲಕ್ಕೆ ಮನೆತನದ ಉದ್ಧಾರ ಸೂತ್ರ
ಈಕೆ ಉರಿದೆದ್ದಾಳು
ಮಗ ಕೆಟ್ಟರೆ, ಗಂಡ ಬೇರೆ ಕಡೆ ಹೋದಾಗ ಮಾತ್ರ
ಬನದ ಕರಡಿಗೆ ನಿಮ್ಮ ಭಗವದ್ಗೀತೆ ಬೇಡ;
ನನ್ನವ್ವ ಬದುಕಿದ್ದು
ಕಾಳುಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ
ಮೇಲೊಂದು ಸೂರು, ಅನ್ನ, ರೊಟ್ಟಿ, ಹಚಡಕ್ಕೆ;
ಸರೀಕರ ಎದುರು ತಲೆಯೆತ್ತಿ ನಡೆಯಲಿಕ್ಕೆ
ಇವಳಿಗೆ ಮೆಚ್ಚುಗೆ, ಕೃತಜ್ಞತೆಯ ಕಣ್ಣೀರು:
ಹೆತ್ತದ್ದಕ್ಕೆ, ಸಾಕಿದ್ದಕ್ಕೆ; ಮಣ್ಣಲ್ಲಿ ಬದುಕಿ
ಮನೆಯಿಂದ ಹೊಲಕ್ಕೆ ಹೋದಂತೆ
ತಣ್ಣಗೆ ಮಾತಾಡುತ್ತಲೇ ಹೊರಟುಹೋದದ್ದಕ್ಕೆ.

**ಸಾರಾಂಶ**

ಈ ಕವನವನ್ನು ಲಂಕೇಶರ 'ಬಿಚ್ಚು' (೧೯೬೭) ಎಂಬ ಕವನ ಸಂಕಲನದಿಂದ ತೆಗೆದುಕೊಳ್ಳಲಾಗಿದೆ. ಹೇಗೆ ಬದುಕಿದರೆ ಜೀವನ ಸಾರ್ಥಕವಾಗುತ್ತದೆ; ಯಾವುದು ಮಾದರಿ ಬದುಕು, ಎಂಬಂತಹ ಆಲೋಚನೆಗಳು ಬಂದಾಗ ಪ್ರೀತಿಯ, ಹತ್ತಿರದ ಸಂಬಂಧಗಳು ಎಷ್ಟು ಮುಖ್ಯ ಎಂದು ಅನ್ನಿಸುತ್ತದೆ ಅಲ್ಲವೆ? ಲಂಕೇಶರ ಅವ್ವ ಅತ್ಯಂತ ಸಾಧಾರಣವಾದ ಹೆಂಗಸು; ತಾನು, ತನ್ನ ಗಂಡ, ತನ್ನ ಮಕ್ಕಳು – ಹೀಗೆ ಒಂದು ಸಣ್ಣ ಲೋಕದ ಸುತ್ತ ಸಂಭ್ರಮದಿಂದ ಓಡಾಡುವ ಕನಸಿನವಳು. ಈ ಲೋಕದ ಸಣ್ಣ ಮಟ್ಟ ಸಾಧನೆಯ ಗುರಿ, ಅದಕ್ಕೊಂದು ಮಾರ್ಗ ಹೀಗೆಲ್ಲಾ ಎಂದೂ ತಲೆಕೆಡಿಸಿಕೊಂಡವಳೇ ಅಲ್ಲ. ಬದುಕನ್ನು ಅದು ಬಂದಂತೆ ಭೀತಿಗೆ ಬೀಳದೆ ಎದೆ ತೆರೆದು ಬದುಕನ್ನು ತುಂಬಿ ಕೊಂಡವಳು. ಇಂಥ ಸರಳ ಸುಂದರ ಅವ್ವ ಕವನದುದ್ದಕ್ಕೂ ಪ್ರೀತಿಯ ಸೆಲೆಯಾಗಿ ನಿಲ್ಲುತ್ತಾಳೆ ಅಲ್ಲವಾ? ಬದುಕಿನ ಒಂದು ಸುಂದರ ಮಾದರಿಯನ್ನು ಎಲ್ಲೆಲ್ಲೋ ಹುಡುಕುತ್ತಾ ಅಲೆಯುವವರ ಕಣ್ಣುಗಳಿಗೆ ಸಮೀಪದ ಇವಳು ಕಾಣುವುದಿಲ್ಲವಾದರೆ ಅವರ ಹುಡುಕಾಟದಲ್ಲಿ ದೋಷವಿರುವುದೇ ಖಚಿತ. ಅತ್ತರೆ ಅರಳಿ ಹೂವಾಗುವ, ಮಕ್ಕಳು ಒದ್ದರೆ ಪುಳಕಗೊಳ್ಳುವ ಇವಳ ಬದುಕಿನ ಸಾರ್ಥಕತೆ ತುಂಬಿಕೊಡುವುದರಲ್ಲೇ ಇದೆ. ಇವಳು ಅತ್ತದ್ದು, ಅಲೆದದ್ದು, ಬಾಗಿದ್ದು ಎಲ್ಲವೂ ತನ್ನವರೆನಿಸಿದವರ ಮುಖದಲ್ಲಿ ಕಾಣುವ ನಲಿವಿಗಾಗಿ, ಸಿಕ್ಕಷ್ಟನ್ನು ಬಾಚಿ ಗಂಟು ಹಾಕಿದ್ದು ಗಂಡ, ಮಕ್ಕಳನ್ನು ಸಾಕಲಿಕ್ಕಾಗಿ. ಪ್ರತಿಫಲವಾಗಿ ಅವಳು ಬೇಡಿದ್ದು ಬಹಳ ಕಡಿಮೆ. ನನ್ನ ಕಣ್ಣೆದುರು ನೀನು ಇದ್ದೀಯಾ ಎಂದರೆ ಅವಳ ಬದುಕು ಸಾರ್ಥಕ. ಚಿಂದಿ ಸೀರೆಯನ್ನುಟ್ಟರೂ ಸರೀಕರೆದುರು ತಲೆ ಎತ್ತಿ ನಡೆಯುವ ಚೈತನ್ಯ ಅವಳಿಗೆ ಬರುವುದು ಇದರಿಂದಲೇ. ಬಿಸಿಲಿಗೆ ಬಿರುಕು ಬಿಡುವ, ಉಂಡ ನೋವನ್ನು ತನ್ನ ಕಸುವಾಗಿಸುವ ಕಲೆ ಅವಳಿಗೆ ಕರಗತವಾಗಿದೆಯೇನೋ. ನೋವಿಗೆ ನರಳಿ ಎವೆ ಮುಚ್ಚುತ್ತಾಳೆ. ಆದರೆ ಸೋತು ದೈನ್ಯವಾಗಿ ದುಃಖ ತುಂಬಿ ಬಂದದ್ದರಿಂದ ಅಲ್ಲ. ನೋವಿನಲ್ಲೂ ಹಸಿರನ್ನು ಹರವಿ, ಹೂ ಹಣ್ಣುಗಳನ್ನು ಪಡೆದ ಸಾರ್ಥಕತೆಯಿಂದ. ಅವ್ವ ಇವೆಲ್ಲದಕ್ಕೂ ಪ್ರತಿಫಲವಾಗಿ ಬಯಸುವುದು ಒಂದಿಷ್ಟು ಮೆಚ್ಚುಗೆ,

ಕೃತಜ್ಞತೆಯ ಕಣ್ಣೀರು. ಅವ್ವನಿಂದ ಪಡೆದಿದ್ದನ್ನು ಲೆಕ್ಕ ಹಾಕಿ ನೋಡಲಾಗದು ನಿಜ. ಅನುಭವಕ್ಕೆ ಬಂದದ್ದನ್ನು ಒಂದಿಷ್ಟು ಮೆಲುಕು ಹಾಕುವ ಸೌಜನ್ಯವಿದ್ದರೂ ಅವಳ ಬಯಕೆ ಹೂತು ಹೋಗುವ ಸಾಧ್ಯತೆ ಇಲ್ಲ. ಅವ್ವನನ್ನು ನೆನೆದರೆ ಸಹಜವಾಗಿ ಹೊಮ್ಮಿ ಬರುವ ಭಾವವೇ ಕವನವಾಗಿದೆ. ಕವನವು ಕಟ್ಟಿಕೊಡುವ ಭಾವ ಲೋಕದ ಅನುಭವ ಮಾತಿನ ವ್ಯಾಖ್ಯೆಗೆ ಮೀರಿ ಮನಸ್ಸನ್ನು ತುಂಬಿ ನಿಲ್ಲುತ್ತವೆ.

ಲಂಕೇಶ್ (ಚಿತ್ರ ೧ ನೋಡಿ) ಅವರ ಮೇಲಿನ ಕವನ ಕೊಡುವ ಭಾವಲೋಕಕ್ಕೆ ವಿರುದ್ಧವಾದ ಚಿತ್ರಣವನ್ನು ಕೆ.ವಿ. ತಿರುಮಲೇಶ್ (ಚಿತ್ರ ೨) ಮತ್ತು ಜಿ.ಎಸ್. ಶಿವರುದ್ರಪ್ಪ (ಚಿತ್ರ ೩) ಅವರ ಕೆಳಗಿನ ಎರಡು ಕವನಗಳು ಕೊಡುತ್ತವೆ. ಆಧುನಿಕತೆ ಮತ್ತು ನಗರೀಕರಣಗಳ ಪ್ರಭಾವವನ್ನು ನಮ್ಮ ಕವಿಗಳು ಚೆನ್ನಾಗಿ ಹಿಡಿದಿದ್ದಾರೆ. ಅದರ ಎರಡು ಚಿತ್ರಣಗಳನ್ನು ಈ ಕೆಳಗೆ ನೋಡಿ.

**೩. ಪ್ರಕೃತಿಗೆ ಅಭಿಮುಖವಾಗಿರುವ ಆಧುನಿಕ ಮನುಷ್ಯ – ಎರಡು ಕವನಗಳು**

**ಅ. ತಿರುವನಂತಪುರ**

– ಕೆ.ವಿ. ತಿರುಮಲೇಶ್

ಇಳಿದೆ ಇಳಿದು ಜನಸ್ತೋಮದಲ್ಲಿ ಸೇರಿ
ಸೇರಿ ನುಗ್ಗಿದೆ ನುಗ್ಗಿ ಸ್ಟೇಶನ್ನಿನ ಹೊರಬಂದೆ,
ಬಂದು ಈ ಅಗಾಧ ಜನಸ್ತೋಮದಲ್ಲಿ ನುಗ್ಗಿದೆ.
ನುಗ್ಗಿ ಲಗ್ಗೇಜು ಹೆಗಲಿಗೇರಿಸಿಕೊಂಡು ಬಗ್ಗಿ ಸಾಗಿದೆ ಪ್ರವಾಹದಲ್ಲಿ
ಸಾಗಿ ನಗರಕ್ಕೆ ಬಂದು ಎದ್ದೆ ಎದ್ದು
ಇಳಿದುಕೊಳ್ಳುವುದಕ್ಕೆ ರೂಮು ಅನ್ವೇಷಿಸಿದೆ
ಅನ್ವೇಷಿಸುತ್ತಾ ನಡೆದೆ ನಡೆಯುತ್ತಾ ಅನ್ವೇಷಿಸಿದೆ
ಶ್ರದ್ಧೆಯಿಂದ ಆತಂಕದಿಂದ ಬಳಲಿಕೆಯಿಂದ ಶ್ರದ್ಧೆಯಿಂದ
ನಡೆದೆ ಅನ್ವೇಷಿಸುತ್ತಾ ನಡೆಯುತ್ತಾ ನಡೆದೆ.

**ಆ. ಮುಂಬೈ ಜಾತಕ**

– ಜಿ.ಎಸ್. ಶಿವರುದ್ರಪ್ಪ

ಹುಟ್ಟಿದ್ದು: ಆಸ್ಪತ್ರೆಯಲ್ಲಿ
ಬೆಳೆದದ್ದು: ಬಸ್ಸು ಟ್ರಾಂ ಕಾರು ಟ್ಯಾಕ್ಸಿ ಎಲೆಕ್ಟ್ರಿಕ್ ಟ್ರೇನುಗಳಲ್ಲಿ
ಕುಡಿದದ್ದು: ಕಾಣದೆಮ್ಮೆಯ ಕೆಚ್ಚಲು ಕರೆದು ಕಳುಹಿಸಿದ ಬಾಟ್ಲಿಯ
ಹಾಲು, ಡ್ರೈಪ್ ಸಿರಪ್, ಹಾರ್ಲಿಕ್ಸ್ ಇತ್ಯಾದಿ.
ಕಂಡದ್ದು: ಕ್ಯೂ ನಿಲ್ಲು, ಫುಟ್ ಪಾತಿನಲ್ಲೇ ಸಂಚರಿಸು; ರಸ್ತೆ
ದಾಟುವಾಗೆಚ್ಚರಿಕೆ, ಓಡು, ಎಲ್ಲಿಯೂ ನಿಲ್ಲದಿರು; ಹೇಗೋ
ಅವರಿವರ ತಳ್ಳಿ ಮುನ್ನುಗ್ಗು ಎಲ್ಲಾದರೂ ಸರಿಯೆ
ಬೇರೂರು, ಹೀರು.



ಚಿತ್ರ ೧: ಪಿ.ಲಂಕೇಶ್ (೧೯೩೫–೨೦೦೦)



ಚಿತ್ರ ೨. ಕೆ.ವಿ. ತಿರುಮಲೇಶ್ (೧೯೪೦)



ಚಿತ್ರ ೩: ಜಿ.ಎಸ್. ಶಿವರುದ್ರಪ್ಪ (೧೯೨೬–೨೦೧೩) (ಚಿತ್ರ ಕೃಪೆ: ಹಂಪಿ ಯಾಜಿ)

ignou THE PEOPLE'S UNIVERSITY

## ೫.೨.೨. ಪಠ್ಯ: ೨

## ಕರ್ನಾಟಕದ ಪರಿಸರ ಚಳುವಳಿಗಳು

ಭಾರತ ಮತ್ತು ಕರ್ನಾಟಕದ ಸಂದರ್ಭದಲ್ಲಿ ನಡೆದ ಪರಿಸರ ಚಳುವಳಿಯ ಸಣ್ಣ ಪರಿಚಯ ಈ ಕೆಳಗೆ ಕೊಡಲಾಗಿದೆ. ಜನಸಮುದಾಯ ಪರಿಸರ ರಕ್ಷಣೆಗೆ ಹೇಗೆ ಮುಂದಾಯಿತೆಂದು ಅರಿಯಲು ಇದು ಒಂದು ಸಣ್ಣ ಉದಾಹರಣೆ.

### ಚಿಪ್ಕೋ ಚಳುವಳಿ

ನಮ್ಮ ಭಾರತ ದೇಶದಲ್ಲಿ ಪರಿಸರ ಸಂರಕ್ಷಣೆಗಾಗಿ ಅಪಾರವಾಗಿ ದುಡಿಯುತ್ತಿರುವ ಸಂಘ–ಸಂಸ್ಥೆಗಳೆಂದರೆ ದೆಹಲಿಯಲ್ಲಿರುವ ವಿಜ್ಞಾನ ಮತ್ತು ಪರಿಸರ ಕೇಂದ್ರ, ಮುಂಬಯಿಯಲ್ಲಿರುವ ಪ್ರಕೃತಿ ವಿಜ್ಞಾನ ಸಮಾಜ, ಕೇರಳದ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು, ಉತ್ತರಪ್ರದೇಶದ ಚಿಪ್ಕೋ ಚಳುವಳಿ, ನಮ್ಮ ಕರ್ನಾಟಕ ರಾಜ್ಯದ ಅಪ್ಪಿಕೊ ಚಳುವಳಿ ಮೊದಲಾದವು ಮುಖ್ಯವಾದವುಗಳು. ಚಿಪ್ಕೋ ಚಳುವಳಿ ಪ್ರಾರಂಭಿಸಿ, ಅರಣ್ಯ ಸಂರಕ್ಷಣೆಗಾಗಿ ಅಪಾರವಾಗಿ ಹೋರಾಡಿ ಕೊಡಲಿಗೆ ಬಲಿಯಾದ ಅಮೃತಾದೇವಿ ಎಂಬ ಧೀರ, ಪರಿಸರ ಪ್ರೇಮಿ ಮಹಿಳೆ ಸುಮಾರು ಹದಿನೇಳನೇ ಶತಮಾನದಲ್ಲಿ ಹಿಂದೆ ರಾಜಾಸ್ಥಾನದ ಜೋಧ್‌ಪುರ್ ಎಂಬಲ್ಲಿ ಮರುಭೂಮಿಯ ಅಂಚಿನಲ್ಲಿರುವ ಮರಗಳನ್ನು ಕಡಿಯಲು ಬಂದ ಮಹಾರಾಜ ಅಜಿತ್‌ಸಿಂಗ್‌ನ ಆಳುಗಳನ್ನು ತಡೆದು, ಅದರ ಸುದ್ದಿ ಆ ರಾಜನಿಗೆ ತಲುಪಿ, ಆತ ಅನಂತರ ಮರಗಳನ್ನು ಕಡಿಯಕೂಡದೆಂದು ಆದೇಶ ಹೊರಡಿಸುತ್ತಾನೆ. ಈ ಅಪೂರ್ವ ಘಟನೆಯೇ ಚಿಪ್ಕೋ ಚಳುವಳಿಗೆ ಸ್ಫೂರ್ತಿ. ಚಿಪ್ಕೋ ಚಳುವಳಿ ಪ್ರಾರಂಭವಾದದ್ದು ೧೯೭೩ರಲ್ಲಿ ಉತ್ತರಪ್ರದೇಶ ರಾಜ್ಯದ ಚಮೋಲಿ ಜಿಲ್ಲೆಯ ಮಂಡಲ್ ಎಂಬ ಗ್ರಾಮದಲ್ಲಿ. ಈ ಗ್ರಾಮದ ಸುತ್ತ ಸರ್ಕಾರದಿಂದ ಸಂರಕ್ಷಿಸಲ್ಪಟ್ಟ ಅರಣ್ಯವಿದೆ. ಆದರೆ ಅದೇ ಅರಣ್ಯದಲ್ಲಿ ಮರಗಳನ್ನು ಕಡಿಯಲು ಒಮ್ಮೆ ಅಲಹಾಬಾದ್ ಆಟದ ಸಾಮಾನುಗಳ ತಯಾರಕನೊಬ್ಬನಿಗೆ ಸರ್ಕಾರವು ಅನುಮತಿ ನೀಡಿತು. ಈ ಮರಗಳನ್ನು ರಕ್ಷಿಸಲು ಮಹಿಳೆಯರು ಮರಗಳನ್ನು ಬಿಗಿಯಾಗಿ ಅಪ್ಪಿನಿಂತರು. ಇಲ್ಲಿಂದ ಚಿಪ್ಕೋ ಚಳುವಳಿ ವಿಶೇಷವಾಗಿ ಆರಂಭವಾಯಿತು. ಇದರ ನೇತೃತ್ವ ವಹಿಸಿದ್ದವರು ಪರಿಸರವಾದಿ, ನಾಡಿನ ಹಸಿರಿಗೆ ಉಸಿರು ನೀಡುತ್ತಿರುವ ಹಸಿರು ಪಂಥದ ಸಂತರೆಂದೇ ಸುಪ್ರಸಿದ್ಧರಾಗಿರುವ ಸುಂದರ್‌ಲಾಲ್ ಬಹುಗುಣರವರು.

೧೯೭೦ರ ದಶಕದಲ್ಲಿ ಹಿಮಾಲಯದ ಪ್ರದೇಶಗಳಲ್ಲಿ ಚಿಪ್ಕೋ ಆಂದೋಲನ ಪರಿಸರ ಸಂರಕ್ಷಣೆಯ ಆದ್ಯತೆಯನ್ನು ಎತ್ತಿ ಹಿಡಿಯಿತು. ಅದೊಂದು ಜನಪರ ಸಂಘಟನೆಯಾಗಿ ರೂಪುಗೊಂಡಿತು. ಹಿಮಾಲಯದ ಅರಣ್ಯಗಳ ಸಂಪನ್ಮೂಲಗಳ ಮೇಲೆ ಸ್ಥಳೀಯರ ಹಕ್ಕನ್ನು ಉಳಿಸಿಕೊಳ್ಳುವ ದೆಸೆಯಲ್ಲಿ ಆರಂಭವಾಯಿತು.

ಅರಣ್ಯಗಳ ಜೊತೆ ನಾಶವಾಗುತ್ತಿದ್ದ ಪರಿಸರ ನಾಶಕ್ಕೆ ಚಿಪ್ಕೋ ಆಂದೋಲನ ಎತ್ತಿ ಹಿಡಿದ ಪರಿಹಾರವೆಂದರೆ:

ಅ) ಮಿತವ್ಯಯ

ಆ) ಪರ್ಯಾಯಗಳು

ಇ) ಅರಣ್ಯೀಕರಣ

## ಅಪ್ಪಿಕೋ ಚಳುವಳಿ

ಅಪ್ಪಿಕೋ ಚಳುವಳಿಯು ನಮ್ಮ ಕರ್ನಾಟಕ ರಾಜ್ಯದಲ್ಲಿ ೧೯೮೩ರಲ್ಲಿ ಪ್ರಾರಂಭವಾಯಿತು. ಕರ್ನಾಟಕ ರಾಜ್ಯದ ಪರಿಸರ ಸಂರಕ್ಷಣೆಯ ಮಹತ್ತರ ಮೈಲಿಗಲ್ಲುಗಳಲ್ಲಿ ಅಪ್ಪಿಕೋ ಚಳುವಳಿಯೂ ಒಂದು. ಉತ್ತರ ಭಾರತದಲ್ಲಿ ನಡೆಯುತ್ತಿರುವ ಚಿಪ್ಕೋ ಚಳುವಳಿಯೇ ಅಪ್ಪಿಕೊ ಚಳುವಳಿಗೆ ಸ್ಫೂರ್ತಿ ಎಂದು ಹೇಳಿದರೆ ಏನೇನೂ ತಪ್ಪಾಗಲಾರದು. ಜನರು ಪರಿಸರ ರಕ್ಷಣೆಗಾಗಿ ಪಣ ತೊಟ್ಟು ಶಿರಸಿ, ಸಿದ್ಧಾಪುರ, ಸಾಗರ ತಾಲ್ಲೂಕುಗಳಲ್ಲಿ ಮರ ಕಡಿಯುವವರ ವಿರುದ್ಧ ಮರಗಳನ್ನು ಅಪ್ಪಿಕೊಂಡು ನಿಂತರು. ಕರಾರಿನಂತೆ ಎಕರೆಗೆ ಕೇವಲ ಎರಡು ಮರಗಳನ್ನು ಕಡಿಯಬೇಕಾಗಿದ್ದ ಕಂಟ್ರಾಕ್ಟರ್ ೭೦ ಮರಗಳನ್ನು ಕಡಿಯುತ್ತಿದ್ದುದನ್ನು, ತನ್ಮೂಲಕ ಅರಣ್ಯ ಸಂಪತ್ತನ್ನು ಲೂಟಿ ಮಾಡುತ್ತಿದ್ದುದನ್ನು ಚಳುವಳಿಗಾರರು ಪತ್ತೆ ಹಚ್ಚಿ ಸಜ್ಜುಗೊಂಡಿದ್ದರು. ಇದೇ ಅಪ್ಪಿಕೊ ಚಳುವಳಿ ಎಂಬುದಾಗಿ ಖ್ಯಾತಿ ಪಡೆಯಿತು. ಪರಿಸರವಾದಿ, ಪರಿಸರ ಪ್ರೇಮಿ ಪಾಂಡುರಂಗ ಹೆಗಡೆರವರು ಈ ಚಳುವಳಿಯ ನೇತೃತ್ವ ವಹಿಸಿದ್ದರು. ಅರಣ್ಯಗಳನ್ನು ಸಂರಕ್ಷಿಸಬೇಕೆಂಬ ಅರಿವು ಶಿರಸಿ, ಸಿದ್ಧಾಪುರ, ಸಾಗರ ತಾಲ್ಲೂಕುಗಳ ಜನರಲ್ಲಿ ಮೂಡಿತು. ಅದರ ಪರಿಣಾಮವಾಗಿ ೧೯೭೭ರಲ್ಲಿ ಚಳುವಳಿ ಪ್ರಾರಂಭವಾಯಿತು. ಆದರೆ ಅದು ಪ್ರಖರತೆ ಪಡೆದದ್ದು ೧೯೮೩ರಲ್ಲಿ. ವನಗಳಲ್ಲಿನ ಮರಗಳನ್ನು ಕಡಿಯುವುದರ ಬಗೆಗೆ ಜಾರಿಯಲ್ಲಿದ್ದ ಗುತ್ತಿಗೆ ನೀತಿಯ ವಿರೋಧ, ಅರಣ್ಯದಲ್ಲಿ ಜರುಗುತ್ತಿದ್ದ ಕಳ್ಳಸಾಗಣಿಕೆಯ ವಿರುದ್ಧ ಕಠಿಣ ಕ್ರಮ, ಮರಗಳನ್ನು ಬೆಳೆಸಲು ಸೂಕ್ತವಾದ ವಾತಾವರಣದ ನಿರ್ಮಾಣ ಮತ್ತು ವೃಕ್ಷ ಸಂಪತ್ತಿನ ಮಹತ್ವದ ಬಗೆಗೆ ಜನಸಾಮಾನ್ಯರಲ್ಲಿ ಜಾಗೃತಿ ಉಂಟು ಮಾಡುವುದು ಇತ್ಯಾದಿಗಳು ಈ ಚಳುವಳಿಯ ಮುಖ್ಯ ಅಂಶಗಳು. ಚಿಪ್ಕೋ ಆಂದೋಲನದಲ್ಲಿ ಜರುಗಿದಂತೆ ಇಲ್ಲೂ ಜನರು, ಅದರಲ್ಲೂ ಹೆಚ್ಚಾಗಿ ಮಹಿಳೆಯರು, ಮರಗಳನ್ನು ತಬ್ಬಿ ಗುತ್ತಿಗೆದಾರರ ಆಟಾಟೋಪಗಳನ್ನು ತಡೆಯುವಲ್ಲಿ ಯಶಸ್ವಿಯಾದರು. ಜನಪದ ಕಲಾ ಪ್ರಕಾರಗಳಾದ ಯಕ್ಷಗಾನ, ಬೀದಿನಾಟಕ, ಹಾಡು ಹಾಗೂ ಸಣ್ಣಸಭೆ, ಉಪನ್ಯಾಸ ಮುಂತಾದವುಗಳ ಮೂಲಕ ಈ ಚಳುವಳಿಯ ಕಾರ್ಯಕರ್ತರು ಜನರನ್ನು ತಲುಪಲು ಪ್ರಯತ್ನಿಸಿದರು. ಅದು ಅಪ್ಪಿಕೋ ಚಳುವಳಿ ಎಂದು ಪ್ರಖ್ಯಾತವಾಯಿತು. ನಂತರ ಉತ್ತರಕನ್ನಡದಲ್ಲಿ ಪರಿಸರ ಚಳುವಳಿಗಳು ತೀವ್ರಗೊಂಡವು. ಟೇಲ್ ರೇಸ್ ಯೋಜನೆಯ ವಿರುದ್ಧ ಡಾ. ಕುಸುಮಾ ಸೊರಬರ ಮುಂದಾಳತ್ವದಲ್ಲಿ ೧೯೮೯ರಲ್ಲಿ ಪರಿಸರ ಕಾರ್ಯಕರ್ತರು ಹೋರಾಟ ಪ್ರಾರಂಭ ಮಾಡಿದರು. ಸ್ವಲ್ಪ ಸಮಯದ ನಂತರ ನ್ಯಾಯಾಲಯದಿಂದ ತಡೆಯಾಜ್ಞೆ ದೊರಕಿತು. ಆದರೆ ಸುಮಾರು ಎಂಟು ವರ್ಷಗಳ ತರುವಾಯ, ನ್ಯಾಯಾಲಯದಿಂದ ಈ ವರ್ಷಗಳಲ್ಲಿ ಅಪ್ಪಿಕೋ ಚಳುವಳಿ ಸಾಧಿಸಿದ್ದೇನು ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿದೆ; ಸರ್ಕಾರದ ಅರಣ್ಯ ನೀತಿಯಲ್ಲಿ ಆಗಿರುವ ಬದಲಾವಣೆಯ ಮೂಲಕ. ಚಳುವಳಿಗೆ ಮಣಿದ ಅಂದಿನ ಸರ್ಕಾರದ ಅರಣ್ಯ ಸಚಿವ ಜೀವಿಜಯ ಚಳುವಳಿ ನಡೆಯುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿ ಚಳುವಳಿಕಾರರ ಜತೆ ಚರ್ಚಿಸಲು ಅರಣ್ಯ ಅಧಿಕಾರಿಗಳನ್ನು ಕಳುಹಿಸಿ ಕೊಟ್ಟಿದ್ದರು. ನಂತರದಲ್ಲಿ ಸರ್ಕಾರದ ಅರಣ್ಯ ನೀತಿಯಲ್ಲಿ ಕೆಲವು ಬದಲಾವಣೆಗಳು ಆದವು.

೧. ನೈಸರ್ಗಿಕ ಕಾಡು ಕಡಿದು ನೆಡುತೋಪಿನ ನಿರ್ಮಾಣದ ಕಾರ್ಯಕ್ರಮವನ್ನು ಕೈಬಿಟ್ಟಿತು. ಅರಣ್ಯ ಕಡಿತವನ್ನು ಸೀಮಿತಗೊಳಿಸಿತು. ಪ್ರತಿ ಹೆಕ್ಟೇರಿಗೆ ಕೇವಲ ಎರಡು ಮರಗಳನ್ನು ಕಡಿಯುವ ನಿರ್ಧಾರವನ್ನು ಪ್ರಕಟಿಸಿತು.

೨. ಉದ್ದಿಮೆಗಳಿಗೆ ಕಡಿಮೆ ದರದಲ್ಲಿ ಅರಣ್ಯದ ಮರ ಕಡಿಯಲು ನೀಡಿದ್ದ ಗುತ್ತಿಗೆ ಅನುಮತಿಯನ್ನು ಹಿಂದಕ್ಕೆ ಪಡೆಯಿತು. ೧೯೮೯ರಲ್ಲಿ ಪಶ್ಚಿಮಘಟ್ಟದ ಉದ್ದಗಲದಲ್ಲಿ ನಿಸರ್ಗದತ್ತ ಕಾಡಿನ ಹಸಿರು ಮರಗಳನ್ನು ಕಡಿಯುವುದನ್ನು ಸಂಪೂರ್ಣ ನಿಷೇಧಿಸಿತು.

ಅಪ್ಪಿಕೋ ಚಳುವಳಿಯಿಂದ ಸರ್ಕಾರ ತನ್ನ ಅರಣ್ಯ ನೀತಿಯಲ್ಲಿ ಬದಲಾವಣೆ ಮಾಡಿಕೊಂಡಿತು. ಚಳುವಳಿ ಜನರ ಮನಸ್ಸು ಗೆದ್ದಿತು. ಜನರಲ್ಲಿ ಕಾಡಿನ ಪರಿಸರ ರಕ್ಷಣೆಯ ಜಾಗೃತಿ ಮೂಡಿಸಿತು. ಚಳುವಳಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯಿತು. ಆ ನಂತರವೂ ಚಳುವಳಿ ಮುಂದುವರಿಯಿತು: ಯಾಣದ ರಕ್ಷಣೆ (೧೯೮೮), ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗ ನಿರ್ಮಾಣ ಯೋಜನೆ ಸ್ಥಗಿತ (೨೦೦೬), ಕೊಡಗಿನಲ್ಲಿ ಅರಣ್ಯನಾಶದ ವಿರುದ್ಧ ಹೋರಾಟ (೨೦೦೪), ಕಾಳಿ ಬಚಾವೋ ಆಂದೋಲನ (೨೦೦೪), ಜೇನು ಹಬ್ಬಗಳಿಗೆ ಚಾಲನೆ, ಪಶ್ಚಿಮಘಟ್ಟದಲ್ಲಿ ಜೇನು ಅಭಿಯಾನ (೧೯೯೨), ದಾಲ್ಚಿನ್ನಿ ಎಲೆ ಕಡಿಯುವ ವಿರುದ್ಧ ಹೋರಾಟ (೨೦೦೬–೨೦೦೮), ಶರಾವತಿ ಅವಲೋಕನ–ಶರಾವತಿ ಪಾದಯಾತ್ರೆ ಪಶ್ಚಿಮಘಟ್ಟ ಉಳಿಸಿ ಅಭಿಯಾನ (೨೦೦೮) ಮುಂತಾದವನ್ನು ಹೆಸರಿಸಬಹುದು. ಉಳಿಸು, ಬೆಳೆಸು, ಬಳಸು ಎಂಬುದು ಅಪ್ಪಿಕೋ ಚಳುವಳಿಯ ವಿಚಾರಧಾರೆ. ಹಲವಾರು ವರ್ಷಗಳ ಹಿಂದೆ ಆರಂಭವಾದ ಚಳುವಳಿಯ ನೆನಪು ಉತ್ತರ ಕನ್ನಡ ಜಿಲ್ಲೆಯ ಜನರ ಮನಸ್ಸಿನಲ್ಲಿ ಇಂದಿಗೂ ಹಸಿರಾಗಿರುವುದು.

ಮುಂದಿನ ಮೂರು, ನಾಲ್ಕು ಐದು ಹಾಗೂ ಆರನೆಯ ಭಾಗಗಳಲ್ಲಿ ಕ್ರಮವಾಗಿ ಪರಿಸರ ಸಮಸ್ಯೆಯ ಗಾಢತೆ, ಪರಿಹಾರದ ಕಷ್ಟಗಳು, ಪರ್ಯಾಯದ ಸ್ವರೂಪಗಳು, ಈ ಕುರಿತ ಚರ್ಚೆ ಬರುತ್ತದೆ.



ಚಿತ್ರ ೪: ನಾಗೇಶ ಹೆಗಡೆ (೧೯೪೮) (ಚಿತ್ರ ಕೃಪೆ: ಹಂಪಿ ಯಾಜಿ)

### ೫.೨.೩. ಪಠ್ಯ ೩: ಮಾನವ ನಿರ್ಮಿತ ಮಹಾಸಮಸ್ಯೆಗಳು

**ಲೇಖಕರ ಪರಿಚಯ:** ನಾಗೇಶ ಹೆಗಡೆ (ಚಿತ್ರ ೪ ನೋಡಿ) ಅವರು ಕರ್ನಾಟಕದ ಪರಿಸರ ಸಂಕಷ್ಟಗಳನ್ನು ಕುರಿತ ಹಾಗೆ ಅಧಿಕೃತವಾಗಿ ಮಾತನಾಡಬಲ್ಲ ಒಬ್ಬ ಪರಿಸರ ವಿಜ್ಞಾನಿ. ಆಧುನಿಕ ಮನುಷ್ಯನಿಂದಾಗಿ ಪರಿಸರವು ವಿನಾಶದ ಕಡೆಗೆ ಹೋಗುತ್ತಿರುವ ಹಲವು ರೀತಿಯ ಸ್ವರೂಪಗಳನ್ನು ಇವರು ಅನೇಕ ಹಂತಗಳಲ್ಲಿ ಕನ್ನಡದಲ್ಲಿ ವಿವರಿಸಿದ್ದಾರೆ.

ಜಗತ್ತಿನ ಪರಿಸರ ನಾಶದ ಬೆಳವಣಿಗೆ, ಭಾರತದಲ್ಲಿ ಪರಿಸರದ ಸ್ವರೂಪ, ಕರ್ನಾಟಕದ ಪರಿಸರ ನಾಶದ ಆಯಾಮಗಳನ್ನು ಕುರಿತಂತೆ ಅವರು ಮಾತನಾಡಿದ ಹಾಗೂ ಬರೆದ ಹಲವು ಕೃತಿಗಳು ಮತ್ತು ಲೇಖನಗಳು ಕನ್ನಡದಲ್ಲಿ ಪ್ರಸಿದ್ಧವಾಗಿವೆ. ವಿಜ್ಞಾನ ಮತ್ತು ಪರಿಸರ ಕುರಿತು ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಬಗ್ಗೆಮನೆ ಎಂಬ ಹಳ್ಳಿಯಲ್ಲಿ ಜನಿಸಿದ ಅವರು ಐ.ಐ.ಟಿ., ಖರಗ್‌ಪುರದಿಂದ ಎಂ.ಎಸ್ಸಿ. ಪದವಿ ಪಡೆದು ಕೆಲಕಾಲ ಪರಿಸರ ವಿಜ್ಞಾನದ ಪ್ರಾಧ್ಯಾಪಕರಾಗಿದ್ದರು. ಸುಧಾ ವಾರಪತ್ರಿಕೆಗೆ, ಪ್ರಜಾವಾಣಿ ದಿನಪತ್ರಿಕೆಗೆ ಪರಿಸರ ಕುರಿತು ಲೇಖನಗಳನ್ನು ಬರೆದಿದ್ದಾರೆ. ನಾಗೇಶ ಹೆಗಡೆಯವರು ಗ್ರಾಮೀಣ ಸಮುದಾಯದಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವ ದಿಕ್ಕಿನಲ್ಲಿ ಕೆಲಸ ಮಾಡಿದ್ದಾರೆ. ಅವರ ಬರಹಗಳು ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾಲಯಗಳ ವರೆಗೆ ಪಠ್ಯಪುಸ್ತಕಗಳಾಗಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಇವರಿಗೆ ದಕ್ಕಿವೆ.

**ವಿವರಣೆ**

೧. ಗ್ರಹಿಕೆಯ ಸೌಕರ್ಯಕ್ಕಾಗಿ 'ಮಾನವ ನಿರ್ಮಿತ ಮಹಾಸಮಸ್ಯೆಗಳು' ಲೇಖನವನ್ನು ಆರು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

೨. ಸಾಮಾನ್ಯ ಓದುಗವರ್ಗವನ್ನು ತಲುಪುವುದು ಈ ಲೇಖನದ ಗುರಿ. ಆದ್ದರಿಂದಲೇ ಕಾಲಾನುಕ್ರಮಣಿಕೆಯಲ್ಲಿ ಇತಿಹಾಸವನ್ನು ನಿರೂಪಿಸುವ ರೀತಿಯಲ್ಲಿ ಈ ಲೇಖನ ಪ್ರಾರಂಭವಾಗುತ್ತದೆ.

೩. ಲೇಖನದ ಒಂದು, ಎರಡು ಹಾಗೂ ಮೂರನೆಯ ಭಾಗಗಳನ್ನು ಗಮನಿಸೋಣ. ಮೊದಲಿಗೆ ವಸ್ತುಸ್ಥಿತಿಯನ್ನು ವಿವರಿಸುವುದು; ಆ ಮೂಲಕ ಸಮಸ್ಯೆಗಳನ್ನು ಮಂಡಿಸುವುದು. ಆ ಭಾಗದ ಕೊನೆಯಲ್ಲಿ ಆ ಸಮಸ್ಯೆಗಳಿಗೆ ಸಂಬಂಧಿಸಿದ ಮುಖ್ಯವಾದ ಪ್ರಶ್ನೆಗಳನ್ನು ಎತ್ತುವುದು? ಈ ವಿಧಾನವನ್ನು ಇಲ್ಲಿಯ ನಿರೂಪಣೆ ಅನುಸರಿಸಿದೆ. ಓದುಗನನ್ನು ಸಂವಾದದ ಭಾಗವನ್ನಾಗಿ ಮಾಡಿಕೊಳ್ಳಬೇಕೆಂಬ ಕಾಳಜಿ ಇದರ ಹಿಂದಿರುವುದನ್ನು ಗುರುತಿಸಬಹುದು.

೪. ಕೆಲವೊಂದು ಸಂಗತಿಗಳನ್ನು ಲೇಖನ ತಿಳಿಸುತ್ತಲೇ, ಆ ಸಂಗತಿಗಳನ್ನು ಹೇಗೆ ವ್ಯಾಖ್ಯಾನಿಸಲಾಗಿದೆ ಎಂಬುದನ್ನು ಇಲ್ಲಿ ಮುಂದಿಡಲಾಗುತ್ತದೆ. ಬಳಿಕ ಆ ವ್ಯಾಖ್ಯಾನಕ್ಕೆ ಪ್ರತಿಯಾದ ಬೇರೊಂದು ವಾದಸರಣಿಯನ್ನು ಮಂಡಿಸಲಾಗುತ್ತದೆ.

ಉದಾ.:

೧ ನಿಸರ್ಗದ ಮೇಲೆ ಮಾನವನ ಹತೋಟಿ.

೨. ಆ ಕುರಿತಾದ ನಮ್ಮ ಹೆಮ್ಮೆ.

೩. ಈ ಅಭಿಪ್ರಾಯವನ್ನು ಮರುಪರಿಶೀಲಿಸಬೇಕಾದ ಅಗತ್ಯ ತಿಳಿಯದಿರುವುದನ್ನು ತಿಳಿಸಿ, ಆ ಮೂಲಕ ಹೆಚ್ಚಿನ ತಿಳಿವಳಿಕೆಯ ಕಡೆಗೆ ಕರೆದುಕೊಂಡು ಹೋಗುವುದು ಇಲ್ಲಿನ ವಿಧಾನ. ಏಕತಾನದ ಬೆಳವಣಿಗೆ ಹಾಗೂ ಜೈವಿಕ ಬೆಳವಣಿಗೆಗಳನ್ನು ವಿವರಿಸಿರುವ ರೀತಿ ಇದಕ್ಕೆ ನಿದರ್ಶನವಾಗಿದೆ.

ಮೊದಲಿಗೆ ಈ ನೆಲಕ್ಕೆ ಸಂಬಂಧಿಸಿದ ಬಿಡಿ ಬಿಡಿ ವಿವರಗಳನ್ನು ಮುಂದಿಡುವ ಲೇಖನ, ಬಳಿಕ ಹಂತಹಂತವಾಗಿ ಸಮರ್ಥನೆಯ ನೆಲೆಗೆ ನಮ್ಮನ್ನು ಕರೆದೊಯ್ಯುತ್ತದೆ. ಕೊನೆಯಲ್ಲಿ ಮನುಕುಲ, ಭೂಮಿ, ಬಳಿಕ ಸಮಗ್ರ ವಿಶ್ವವನ್ನೇ ಗಮನಕ್ಕೆ ತೆಗೆದುಕೊಂಡು ನಿರ್ಣಯದ ಮಂಡನೆಯಲ್ಲಿ ತೊಡಗುತ್ತದೆ. ಲೇಖನದ ಉದ್ದಕ್ಕೂ ಬೆಳೆಯುವ ತರ್ಕ ಸರಣಿಯಿಂದ ಈ ನಿರ್ಣಯ ಹೇಗೆ ಹೊರಹೊಮ್ಮುತ್ತದೆ ಎಂಬುದನ್ನು ಪರಿಶೀಲಿಸಬಹುದು.

**ಲೇಖನ**

– ನಾಗೇಶ ಹೆಗಡೆ

೧

ಭೂಮಿಯ ಮೇಲೆ ಮಾನವ ಜೀವಿಗಳು ಓಡಾಡಲಾರಂಭಿಸಿ ಸುಮಾರು ೪೦ ಸಾವಿರ ವರ್ಷಗಳೇ ಸಂದಿವೆ. ಕಾಡುಪ್ರಾಣಿಗಳಂತೆ ಅಲೆಯುತ್ತ, ಹೊಟ್ಟೆ ತುಂಬಿಸಿಕೊಳ್ಳುವ ಏಕಮಾತ್ರ ಉದ್ದೇಶದಿಂದ ದೀರ್ಘಕಾಲ ಶಿಲಾಯುಗದಲ್ಲೇ ಕಳೆದು ಆತ ನಾಲ್ಕು ಸಾವಿರ ವರುಷಗಳ ಹಿಂದೆ ನಾಗರಿಕ ಯುಗಕ್ಕೆ ಕಾಲಿಟ್ಟ. ದೇವರು, ಧರ್ಮ, ಕರ್ಮ ಎಂದೆಲ್ಲಾ ನಂಬುತ್ತ ಪಗೋಡಗಳನ್ನೂ ಪಿರಮಿಡ್ಡುಗಳನ್ನೂ ಕಟ್ಟುತ್ತಲೇ ಇನ್ನಷ್ಟು ಕಾಲ ಕಳೆದು, ಕೇವಲ ನಾಲ್ಕು ನೂರು ವರುಷಗಳ ಹಿಂದೆ ದಿಗಂತದಾಚೆ ದೃಷ್ಟಿ ನೆಟ್ಟು, ಕಾಲಲ್ಲಿ ಚಪ್ಪಲಿ ಮೆಟ್ಟಿದ. ಆಧುನಿಕ ಯುಗದಲ್ಲಿ ಕಾಲಿಟ್ಟು ನೂರೊಂದು ಆಡಂಬರಗಳನ್ನು ಹಚ್ಚಿಕೊಂಡು ನಲವತ್ತು ವರ್ಷಗಳ ಈಚೆಗೆ ಇಡೀ ಭೂಮಿಯನ್ನೇ ಮೆಟ್ಟನಿಂತ. ನೋಡ ನೋಡುತ್ತಿದ್ದಂತೆಯೇ ಇಂದು ಇಡೀ ಭೂಮಂಡಲವೇ ಸಮಸ್ಯೆಗಳ ಮಡುವಾಗಿ ನಿಂತಿದೆ. ಜನಸಂಖ್ಯೆಯ ಸಮಸ್ಯೆ, ಆಹಾರ ಸಮಸ್ಯೆ, ಶಕ್ತಿ ಸಮಸ್ಯೆ, ಕಚ್ಚಾ ಪದಾರ್ಥಗಳ ಸಮಸ್ಯೆ, ಪರಿಸರ ಸಮಸ್ಯೆ... ಒಂದಲ್ಲ ಎರಡಲ್ಲ. ಹಳೆಯ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತಿರುವಂತೆಯೇ ಹೊಸ ಸಮಸ್ಯೆಗಳು ಉದ್ಭವವಾಗುತ್ತಿವೆ. ಭೂಮಿಯ ಯಾವುದೋ ಒಂದು ಮೂಲೆಯಲ್ಲಿ ನಿನ್ನೆ ತಲೆದೋರಿದ ಸಮಸ್ಯೆ ಇಂದು ಇಡೀ ಪೃಥ್ವಿಯನ್ನೇ ಆಕ್ರಮಿಸುತ್ತಿದೆ. ಹಾಗೆ ನೋಡಿದರೆ, ಮಾನವನ ಇತಿಹಾಸದುದ್ದಕ್ಕೂ ಸಮಸ್ಯೆಗಳ ಸರಮಾಲೆಯೇ ಹೆಣೆದುಕೊಂಡು ಬಂದಿದ್ದು ನಮಗೆಲ್ಲ ಗೊತ್ತಿದೆ. ಅವುಗಳಿಗೆಲ್ಲ ಮನುಷ್ಯ ಆಗಾಗ ಪರಿಹಾರ ಹುಡುಕಿಕೊಂಡೆ ಪ್ರಗತಿಯ ಮೆಟ್ಟಿಲೇರುತ್ತ ಬಂದಿದ್ದಾನೆ. ಪ್ಲೇಗು, ಯುದ್ಧ, ಮಹಾಪೂರ, ಭೂಕಂಪ ಮುಂತಾದವನ್ನೆಲ್ಲ ಮಾನವ ಎದುರಿಸಿದ್ದಾನೆ. ಇವೆಲ್ಲ ಅಡತಡೆಗಳನ್ನೂ ನಿವಾರಿಸಿಕೊಂಡೇ ಆಧುನಿಕ ಯುಗಕ್ಕೆ ಕಾಲಿರಿಸಿದ್ದಾನೆ. ಇಂದಿನ ಸಮಸ್ಯೆಗಳೂ ಹಾಗಿದ್ದರೆ ತಾತ್ಕಾಲಿಕವೆ? ಅಥವಾ, ಇಂದಿನ ಸಮಸ್ಯೆಗಳು ಹಿಂದಿನದೆಲ್ಲಕ್ಕಿಂತ ಭಿನ್ನವಾಗಿರಬಹುದೆ? ಇತಿಹಾಸ ಮರುಕಳಿಸುತ್ತದೆಯೆಂದೇ ನಂಬಿಕೊಂಡು, ಸಮಸ್ಯೆಗಳಿಗೆ ಪರಿಹಾರ ಸಿಕ್ಕೇ ಸಿಗುತ್ತದೆಂದು ನಮ್ಮ ಪಾಡಿಗೆ ನಾವಿರುವುದು ಸರಿಯೆ?

೨

ಇತಿಹಾಸ ಮರುಕಳಿಸುವ ಸ್ಥಿತಿಯಲ್ಲಂತೂ ಇಲ್ಲ. ಇಂದಿನ ಸಮಸ್ಯೆಗಳೆಲ್ಲ ಒಟ್ಟಿಗೆ ವಕ್ಕರಿಸಿವೆ. ಒಂದೊಂದಾಗಿ ಪರಿಹರಿಸುವಂತೆಯೂ ಇಲ್ಲ. ಎಲ್ಲ ಒಂದಕ್ಕೊಂದು ಹೆಣೆದುಕೊಂಡಿವೆ. ಪ್ರತಿಯೊಂದೂ ವಿಶ್ವವ್ಯಾಪಿಯಾಗಿ ಕೂತಿದೆ ಬೇರೆ. ಇನ್ನೂ ಸಾಲದೆಂಬಂತೆ ಈ ಎಲ್ಲ ಸಮಸ್ಯೆಗಳ ಮೂಲ ಸ್ವರೂಪವೇ ಹಿಂದಿನದಕ್ಕಿಂತ ಭಿನ್ನವಾಗಿವೆ. ಹಿಂದಿನ ಎಲ್ಲ

ಸಮಸ್ಯೆಗಳೂ ದುಷ್ಟ ಉದ್ದೇಶಗಳಿಂದ ಸೃಷ್ಟಿಯಾಗಿದ್ದವು. ಇತರರನ್ನು ಹತ್ತಿಕ್ಕಿ ತಾನೇ ಏಕಾಧಿಪತಿಯಾಗಬೇಕೆಂದು ರಾಜರುಗಳು ದಂಡೆತ್ತಿ ಹೋಗುತ್ತಿದ್ದರು ಅಥವಾ ಜನತೆಯನ್ನು ಸಂತ್ರಸ್ತಗೊಳಿಸುವುದಕ್ಕಾಗಿಯೇ (ಅಂದಿನವರು ನಂಬಿದ್ದಂತೆ) ಪ್ಲೇಗು, ಮಹಾಪೂರ, ಭೂಕಂಪಗಳು ಸಂಭವಿಸುತ್ತಿದ್ದವು. ಇಂಥ 'ನೆಗೆಟಿವ್ ಕಾಸಸ್'ಗಳಿಂದಾಗಿಯೇ (ಋಣ–ಅನುಬಂಧ) ಸಂಕಷ್ಟ ಒದಗಿ ಬರುತ್ತಿದ್ದವು. ಆದರೆ ಈಗ ಹಾಗಲ್ಲ. ಮನುಷ್ಯ ತನ್ನವರ ಏಳಿಗೆಯ ಸದುದ್ದೇಶದಿಂದ ಮಾಡಿದ ಕೆಲಸಗಳೇ ಇಂದಿನ ಸಮಸ್ಯೆಗಳಿಗೆ ಮೂಲ ಕಾರಣಗಳಾಗಿವೆ. ಮಾನವ ದೈಹಿಕ ಶ್ರಮ ಉಳಿಸಲೆಂದೇ ಶಕ್ತಿಮೂಲಗಳಾದ ಪೆಟ್ರೋಲು–ಕಲ್ಲಿದ್ದಲುಗಳನ್ನು ಅಗೆಯಲಾರಂಭಿಸಿದ್ದು. ಯಾರೂ ಆ ಬಗ್ಗೆ ತಕರಾರು ಎತ್ತಿರಲಿಲ್ಲ. ಈಗ ಇದ್ದಕ್ಕಿದ್ದಂತೆ ಪರಿಸರ ಮಾಲಿನ್ಯ ಹಾಗೂ ಶಕ್ತಿ ಸಮಸ್ಯೆಯನ್ನು ನಾವು ಎದುರಿಸ ಬೇಕಾಗಿದೆ. ರೋಗ ರುಜಿನಗಳಿಂದ ಮನುಷ್ಯರನ್ನು ಬಚಾವು ಮಾಡಲೆಂದೇ ಔಷಧ ಸೃಷ್ಟಿ, ವೈದ್ಯಕೀಯ ಸಂಶೋಧನೆಗಳಾಗಿದ್ದುದರಲ್ಲಿ ಯಾವ ದುರ್ಬುದ್ಧಿಯೂ ಇರಲಿಲ್ಲ. ಈಗ ನೋಡಿದರೆ ಜನಸಂಖ್ಯೆ ಅಪಾರ ಬೆಳೆದಿದೆ. ಸಾಯುವವರೇ ಕಡಿಮೆಯಾಗಿದ್ದಾರೆ. ಮಾನವಕುಲದ ಒಳ್ಳೆಯದಕ್ಕೆಂದು ಏನೇ ಮಾಡಿದರೂ ಅದು ಶಾಪವಾಗಿಯೇ ಪರಿಣಮಿಸುವುದೇಕೆ? ಎಲ್ಲ ಮಾನವೀಯ ಆದರ್ಶಗಳನ್ನೂ ಧಾರ್ಮಿಕ ಹಿತವಚನಗಳನ್ನೂ ಪಾಲಿಸಿದರೂ ಈ ಬಗೆಯ ದುರಂತ ಕಟ್ಟಿಟ್ಟದ್ದಾದರೆ ಮುಂದೆ ಜೀವಿಸುವುದು ಹೇಗೆ? ಅನೂಚಾನವಾಗಿ ಬಂದ ಎಲ್ಲ ಸತ್ಕರ್ಮಗಳನ್ನೂ ತ್ಯಾಗ ಮಾಡುವ ಸ್ಥಿತಿ ಬಂತೇ ಈಗ?

೩

ಈ ಪ್ರಶ್ನೆಗೆ ಉತ್ತರ ಸಿಗಬೇಕಾದರೆ ಮಾನವ ಕುಲ ಬೆಳೆದು ಬಂದಿರುವ ವಿಧಿ ವಿಧಾನಗಳನ್ನು ಇನ್ನೊಮ್ಮೆ ಪರಿಶೀಲಿಸಬೇಕು. ತನ್ನವರ ಏಳಿಗೆಯೊಂದನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಮನುಷ್ಯ ಈವರೆಗೆ ತನ್ನ ಸುತ್ತಲ ನಿಸರ್ಗವನ್ನು ಕಡೆಗಣಿಸುತ್ತ ಬಂದದ್ದಂತೂ ನಿಜ. ನಿಸರ್ಗದ ಮೇಲೆ ಮನುಷ್ಯ ಯಾವ ಯಾವ ರೀತಿಯಲ್ಲಿ ಹತೋಟಿ ಸಾಧಿಸಿಕೊಂಡಿದ್ದಾನೆ ಎಂಬುದನ್ನೇ ಒಂದು ಮಹಾ ಸಾಧನೆಯೆಂಬಂತೆಯೇ ನಾವು ಹೆಮ್ಮೆಯಿಂದ ಬೀಗುತ್ತ ಹೇಳುತ್ತಿರುತ್ತೇವೆ; ಮಕ್ಕಳಿಗೆ ಬೋಧಿಸುತ್ತಿದ್ದೇವೆ. ಗುಡ್ಡಕ್ಕೆ ಸುರಂಗ ಕೊರೆದು ನದಿಯನ್ನು ತಿರುಗಿಸಿದ್ದೇವೆ; ಮೈ ಕೊರೆಯುವ ಹಿಮಖಂಡದಲ್ಲೂ ಹೆಲಿಕ್ಯಾಪ್ಟರ್ ಇಳಿಸಿದ್ದೇವೆ; ಡಿ.ಡಿ.ಟಿ. ಸಿಂಪಡಿಸಿ ಮಲೇರಿಯ ಕೀಟಾಣುಗಳನ್ನು ನಾಶ ಮಾಡಿದ್ದೇವೆ; ನೆಲದಾಳದ ಖನಿಜ ಕೊರೆದು ಅಣುಶಕ್ತಿ ಪಡೆದಿದ್ದೇವೆ; ಸಮುದ್ರದಾಳದಲ್ಲೂ ಕಿಂಡಿ ಕೊರೆದು... ಇತ್ಯಾದಿ ಸಾಹಸಗಳಿಂದಾಗಿ ನಿಸರ್ಗವನ್ನು ಇನ್ನೇನು ಸಂಪೂರ್ಣವಾಗಿ ನಮ್ಮ ದಾಸ್ಯಕ್ಕೆ ಒಳಪಡಿಸಿಕೊಂಡುಬಿಟ್ಟಿದ್ದೇವೆ. ಆದರೆ ನಾವು ತಿಳಿದುಕೊಂಡಂತೆ ನಿಸರ್ಗ ನಮಗೆ ಸೋತು ಶರಣಾಗಿಲ್ಲ. ಸರಿಪಡಿಸಲಾರದಷ್ಟು ವಿಕೃತವಾಗಿದೆ. ಅಪರೂಪಕ್ಕೆ ಅಲ್ಲಲ್ಲಿನ ಕೆಲವು ಭಾಗಗಳಲ್ಲಿ ಪ್ರಕೃತಿ ತನ್ನತನವನ್ನು ಉಳಿಸಿಕೊಂಡಿದ್ದರೂ, ಇನ್ನು ಹೆಚ್ಚು ದಿನ ಉಳಿಸಿಕೊಳ್ಳಲಾರದಷ್ಟು ಕ್ಷೀಣವಾಗಿದೆ. ಹಾಗಿದ್ದರೆ ಮಾನವಕುಲದ ವಿಕಾಸಪಥದಲ್ಲೇ ದೋಷವಿದೆಯೆ? ಇತರ ಪ್ರಾಣಿಗಳ ಜತೆ ಪೈಪೋಟಿ ನಡೆಸಿ ತನ್ನ ಬುದ್ಧಿಮತ್ತೆಯಿಂದಾಗಿ ಪ್ರಗತಿ ಹೊಂದಿದ ಈ ಪ್ರಾಣಿಗೆ ತನ್ನದೇ ಅಸ್ತಿತ್ವವನ್ನು ಉಳಿಸಿಕೊಳ್ಳುವಷ್ಟು ಬುದ್ಧಿಯಿಲ್ಲವೆ? ನಮ್ಮ ವಿಕಾಸಪಥವನ್ನು ಬದಲಿಸಬೇಕಾಗಿ ಬಂದಿದೆಯೆ?

ಏಕಮುಖ ಬೆಳವಣಿಗೆಯಿಂದಾಗಿಯೇ ಇಂದು ನಾವು ನೂರಾರು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆಂದೂ, ಬೆಳವಣಿಗೆಯನ್ನೇ ಸ್ಥಗಿತಗೊಳಿಸಿದರೆ ಎಲ್ಲ ಸರಿಹೋಗುತ್ತದೆಂದೂ ಕೆಲವರು ವಾದಿಸುತ್ತಾರೆ. ಇದಕ್ಕೆ ತದ್ವಿರುದ್ಧವಾದ ವಾದವೂ ಅದೇ ಗುರಿಯನ್ನೇ ಸೂಚಿಸುತ್ತದೆ. ಅಂದರೆ ನಿರಂತರವಾಗಿ ಸಂಶೋಧನೆಗಳೇ ಮುಂತಾದ ಎಲ್ಲ ರಂಗಗಳಲ್ಲೂ ಬೆಳವಣಿಗೆ ಮುಂದುವರಿದರೇನೇ ಇಂದಿನ ಸಮಸ್ಯೆಗಳಿಗೆಲ್ಲ ಪರಿಹಾರವೆನ್ನುವವರೂ ಇದ್ದಾರೆ. ಬೆಳವಣಿಗೆ ಅಥವಾ ಪ್ರಗತಿ ಎಂಬ ಪದಕ್ಕೆ ನಿಖರವಾದ ವ್ಯಾಖ್ಯೆಯನ್ನೇ ಕೊಡದೆ ಬೆಳವಣಿಗೆ ಬೇಕು ಅಥವಾ ಸಾಕು ಎನ್ನುವುದು ಅರ್ಥಹೀನವಾಗುತ್ತದೆ. ಜನಸಂಖ್ಯೆಯ ಬೆಳವಣಿಗೆ ಸಾಕು ಎಂಬುದನ್ನಂತೂ ಎಲ್ಲರೂ ಒಪ್ಪುತ್ತಾರೆ. ಹಾಗೆಯೇ ಆರೋಗ್ಯ ವಿಕಾಸಕ್ಕಾಗಿ ವೈದ್ಯಕೀಯ ಸಂಶೋಧನೆಗಳು ಇನ್ನಷ್ಟು ಬೆಳವಣಿಗೆಯಾಗಬೇಕೆನ್ನುವುದೂ ನಿರ್ವಿವಾದದ ಸಂಗತಿ. ಆದರೆ ಹಾಗೆ ಮಾಡಿದರೆ ಜನಸಂಖ್ಯೆಯೂ ಮತ್ತೆ ಹೆಚ್ಚುತ್ತ ಹೋಗುತ್ತದೆ. ಸಂಪನ್ಮೂಲಗಳ ಬಳಕೆಯ ಕುರಿತೂ ಇಂಥ ವಿರೋಧಾಭಾಸಗಳು ಎದುರಾಗುತ್ತವೆ. ಈ ರಂಗದಲ್ಲಿ ಬೆಳವಣಿಗೆ ಹೆಚ್ಚಾದರೆ ಶ್ರೀಮಂತ ರಾಷ್ಟ್ರಗಳಲ್ಲಿ ಪೋಲು ಮಾಡುವ ಪ್ರವೃತ್ತಿಯೂ ಬೆಳೆಯುತ್ತದೆ. ಹಾಗೆಂದು ಸಂಪನ್ಮೂಲಗಳ ಬೆಳವಣಿಗೆ ಸ್ಥಗಿತಗೊಳಿಸಿದರೆ ಬಡರಾಷ್ಟ್ರಗಳು ಇನ್ನಷ್ಟು ತತ್ತರಿಸಬೇಕಾಗುತ್ತದೆ. ಈ ಗೋಜನ್ನು ನಿವಾರಿಸಿಕೊಳ್ಳಬೇಕೆಂದರೆ ನಿಸರ್ಗದಲ್ಲಿ ದೊರೆಯುವ ಉದಾಹರಣೆಯನ್ನೇ ಬಳಸಿಕೊಂಡು ಬೆಳವಣಿಗೆಯ ಅರ್ಥ ಹುಡುಕ ಬೇಕಾಗುತ್ತದೆ. ನಿಸರ್ಗದ ಜೀವರಾಶಿಗಳಲ್ಲಿ ಎರಡು ಬಗೆಯ ಬೆಳವಣಿಗೆ ಕ್ರಮವನ್ನು ನಾವು ನೋಡಬಹುದು. ಒಂದು ಏಕತಾನದ ಬೆಳವಣಿಗೆ, ಇನ್ನೊಂದು ಜೈವಿಕ ಬೆಳವಣಿಗೆ.

ಏಕತಾನದ ಬೆಳವಣಿಗೆ ಕ್ರಮವೆಂದರೆ ಪ್ರತಿಯೊಂದು ಜೀವಕೋಶವೂ ಒಡೆದು ಒಂದಕ್ಕೆ ಎರಡಾಗುವುದು. ಒಂದರಿಂದ ಎರಡು, ಎರಡರಿಂದ ನಾಲ್ಕು, ನಾಲ್ಕರಿಂದ ಎಂಟು... ಹೀಗೇ ಕೋಟ್ಯಂತರ ಜೀವಕೋಶಗಳು ಏಕರೂಪದಲ್ಲಿ ಬೆಳೆಯುವುದು. ತಾಸಿಗೊಮ್ಮೆ ಹೀಗೆ ದ್ವಿಗುಣಿತವಾಗುತ್ತ ಹೋದರೆ ಒಂದು ಜೀವಕೋಶ ೨೪ ತಾಸುಗಳಲ್ಲಿ ೧೭೦ ಲಕ್ಷ ಜೀವಕೋಶಗಳನ್ನೂ ೪೮ ತಾಸುಗಳಲ್ಲಿ ೨೮೦,೦೦೦,೦೦೦,೦೦೦,೦೦೦ ತದ್ರೂಪಿ ಜೀವಕೋಶಗಳನ್ನೂ ಉತ್ಪಾದಿಸಬಲ್ಲದು. ಕ್ಯಾನ್ಸರ್ ಕೋಶಗಳು ಬೆಳೆಯುವ ವಿಧಾನ ಇದೇ. ಜೈವಿಕ ಬೆಳವಣಿಗೆ ಬೇರೆ ಬಗೆಯದು: ತಾಯಿಯ ಭ್ರೂಣದಲ್ಲಿ ಶಿಶುವಿನ ಜೀವಕೋಶ ಬೆಳೆದಂತೆ, ಒಂದೊಂದು ಬಗೆಯ ಕೋಶಕ್ಕೂ ಒಂದೊಂದು ಬಗೆಯ ಸ್ವರೂಪ; ವಿಭಿನ್ನ ಕೆಲಸ. ಒಂದು ಮೆದುಳಿನ ಕೋಶವಾಗಿ ವಿಭಜನೆಯಾಗುತ್ತ ಬೆಳೆದರೆ, ಇನ್ನೊಂದು ಮೂಳೆಯ ಕೋಶವಾಗಿ ಬೆಳೆಯುವುದು. ಕೆಲವು ಕೋಶಗಳಿಗೆ ಸದಾ ಬೆಳವಣಿಗೆ, ಇನ್ನು ಕೆಲವಕ್ಕೆ ಒಮ್ಮೆ ಮಾತ್ರ ಬೆಳವಣಿಗೆ. ಉದಾಹರಣೆಗೆ ಮಾನವ ಶರೀರದ ಬಹಳಷ್ಟು ಭಾಗ ಸದಾ ಪುನರ್ ನಿರ್ಮಾಣವಾಗುತ್ತಲೇ ಇರುತ್ತದೆ. ಮಿದುಳಿನ ನರಕೋಶಗಳು ಮಾತ್ರ ಒಮ್ಮೆ ಬೆಳೆದು ಕೆಲಸ ಪ್ರಾರಂಭಿಸಿದ ಮೇಲೆ ಮತ್ತೆ ಚಿಗುರುವುದಿಲ್ಲ. ಸತ್ತರೆ ಮತ್ತೆ ನಿರ್ಮಾಣವಾಗುವುದಿಲ್ಲ. ಆದರೆ ದೇಹದ ಉಳಿದ ಅಂಗಗಳ ಜೀವಕೋಶಗಳು ಹುಟ್ಟುತ್ತ ಸಾಯುತ್ತಿರುತ್ತವೆ. ಸುಮಾರು ಪ್ರತಿ ಏಳು ವರ್ಷಗಳಿಗೊಮ್ಮೆ ಶರೀರ ಕಣಕಣವಾಗಿ ಪುನರ್ನಿರ್ಮಾಣವಾಗಿರುತ್ತದೆ. ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ನಾವು ಹಾಕಿಕೊಳ್ಳ ಬೇಕಾದ ಬೆಳವಣಿಗೆಯ ವಿಧಾನ ಕ್ಯಾನ್ಸರ್‌ನಂತಿರಬಾರದು. ಮಾನವ ಚಟುವಟಿಕೆಯ ಕೆಲವು ರಂಗಗಳಲ್ಲಿ ಬೆಳವಣಿಗೆ ಸಂಪೂರ್ಣ ಸ್ಥಗಿತವಾಗಿ, ಕೆಲವು ರಂಗಗಳಲ್ಲಿ ಹಂತ

ಹಂತದ ಬೆಳವಣಿಗೆಯಾಗುವ ಜೈವಿಕ ವಿಧಾನ ನಮ್ಮದಾಗಬೇಕು. ಇಂದಿನ ಸಮಾಜ ಮೊದಲಿನಂತಿಲ್ಲ. ಇಂದು ಜಗತ್ತಿನ ಯಾವ ಭಾಗವೂ, ಯಾವ ಚಟುವಟಿಕೆಯೂ ಇತರರಿಗೆ ಸಂಬಂಧವಿಲ್ಲದಂತೆ ಕಾರ್ಯ ನಿರ್ವಹಿಸುವುದು ಸಾಧ್ಯವಿಲ್ಲ. 'ವಸುಧೈವ ಕುಟುಂಬಕಮ್' ಎಂಬ ಮಾತೂ ಹಳತಾಗಿ ಈಗ 'ವಸುಧೈವ ಶರೀರಕಮ್' ಎನ್ನಬೇಕಾದ ಹಂತದಲ್ಲಿ ನಾವಿದ್ದೇವೆ. ಇಡೀ ಮಾನವಕುಲವೇ ಒಂದು ಸಜೀವ ಶರೀರವೆಂಬಂತೆ ಒಟ್ಟಾಗಿ ಸಮಸ್ಯೆಗಳೊಂದಿಗೆ ಸೆಣಸಾಡಬೇಕಾಗಿದೆ.

೫

### ಮಾಸ್ಟರ್ ಪ್ಲಾನ್

ನಿಸರ್ಗದಲ್ಲಿ ಕಾಯಿಯೊಳಗಿನ ಬೀಜ ಸಸಿಯಾಗುವಾಗ ಅಥವಾ ತಾಯಿಯೊಳಗಿನ ಭ್ರೂಣ ಶಿಶುವಾಗುವಾಗ ಪ್ರತಿ ಜೀವಾಣುವಿನಲ್ಲೂ ಒಂದು ನಿರ್ದಿಷ್ಟ ಬೆಳವಣಿಗೆಯ ಸೂತ್ರ (ಮಾಸ್ಟರ್ ಪ್ಲಾನ್) ಅಡಕವಾಗಿರುತ್ತದೆ. ಈ ಸೂತ್ರದ ಪ್ರಕಾರವೇ ಯಾವ ಯಾವ ಕೋಶಗಳು ಎಷ್ಟೆಷ್ಟು ಬೆಳೆದು ಎಂಥೆಂಥ ಅಂಗಗಳಾಗಿ ಕಾರ್ಯನಿರ್ವಹಿಸಬೇಕೆಂಬ ಸೃಷ್ಟಿ ನಿಯಮವಿದೆ. ಮಾನವಕುಲವೇ ಒಂದು ಸಜೀವ ಶರೀರವೆಂಬಂತೆ ವ್ಯವಸ್ಥಿತವಾಗಿ ಬೆಳೆಯಬೇಕಾದರೆ ಇಂಥದೊಂದು ಮಾಸ್ಟರ್ ಪ್ಲಾನ್ ತೀರ ಅವಶ್ಯ. ಈವರೆಗೆ ನಾವು ಅನುಸರಿಸಿದ್ದು ಕ್ಯಾನ್ಸರ್ ರೂಪದ ಏಕತಾನದ ಬೆಳವಣಿಗೆ ವಿಧಾನ (ಇಡೀ ಜಗತ್ತಿಗೇ ಇಂದು ಕ್ಯಾನ್ಸರ್ ಹಬ್ಬುತ್ತಿದೆ; ಮನುಷ್ಯನೇ ಕ್ಯಾನ್ಸರ್ ಕೋಶ ಎಂದು ಎ. ಗ್ರೇಗ್ ಎಂಬಾತ ೧೯೫೫ರಲ್ಲಿ ಹೇಳಿದ್ದ). ಈ ವಿಧಾನದ ಪ್ರಗತಿಪಥವನ್ನು ಬಿಟ್ಟುಕೊಟ್ಟು ಜೈವಿಕ ವಿಧಾನದ ಬೆಳವಣಿಗೆಯನ್ನು ಅನುಸರಿಸಬೇಕೆಂದರೆ ಪ್ರತಿಯೊಬ್ಬ ಮಾನವನೂ ತನ್ನ ಬದುಕಿನಲ್ಲಿ ಅಷ್ಟಿಷ್ಟು ಮಾರ್ಪಾಡು ಮಾಡಿಕೊಳ್ಳಲೇಬೇಕು. ನಮ್ಮದು ಬಡರಾಷ್ಟ್ರವಾಗಿರಲಿ, ಧನಿಕ ದೇಶವಾಗಿರಲಿ, ಪ್ರಕೃತಿಯನ್ನು ದೋಚುವ ದುಂದು ಪ್ರವೃತ್ತಿಯನ್ನು ಕಡಿಮೆ ಮಾಡಲೇಬೇಕು. ರಾಷ್ಟ್ರದ ಗಡಿ ಸಂರಕ್ಷಣೆಗಾಗಿ ಪ್ರತಿ ವರ್ಷ ಮಾನವಕುಲ ವೆಚ್ಚ ಮಾಡುವ ೫೫೦೦ ಶತಕೋಟಿ ರೂಪಾಯಿಗಳ ಧನಧಾರೆ ನಿಲ್ಲಬೇಕು. ರಾಷ್ಟ್ರೀಯ ಭದ್ರತೆಯ ವ್ಯಾಖ್ಯೆ ಬದಲಾಗಬೇಕು. ಮಿಲಿಟರಿಯ ಮೂಲಕವೇ ದೇಶದ ಸಂರಕ್ಷಣೆಯಾದೀತೆಂಬ ಧೋರಣೆ ಬದಲಾಗಬೇಕು. ಇಂದು ಶಕ್ತ ರಾಷ್ಟ್ರಗಳೂ ತತ್ತರಿಸುತ್ತಿರುವುದು ಗಡಿಯಾಚೆ ಕೂತಿರುವ ವೈರಿಯ ಭಯದಿಂದಲ್ಲ; ಗಡಿಯೊಳಗೇ ಕುದಿಯುತ್ತಿರುವ ಪ್ರಜಾಕೋಟಿಯ ಸಮಸ್ಯೆಗಳಿಂದ; ಶುದ್ಧ ಗಾಳಿಯ ಸಮಸ್ಯೆ, ನಿರುದ್ಯೋಗ ಸಮಸ್ಯೆ, ಸಂಪನ್ಮೂಲ ಸಮಸ್ಯೆ, ಮಳೆ ಬೆಳೆಯ ಸಮಸ್ಯೆ....

೬

### ಏಕೈಕ ಭೂಮಿ

ಕಂಗೆಟ್ಟ ಭೂಮಿಯನ್ನು ಮತ್ತೆ ಸುಸ್ಥಿತಿಗೆ ತರಬೇಕೆನ್ನುವಲ್ಲಿ ಒಂದು ಬಹು ಮೂಲ್ಯ ಕಾರಣವಿದೆ. ಇಡೀ ವಿಶ್ವದಲ್ಲಿ ಜೀವಿಗಳಿರಬಹುದಾದ ಬೇರೆ ಯಾವ ಗ್ರಹಗಳೂ ನಮ್ಮ ಗಮನಕ್ಕೆ ಈವರೆಗೆ ಬಂದಿಲ್ಲ. ಚಂದ್ರನ ಮೇಲೆ ಇಳಿದು ಸ್ವತಃ ನೋಡಿಯಾಯಿತು. ಬರೀ ಬರಡೋ ಬರಡು; ಬುಧ, ಮಂಗಳ, ಗುರು, ಶನಿಗ್ರಹಗಳ ವರೆಗೂ ಯಂತ್ರದೂತರನ್ನು ಕಳಿಸಿಯಾಯ್ತು. ಅಲ್ಲೆಲ್ಲೂ ಜೀವದ ಸುಳಿವಿಲ್ಲ. ದೂರದರ್ಶಕದ ಮೂಲಕ, ರೇಡಿಯೋ ಸಂಕೇತಗಳ ಮೂಲಕ ನಮ್ಮ ಸುತ್ತಲ ಎಲ್ಲ ಗ್ರಹತಾರೆಗಳನ್ನೂ ವೀಕ್ಷಿಸಿಯಾಯಿತು.

ಸಂದೇಶ ಕಳಿಸಿಯಾಯ್ತು. ಓಗೊಡುವವರು ಮಾತ್ರ ಯಾರೂ ಕಂಡುಬಂದಿಲ್ಲ. ಜೀವರಾಶಿ ತುಂಬಿ ತುಳುಕುವ, ತುಂಬ ಅಪರೂಪದ ಏಕಾಕಿ ಭೂಮಿ ನಮ್ಮದು. ಇದನ್ನು ಉಳಿಸಿ ಕೊಳ್ಳಬೇಕು.

೧. 'ಕತ್ತರಿ ರಸ್ತೆಯಲ್ಲಿ ಮಾನವಕುಲ' (ಮ್ಯಾನ್‌ಕೈಂಡ್ ಆಟ್ ದಿ ಟರ್ನಿಂಗ್ ಪಾಯಿಂಟ್) ಗ್ರಂಥದ ವಿಚಾರ ಸರಣಿ ಇದು.

೨. ಲೆಸ್ಟರ್ ಬ್ರೌನ್. 'ಸಮತೋಲ ಸಮಾಜದೆಡೆ ಆರು ಹೆಜ್ಜೆಗಳು' (ಸಿಕ್ಸ್ ಸ್ಟೆಪ್ಸ್ ಟು ಎ ಸಸ್ಟೈನಬಲ್ ಸೊಸೈಟಿ), ೧೯೮೨.

**ವಿಸ್ತರಣೆ– ಅಭ್ಯಾಸಕ್ಕಾಗಿ**

ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಪ್ರಗತಿ ಎನ್ನವುದರ ವಿವರಣೆಯನ್ನು ಈವರೆಗೆ ನಾವು ಗೃಹೀತವಾಗಿ ತೆಗೆದುಕೊಂಡಿದ್ದೇವೆ. ಆದರೆ ಪ್ರಗತಿಯ ನಿಜವಾದ ಮುಖ ಯಾವುದು ಎಂಬುದನ್ನು ಈ ಲೇಖನ ಹೇಳಲು ಉದ್ದೇಶಿಸಿದೆ. ಈ ಹಿನ್ನೆಲೆಯಲ್ಲಿ ಇದಕ್ಕೆ ನಮ್ಮ ಪ್ರತಿಕ್ರಿಯೆ ಏನು?

೨. ಇಲ್ಲಿ ಮಂಡಿತವಾಗಿರುವ ವಸ್ತುಸ್ಥಿತಿಯನ್ನು ವಿವರಗಳ ಮಟ್ಟಿಗೆ ಒಪ್ಪುತ್ತೇನೆ. ಆದರೆ ನಿರ್ಣಯವನ್ನು ಒಪ್ಪಲು ಸಿದ್ಧವಿಲ್ಲ ಎನ್ನುವುದಾದರೆ ಬೇರೊಂದು ನಿರ್ಣಯ ಏನೆಂಬುದನ್ನು ಚರ್ಚಿಸಬೇಕು.

೩. ವಸ್ತುಸ್ಥಿತಿಯ ವಿವರಗಳನ್ನು ಮಾತ್ರವಲ್ಲದೆ ನಿರ್ಣಯಗಳನ್ನೂ ಒಪ್ಪುತ್ತೇನೆ.

ಪ್ರಸ್ತುತ ಸಾಮಾಜಿಕ ಹಾಗೂ ಆರ್ಥಿಕ ಸನ್ನಿವೇಶಗಳಲ್ಲಿ ಯಾವುದನ್ನು ಪ್ರಗತಿ ಎಂದು ಕರೆಯಲಾಗುತ್ತಿದೆಯೋ ಅದರ ವಕ್ತಾರರು / ಪ್ರತಿಪಾದಕರು ಈ ಲೇಖನಕ್ಕೆ ಹೇಗೆ ಪ್ರತಿಕ್ರಿಯಿಸಬಹುದು? ಚರ್ಚಿಸಬೇಕು.

ವಾದವೊಂದನ್ನು ಮಂಡಿಸಲು ಬೇರೆ ಬೇರೆ ವಿಧಾನಗಳನ್ನು ಅನುಸರಿಸುವುದುಂಟು. ನಗರದಲ್ಲಿ ಹೆಚ್ಚಾಗುತ್ತಿರುವ ವಾಹನಗಳ ದಟ್ಟಣೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಮೇಲಿನ ಅಂಶಗಳನ್ನು ಗಮನದಲ್ಲಿರಿಸಿಕೊಂಡು ನಿಮ್ಮ ವಾದವನ್ನು ಪರ / ವಿರೋಧವಾಗಿ ಮಂಡಿಸಿ.

## ೫.೨.೪. ಪಠ್ಯ ೪

## ಮಿಲ್ಲು ಮತ್ತು ಹಕ್ಕಿ

– ವೈದೇಹಿ

ಅಷ್ಟರವರೆಗೂ ಎಷ್ಟು ಚೆನ್ನಾಗಿತ್ತು ಅಲ್ಲಿನ ವಾತಾವರಣ: ಊರಿಂದ ತುಸು ದೂರವಿತ್ತು. ಯಾವ ಹಾಳು ರಗಳೆಯಿರಲಿಲ್ಲ. ಎಷ್ಟೆಲ್ಲ ಹಕ್ಕಿಗಳು ಬಂದು ಚಿಲಿಪಿಲಿ ಮಾಡುತ್ತಿದ್ದವು. ಆ ಹಕ್ಕಿ. ಇದು ಈ ಹಕ್ಕಿ, ಉದ್ದಕೊಕ್ಕಿನ ಹಕ್ಕಿ, ಗಿಡ್ಡ ಪುಚ್ಚದ ಹಕ್ಕಿ, ಕೆಂಪುಗಣ್ಣಿನ ಹಕ್ಕಿ, ಕಪ್ಪು ಕೊರಳಿನ ಹಕ್ಕಿ. ಆಹಾ! ಪನ್ನೀರ ಹಕ್ಕಿ ಮತ್ತು ಇದು ಯಾವ ಹಕ್ಕಿ, ಏನಿದರ ಹೆಸರು, ಅದರ ಊಟ, ಹಾರಾಟ, ಗೂಡು, ಮರಿಗಳು? ಹಕ್ಕಿಗಳನ್ನಾದರೂ ಹೆಸರಿಸಬೇಡಿರೋ. ಅವಷ್ಟಕ್ಕೇ ಅವನ್ನು ಬಿಟ್ಟುಬಿಡಿ. ಹೆಸರಿಟ್ಟ ಕೂಡಲೇ ಅವು ಬೇರೆಯಾಗಿ ಕಾಣುತ್ತವೆ. ಅವುಗಳ ಊಟ, ಹಾರಾಟ, ಗೂಡು ಮರಿಗಳನ್ನು ತಿಳಿಯುತ್ತ ಹೋದಂತೆ ನಿಗೂಢತೆ

ತೆಳುವಾಗುತ್ತ ಹೋಗುತ್ತದೆ. ಮೆರಿಗೋಲ್ಡ್, ಮಾವು, ದಾಸವಾಳ, ಕರವೀರ, ಚಿಕ್ಕು – ಎಲ್ಲದರ ಮೇಲೊಂದು ಲೋಕ, ಸುತ್ತೊಂದು ಲೋಕ, ಲೋಕಗಳ ನಡುವೆ ಕಿನ್ನರ ಲೋಕ. ಮೃದು ರೇಷ್ಮೆಯಂತಹ ಬೆಳಗು. ದುಡಿದು ಮನೆಗೆ ಬಂದವರಿಗೆ ಸಾಂತ್ವನಗೊಳಿಸುವ ಸಂಜೆ. ಬೀಸುವ ಗಾಳಿ, ಬೇಡದ ಶಬ್ದವಿಲ್ಲ; ಗಲಾಟೆಯಿಲ್ಲ. ಪ್ರಶಾಂತತೆ ಅಲ್ಲಿ ಒಟ್ಟು ಸೇರಿ ನಿಂತಂತೆ ಆ ವಠಾರ. ಆದರೆ ಇದೆಲ್ಲ ಹೀಗಿತ್ತು ಎಂದು ಅರಿವಾದದ್ದಾದರೂ ಯಾವಾಗ? ಅಲ್ಲೊಂದು ಮಿಲ್ಲು ಬಂದು ಘೋ ಎಂದು ಒರಟುತ್ತ ಕೆಲಸ ಸುರುಮಾಡಿದಾಗ, ಈ ಶಬ್ದದ ಅಡಿಯಲ್ಲಿ ಮತ್ತೇನೂ ಕೇಳದೆ ಕೇವಲ ಅದೊಂದೇ ಕೇಳತೊಡಗಿದಾಗ, ಅಲ್ಲಿನ ಅರೆವಾಸಿ ಜನ ಹೌಹಾರಿದರು. ಇದೆಲ್ಲಿಂದ ಬಂತು ಗ್ರಹಚಾರ! ಊರೊಳಗೆಲ್ಲಿಯೂ ಜಾಗವಿರಲಿಲ್ಲವೇ ಇವನಿಗೆ? ಇದು ಮುಂದುವರಿಯಲು ಬಿಡಬಾರದು. ಹೋಗಿ ಸರೀ ಗಲಾಟೆ ಮಾಡಬೇಕು. ಕೇಳದಿದ್ದರೆ ಸ್ಟೇ ಆರ್ಡರ್ ತರಬೇಕು. ಛೇ! ಒಂದು ಓದುವ ಹಾಗಿಲ್ಲ, ಬರೆಯುವ ಹಾಗಿಲ್ಲ. ಪರೀಕ್ಷೆಗೆ ತಯಾರಾಗುವ ಮಕ್ಕಳ ಕಷ್ಟವಂತೂ ಹೇಳಿ ಸುಖವಿಲ್ಲ. ಹೀಗೆ ದಿನಾ ಚರ್ಚೆಯಾಗುವುದೆಲ್ಲ ಸಮ. ಆದರೆ ಮುಂದೊತ್ತುವವರು ಯಾರು? ಯಾರಿಗೂ ಬಿಡುವಿರಲಿಲ್ಲ. ಆಫೀಸಿಗೆ ಹೋಗುವವರು ಆಫೀಸಿಗೆ ಹೋದರು. ಕಾಲೇಜಿಗೆ ಹೋಗುವವರು ಕಾಲೇಜಿಗೆ ಹೋದರು. ಮನೆಯಲ್ಲಿ ಉಳಿದವರು ಕೆಲಸಗಳಲ್ಲಿ ಮುಳುಗಿದರು. ಹೆಂಗಸರು ಮಿಲ್ಲಿನ ಬಾಗಿಲಿಗೆ ಹೋಗಿ ಮಾತಾಡುವ ಪಂಚಾತಿಕೆಯಂತೂ ಖಂಡಿತ ಇಲ್ಲ. ಅದು ಎಷ್ಟು ಮರ್ಯಾದಸ್ತ ಪ್ರದೇಶವೆಂದರೆ ಗಂಡಸರಿದ್ದಂತೆ ಅಂಗಡಿ ಬಾಗಿಲಿಗೆ ಹೆಂಗಸರು ಹೋಗಿ ಮನೆಗೆ ಬೇಕಾದ್ದನ್ನು ತರುವುದೂ ಕೂಡ ಮರ್ಯಾದೆಯ ಪ್ರಶ್ನೆಯಾಗಿತ್ತು ಎಂದ ಮೇಲೆ? ಅಂಥಲ್ಲಿಯೂ ಗಂಡಸರು ಮನೆಯಲ್ಲಿಲ್ಲದ ವೇಳೆ, ಎಂದರೆ ಸಂಜೆ ಹೊರಗೆಲ್ಲೋ ಹೋಗಿದ್ದ ವೇಳೆ ನಿಧಾನ ಕತ್ತಲಾಗುತ್ತಿರುವಾಗ ಇಬ್ಬರು ಮೂವರು ಹೆಂಗಸರು ಮೆಲ್ಲಗೇ ಮಿಲ್ಲಿಗೆ ಹೋದರು. ರಾತ್ರಿ ಎಂಟರವರೆಗೂ ಒರಲುವುದೇ ಉದ್ಯೋಗ ಮಾಡಿಕೊಂಡ ಆ ಮಿಲ್ಲಿಗೆ ಯಜಮಾನ ನೌಕರ ಎಲ್ಲ ಒಬ್ಬನೇ ಇದ್ದ. ಒಳಗೆ ಇಣುಕಿದರೆ ಎರಡು ಮೂರು ಬಗೆಯ 'ಮಿಶನು'; ಒಂದನ್ನಂತೂ ಹುಗಿದು ಸಜ್ಜಾಗಿ ಅತ್ತಿತ್ತ ಅಲುಗಾಡದಂತೆ ಸಿಮೆಂಟು ಹಾಕಿ ಭದ್ರಗೊಳಿಸಿದ್ದ. ಸಕ್ಕರೆ, ಮೆಣಸಿನ ಪುಡಿ ಇತ್ಯಾದಿಗಳಿಗೆ ಒಂದು ಹಿಟ್ಟಿಗೆ ಒಂದು – ಹೀಗೆ. ಇವರನ್ನು ಕಂಡದ್ದೇ ಗಿರಾಕಿಗಳನ್ನು ಕಂಡ ಸಂತೋಷದಲ್ಲಿ ಮಾತಿಗಾರಂಭಿಸಿದ. ಕೈ ಮುಗಿದು 'ಕೂರಲು ಹೇಳುತ್ತಿದ್ದೆ, ಧೂಳು' ಅನ್ನುತ್ತ ಕೈ ತಿಕ್ಕಿಕೊಂಡ. ಅವನ ಅಂದಾಜು ಇನ್ನೂ ಇದೆ. ಇದು ಸಣ್ಣ ಮಟ್ಟಿನಲ್ಲಿ ಶುರು ಮಾಡಿದ್ದಷ್ಟೇ. ಪ್ರದೇಶದವರೆಲ್ಲರ ಸಹಕಾರ ಇದ್ದರೆ ಗೆದ್ದೇನು. ತಾನು ಹೊರಗಿಂದ ಆರ್ಡರು ತರುವ ತಲೆಬಿಸಿ ಇಲ್ಲ ಅಂತೆಲ್ಲ ಅಂಕಿ ಸಂಖ್ಯೆ ಸಮೇತ ವಿವರಿಸಿದ. ಆದರೂ ಆ ಕ್ಷಣಕ್ಕೂ ಮಿಲ್ಲನ್ನು ನಿಲ್ಲಿಸಲಿಲ್ಲ. ಅದರ ಕೂಗಿಗೆ ಪೈಪೋಟಿಯಾಗಿ ಕೂಗಿ ಹೇಳಿದ. ನೀವೆಲ್ಲ ಇದ್ದರೆ ನನ್ನ ಕುಟುಂಬ ಬದುಕುತ್ತದೆ. ಅಷ್ಟು ಉಪಕಾರ ಮಾಡಿ, ಬಂದ ಹೆಂಗಸರ ಮನ ಕರಗಿತು. ಆದರೂ ತಮ್ಮ ಸಂಕಟ ಬೇರೆಯೇ. 'ನೋಡಪ್ಪ, ಹೀಗೆ ಹೀಗೆ, ಗಲಾಟೆಯಲ್ಲಿ ನನ್ನ ತಲೆಯೆಲ್ಲ ಸಿಡಿದು ಹಾರುತ್ತಿದೆ. ನನ್ನ ಮನೆಯವರಿಗಂತೂ ಮೊದಲೇ ಬಿ.ಪಿ'.. 'ಅಷ್ಟೆಯಾ, ಈ ನಮೂನೆ ಹಿಟ್ಟಿನ ಗಾಳಿ ಉಸಿರಾಡಿದರೆ ದಮ್ಮು ಸುರುವಾಗದೇ? ನಮ್ಮನೆಯ ಡಬ್ಬಿಯ ಮೇಲೆಲ್ಲ ಹಿಟ್ಟಿನ ಧೂಳು. ಎಷ್ಟು ಒರೆಸಿದರೂ ಮತ್ತೆ ಮತ್ತೆ, ಅದೇ ಕೆಲಸ ಮಾಡುತ್ತ ಇರುವುದಾ ಹಾಗಾದರೆ ನಾನು?' 'ಆ ಮೆಣಸಿನಹುಡಿ ಮಾಡುವ ದಿನ! ಘಾಟೇ ಘಾಟು! ನನಗಂತೂ ಸೀನಿ ಸೀನಿ ಸಾಕಾಯಿತು' – 'ಏನೇ ಇರಲಿ, ನೀನು ಬೇರೆ ಯಾವುದಾದರೂ ಜಾಗ

ನೋಡಿಕೊ. ಇಲ್ಲಂತೂ ಬೇಡ.' ವಿನಯದಿಂದ, ಸಾಧ್ಯವಾದಷ್ಟೂ ಕೂಗಿ ಹೇಳಿದರೆ, ಅವನೂ ವಿನೀತನಾಗಿಯೇ ಕೇಳಿಕೊಂಡ. ಮಾತಾಡುವ ಹೊತ್ತಿಗಾದರೂ ಮಿಲ್ಲು ನಿಲ್ಲಿಸು ಎಂದರೆ ಕೇಳಲಿಲ್ಲ. ಅದೆಷ್ಟೋ ಕೇಜಿ ಗೋಧಿಹಿಟ್ಟು ಈಗಲೇ ಮಾಡಬೇಕಾಗಿದೆ. ಆರ್ಡರು ತೆಗೆದುಕೊಂಡು ಬಂದಿದ್ದಾನೆ. ಯಾವುದೋ ಅಂಗಡಿಗೆ, ಒಂದು ನಿಮಿಷವೂ ಬಿಡುವಿಲ್ಲ. ಗಾಳಿಯಲ್ಲಿ ಧೂಳು ಬರುತ್ತದೆಯೇ. ಅಮ್ಮ, ಕ್ಷಮಿಸಿ, ಮಾಡಿನ ಸಂದಿಯಲ್ಲಿ ಒಣಹುಲ್ಲು ಚವುಂಡೆ ತುಂಬಿಸುತ್ತೇನೆ. ಮತ್ತೆ ಸೀಲಿಂಗ್ ಹಾಕಿ ಬಂದು ಮಾಡುವ ಹಾಗಿಲ್ಲ. ಹಾಗೆ ಮಾಡಿದರೆ ಲೈಸನ್ಸ್ ರದ್ದಾಗುತ್ತೆ. ಸೈಲೆನ್ಸರ್ ಹಾಕಬೇಕೆಂದಿರಾ? ಛೇ ಛೇ! ಅದು ಸಾಧ್ಯವಿದ್ದಿದ್ದರೆ ನಾನು ಹಾಕದೆ ಬಿಡುತ್ತಿದ್ದೆನೆ? ಏನೆಂದಿರಿ? ರೆಸಿಡೆನ್ಸಿಯಲ್ ಏರಿಯಾದಲ್ಲಿ ಇದನ್ನು ಇಡಕೂಡದೇ? ಮತ್ತೆಲ್ಲಂತೆ ಇಡುವುದು?.... ಕೋರ್ಟಿಗೆ ಹೋಗುತ್ತೀರಾ? ದಯವಿಟ್ಟು ಹಾಗೆಲ್ಲ ಮಾತಾಡಬೇಡಿ. ಯಾರೋ ಹೋಕಿಲ್ಲದ ಗಂಡಸರು ನಿಮ್ಮ ತಲೆಯೊಳಗೆ ಇದನ್ನೆಲ್ಲ ತುಂಬಿಸಿ ಕಳಿಸಿದ್ದಾರೆ. ಪಾಪ, ಹೆಂಗಸರು. ನಿಮಗದೆಲ್ಲ ಏನು ಗೊತ್ತು? ಕೇಳಿ ಅಮ್ಮ, ಕೋರ್ಟು ಕಛೇರಿ ಎಲ್ಲ ನಮ್ಮ ನಿಮ್ಮಂಥ ಸಭ್ಯಸ್ಥರಿಗೆ ಅಲ್ಲ. ಅಷ್ಟಕ್ಕೂ ನೀವು ಹೋಗೇ ಹೋಗುತ್ತೀರಾದರೆ ಸರಿಯೇ. ಇನ್ನೇನು ಮಾಡುವುದು? ನೋಡಿ. ನಿಮ್ಮಲ್ಲಿ ಅರೆವಾಸಿ ಜನರ ದಸ್ಕತು ತೆಗೆದುಕೊಂಡೇ ಸುರುಮಾಡಿದ್ದು ನಾನು. ನಿಮ್ಮ ಹತ್ತಿರ ಕೇಳಲಿಲ್ಲವಂತ ಸಿಟ್ಟು ಮಾಡಬೇಡಿ. ನಿಮ್ಮಲ್ಲಿಗೂ ಬಂದಿದ್ದೆ. ನನ್ನ ಗ್ರಾಚಾರಕ್ಕೆ ನೀವಿರಲಿಲ್ಲ. ಮತ್ತೆ ಬರಲಿಕ್ಕಾಗಲಿಲ್ಲ..... ಅವನು ಹೇಳಬೇಕಾದ್ದನ್ನೆಲ್ಲ ಹೇಳಿದ. ಹೆದರಿದವನಂತೆ ನಟಿಸುವ ಅವನ ಕಣ್ಣುಗಳಲ್ಲಿ ಹೆದರಿಕೆ ಇರಲಿಲ್ಲ. ಮಾಡುವುದು ಮಾಡಿಕೊಳ್ಳಿ ಎಂಬಂತಿತ್ತು. ರೊಂಯ್‌ಗುಡುವ ಯಂತ್ರದೆದುರು ಗೆಂಡೆ ಕೇಳುವಂತೆ ಮಾತಾಡುತ್ತಿದ್ದ. ಅವರಾದರೂ ಎಷ್ಟು ಇನ್ನು ವಾದ ಮಾಡಬಹು ದಾಗಿತ್ತು? 'ಕೂಗಿ ಮಾತಾಡಲು ನಾವೇನು ಗಂಡಸರೇ?' – ಸಾಕಾಗಿ ಅವರೂ ಮನೆಗೆ ಬಂದರು. ತಾವು ಹೋದದ್ದು, ಮಾತಾಡಿದ್ದು ಯಾರಿಗೂ ತಿಳಿಯದಂತೆ ನೋಡಿಕೊಂಡರು. ದಿನ ದಾಟಿತು, ಪ್ರತಿ ಮುಂಜಾನೆಗೂ ಹೀಗೆ ಸ್ವರ ಒಡೆದಂತೆ ಕೀರಲಾರಂಭಿಸಿದ ಮಿಶನಿನ ಶಬ್ದ ಬರಬರುತ್ತ ಅಲ್ಲಿಗೆ ಹೊಂದಿಹೋಯಿತು! ಅವ ಎಷ್ಟು ಮಿಲಿಟರಿಯವನೆಂದರೆ ಏಳೆಂದರೆ ಏಳಕ್ಕೇ ಮಿಶನು ಸ್ಟಾರ್ಟ್ ಮಾಡುತ್ತಿದ್ದ. ಅವನ ಮಿಲ್ಲಿನ ಕೂಗು ಅಲ್ಲಿನ ನಿವಾಸಿಗಳಿಗೆ ಆಫೀಸು ಕಾಲೇಜಿಗೆ ಹೊರಡುವ ಸಮಯ ಹೇಳುವಕೂಗಾಯಿತು. ಹಾಂ, ಮಿಲ್ಲು ಕೂಗುತ್ತಿದೆ. ಹಾಗಾದರೆ ಗಂಟೆ ಏಳು! ಇನ್ನೂ ಸ್ನಾನ ಆಗಿಲ್ಲ, ತಿಂಡಿ ಆಗಿಲ್ಲ.... ರೇಡಿಯೋ ಆನ್ ಮಾಡಿದರೆ ಮಾತ್ರ ಟೈಮು ತಿಳಿಸುತ್ತಿತ್ತು. ಇದು ಹಾಗಲ್ಲ. ತಂತಾನೇ ಅಲ್ಲಿನ ಜನರ ಬದುಕನ್ನು ಖಡಕ್ ಸಮಯಕ್ಕೆ ಒಳಪಡಿಸಿತು. ಹೀಗೆ ನಿಧಾನವಾಗಿ ಜನಮನವನ್ನು ಗೆಲ್ಲುತ್ತ ಅಡಿಗೆ ಮನೆಗೂ ಕಾಲಿಟ್ಟಿತು.

ಗೋಧಿ ಹಿಟ್ಟು ಬಹಳ ಅರ್ಜೆಂಟಿತ್ತೇ? ಛೇ! ಕಾಲುಬುಡದಲ್ಲಿಯೇ ಮಿಶನು ಇದೆಯಲ್ಲ, ಸಣ್ಣ ಮಕ್ಕಳು ಕೂಡ ಮಾಡಿಸಿಕೊಂಡು ಬರಬಹುದು. ಓ ಇಷ್ಟೇ ದೂರ! ಹಿಂದೆ ಒಂದು ಸಕ್ಕರೆ ಪುಡಿಗೋ, ರವೆಗೋ, ಹಿಟ್ಟಿಗೂ, ಎಲ್ಲಿ ಹೋಗಬೇಕಿತ್ತು! ಮನೆಯ ಗಂಡಸರಿಗೆ ಸಂಜೆ ಇಂತಹದೇ ಕೆಲಸ. ಸಂಜೆಯಲ್ಲದಿದ್ದರೆ ಬೆಳಿಗ್ಗೆ ಹೋಗುವಾಗ ತೆಗೆದುಕೊಂಡು ಹೋಗಿ ಮಿಲ್ಲಿನಲ್ಲಿಟ್ಟು ಸಂಜೆ ಬರುವಾಗ ತರುವುದೇನು! ಅದಕ್ಕಾಗಿ ಎಷ್ಟು ದೂರ ನಡೆಯುವುದೇನು... ರಾಕ್ಷಸನಂತೆ ಕಂಡಿದ್ದ ಮಿಲ್ಲು ಎಷ್ಟು ಬೇಗ ಸ್ನೇಹಿತನಂತಾಯಿತು! ಒಂದು ದಿನ ಆ ಮಿಲ್ಲು ನಿಂತರೆ ಅಲ್ಲಿ ಬದುಕೇ ಓರೆಕೋರೆ ಯಾಗುವಷ್ಟು, ದಿನವೆಲ್ಲ ಅದರ ಸದ್ದೇ ಇಲ್ಲದೆ ಬಿಕೋ ಎನಿಸುವಷ್ಟು! 'ಹಿಟ್ಟಿನ ಗಿರಣಿ. ಇಲ್ಲಿ ಎಲ್ಲಾ ಬಗೆಯ ಹಿಟ್ಟನ್ನು ಮಾಡಿಕೊಡಲಾಗುತ್ತೆ' – ಎಂಬ ಬೋರ್ಡು ಈಗ

ಧೈರ್ಯವಾಗಿ ನಿಂತಿತು! ಮಿಲ್ಲಿನವನಂತೂ ಬೇಕಾದವನೇ ಆದ; ಇಟ್ಟುಹೋದರೆ ಸೈ. ಹುಡಿ ಮಾಡಿ ಮನೆ ಬಾಗಿಲಿಗೆ ಕಳಿಸಿಕೊಡುವ ಈಗ ಕೆಲಸಕ್ಕೆ ಜನವಿದೆ. ಆ ವಠಾರಕ್ಕೆಲ್ಲ ಅನುಕೂಲವೇ ಅನುಕೂಲ. ಕಾಲುಬುಡದಲ್ಲಿಯೇ ಅನುಕೂಲಗಳಿದ್ದರೆ ಕೆಲಸಗಳೆಲ್ಲ ಎಷ್ಟು ಹಗುರ! ಸಮಯ ಎಷ್ಟು ಉಳಿತಾಯ! ಮಿಲ್ಲಿನ ಹಿಂದೆಯೇ ಜನರ ಅನುಕೂಲಕ್ಕಾಗಿ ಮತ್ತೂ ಏನೆಲ್ಲ ಬಂದವು. ಯಾವುದಕ್ಕೂ ಈಗ ದೂರ ಹೋಗುವುದೇ ಬೇಡ. ಆದರೂ ಆಶ್ಚರ್ಯ. ಈಗಲೂ ಅಲ್ಲಿನ ಜನರಿಗೆ ಸಮಯ ಉಳಿಯುತ್ತಿಲ್ಲ. ಅದೇ ಗಡಿಬಿಡಿ, ಓಡಾಟ, ದಣಿವು. ಕಳೆದುಹೋದ ಸಂಜೆ ಮುಂಜಾವುಗಳ ನೆನಪೂ ಕಾಡುವುದಿಲ್ಲ! ಹಕ್ಕಿಗಳು ಬರುತ್ತವೆ. ಆದರೆ ಅವು ಹಾಡುವುದು ಯಾರ ಅನುಕೂಲಕ್ಕಾಗಿ ಅಲ್ಲ. ಮಿಲ್ಲಿನ ಗಲಾಟೆಯಲ್ಲಿ ಅದೆಲ್ಲ ಕೇಳುವುದೂ ಇಲ್ಲ. ಕೇಳಬೇಕೆನಿಸುವುದೂ ಇಲ್ಲ!

**ವಿವರಣೆ**

ವೈದೇಹಿಯವರ (ಚಿತ್ರ ೫ ನೋಡಿ) ಈ ಕಥೆ ಮಿಲ್ಲಿನ ಸದ್ದಿನ ನಡುವೆ ಹಕ್ಕಿಗಳ ಹಾಡು ಮರೆಯಾಗಿ ಹೋದ ಘಟನೆ ಇಲ್ಲಿಯದು. ವಿಜ್ಞಾನ, ತಂತ್ರಜ್ಞಾನಗಳು ದಿನದಿನದ ಬದುಕಿಗೆ ನೀಡುವ ಸುಖ–ಸೌಕರ್ಯಗಳು ಮನುಷ್ಯನನ್ನು ನಾಜೂಕಾಗಿ ನಿಸರ್ಗದಿಂದ ಹೇಗೆ ದೂರಮಾಡುತ್ತವೆ ಎಂಬುದನ್ನು ಗಮನಿಸಬಹುದು. ರಾಕ್ಷಸನಂತೆ ಹೆದರಿಸುತ್ತಾ ಮೊದಲು ಬಂದ ಮಿಲ್ಲು, ಕೊನೆಗೆ ಸ್ನೇಹಿತನೆ ಆಗುವ ಸಂದರ್ಭದಲ್ಲಿ ವಠಾರದ ಪ್ರತಿಕ್ರಿಯೆ ಗಮನಿಸಿ:

೧. ಘೋ ಎಂದು ಒರಲುತ್ತಾ ಬಂದಾಗ – ಜೋರು ಜಗಳ ಮಾಡುವ ಮನಸ್ಸು
೨. ಒರಲುವುದೇ ಉದ್ಯೋಗವಾದಾಗ ಸಂಧಾನದ ಮನಃಸ್ಥಿತಿ
೩. ರೊಂಯ್‌ಗುಡುವ ಯಂತ್ರವಾದಾಗ – ಅಸಹಾಯಕತೆ
೪. ಸ್ವರ ಒಡೆದಂತೆ ಕೀರಲು ತೊಡಗಿದಾಗ – ಹೊಂದಾಣಿಕೆ
೫. ಕೇವಲ ಕೂಗುವ ಕಾಲಕ್ಕೆ – ಅಂಗೀಕಾರ
೬. ಅಪರೂಪಕ್ಕೆ ಮೌನತಾಳಿದರೆ – ಎಂಬ ಖಾಲಿತನ



ಚಿತ್ರ ೫: ವೈದೇಹಿ (೧೯೪೫)

**ಅಭ್ಯಾಸ**

೧. ಯಂತ್ರಶಕ್ತಿಯ ಅಂದರೆ ಮಿಲ್ಲಿನ ಮಾಲೀಕನ ವ್ಯಕ್ತಿತ್ವದ ನಡವಳಿಕೆಯನ್ನು ಗಮನಿಸಿ.

೨. ಒಟ್ಟು ಮಾಡಿಸಿ ತರುವ ಒಂದು ಸಣ್ಣ ಕೆಲಸದಿಂದಲೂ ಗಂಡಸು ಮುಕ್ತನಾಗಿ, ಅದು ಹೆಂಗಸಿನ ಪಾಲಿಗೆ ಬಂತು. ಮಿಲ್ಲು ಗಟ್ಟಿಯಾಗಿ ನೆಲೆಯೂರಿತು.

೩. ಮಿಲ್ಲು ಮತ್ತು ಅದರೊಂದಿಗೆ ಬಂದ ಸೌಕರ್ಯಗಳು ಜೀವನವನ್ನು ಬದಲಾಯಿಸಿದವೆ?

೪. ಮಿಲ್ಲಿನವನು ದಿನ ಕಳೆಯುತ್ತಾ ಶ್ರೀಮಂತನಾದ; ಆದರೆ ವಠಾರದವರ ಬದುಕು ವ್ಯತ್ಯಾಸಗೊಂಡಿತೆ?

೫. ತಂಗಾಳಿಗೆ ಬದಲು ಹಿಟ್ಟಿನ ಗಾಳಿ, ಹೂಗಳ ಸುಗಂಧಕ್ಕೆ ಬದಲು ಮೆಣಸಿನ ಘಾಟು, ಪ್ರಶಾಂತತೆಗೆ ಬದಲು ತಲೆಸಿಡಿತ, ಹಕ್ಕಿಯ ಹಾಡಿಗೆ ಬದಲು ಮಿಲ್ಲಿನ ಮೊರೆತ. ಹಾಗಿದ್ದೂ ಮಿಲ್ಲು ಈಗ ಬಿಡಲಾರದ ಸ್ನೇಹಿತ. ಇದನ್ನು ಆಧುನಿಕ ಬದುಕಿನ ಪ್ರತೀಕ ಎನ್ನಬಹುದೆ?

೬. ಹಾಡಿನ ನಾಡಿನಲ್ಲಿರುವುದೇ ಸುಖವೆ ಅಥವಾ ಮಿಲ್ಲು ಬಂದದ್ದೇ ಒಳ್ಳೆಯದಾಯಿತೆ ಎಂಬಲ್ಲಿ ಯಾವ ತೀರ್ಮಾನಕ್ಕೆ ಈ ಲೇಖನ ಹೋಗಿದೆ ಎಂದು ನಿಮಗೆ ಅನ್ನಿಸುತ್ತದೆ?

**ವಿಸ್ತರಣೆ**

೧. ಇಲ್ಲಿ ಮಿಲ್ಲು ವಿಜ್ಞಾನ–ತಂತ್ರಜ್ಞಾನಗಳನ್ನೂ, ಹಾಡು ನಿಸರ್ಗ–ಸರಳತೆಗಳನ್ನೂ ಪ್ರತಿನಿಧಿಸುತ್ತವೆ. ಇಂದು ನಮ್ಮ ಆಯ್ಕೆ ಯಾವುದು? ಯಾವುದಾದರೂ ಒಂದನ್ನು ಮಾತ್ರ ಆಯ್ದುಕೊಳ್ಳುವ ಸ್ಥಿತಿಯಲ್ಲಿ ನಾವಿದ್ದೇವೆಯೆ?

೨. ಆಧುನಿಕತೆಯನ್ನು ತಿರಸ್ಕರಿಸಿ ತನ್ನಷ್ಟಕ್ಕೆ ತಾನು ನೆಮ್ಮದಿಯಾಗಿ ಬದುಕಬಲ್ಲ ಸಾಧ್ಯತೆ ಇಂದು ಯಾವ ಸಮಾಜಕ್ಕಾದರೂ ಇದೆಯೆ? ವಿಜ್ಞಾನದ ಹೊಸ ಹೊಸ ಆವಿಷ್ಕರಣಗಳು, ಸಾಧನೆಗಳು ಇಂದು ಎಂದಿಗಿಂತಲೂ ಹೆಚ್ಚಾಗಿವೆ. ಇವು ಮನುಷ್ಯನಿಗೆ ನೆಮ್ಮದಿಯನ್ನು ತಂದಿವೆಯೆ? ಆತಂಕವನ್ನೊ? ಆಟಂಬಾಂಬ್ ಕಂಡುಹಿಡಿದ ಮನುಷ್ಯ, ಅಧೀರನಾಗದೆ ಬದುಕಬಹುದೆ? ಹಾಗೆಂದು ಬೀಸುವಕಲ್ಲಿನ ಕಾಲಕ್ಕೆ ಹಿಂದಕ್ಕೆ ಚಲಿಸುವುದೆ? ಮಿಲ್ಲಿಲ್ಲದ ಬದುಕಿನಲ್ಲಿ ಬಿಡುವಿಲ್ಲ, ಹಾಡಿಲ್ಲದ ಬದಕಿನಲ್ಲಿ ಚೈತನ್ಯವಿಲ್ಲ. ಆದರೆ ಮಿಲ್ಲು ದುಡಿತದಿಂದ ಬಿಡುಗಡೆ ನೀಡುತ್ತದೆಯೆ ಅಥವಾ ಆ ಯಂತ್ರಗಳ ದಾಸ್ಯವನ್ನು ಕಲಿಸುತ್ತದೆಯೆ?

**ವಿಶ್ಲೇಷಣಾತ್ಮಕ**

೧. ಯಂತ್ರ ಸಂಸ್ಕೃತಿಯೆಲ್ಲ ನಗರ ಕೇಂದ್ರಿತವಾಗಿ ಹಳ್ಳಿ–ನಗರಗಳ ನಡುವಿನ ವ್ಯತ್ಯಾಸವನ್ನು ಮತ್ತಷ್ಟು ದೊಡ್ಡದು ಮಾಡೀತೆ? ನಿಸರ್ಗದ ಮಗುವಾದ ಮನುಷ್ಯನಿಗೆ ಅದರೊಂದಿಗಿನ ಒಡನಾಟಕ್ಕೆ ಈಗ ಅವಕಾಶವಿದೆಯೆ? ಬಿಡುವಿದೆಯೆ? ಇವನು ಏನನ್ನು ಕೊಟ್ಟು ಏನನ್ನು ಪಡೆಯುತ್ತಿದ್ದಾನೆ?

೨. ಈ ಲೇಖನದಲ್ಲಿ ಮಿಲ್ಲು ಮತ್ತು ಹಕ್ಕಿಗಳ ನಡುವಿನ ವಿರೋಧವನ್ನು ತರಲಾಗಿದೆ. ನಿಮ್ಮ ಪರಿಸರದಲ್ಲಿ ಇಂತಹ ಯಾವ ವಿರೋಧಗಳನ್ನು ನೀವು ಗುರುತಿಸುತ್ತೀರಿ? ನಿಮ್ಮ ವಿಶ್ಲೇಷಣೆಯನ್ನು ಬರೆಯಿರಿ.

## ೫.೨.೫. ಪಠ್ಯ ೫

## ಸಹಜ ಕೃಷಿಯ ನಾಲ್ಕು ತತ್ವಗಳು

– ಮೂಲ: ಮಸನೊಬು ಫುಕುವೊಕಾ

– ಕನ್ನಡಕ್ಕೆ: ಸಂತೋಷ್ ಕೌಲಗಿ

ಇಲ್ಲಿ ಕಾಣುವ ನನ್ನ ಹೊಲದಲ್ಲಿದ್ದ ಎಲೆಗಳನ್ನು ಸ್ವಲ್ಪ ಸರಿಸಿ ನೋಡಿ. ಆ ಎಲೆಮರೆಯ ತಂಪಿನಲ್ಲಿ ಅನೇಕ ಜೀವಜಂತುಗಳು ಆಸರೆ ಪಡೆದಿವೆ. ಆ ಮಣ್ಣಿನಲ್ಲಿ ಕಪ್ಪೆ, ಇಲಿ, ಎರೆಹುಳು ಮುಂತಾದವು ಮನೆ ಮಾಡಿವೆ. ಇದು ಎಲ್ಲ ದೃಷ್ಟಿಯಿಂದಲೂ ಸಮತೋಲನ ದಲ್ಲಿರುವ ಭೂಮಿ. ಇಲ್ಲಿ ಕೀಟಗಳು ಹಾಗೂ ಬೆಳೆಗಳು ಪರಸ್ಪರ ಒಂದು ದೃಢವಾದ ಸಂಬಂಧವನ್ನು ಹೊಂದಿವೆ. ಈ ಪ್ರದೇಶದಲ್ಲಿ ಈ ಭೂಮಿಯ ಬೆಳೆಗಳನ್ನು ಬಿಟ್ಟು ಮಿಕ್ಕೆಲ್ಲ ಭೂಮಿಯ ಬೆಳೆಗಳು ರೋಗಕ್ಕೆ ತುತ್ತಾಗುವುದು ಸರ್ವೇ ಸಾಮಾನ್ಯ. ಆ ಪಕ್ಕದ ರೈತನ ಭೂಮಿಯನ್ನೊಮ್ಮೆ ನೋಡಿ. ಆ ಹೊಲದಲ್ಲಿನ ಎಲ್ಲ ಕಳೆಯನ್ನು ಕಳೆನಾಶಕ ಹಾಕಿಯೋ ಅಥವಾ ತೀವ್ರವಾದ ಕೃಷಿ ನಡೆಸಿಯೋ ನಿರ್ಮೂಲನ ಮಾಡಲಾಗಿದೆ. ಆ ಭೂಮಿಯ ಎಲ್ಲಾ ಜಂತುಗಳೂ ಅಲ್ಲಿಯ ವಿಷ ತಿಂದು ನಿರ್ನಾಮ ಹೊಂದಿವೆ. ರಾಸಾಯನಿಕ ಗೊಬ್ಬರಗಳ ಸೇರ್ಪಡೆಯಿಂದಾಗಿ ಆ ಭೂಮಿಯಲ್ಲಿನ ಎಲ್ಲಾ ಸಾವಯವ ವಸ್ತುಗಳು ಹಾಗೂ ಸೂಕ್ಷ್ಮಜೀವಿಗಳು ನಶಿಸಿಹೋಗಿವೆ. ಬೇಸಿಗೆಯಲ್ಲಿ ರೈತರು ಆ ಹೊಲಗಳಲ್ಲಿ ಮುಖ ಕವಚಗಳನ್ನೂ, ಕೈ ಚೀಲಗಳನ್ನೂ ಧರಿಸಿ ಕೆಲಸದಲ್ಲಿ ತೊಡಗಿರುತ್ತಾರೆ. ಸಾವಿರದ ಐದುನೂರು ವರ್ಷಗಳಿಂದ ಸತತವಾಗಿ ಅನ್ನ ನೀಡುತ್ತಿದ್ದ ಆ ಭೂಮಿ ಅತ್ಯಾಚಾರದಿಂದಾಗಿ ಬರಡಾಗಿ ನಿಂತಿದೆ.

### ನಾಲ್ಕು ತತ್ವಗಳು

ಸಹಜ ಕೃಷಿಯ ನಾಲ್ಕು ತತ್ವಗಳಲ್ಲಿ ಮೊದಲನೆಯದು, ಉಳುಮೆ ಮಾಡದಿರುವುದು. ಉಳುಮೆ ಶತಶತಮಾನಗಳಿಂದಲೂ ವ್ಯವಸಾಯದ ಅತ್ಯಂತ ಪ್ರಮುಖ ಚಟುವಟಿಕೆಯಾಗಿದೆ. ಉಳುಮೆಯಿಲ್ಲದೆ ಬೆಳೆಯಿಲ್ಲ ಎಂಬ ತತ್ವಕ್ಕೆ ರೈತರು ಅಂಟಿಕೊಂಡಿದ್ದಾರೆ. ಆದರೆ ಈ ಸಹಜ ಕೃಷಿ ಪದ್ಧತಿಯಲ್ಲಿ ಉಳುಮೆ ಮಾಡದಿರುವುದೇ ಅದರ ಮೂಲ ತತ್ವಗಳಲ್ಲಿ ಒಂದು. ಭೂಮಿಯಲ್ಲಿ ಸಹಜವಾಗಿಯೇ ಗಿಡಗಳ ಬೇರುಗಳ ಮೂಲಕ, ಸೂಕ್ಷ್ಮಜೀವಿಗಳ ಮೂಲಕ ಹಾಗೂ ಎರೆಹುಳುವಿನ ಮೂಲಕ ಉಳುಮೆ ನಡೆಯುತ್ತಲೇ ಇರುತ್ತದೆ.

ಎರಡನೆಯ ತತ್ವ, ಕಾಂಪೋಸ್ಟ್ ಗೊಬ್ಬರವನ್ನಾಗಲೀ ಅಥವಾ ರಾಸಾಯನಿಕ ಗೊಬ್ಬರವನ್ನಾಗಲೀ ಉಪಯೋಗಿಸದಿರುವುದು. ಮನುಷ್ಯರು ಪ್ರಕೃತಿಯಲ್ಲಿ ತಾನೇತಾನಾಗಿ ನಡೆಯುತ್ತಿರುವ ಕ್ರಿಯೆಗಳಲ್ಲಿ ತಲೆಹಾಕಿ ಅಳಿಸಲು ಸಾಧ್ಯವಾಗದಂತಹ ಕಲೆಯನ್ನುಂಟು ಮಾಡುತ್ತಾರೆ. ಅವರ ಬೇಜವಾಬ್ದಾರಿ ವರ್ತನೆಯಿಂದಾಗಿ ಭೂಮಿಯಲ್ಲಿನ ಪೌಷ್ಟಿಕಾಂಶ ಕ್ಷೀಣಿಸುತ್ತಾ ಹೋಗಿ ವರ್ಷದಿಂದ ವರ್ಷಕ್ಕೆ ಭೂತಾಯಿ ಬಂಜೆಯಾಗುತ್ತಾ ಹೋಗುತ್ತಾಳೆ. ಆದರೆ ಅವಳ ಪಾಡಿಗೆ ಅವಳನ್ನೇ ಬಿಟ್ಟರೆ ಗಿಡ ಹಾಗೂ ಪ್ರಾಣಿಗಳ ಜೀವನಚಕ್ರದಿಂದಾಗಿ ಆಕೆ ವರ್ಷದಿಂದ ವರ್ಷಕ್ಕೆ ಹೆಚ್ಚು ಸಮೃದ್ಧಳಾಗುತ್ತಾ ಹೋಗುತ್ತಾಳೆ.

ಮೂರನೆಯ ತತ್ವ, ಕಳೆ ತೆಗೆಯದಿರುವುದು ಹಾಗೂ ಕಳೆನಾಶಕಗಳನ್ನು ಉಪಯೋಗಿಸದಿರುವುದು. ಕಳೆಗಳು ಭೂಮಿಯ ಸತ್ವವನ್ನು ಅಭಿವೃದ್ಧಿ ಪಡಿಸುವಲ್ಲೂ ದೊಡ್ಡ ಪಾತ್ರವನ್ನು ವಹಿಸುತ್ತವೆ. ಮೂಲಭೂತವಾಗಿ ಕಳೆಗಳನ್ನು ನಿಯಂತ್ರಿಸಬೇಕೆ ಹೊರತು ಕಳೆಗಳನ್ನು ನಿರ್ಮೂಲನ ಮಾಡಿಬಿಡಬೇಕು ಎಂಬ ತಪ್ಪು ಯೋಜನೆ ಇರಬಾರದು. ಭೂಮಿಯನ್ನು ಹುಲ್ಲಿನಿಂದ ಮುಚ್ಚುವುದರಿಂದ, ತಾತ್ಕಾಲಿಕವಾಗಿ ಹೊಲಗಳಲ್ಲಿ ನೀರು ಕಟ್ಟುವುದರಿಂದ ಕಳೆಗಳನ್ನು ನಿಯಂತ್ರಿಸಬಹುದು.

ನಾಲ್ಕನೆಯ ತತ್ವ, ರಾಸಾಯನಿಕ ವಸ್ತುಗಳ ಮೇಲಿನ ಅವಲಂಬನೆಯಿಂದ ದೂರ ಉಳಿಯುವುದು. ಅಸಹಜ ವ್ಯವಸಾಯ ಪದ್ಧತಿ ಹಾಗೂ ಭೂಮಿಯ ಸತ್ವ ಅಭಿವೃದ್ಧಿ ಎಂಬುದು ಎಂದು ಪ್ರಾರಂಭವಾಯಿತೋ ಅಂದೇ ಅಶಕ್ತ ಗಿಡಗಳು ಬೆಳೆಯಲು ಪ್ರಾರಂಭಿಸಿದವು. ಇದರಿಂದಾಗಿ ಸಸ್ಯರೋಗ ಹಾಗೂ ಕೀಟ ಅಸಮತೋಲನಗಳು ವ್ಯವಸಾಯದಲ್ಲಿ ಬೃಹತ್ ಸಮಸ್ಯೆಗಳಾದವು. ಪ್ರಕೃತಿ ಸ್ವತಃ ಪೂರ್ಣ ಸಮತೋಲನದಲ್ಲಿದೆ. ಹೀಗೆಂದ ಮಾತ್ರಕ್ಕೆ ಹಾನಿಕಾರಕ ಕ್ರಿಮಿಗಳು ಮತ್ತು ರೋಗಗಳು ಇಲ್ಲವೆಂದಲ್ಲ, ಅವೂ ಇವೆ. ಆದರೆ ಎಂದಿಗೂ ಅವನ್ನು ವಿಷಪೂರಿತ ರಾಸಾಯನಿಕ ವಸ್ತುಗಳಿಂದ ಎದುರಿಸುವಷ್ಟು ದುಃಸ್ಥಿತಿ ಬರುವುದಿಲ್ಲ. ಕೀಟಗಳನ್ನು ಹಾಗೂ ರೋಗಗಳನ್ನು ದೂರವಿಡಲು ಮಾಡಬೇಕಾದ ಬುದ್ಧಿವಂತಿಕೆಯ ಕೆಲಸವೆಂದರೆ ಆರೋಗ್ಯಕರವಾದ ಪರಿಸರದಲ್ಲಿ ಗಟ್ಟಿಯಾದ ಜಾತಿಯ ಬೆಳೆ ಬೆಳೆಯುವುದು.

**ಉಳುಮೆ**

ಯಾವಾಗ ಭೂಮಿಯನ್ನು ಉಳುಮೆ ಮಾಡಲಾಗುವುದೋ ಆಗಲೇ ಅಲ್ಲಿಯ ಪರಿಸರದಲ್ಲಿ ಅಗಾಧವಾದ ಬದಲಾವಣೆಯಾಗುವುದು. ರೈತನ ಈ ಕ್ರಿಯೆಯೇ ಅವನಿಗೆ ಮಾರಕವಾಗಿ ನಿಲ್ಲುವುದು. ಉಳುಮೆ ಕಂಡಿಲ್ಲದ ಭೂಮಿಗೆ ಒಮ್ಮೆ ನೇಗಿಲು ಹಚ್ಚಿದರೆ ಸಾಕು ಅಲ್ಲಿ ಪ್ರಚಂಡವಾದ ಕಳೆಗಳು ಹುಟ್ಟಿಕೊಳ್ಳುತ್ತವೆ. ಯಾವಾಗ ಕಳೆಗಳ ಕೈಮೇಲಾಯಿತೋ ಆಗಿನಿಂದಲೇ ಕಳೆ ತೆಗೆಯುವುದೇ ರೈತನ ದೊಡ್ಡ ಉದ್ಯೋಗವಾಗುತ್ತದೆ. ಈ ಎಲ್ಲಾ ಸಮಸ್ಯೆಗಳಿಗೆ ಉತ್ತರವೆಂದರೆ ನಾವು ಮಾಡುತ್ತಿರುವ ಅಸಹಜ ಕೃಷಿಯನ್ನು ಕೈಬಿಡುವುದು! ಇಂದಿನ ರೈತನ ಜವಾಬ್ದಾರಿಯು ಮುಂದೆ ಈ ರೀತಿ ತಪ್ಪಾಗದಂತೆ ಎಚ್ಚರಿಕೆ ವಹಿಸುವುದಷ್ಟೇ ಅಲ್ಲ, ಹಿಂದೆ ಆಗಿರುವ ತಪ್ಪನ್ನು ಸರಿಪಡಿಸುವುದೂ ಆಗಿದೆ. ಮನುಷ್ಯ ನಿರ್ಮಿತ ರಾಸಾಯನಿಕ ಗೊಬ್ಬರ ಹಾಗೂ ಯಂತ್ರೋಪಕರಣಗಳನ್ನು ಬಳಸಿ ಕಳೆ ನಿರ್ಮೂಲನಕ್ಕಾಗಿ ಒಂದು ಯಾಗವನ್ನೇ ಮಾಡಲು ಹೊರಡುವ ಬದಲು ಸಹಜ ಕೃಷಿ ಪದ್ಧತಿಯ ಕಳೆ ನಿಯಂತ್ರಣ ನೀತಿ ಅನುಸರಿಸಿದರೆ ಭೂಮಿ ಕೂಡ ಸಮತೋಲನದ ಕಡೆಗೆ ಹೊರಡುತ್ತದೆ. ರೈತನ ತಲೆ ತಿನ್ನುವ ಕಳೆಗಳೂ ತಣ್ಣಗಾಗುತ್ತವೆ.

**ಗೊಬ್ಬರ**

ನಾನು ಅನೇಕ ಸಲ ಭೂಮಿಯ ಸತ್ವಕ್ಕೆ ಸಂಬಂಧಿಸಿದ ಪರಿಣಿತರಲ್ಲಿ ಭೂಮಿಯನ್ನು ಹಾಗೆಯೇ ಬಿಟ್ಟುಬಿಟ್ಟರೆ ಅದರ ಸತ್ವ ಹೆಚ್ಚುತ್ತದೋ, ಕಮ್ಮಿಯಾಗುತ್ತದೋ ಎಂದು ಪ್ರಶ್ನಿಸಿದ್ದೇನೆ. ಅವರಲ್ಲಿ ಅನೇಕರು ಒಂದು ಕ್ಷಣ ತಡೆದು ಭೂಮಿಯ ಸತ್ವ ಕಡಿಮೆಯಾಗುತ್ತದೆ ಎನ್ನುತ್ತಾರೆ. ಆದರೆ ಖಂಡಿತಾ ಅದು ಹಾಗೆ ಆಗಲಾರದು. ಭೂಮಿಯ ಸತ್ವ ಯಾವುದೋ ಒಂದು ನಿರ್ದಿಷ್ಟ ಮಟ್ಟವನ್ನು ತಲುಪಿದ ಮೇಲೆ ಕಮ್ಮಿಯೂ ಆಗದು, ಜಾಸ್ತಿಯೂ

ಆಗದು. ನಿಜವಾಗಿ ಭೂಮಿಗೆ ತಯಾರು ಮಾಡಿದ ಕಾಂಪೋಸ್ಟ್ ಗೊಬ್ಬರದ ಅಗತ್ಯವಿಲ್ಲ. ಅದೇ ಭೂಮಿಯಲ್ಲಿ ಬೆಳೆದ ಬೆಳೆಯ ಉಳಿಕೆಯನ್ನು ಮತ್ತೆ ಅದೇ ಭೂಮಿಯ ಮೇಲೆ ಹಾಕಿದರೆ ಸಾಕು. ಅದೇ ಕೊಳೆತು ಭೂಮಿಯ ಸತ್ವವನ್ನು ಹೆಚ್ಚಿಸುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಸಾವಯವ ಗೊಬ್ಬರವನ್ನು ಭೂಮಿಗೆ ಸೇರಿಸುವುದು ಅಹಿತಕರವೇ. ಒಮ್ಮೆ ನನ್ನ ಗದ್ದೆಗಳಲ್ಲಿ ಭತ್ತ ಬೆಳೆದಿದ್ದಾಗ ಒಂದು ಮೂಲೆಯಲ್ಲಿದ್ದ ಭತ್ತಕ್ಕೆ ಮಾತ್ರ ಬೆಂಕಿ ರೋಗ ತಗಲಿತ್ತು. ಏಕೆ ಎಂದು ಯೋಚಿಸತೊಡಗಿದೆ. ಕಾರಣ ಹೊಳೆಯಿತು. ಹಾಂ! ಬೆಳೆ ಪ್ರಾರಂಭಿಸುವುದಕ್ಕೆ ಮುಂಚೆ ಆ ಸ್ಥಳದಲ್ಲಿ ಕೋಳಿಗೊಬ್ಬರ ಗುಡ್ಡೆ ಹಾಕಿದ್ದೆ. ಕೇವಲ ಸ್ವಲ್ಪ ಹುಲ್ಲು, ಹಸಿರು ಹಾಗೂ ಕೋಳಿಗೊಬ್ಬರ ಹಾಕಿ ಗರಿಷ್ಠ ಇಳುವರಿ ಪಡೆಯಬಹುದು. ಸಾವಯವ ಗೊಬ್ಬರ, ರಾಸಾಯನಿಕ ಗೊಬ್ಬರ ಇವೆಲ್ಲ ಭ್ರಮೆ. ಕೆಲವಾರು ವರ್ಷಗಳಿಂದ ನಾನು ಸುಮ್ಮನೆ ಕುಳಿತು ಪ್ರಕೃತಿ ತಾನೇ ತಾನಾಗಿ ಮಾಡುವ ಕೃಷಿಯನ್ನು ನೋಡುತ್ತಾ ತರಕಾರಿ, ನಿಂಬೆ, ಭತ್ತ, ಬಾರ್ಲಿ – ಹೀಗೆ ಎಲ್ಲದರ ಗರಿಷ್ಠ ಇಳುವರಿ ಪಡೆದಿದ್ದೇನೆ.

**ಕಳೆಯೊಂದಿಗೆ**

ಕಳೆಯೊಂದಿಗೆ ವ್ಯವಹರಿಸುವಾಗ ಈ ಕೆಳಗಿನ ಅಂಶಗಳನ್ನು ಗಮನಿಸುವುದು ಸೂಕ್ತ:

೧. ಉಳುಮೆಯನ್ನು ನಿಲ್ಲಿಸಿದ ಕೂಡಲೆ ಅನೇಕ ಜಾತಿಯ ಕಳೆಗಳು ಹುಟ್ಟುವುದೇ ನಿಂತುಹೋಗುತ್ತದೆ.

೨. ಹೊಲದಲ್ಲಿ ಒಂದು ಬೆಳೆ ನಿಂತಿರುವಾಗಲೇ ಮುಂದಿನ ಬೆಳೆಯ ಬೀಜವನ್ನು ಬಿತ್ತಿದರೆ ಅವು ಕಳೆಗಿಂತ ಮುಂದಾಗಿ ಬೆಳೆಯುತ್ತವೆ.

೩. ಕುಯಿಲು ಮುಗಿದ ಕೂಡಲೆ ಇಡೀ ಭೂಮಿಯನ್ನು ಹುಲ್ಲಿನಿಂದ ಮುಚ್ಚಿದರೆ ಸೂರ್ಯಕಿರಣ ಪಡೆಯದೆ ಸೊರಗುತ್ತವೆ. ಕಳೆಗಳು ಅಲ್ಲೇ ಸೊರಗುತ್ತವೆ. ಸಾಮಾನ್ಯವಾಗಿ ಕಳೆ ನಿರ್ಮೂಲನೆಗೆ ನಮ್ಮ ರೈತರು ಆಳವಾದ ಉಳುಮೆ ಮಾಡಿ ಸತ್ತೆ ಆರಿಸುತ್ತಾರೆ. ಹೀಗೆ ಆಳವಾಗಿ ಉಳುಮೆ ಮಾಡಿದಾಗ ಭೂಮಿಯ ಒಳಗೆ ಸೇರಿ ಹೋಗಿ ಮೊಳಕೆ ಒಡೆಯಲು ಅವಕಾಶವಿಲ್ಲದೆ ಕಂಗಾಲಾಗಿರುವ ಅನೇಕ ಕಳೆಯ ಬೀಜಗಳು ಮೇಲೆ ಬಂದು ಮೊಳಕೆ ಒಡೆಯುತ್ತವೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಕಳೆ ನಿರ್ಮೂಲನ ಹೆಸರಿನಲ್ಲಿ ರೈತ ಪದೇಪದೇ ತನ್ನ ದುರಾದೃಷ್ಟದ ಬೀಜ ಬಿತ್ತುತ್ತಿರುತ್ತಾನೆ!

**ಕೀಟ ನಿಯಂತ್ರಣ**

ರಾಸಾಯನಿಕ ಗೊಬ್ಬರ ಉಪಯೋಗಿಸದೆ ಇದ್ದರೆ ಹಣ್ಣಿನ ಗಿಡ ಹಾಗೂ ಇತರ ಬೆಳಸು ತಮ್ಮ ಕಣ್ಮುಂದೆಯೇ ಮಣ್ಣುಪಾಲಾಗುವುದೆಂದು ನಂಬಿದವರಿದ್ದಾರೆ. ರಾಸಾಯನಿಕಗಳನ್ನು ಉಪಯೋಗಿಸಿ ಕಂಡರಿಯದ ಭಯದಲ್ಲಿ ನಾವೇ ಸಿಕ್ಕಿ ನರಳುತ್ತಿರುವುದು ಶೋಚನೀಯ. ತಮ್ಮ ಗಿಡಗಳಿಗೆ ಹಿಡಿದಿರುವ ರೋಗ ಅಥವಾ ಕೀಟಕ್ಕೆ ನಿಜವಾದ ಕಾರಣವೇನೆಂದು ರೈತರಿಗೆ ತಿಳಿದಿರುವುದಿಲ್ಲ. ಒಟ್ಟಿನಲ್ಲಿ ಅದಕ್ಕೆ ರಾಸಾಯನಿಕ ಶುಶ್ರೂಷೆ ನೀಡುತ್ತಾರೆ. ಕಡೆಗೆ ತಾವು ನೀಡಿದ ಶುಶ್ರೂಷೆಯ ಪರಿಣಾಮವಾದರೂ ಏನು ಎಂಬುದೂ ಸಹ ಅವರಿಗೆ ತಿಳಿಯುವುದಿಲ್ಲ. ನಿಜ ಹೇಳಬೇಕೆಂದರೆ ತಿಳಿಯದೆ ಮಾಡಿದ ಪ್ರತಿಯೊಂದು ಕ್ರಿಯೆ ವಿನಾಶದ ಬಿತ್ತನೆ. ಗಿಡಗಳಿಗೆ ತಗಲುವ ರೋಗ

ಮತ್ತು ಕೀಟನಾಶಕ್ಕೆ ರಾಸಾಯನಿಕಗಳ ಉಪಯೋಗ ಬಹಳ ಅಸಮಂಜಸವಾದ ವಿಧಾನ ಹಾಗೂ ಭವಿಷ್ಯದಲ್ಲುಂಟಾಗುವ ದೊಡ್ಡ ತಲೆನೋವು.

**ನಾಲ್ಕು ತತ್ವಗಳು**

೧. ಉಳುಮೆ ಮಾಡದಿರುವುದು.

೨. ರಾಸಾಯನಿಕ ಹಾಗೂ ಕಾಂಪೋಸ್ಟು ಗೊಬ್ಬರವನ್ನು ಉಪಯೋಗಿಸದೇ ಇರುವುದು.

೩. ಉಳುಮೆ ಅಥವಾ ಕಳೆನಾಶಕದಿಂದ ಕಳೆಯ ನಿರ್ಮೂಲನೆಗೆ ಪ್ರಯತ್ನಿಸದೇ ಇರುವುದು.

೪. ರಾಸಾಯನಿಕ ಕ್ರಿಮಿನಾಶಕಗಳನ್ನು ಅವಲಂಬಿಸದಿರುವುದು.

ಇವು ಪ್ರಕೃತಿಯ ವ್ಯವಸ್ಥೆಗೆ ಹೊಂದುವಂತಹ ಮತ್ತು ಪ್ರಕೃತಿಯ ಸಿರಿತನವನ್ನು ಹೆಚ್ಚಿಸುವ ಹಾದಿಗಳು. ನನ್ನ ಎಲ್ಲ ಪ್ರಯೋಗಗಳು ಈ ತತ್ವದ ಹಾದಿಯಲ್ಲೇ ನಡೆದಂಥವು. ಅಲ್ಲದೆ ಇವು ನಾನು ಬೆಳೆಯುವ ತರಕಾರಿ, ಧಾನ್ಯ, ಹಣ್ಣು ಎಲ್ಲದರ ಜೀವಾಳ ಕೂಡ.

**ಲೇಖಕರ ಪರಿಚಯ**

ಫುಕುವೋಕಾ ಮಸನೋಬು (ಚಿತ್ರ ೬ ನೋಡಿ) ಜಪಾನಿನ ರೈತ ಮತ್ತು ತತ್ವಜ್ಞಾನಿ. ತನ್ನ ನೈಸರ್ಗಿಕ ಕೃಷಿ ಮತ್ತು ಮರುಭೂಮಿಯ ಭೂಮಿಗಳ ಮರು-ಸಸ್ಯಕ್ಕಾಗಿ ಪ್ರಸಿದ್ಧರಾಗಿದ್ದಾರೆ. ಅವರು ಸಸ್ಯನಾಶಕ ಮತ್ತು ಕೀಟನಾಶಕ ಮುಕ್ತ ಕೃಷಿವಿಧಾನಗಳ ಪ್ರತಿಪಾದಕರಾಗಿದ್ದರು. ಇದರಿಂದ ಅವರು ಕೃಷಿಯ ಒಂದು ನಿರ್ದಿಷ್ಟ ವಿಧಾನವನ್ನು ರಚಿಸಿದರು. ಇದನ್ನು ಸಾಮಾನ್ಯವಾಗಿ 'ನೈಸರ್ಗಿಕ ಕೃಷಿ' ಅಥವಾ 'ಏನೂ ಮಾಡದ ಕೃಷಿ' ಎಂದು ಕರೆಯಲಾಗುತ್ತದೆ. ನೈಸರ್ಗಿಕ ಆಹಾರ ಮತ್ತು ಪರ್ಯಾಯ ಜೀವನಶೈಲಿಯ ಚಳುವಳಿಗಳ ವ್ಯಕ್ತಿಗಳಿಗೆ ಅವರು ಪ್ರೇರಕರು. ಅವರ ಪ್ರಭಾವಗಳು ಕೃಷಿಯ ವಲಯವನ್ನು ಮೀರಿವೆ. ಅವರು ಪ್ರಕೃತಿಯ ಸಹಜ ತತ್ವಗಳನ್ನು ಗಮನಿಸುವುದರ ಮೌಲ್ಯವನ್ನು ಬಹಿರಂಗವಾಗಿ ಪ್ರತಿಪಾದಿಸುತ್ತಿದ್ದರು.



ಚಿತ್ರ ೬: ಮೊಸನಬು ಫುಕುವೊಕಾ (೧೯೧೩-೨೦೦೮)

## ೫.೨.೬. ಪಠ್ಯ ೬

**ಜೇಮ್ಸ್ ರಾಬರ್ಟ್ಸನ್ ಅವರ 'ದಿ ಸೇನ್ ಆಲ್ಟರ್ನೇಟಿವ್' (೧೯೭೮) ಕೃತಿಯಿಂದ ಆಯ್ದ ಭಾಗ.**

**ನಾಳಿನ ಭವಿಷ್ಯದ ಐದು ಸಾಧ್ಯತೆಗಳು**

ನಾಳಿನ ಬಗ್ಗೆ ಚಿಂತಿಸಬಲ್ಲವರು ಈ ಕೆಳಗಿನ ಐದು ಸಾಧ್ಯತೆಗಳಲ್ಲಿ ಒಂದಲ್ಲ ಒಂದಕ್ಕೆ ಜೋತು ಬೀಳುತ್ತಾರೆ. ಇವುಗಳ ಪೈಕಿ ಒಂದೇ ಒಂದು ಚಿತ್ರಣ ಮಾತ್ರ ಖಚಿತವೆಂದು ನಂಬುತ್ತಾರೆ. ನಿಮಗೇನೆನ್ನಿಸುತ್ತದೆ? ಯಾವುದು ಭವಿಷ್ಯದ ನಿಖರ ಚಿತ್ರಣ ಕೊಡುತ್ತದೆ?

೧. **ಹಿಂದಿನಂತೆ ಮುಂದೆಯೂ ಕಾಲಯಾನ ಸಾಗುತ್ತದೆ:** ಈ ದೃಷ್ಟಿಕೋನದ ಪ್ರಕಾರ, ಎಂಥದೇ ಸಮಸ್ಯೆ ಬಂದರೂ ಮನುಷ್ಯ ತನ್ನ ಬುದ್ಧಿಮತ್ತೆಯಿಂದಾಗಿ ಯಶಸ್ವಿಯಾಗಿ ಎದುರಿಸುತ್ತಾನೆ. ಮನುಷ್ಯನ ನಡವಳಿಕೆಯಲ್ಲಿ ಹೇಳಿಕೊಳ್ಳುವಂಥ ಬದಲಾವಣೆ ಏನೂ ಆಗಲಾರದು. ನಾನಲ್ಲದಿದ್ದರೆ ನನಗಿಂತ ಬುದ್ಧಿಶಾಲಿಗಳು ಸಮರ್ಥರೂ ಮಾನವಕುಲದ ಸಂಕಷ್ಟಗಳನ್ನೆಲ್ಲ ನೀಗಿಸುತ್ತಾರೆ.

೨. **ಭಯಾನಕ ಭವಿಷ್ಯ:** ನಾವು ನಿರ್ಮಿಸಿಕೊಂಡ ಎಲ್ಲ ವ್ಯವಸ್ಥೆಗಳೂ ಸದ್ಯದಲ್ಲಿಯೇ ಕುಸಿದು ಬೀಳಲಿವೆ. ಅಣುಯುದ್ಧ, ಬರಗಾಲ, ಪರಿಸರಮಾಲಿನ್ಯ, ದುಃಖ, ದಾರಿದ್ರ್ಯ, ಅಪರಾಧಗಳ ಈ ಕರಾಳಯುಗದಿಂದ ಹಿಮ್ಮೆಟ್ಟಲು ಸಾಧ್ಯವೇ ಇಲ್ಲ. ಕಲಿಯುಗದ ಅಂತ್ಯ ಸಮೀಪಿಸುತ್ತಿದೆ.

೩. **ಕಟ್ಟುನಿಟ್ಟಿನ ಶಾಸನ ಬಂದರೆ ಮಾತ್ರ ಬಚಾವು:** ಇಂದಿನ ಅಲ್ಲೋಲ ಕಲ್ಲೋಲ ಸ್ಥಿತಿಗೆ ಸರಕಾರೀ ಬಿಗಿಮುಷ್ಟಿಯೇ ಏಕೈಕ ಪರಿಹಾರ. ಸೀಝರ್, ನೆಪೋಲಿಯನ್, ಹಿಟ್ಲರ್, ಸ್ಟಾಲಿನ್‌ನಂಥವರು ಬಂದು ಇಡೀ ಮಾನವಕುಲವನ್ನು ನಿಯಂತ್ರಿಸಿದರೆ ಮಾತ್ರ ಶಿಸ್ತು ಸಂಯಮದಿಂದ ಜೀವಕೋಟಿಯನ್ನು ಉಳಿಸಬಹುದು. ಬಹುಪಾಲು ಮಾನವರು ಆಜ್ಞಾಧಾರಕರು, ನಮ್ಮೆಲ್ಲರ ಸ್ವಾತಂತ್ರ್ಯವನ್ನೂ ಮುಡುಪಾಗಿಟ್ಟು, ಶಕ್ತಿವಂತರ ಕೆಳಗೆ ವಿನೀತರಾಗಿದ್ದರೇ ಉಳಿವು.

೪. **ವಿಜ್ಞಾನ–ತಂತ್ರಜ್ಞಾನವೇ ದಾರಿದೀಪ:** ಪಾಶ್ಚಾತ್ಯ ದೇಶಗಳಂತೆ ನಮ್ಮ ವೈಜ್ಞಾನಿಕ ಶಕ್ತಿಯನ್ನೇ ಇನ್ನಷ್ಟು ಪ್ರಬಲಗೊಳಿಸಬೇಕು. ಬಾಹ್ಯಾಕಾಶ ಸಾಧನೆ, ಸುಲಭ ಅಣುಶಕ್ತಿ, ಜೈವಿಕ ತಂತ್ರಜ್ಞಾನ, ಕಂಪ್ಯೂಟರುಗಳ ಮೂಲಕ ಎಂಥ ಸಮಸ್ಯೆಯನ್ನೂ ಮೆಟ್ಟಿ ನಿಲ್ಲಲು ಸಾಧ್ಯ. ಇಷ್ಟಕ್ಕೂ ಇಡೀ ಮಾನವಕುಲ ಇಷ್ಟು ಪ್ರಗತಿ ಸಾಧಿಸಿದ್ದು ಕೇವಲ ಮೆದುಳಿನ ಶಕ್ತಿಯಿಂದ ತಾನೆ? ಪ್ರಕೃತಿ ನಮ್ಮ ಮೆದುಳನ್ನು ಇಷ್ಟು ವಿಕಾಸಗೊಳಿಸಿದ್ದು, ಉಳಿದು ಬೆಳೆಯಲೆಂದೇ ಹೊರತು ಸರ್ವನಾಶಕ್ಕಲ್ಲ, ಅಂಜುತ್ತ ಅಳುಕುತ್ತ ಕೂರುವುದು ನಮ್ಮ ಜಾಯಮಾನವಲ್ಲ, ಈಸೋಣ, ಇದ್ದು ಜಯಿಸೋಣ.

೫. **ಜೀವಸಮತೋಲನದ ಮಹತ್ವ ಅರಿತು ವಿವೇಕವಂತರಾಗಿ ಬದುಕಲು ಸಾಧ್ಯ:** ಪ್ರಗತಿ ಸಾಕು. ಮಾರ್ಗ ಬದಲಿಸೋಣ. ನಮ್ಮ ಸೌಕರ್ಯಗಳನ್ನು ಇನ್ನಷ್ಟು ಹೆಚ್ಚಿಸುತ್ತ ಹೋಗುವ ಬದಲಾಗಿ, ಸಮತೋಲನ ಒಪ್ಪಂದ ಮಾಡಿಕೊಂಡರೆ ನಾಳೆಯೂ

ಸುಖಮಯವಾಗಿ ಬದುಕು ನಿಭಾಯಿಸಲು ಸಾಧ್ಯ. ನಮ್ಮ ನಮ್ಮಲ್ಲಿ ಸಮತೋಲನ, ಬಡವ–ಬಲ್ಲಿದರಲ್ಲಿ ಸಮತೋಲನ, ಮನುಷ್ಯ ನಿಸರ್ಗದ ಮಧ್ಯೆ ಸಮತೋಲನ ಮಾಡಿಕೊಳ್ಳೋಣ. ತಾಂತ್ರಿಕ ಹಾಗೂ ಆರ್ಥಿಕ ಪ್ರಗತಿ ಸಾಕು. ಸಾಮಾಜಿಕ ಹಾಗೂ ಮಾನವೀಯ ಧರ್ಮಗಳ ಪ್ರಗತಿ ಸಾಧಿಸೋಣ. ಈ ದಟ್ಟ ಜನನಿಬಿಡ ಗ್ರಹದಲ್ಲಿ ಇತರ ಜೀವಿಗಳೊಂದಿಗೆ ಸಂಗಮ ಸಹಬಾಳ್ವೆಗೆ ಯತ್ನಿಸೋಣ. ಯಾವುದು ಹಿತ ನಿಮಗೆ ಈ ಐದರೊಳಗೆ?

**ಲೇಖಕರ ಪರಿಚಯ**

ಜೇಮ್ಸ್ ರಾಬರ್ಟ್‌ಸನ್ (ಚಿತ್ರ ೭ ನೋಡಿ) ಕೈಗಾರಿಕೀಕರಣಗೊಂಡ ಸಮಾಜಗಳು ಮತ್ತು ಒಟ್ಟಾರೆಯಾಗಿ ಪ್ರಪಂಚವು ಈಗ ಒಂದು ತಿರುವಿನ ಹಂತದಲ್ಲಿದೆ ಎಂದು ನಂಬುತ್ತಾರೆ; ಅವರ ಪ್ರಕಾರ 'ಕೈಗಾರಿಕಾ ನಂತರದ ಕ್ರಾಂತಿ' ಪ್ರಾರಂಭವಾಗಿದೆ. ೧೯೭೩ರಿಂದ ಅವರು ಸ್ವತಂತ್ರ ಬರಹಗಾರರಾಗಿ, ಮಾತುಗಾರರಾಗಿ ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ. ಶ್ರಾಪ್‌ಶೈರ್‌ನ ಐರನ್‌ಬ್ರಿಡ್ಜ್‌ನಲ್ಲಿರುವ ಅವರ ಕಾಟೇಜ್‌ನಿಂದ, ಅವರು ಮತ್ತು ಅವರ ಹೆಂಡತಿ, ಅಲಿಸನ್ ಪ್ರಿಚರ್ಡ್, 'ಟರ್ನಿಂಗ್ ಪಾಯಿಂಟ್ ನೆಟ್‌ವರ್ಕ್' ಮೂಲಕ, ಹಳೆಯ ಮೌಲ್ಯಗಳು ಒಡೆದು ಹೋಗುತ್ತಿರುವ ಈ ಸಂದರ್ಭದಲ್ಲಿ ಹೊಸ ಮೌಲ್ಯಗಳು ಹಾಗೂ ಹೊಸದು ಎಂದು ಭಾವಿಸುವ ಮೌಲ್ಯಗಳ ಕಟ್ಟುವಿಕೆಗಾಗಿ ಸಹಾಯ ಮಾಡಬೇಕು ಎಂದು ಪ್ರಪಂಚದ ಅನೇಕ ಭಾಗಗಳಲ್ಲಿನ ಜನರ ಸಂಪರ್ಕದಲ್ಲಿದ್ದು, ಜೀವನಶೈಲಿ ಮತ್ತು ಸಮಾಜದ ಹೊಸ ವ್ಯವಸ್ಥೆಯನ್ನು ಅರಿಯಲು ಸಹಾಯ ಮಾಡುತ್ತಿದ್ದಾರೆ. ರಾಬರ್ಟ್ಸನ್ ಅವರು ೧೯೬೫ರಿಂದ ೧೯೬೮ರವರೆಗೆ ಬ್ರಿಟಿಷ್ ಕ್ಯಾಬಿನೆಟ್ ಕಚೇರಿಯಲ್ಲಿ ಸೇವೆ ಸಲ್ಲಿಸಿದರು.

ಜೇಮ್ಸ್ ರಾಬರ್ಟ್ಸನ್ ಅವರ ಇತರ ಪುಸ್ತಕಗಳು: 'ಬ್ರಿಟಿಷ್ ಕೇಂದ್ರ ಸರ್ಕಾರದ ಸುಧಾರಣೆ' (೧೯೭೧); 'ಲಾಭವೋ ಅಥವಾ ಜನರೋ, ದಿ ನ್ಯೂ ಸೋಶಿಯಲ್ ರೋಲ್ ಆಫ್ ಮನಿ' (೧೯೭೪); ಮತ್ತು 'ಅಧಿಕಾರ, ಹಣ ಮತ್ತು ಲೈಂಗಿಕತೆ: ಹೊಸ ಸಾಮಾಜಿಕ ಸಮತೋಲನದ ಕಡೆಗೆ' (೧೯೭೬).



ಚಿತ್ರ ೭: ಜೇಮ್ಸ್ ರಾಬರ್ಟ್ಸನ್

**ವಿವರಣೆ**

ಈ ಕೆಳಗಿನ ಆಯಾಮಗಳಿಂದ ಮೇಲಿನ ವಿವಿಧ ಪಠ್ಯಗಳನ್ನು ವಿವರಿಸಿಕೊಳ್ಳಬಹುದು.

೧. ಚರಿತ್ರೆಯ ಕಾಲಘಟ್ಟಗಳಲ್ಲಿ ಪ್ರಕೃತಿಗೂ ಮಾನವನಿಗೂ ಇರುವ ಸಂಬಂಧ:

ಅ) ಪ್ರಕೃತಿಯ ಭಾಗವಾಗಿ.

ಆ) ಪ್ರಕೃತಿಯನ್ನು ನೋಡಿ ಭಯಗೊಂಡವನಾಗಿ.

ಇ) ಪ್ರಕೃತಿಯ ಮೇಲೆ ಪ್ರಭುತ್ವ ಸ್ಥಾಪಿಸುವವನಾಗಿ.

ಈ) ಪ್ರಕೃತಿಯನ್ನು ನಾಶಪಡಿಸುವವನಾಗಿ.

೨. ಸಂಸ್ಕೃತಿ ಕಥನಗಳು ಪ್ರಕೃತಿಯನ್ನು ಬಳಸಿಕೊಂಡಿರುವ ವಿವಿಧ ನೆಲೆಗಳು:

ಅ) ಪ್ರಕೃತಿಯನ್ನು ವರ್ಣನೆಯ ಭಾಗವಾಗಿ.

ಆ) ಪ್ರಕೃತಿಯನ್ನು ಆಸ್ವಾದಿಸುವವರಾಗಿ.

ಇ) ಪ್ರಕೃತಿಯ ಅನೇಕ ಚಟುವಟಿಕೆಗಳು ಮನುಷ್ಯ ಗುಣಗಳ ಪ್ರತೀಕವಾಗಿ.

೩. ಪ್ರಕೃತಿಯನ್ನು ಇಂದಿನ ಸಂದರ್ಭದಲ್ಲಿ ತಾಯಿಯಾಗಿ ಕಾಣಬೇಕಾದ ಅಗತ್ಯ.

೪. ಪರಿಸರ ಜೊತೆಗಿನ ಮನುಷ್ಯನ ಸೌಹಾರ್ದ ಸಂಬಂಧ ಮತ್ತು ನಾಗರಿಕತೆ.

೫. ವೈಜ್ಞಾನಿಕ ಲೇಖನ ಹಾಗೂ ಕಥೆ ಇವುಗಳ ಸ್ವರೂಪ.

೬. ಪರಿಸರ ನಾಶ = ಆರ್ಥಿಕ ಅಭಿವೃದ್ಧಿ.

೭. ಪರಿಸರ ನಾಶ = ಮನುಷ್ಯನ ಅಭಿವೃದ್ಧಿ.

**ಅಭ್ಯಾಸ ೧**

ಈ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ಯೋಚಿಸಿ.

೧. ಭೂಮಿಯ ಮೇಲೆ ನಡೆಯುತ್ತಿರುವ ದಾಳಿಯನ್ನು ಅನಿವಾರ್ಯವಾದ ಕ್ರಿಯೆ ಎಂದು ನೀವು ಭಾವಿಸುತ್ತೀರಾ?

೨. ಈವರೆಗಿನ ಅಭಿವೃದ್ಧಿಯ ಕಾರ್ಯಗಳಿಂದ ಆಗಿರುವ ಒಳಿತನ್ನು ಕುರಿತು ಯೋಚಿಸಿ.

೩. ಪ್ರಕೃತಿ ಮತ್ತು ಮನುಷ್ಯನ ನಡುವೆ ಉಂಟಾಗುತ್ತಿರುವ ಬಿರುಕನ್ನು ಹೇಗೆ ತಡೆಯಬಹುದು?

೪. ಹೆಣ್ಣು ಮತ್ತು ಗಂಡಿನ ನಡುವಿನ ತರತಮಗಳಿಗೆ ಕಾರಣಗಳೇನು?

೫. ಜಾಗತೀಕರಣ ಪ್ರಕ್ರಿಯೆ ಪರಿಸರವನ್ನು ನಾಶಗೊಳಿಸುತ್ತಿದೆ ಎನ್ನುವ ವಾದ ಸರಿಯೋ ತಪ್ಪೋ? ಕಾರಣಗಳನ್ನು ನೀಡಿ.

೬. ಸರ್ಕಾರ ಹೇಗೆ ಯಾವ ರೀತಿ ಪರಿಸರವನ್ನು ರಕ್ಷಿಸಬಹುದು ಸೂಚಿಸಿ?

೭. ನೀವು ನೋಡಿರುವ ಪರಿಸರ ನಾಶದ ವಿವರಗಳನ್ನು ನಿರೂಪಿಸಿ?

೮. ನಿಮ್ಮ ಮನೆಯಲ್ಲಿ ಆಚರಿಸುವ ಯಾವುದಾದರು ಪ್ರಕೃತಿ ಆರಾಧನೆಯ ಆಚರಣೆಯನ್ನು ವಿವರಿಸಿ?

೯. ಹೆಣ್ಣು, ಮಣ್ಣು, ಹೊನ್ನು ಸಮೀಕರಣ ಸರಿಯೇ? ಇಲ್ಲವೆಂದರೆ ಯಾಕೆ?

**ಅಭ್ಯಾಸ ೨**

ಕೆ.ವಿ. ತಿರುಮಲೇಶ್ ಅವರ 'ತಿರುವನಂತಪುರ' ಕವನ ಅರಿಯುವ ಅಭ್ಯಾಸಕ್ಕಾಗಿ.

೧. ಕ್ರಿಯಾಪದದ ಪುನರುಕ್ತಿ – ಕೆಲವೊಮ್ಮೆ ವ್ಯರ್ಥವೆಂಬಂತೆ ತೋರುವ ಪುನರುಕ್ತಿ – ಕವಿತೆಯುದ್ದಕ್ಕೂ ಕಾಣಿಸಿಕೊಳ್ಳುತ್ತದೆ. ಇವು ನಿರೂಪಕನ ಕ್ರಿಯೆಯನ್ನು, ಕ್ರಿಯೆಗಳ ನಿರರ್ಥಕತೆಯನ್ನು ಹೇಗೆ ಹಿಡಿದಿಡುತ್ತವೆ ಎಂಬುದನ್ನು ಗಮನಿಸಬೇಕು. ಉದಾ.: 'ಇಳಿದೆ ಇಳಿದು ಜನಸ್ತೋಮದಲ್ಲಿ ಸೇರಿ ಸೇರಿ ನುಗ್ಗಿದೆ ನುಗ್ಗಿ...'

೨. ಇಲ್ಲಿನ ವಾಕ್ಯಗಳು ಮಾಹಿತಿಯನ್ನು ನೀಡುತ್ತಿರುವಂತೆ ಕಂಡರೂ ಅದಕ್ಕಿಂತ ಹೆಚ್ಚಾಗಿ ಕವಿತೆಯ ಆಶಯವನ್ನು ಅಭಿನಯದಲ್ಲಿ ಹಿಡಿದಿಡುತ್ತಿವೆ. ಅಲ್ಲದೆ ಈ ಪುನರುಕ್ತಿಗಳಲ್ಲಿ ಒಂದು ಬಗೆಯ ಏಕತಾನತೆಯ ಲಯವನ್ನು ಮೂಡಿಸುತ್ತ ತಟ್ಟನೆ ಅದನ್ನು ಒಡೆಯಲಾಗುತ್ತಿದೆ. ಈ ದೃಷ್ಟಿಯಿಂದ ಹೇಳುವ ಭಾಷೆಗೂ ತೋರಿಸುವ ಭಾಷೆಗೂ ಇರುವ ಅಂತರವನ್ನು ಮನಗಾಣಬಹುದು. ಹೇಳುವ ಭಾಷೆ ಮಾಹಿತಿಯನ್ನು ನೀಡಿದರೆ ತೋರಿಸುವ ಭಾಷೆ ಸನ್ನಿವೇಶವನ್ನು ಅಭಿನಯಪೂರ್ವಕವಾಗಿ ಕಟ್ಟಿಕೊಡುತ್ತದೆ. ಉದಾ.: 'ರೂಮು ಅನ್ವೇಷಿಸಿದೆ ಅನ್ವೇಷಿಸುತ್ತಾ ನಡೆದೆ ನಡೆಯುತ್ತಾ ಅನ್ವೇಷಿಸಿದೆ....'

೩. ಇಡೀ ಕವಿತೆ ನಿರೂಪಕನ ಸ್ವಗತವಾಗಿದ್ದು ಇದರಿಂದ ಆತನಿಗೂ ಸುತ್ತಲಿನ ಪರಿಸರಕ್ಕೂ ಏರ್ಪಟ್ಟಿರುವ ಸಂಬಂಧ ಯಾವ ಬಗೆಯದೆಂಬುದನ್ನು ತಿಳಿಯಬಹುದಾಗಿದೆ. ಅಕ್ಕಮಹಾದೇವಿಯ ವಚನದಲ್ಲಿ ಸಂವಾದದ ನೆಲೆ ಇದ್ದರೆ ಇಲ್ಲಿ ಸ್ವಗತ ಪ್ರಧಾನವಾಗಿದೆ. ನಿರೂಪಣೆಯ ಈ ಕ್ರಮ ಆಶಯದ ಭಿನ್ನತೆಯನ್ನು ಹೇಗೆ ತೋರಿಸುತ್ತದೆ ಎಂಬುದನ್ನು ಗಮನಿಸಬಹುದು.

**ಅಭ್ಯಾಸ ೩**

**ಅ. ಭಾಷಿಕ**

೧. ಪುನರುಕ್ತಿಗಳು ಬರುವ ಕೆಲವು ವಾಕ್ಯಗಳನ್ನು ಬರೆಯಿರಿ (ಉದಾ.: ನೋಡುತ್ತ ನೋಡುತ್ತ, ಮಾಡಿ ಮಾಡಿ, ನೋಡಿ ನೋಡಿ ಇತ್ಯಾದಿ). ಪುನರುಕ್ತಿಗಳು ವಾಕ್ಯಗಳಲ್ಲಿ ಯಾವ ಉದ್ದೇಶಕ್ಕಾಗಿ ಬಳಕೆಯಾಗಿವೆ ಎಂಬುದನ್ನು ಪರಿಶೀಲಿಸಿ.

೨. ಕ್ರಿಯಾಪದಗಳಲ್ಲಿ ಪೂರ್ಣಕ್ರಿಯಾಪದ (ಉದಾ.: ನೋಡಿದೆ, ಮಾಡಿದೆ) ಮತ್ತು ಅಪೂರ್ಣ ಕ್ರಿಯಾಪದ (ಉದಾ.: ನೋಡಿ, ಮಾಡಿ) ಎಂದು ಎರಡು ವಿಧಗಳನ್ನು ಹೇಳುವುದುಂಟು. ಅಪೂರ್ಣ ಕ್ರಿಯಾಪದದ ಬಳಿಕ ಪೂರ್ಣ ಕ್ರಿಯಾಪದವೊಂದನ್ನು ವಾಕ್ಯದಲ್ಲಿ ಬಳಸಬೇಕಾಗುತ್ತದೆ. ಪೂರ್ಣ ಕ್ರಿಯಾಪದದ ಬಳಿಕ ವಾಕ್ಯ ಮುಕ್ತಾಯಗೊಳ್ಳುತ್ತದೆ. ಆದರೆ ಈ ಕವಿತೆಯಲ್ಲಿ ಪೂರ್ಣ ಕ್ರಿಯಾಪದದ ಬಳಿಕವೂ ಅದರ ಅಪೂರ್ಣ ಕ್ರಿಯಾ ರೂಪಗಳನ್ನು ಬಳಸಲಾಗಿದೆ. ಉದಾ.: ಇಳಿದೆ ಇಳಿದು, ನುಗ್ಗಿದೆ ನುಗ್ಗಿ, ಎದ್ದೆ ಎದ್ದು... ಕ್ರಿಯೆಯ ಸಾರ್ಥಕತೆ / ನಿರರ್ಥಕತೆಗಳನ್ನು ಈ ಪ್ರಯೋಗಗಳು ಹೇಗೆ ಹಿಡಿದಿಡುತ್ತವೆ ಎಂಬುದನ್ನು ಗಮನಿಸಿ,

**ಆ. ತಾರ್ಕಿಕ**

೧. ನಿಮ್ಮ ಮನೆಯ ಮುಂದಿನ ತೋಟದಲ್ಲಿ ಹೂವೊಂದು ಅರಳಿದೆ. ಇದನ್ನು,

ಅ) ಹೂವಿನೊಂದಿಗೆ ಸಂಭಾಷಿಸುತ್ತಿರುವ ರೀತಿಯಲ್ಲಿ ನಿರೂಪಿಸಿ.

ಆ) ಇತರರಿಗೆ ಹೇಳುತ್ತಿರುವಂತೆ ವರದಿ ಮಾಡಿ.

ಇ) ನೀವೇ ಹೇಳಿಕೊಳ್ಳುತ್ತಿರುವಂತೆ (ಸ್ವಗತ) ಬರೆಯಿರಿ.

ಈ) ಮೂರೂ ಬಗೆಯ ನಿರೂಪಣೆಗಳಲ್ಲಿ ಆಗುವ ವ್ಯತ್ಯಾಸಗಳನ್ನು ಪರಿಶೀಲಿಸಿ.

**ಇ. ವಿಶ್ಲೇಷಣಾತ್ಮಕ**

೧. ಇಂದಿನ ನಗರ ಜೀವನದ ಪರಿಸ್ಥಿತಿಗೆ ನಾವು ಹೇಗೆ ಪ್ರತಿಕ್ರಿಯೆ ತೋರಬೇಕು?

೨. ಈ ಪರಿಸ್ಥಿತಿ ನನಗೆ ಇಷ್ಟವಾಗಿದೆ. ಇದರಲ್ಲಿ ನನಗೆ ತೊಂದರೆಯೇನೂ ಕಾಣುವುದಿಲ್ಲ, ಬದಲಾಗಿ ಇದರಲ್ಲಿ ಅನುಕೂಲಗಳಿವೆ.

೩. ಈ ಪರಿಸ್ಥಿತಿ ಅನುಕೂಲಕರವಾಗಿಲ್ಲ. ಇದನ್ನು ಬದಲಾಯಿಸಬೇಕು.

೪. ಬದಲಾಯಿಸಲು ಸಾಧ್ಯವಿಲ್ಲ. ಇರುವಂತೆಯೇ ಒಪ್ಪಿಕೊಂಡು ಅನುಸರಿಸಿಕೊಂಡು ಹೋಗಬೇಕು. ಈ ಅಂಶಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ವಿಸ್ತರಿಸಿ.

**ಅಭ್ಯಾಸ ೪**

ಪ್ರಕೃತಿಯಲ್ಲಿ ದೈವವನ್ನು ಹುಡುಕುವ ಅಕ್ಕನ ಈ ವಚನ ಓದಿ.

ಚಿಲಿಪಿಲಿಯೆಂದೋದುವ ಗಿಳಿಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಸರವರದೊಳಗಾಡುವ ಹಂಸಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಸರವೆತ್ತಿ ಪಾಡುವ ಕೋಗಿಲೆಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಎರಗಿ ಬಂದಾಡುವೆ ತುಂಬಿಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಗಿರಿಗಹ್ವರದೊಳಗಾಡುವ ನವಿಲುಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಚೆನ್ನಮಲ್ಲಿಕಾರ್ಜುನ ದೇವನೆಲ್ಲಿದ್ದಾನೆಂಬುದ ಬಲ್ಲಡೆ ನೀವು ಹೇಳಿರೇ!

೧. ಈ ವಚನದಲ್ಲಿ ಒಂದು ಸಂವಾದದ ನೆಲೆ ಇದೆಯೇ?

೨. ಈ ಮೂಲಕ ಚೆನ್ನಮಲ್ಲಿಕಾರ್ಜುನನ ಹುಡುಕಾಟಕ್ಕೆ ಒಂದು ಮಹತ್ವ ಬಂದಿದೆಯೇ?

೩. 'ಕಾಣಿರೇ?' ಎನ್ನುವ ಕ್ರಿಯಾಪದದ ಪುನರಾವರ್ತನೆಯು ಪದ್ಯಕ್ಕೆ ಅನುಕೂಲ ವಾಗಿದೆಯೇ ಅಥವಾ ಬೋರು ಹೊಡೆಸುತ್ತದೆಯೇ?

೪. 'ಗಳಿರಾ' ಎಂಬ ಸಂಬೋಧನೆಯಿಂದ ಕವನದ ಲಯಕ್ಕೆ ಆದ ಲಾಭವೇನು?

೫. 'ನಿಸರ್ಗ'ವೆನ್ನುವುದು ಇಲ್ಲಿ ಮನುಷ್ಯನ ಜೊತೆಗೆ ಕಟ್ಟಿಕೊಂಡ ಸಂಬಂಧ ಎಂಥದ್ದು?

ಪಠ್ಯವನ್ನು ಸಿದ್ಧಪಡಿಸಿದವರು: **ಪ್ರೊ. ಬಸವರಾಜ ಕಲ್ಗುಡಿ**

ignou
THE PEOPLE'S
UNIVERSITY